

ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಶ್ವವಾಣಿ ಗ್ಲೋಬಲ್ ಫೋರಂ ಅರ್ಪಿಸುವ

ಭಾರತ ಹಾಗೂ ರಷ್ಯಾ ವಿಶೇಷ ನಿಯೋಗದ ಸಮ್ಮುಖದಲ್ಲಿ

ಕರ್ನಾಟಕ ಹಾಗೂ ರಷ್ಯಾ ಸಾಂಸ್ಕೃತಿಕ ಸಮ್ಮಿಲನ ಮತ್ತು ಜಾಗತಿಕ ಸಾಧನೆಗೈದ

ಕರ್ನಾಟಕದ ಅಪರೂಪದ ಸಾಧಕರಿಗೆ

ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು
ಶ್ರೀ ಡಾ|| ಶಾಂತವೀರ ಸ್ವಾಮೀಜಿ
ಶ್ರೀ ಕುಂಚಿಟಿಗ ಮಹಾಸಂಸ್ಥಾನ ಮಠ ಕುಂಚಗಿರಿ
ಹೊಸದುರ್ಗ

ಪರಮಪೂಜ್ಯ ಜಗದ್ಗುರು
ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ
ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ
ಭೋವಿ ಗುರುಪೀಠ, ಬಾಗಲಕೋಟೆ-ಚಿತ್ರದುರ್ಗ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ಪುರುಷೋತ್ತಮಾನಂದಪುರಿ
ಮಹಾಸ್ವಾಮಿಗಳು ಶ್ರೀಮದ್ ಜಗದ್ಗುರು ಚಿನ್ಮೂಲಾದ್ರಿ, ಶಿಲಾಪುರಿ
ಸೂರ್ಯಸಿಂಹಾಸನ ಭಗೀರಥಪೀಠ ಮಹಾಸಂಸ್ಥಾನ ಮಠ, ಹೊಸದುರ್ಗ

ದಿನಾಂಕ
ಗುರುವಾರ
24, ಏಪ್ರಿಲ್ 2025
ಸಂಜೆ 4 ಗಂಟೆಗೆ

ಅಧ್ಯಕ್ಷತೆ

ಶ್ರೀ ವಿಶ್ವೇಶ್ವರ ಭಟ್
ಪ್ರಧಾನ ಸಂಪಾದಕರು,
ವಿಶ್ವವಾಣಿ ಸಮೂಹ

ಅತಿಥಿ

ಮಿಸ್ ಗ್ಲಾಸ್ಕೋವಾ ಆಂಜೆಲಿಕಾ ಇಗೋರ್ವ
ಡೆಪ್ಯುಟಿ ಆಫ್ ದಿ ಟೇಟ್ ದೂಮ
ಆಫ್ ದಿ ರಷ್ಯಾನ್ ಫೆಡರೇಶನ್

ಸ್ಥಳ
ಸ್ವಿಸ್ ಹೋಟೆಲ್
ಕ್ರಾಸೈ ಹೊಲ್ಮಾಯ್
ಮಾಸ್ಕೋ,
ರಷ್ಯಾ

ಇದು ಕನ್ನಡ ಪತ್ರಿಕೋದ್ಯಮದಲ್ಲೇ ಹೊಸ ದಾಖಲೆ

ವಿಶ್ವವಾಣಿ ಪತ್ರಿಕೆಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ವಿಶ್ವವಾಣಿ ಗ್ಲೋಬಲ್ ಫೋರಂ ಆಶ್ರಯದಲ್ಲಿ ವಿದೇಶಿ ನೆಲದಲ್ಲಿ ಆಯಾ ದೇಶದ ನಿಯೋಗದ ಸಹಭಾಗಿತ್ವದೊಂದಿಗೆ ನಡೆಯುವ ವಿಶಿಷ್ಟ ಕಾರ್ಯಕ್ರಮ. ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿ ಪರಿಚಯ ಈ ಕಾರ್ಯಕ್ರಮದ ಆಶಯ. ಈ ವಿನೂತನ ಕಾರ್ಯಕ್ರಮ ಈಗಾಗಲೇ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ, ಮಾರಿಷಸ್, ಮಾಲ್ದೀವ್ಸ್, ಜಪಾನ್ ಹಾಗೂ ಕತಾರ್ ದೇಶಗಳಲ್ಲಿ ಯಶಸ್ವಿಯಾಗಿ ನಡೆದಿದೆ. ಇದೀಗ ರಷ್ಯಾದ ಮಾಸ್ಕೋದಲ್ಲಿ ಎಂಟನೇ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮ ನಡೆಯುತ್ತಿದೆ.

ಬನಶಂಕರಿಯಲ್ಲಿ ಮೊದಲ ವೃತ್ತಾಕಾರದ ಸ್ಕೈವಾಕ್ ನಿರ್ಮಾಣ

ಬೆಂಗಳೂರು: ನಮ್ಮ ಮೆಟ್ರೋವು ಬನಶಂಕರಿ ಜಂಕ್ಷನ್‌ನಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಸರ್ಕ್ಯುಲರ್ ಸ್ಕೈವಾಕ್ ನಿರ್ಮಾಣಕ್ಕೆ ಚಿಂತನೆ ನಡೆಸಿದ್ದು, ಹಲವು ವರ್ಷಗಳ ವಿಳಂಬದ ಬಳಿಕ ಅಂತಿಮವಾಗಿ ಕಾಮಗಾರಿ ಪ್ರಾರಂಭವಾಗಲಿದೆ.

ದೀರ್ಘಕಾಲದಿಂದ ಸರ್ಕ್ಯುಲರ್ ಸ್ಕೈವಾಕ್ ಯೋಜನೆಯು ನನೆಗುದಿಗೆ ಬಿದ್ದಿತ್ತು. ಈ ಮೇಲ್ಸೇತುವೆಯನ್ನು ವಿಶೇಷವಾಗಿ ವಿನ್ಯಾಸ ಮಾಡಲಾಗಿದ್ದು, ಅಂತಿಮವಾಗಿ ನಮ್ಮ ಮೆಟ್ರೋ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಮುಂದಾಗಿದೆ. ನಮ್ಮ ಮೆಟ್ರೋವು ಸ್ಕೈವಾಕ್ ಅನ್ನು ವಿನ್ಯಾಸಗೊಳಿಸಲು ಮತ್ತು ನಿರ್ಮಿಸಲು ವಿವಿಧ ಕಂಪನಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಬನಶಂಕರಿ ಮೆಟ್ರೋ ನಿಲ್ದಾಣ ಹಾಗೂ ಬನಶಂಕರಿ ಸಂಚಾರ ಮತ್ತು ಸಾರಿಗೆ ನಿರ್ವಹಣಾ ಕೇಂದ್ರವನ್ನು (ಟಿಟಿಎಂಸಿ) ಈ ಸ್ಕೈವಾಕ್ ಸಂಪರ್ಕಿಸುತ್ತದೆ. ಈ ವರ್ಷದ ಅಂತ್ಯದ ವೇಳೆಗೆ ಇದರ ನಿರ್ಮಾಣ ಕಾರ್ಯ ಪ್ರಾರಂಭವಾಗುವ ನಿರೀಕ್ಷೆಯಿದ್ದು, ಕನಿಷ್ಠ 15 ತಿಂಗಳುಗಳು ಬೇಕಾಗುತ್ತದೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ.

ಸ್ಕೈವಾಕ್ ವಿಶೇಷತೆಗಳು

- ಇಳಿಜಾರುಗಳನ್ನು ಹೊಂದಿರುವ ವೃತ್ತಾಕಾರದ ವಿನ್ಯಾಸದಲ್ಲಿ ನಿರ್ಮಾಣ
- ಸ್ಕೈವಾಕ್ 280ಮೀ ಉದ್ದ 6 ಮೀ ಅಗಲ
- ವೆಚ್ಚ ಸುಮಾರು 40ರಿಂದ 45 ಕೋಟಿ
- ಸ್ಕೈವಾಕ್ ಕೆಳ ಹಂತದಲ್ಲಿಹಾಗೂ ಮೇಲಿನ ಹಂತದಲ್ಲಿ ಲಿಫ್ಟ್, ವಿಶ್ರಾಂತಿ ಸ್ಥಳದ ವ್ಯವಸ್ಥೆ

ಈ ಸ್ಕೈವಾಕ್‌ನ್ನು ಮರು ವಿನ್ಯಾಸಗೊಳಿಸಿ, ಯುಟಿಲಿಟಿ ಲೈನ್‌ಗಳನ್ನು ಸ್ಥಳಾಂತರಿಸುವುದು ಹಾಗೂ ಸ್ಕೈವಾಕ್‌ಗೆ ದಾರಿ ಮಾಡಿಕೊಡಲು ಮರಗಳನ್ನು ತೆಗೆದುಹಾಕುವುದನ್ನು ಒಳಗೊಂಡಿದೆ. ನಗರದ ಮೊದಲ ವೃತ್ತಾಕಾರದ ಸ್ಕೈವಾಕ್ ಎನ್ನುವ ಹೆಗ್ಗಳಿಕೆಯನ್ನೂ ಕೂಡಾ ಈ ಸ್ಕೈವಾಕ್ ಪಡೆದುಕೊಳ್ಳಲಿದೆ. ರಸ್ತೆ ಮತ್ತು ಸ್ಕೈವಾಕ್‌ಗಳಲ್ಲಿ ವಿಶ್ರಾಂತಿ ಜಾಗಗಳು ಹಾಗು ವಾಣಿಜ್ಯ ಮಳಿಗೆಗಳೂ ಕೂಡಾ ಇರಲಿದೆ ಎಂದು ಮೂಲಗಳು ತಿಳಿಸಿದೆ.

ಹಣಕಾಸಿಗೆ ಬಿಬಿಎಂಪಿ ಜತೆಗೆ ಭಿನ್ನಾಭಿಪ್ರಾಯ

ಹಣಕಾಸು ಮತ್ತು ನಿರ್ಮಾಣದ ವಿಚಾರವಾಗಿ ನಮ್ಮ ಮೆಟ್ರೋ ಹಾಗೂ ಬಿಬಿಎಂಪಿ ನಡುವಿನ ವಿವಾದದಿಂದಾಗಿ ಈ ಯೋಜನೆಯು ವಿಳಂಬವಾಗಿತ್ತು. ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಈ ಯೋಜನೆಗೆ ಒತ್ತಾಯಿಸಿದ ನಂತರ ಕಳೆದ ವರ್ಷ ಬಿಬಿಎಂಪಿ ಬಜೆಟ್‌ನಲ್ಲಿ ಸ್ಕೈವಾಕ್ ನಿರ್ಮಾಣಕ್ಕೆ ಅನುಮೋದನೆ ನೀಡಿತ್ತು. ಈ ಸ್ಕೈವಾಕ್‌ಗೆ ಬಿಬಿಎಂಪಿ ಹಣವನ್ನು ಒದಗಿಸುತ್ತಿದ್ದು, ಬಿಎಂಆರ್‌ಸಿಎಲ್ ನಿರ್ಮಾಣ ಮಾಡಲಿದೆ. ಅಂಗವಿಕಲರು, ಹಿರಿಯ ನಾಗರಿಕರು ಮತ್ತು ಗರ್ಭಿಣಿಯರಿಗೆ ಸುಗಮ ಪ್ರವೇಶಕ್ಕೆ ಅನುಕೂಲವಾಗುವಂತೆ ಮತ್ತು ಬಿಎಂಆರ್‌ಸಿಎಲ್ ಕೆಫೆಟೇರಿಯಾಗಳಂತಹ ವಾಣಿಜ್ಯ ಸಂಸ್ಥೆಗಳಿಗೆ ಆದಾಯ ಗಳಿಸಲು ಸ್ಥಳಾವಕಾಶ ಒದಗಿಸುವಂತೆ ವಿನ್ಯಾಸಗೊಳಿಸಲಾಗುತ್ತಿದೆ. ಆರಂಭದಲ್ಲಿ ಬಿಬಿಎಂಪಿಯೇ ಈ ಸ್ಕೈವಾಕ್ ನಿರ್ಮಿಸಬೇಕಾಗಿತ್ತು. ಆದರೆ ಈಗ ಬಿಎಂಆರ್‌ಸಿಎಲ್ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿದೆ.

2017ರಲ್ಲಿ ಸಾರ್ವಜನಿಕರಿಗೆ ಸೇವೆ ನೀಡುತ್ತಿರುವ ಬನಶಂಕರಿ ಮೆಟ್ರೋ ನಿಲ್ದಾಣವು ಟಿಟಿಎಂಸಿಯಿಂದ ಸುಮಾರು 200 ಮೀಟರ್ ದೂರದಲ್ಲಿದ್ದು, ಬಸ್ ನಿಲ್ದಾಣ ಹಾಗೂ ಮೆಟ್ರೋ ನಿಲ್ದಾಣದ ನಡುವೆ ಸುಗಮವಾಗಿ ಸಂಚರಿಸುವ ವ್ಯವಸ್ಥೆ ಇಲ್ಲ. ಈ ಸಾರಿಗೆ ಕೇಂದ್ರಗಳ ನಡುವೆ ಜನ ತಲುಪಲು ಪರದಾಡಬೇಕಿತ್ತು. ಮೆಟ್ರೋ ನಿಲ್ದಾಣದಿಂದ ಬಸ್ ನಿಲ್ದಾಣಕ್ಕೆ ತಲುಪಲು ಕೂಡ ಪ್ರಯಾಣಿಕರು ಜನನಿಬಿಡ ರಸ್ತೆಯನ್ನು ದಾಟಲು ಒದ್ದಾಡುತ್ತಿದ್ದರು. ಅಲ್ಲಿ ವಾಹನಗಳ ಸಂಚಾರ ಹೆಚ್ಚು ಹಾಗೂ ಟ್ರಾಫಿಕ್ ಕೂಡ ಅಧಿಕವಾಗಿದ್ದ ಕಾರಣ ಇದಕ್ಕೆ ಪರಿಹಾರವಾಗಿ ಸ್ಕೈವಾಕ್ ನಿರ್ಮಾಣಕ್ಕೆ ಚಿಂತನೆ ನಡಸಲಾಗಿತ್ತು.

ಎಕ್ಸಿಸ್ ಬ್ಯಾಂಕ್

ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	1. ಶ್ರೀ ಮಹಮ್ಮದ್ ಸೈಫುಲ್ಲಾ ಬಿನ್ ಶ್ರೀ ತಾಳಿಪಡ್ಪು ಮೊಯಿಯೊನಬ್ಬ 2. ಶ್ರೀ ಟಿ.ಮೊಯ್ದಿನಬ್ಬ ಬಿನ್ ಶ್ರೀ.ಅಬ್ಬಾಸ್, ಇವರಿಬ್ಬರ ವಿಳಾಸ: 16–4–297/8, ತುಂಬೆ ವ್ಯಾನರ್ ಅಪಾರ್ಟ್‌ಮೆಂಟ್ ಫಳ್ನೀರ್ ರಸ್ತೆ, ಕಂಕನಾಡಿ ಅಂಚೆ, ಮಂಗಳೂರು, ಕರ್ನಾಟಕ–575002. **ಮತ್ತೊಂದು ವಿಳಾಸ:** ಡಿ ನಂ.2–201/3 ಮತ್ತು 2–201/4 ಫ್ಲಾಟ್ ನಂ.ಜಿ3 ಮತ್ತು ಜಿ4 ಗ್ರೌಂಡ್ ಫ್ಲೋರ್, ನಫೀಸಾ ಎನ್‌ಕ್ಲೇವ್ ಬ್ಲಾಕ್ 2 ಕಾಟಿಪಳ್ಳ ಗ್ರಾಮ, ಸುರತ್ಕಲ್ ಮಗಾ ಮಂಗಳೂರು–575030. **ಮತ್ತೊಂದು ವಿಳಾಸ:** ಫ್ಲಾಟ್ ನಂ.ಜಿ 1 ಮತ್ತು ಜಿ 2 ಡಿ ನಂ.2–201 ಮತ್ತು 201/1 ನೆಲ ಮಹಡಿ, ನಫೀಸಾ ಎನ್‌ಕ್ಲೇವ್, ಸೈಟ್ ನಂ.275 ಬ್ಲಾಕ್ 2 ಕಾಟಿಪಳ್ಳ, ಸುರತ್ಕಲ್, ಮಂಗಳೂರು–575030.	**ಸಂಪೂರ್ಣ ಆಸ್ತಿಯ ವಿವರಣೆ : ಆಸ್ತಿಯು ಶ್ರೀ.ಶ್ರೀ ಮಹಮ್ಮದ್ ಸೈಫುಲ್ಲಾ ರವರಿಗೆ ಸೇರಿದೆ.** ಕೃಷಿಯೇತರ ಸ್ಥಿರ ಸ್ವತ್ತಿನ ನಿವೇಶನ ಆಸ್ತಿಯ (ಮನೆ ನಿವೇಶನ ಸಂಖ್ಯೆ 275 ಕಾಟಿಪಳ್ಳ ಪುನರ್ವಸತಿ ಕಾಲೋನಿಯ 2ನೇ ಬ್ಲಾಕ್) ಹೊಸದಾಗಿ ರೂಪುಗೊಂಡ ಕಾಟಿಪಳ್ಳ ಗ್ರಾಮ (ಹಿಂದೆ ಸಂಖ್ಯೆ.44 ಕುಥೆತ್ತೂರು ಗ್ರಾಮ) ಮಂಗಳೂರು ತಾಲ್ಲೂಕಿನಲ್ಲಿದೆ ಮತ್ತು ಮಂಗಳೂರು ತಾಲ್ಲೂಕಿನ ನೋಂದಣಿ ಉಪಜಿಲ್ಲೆಯ ವ್ಯಾಪ್ತಿಯಲ್ಲಿದ್ದು ದ.ಕ ಜಿಲ್ಲೆಯಲ್ಲಿದೆ. ಎಲ್ಲಾ ಇತರ ಮಾಮೂಲ್ ಮತ್ತು ಸುಲಭವಾದ ಮಾರ್ಗದ ಹಕ್ಕುಗಳೊಂದಿಗೆ, ನೀರು ಇತ್ಯಾದಿ. ಚಕ್ಕುಬಂದಿ ಉತ್ತರಕ್ಕೆ: ಸರ್ಕಾರಿ ಭೂಮಿ, ದಕ್ಷಿಣಕ್ಕೆ: ಮನೆ ನಿವೇಶನ ಸಂಖ್ಯೆ 2/276, ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಮನೆ ನಿವೇಶನ ಸಂಖ್ಯೆ 2/280 & 2/281. **ಷೆಡ್ಯೂಲ್–ಬಿ: (ಅಪಾರ್ಟ್‌ಮೆಂಟ್‌ನ ವಿವರಗಳು) :** ವಸತಿ ಅಪಾರ್ಟ್‌ಮೆಂಟ್ ನಂ.ಜಿ03 & ಜಿ04 (ಏಕ ಘಟಕ) ಕಾರ್ಪೊರೇಷನ್ ಬಾಗಿಲು ಸಂಖ್ಯೆ 2–201/2 ಮತ್ತು 2–201/3 "ನಫೀಸಾ ಎನ್‌ಕ್ಲೇವ್" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡದ ನೆಲ ಮಹಡಿಯಲ್ಲಿದ್ದು ವಿಸ್ತೀರ್ಣ 1832.80 ಚದರ ಅಡಿಯ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ ಮತ್ತು ಬೇಸ್‌ಮೆಂಟ್ ಮಹಡಿಯಲ್ಲಿ 2 ಕಾರ್ ಪಾರ್ಕಿಂಗ್ ಸ್ಲಾಟ್‌ಗಳು ನಂ. ಜಿ 03 ಜೊತೆಗೆ 11.582% ಅವಿಭಜಿತ ಪಾಲು ಹಕ್ಕು ಶೀರ್ಷಿಕೆ ಮತ್ತು ಅಪಾರ್ಟ್ಮೆಂಟ್ ಕಟ್ಟಡದ ಮೇಲಿನ ಸಾಮಾನ್ಯ ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಕಟ್ಟಡದ ಹೊಂದಿದೆ. ಸೌಲಭ್ಯಗಳನ್ನು ಡಿಕ್ಲರೇಶನ್ ಪತ್ರದಲ್ಲಿ ವಿವರಿಸಲಾಗಿದೆ. **ಸಂಪೂರ್ಣ ಆಸ್ತಿಯ ವಿವರಣೆ : ಆಸ್ತಿಯು ಶ್ರೀ.ಶ್ರೀ ಮಹಮ್ಮದ್ ಸೈಫುಲ್ಲಾ ರವರಿಗೆ ಸೇರಿದೆ.** **ಷೆಡ್ಯೂಲ್–ಎ: (ಆಸ್ತಿಯ ವಿವರಣೆ) :** ಹೊಸದಾಗಿ ರೂಪುಗೊಂಡ ಕಾಟಿಪಳ್ಳ ಗ್ರಾಮದ ವಾರ್ಗ್ ಬಲಭಾಗದಲ್ಲಿರುವ ಕೃಷಿಯೇತರ ಸ್ಥಿರ ಮನೆ ನಿವೇಶನ ಆಸ್ತಿ (ಕಾಟಿಪಳ್ಳ ಪುನರ್ವಸತಿ ಕಾಲೋನಿಯ 2 ನೇ ಬ್ಲಾಕ್‌ನಲ್ಲಿರುವ ಮನೆ ನಿವೇಶನ ನಂ.275) (ಹಿಂದೆ ನಂ.44 ಕುಥೆತ್ತೂರು ಗ್ರಾಮ) ಮಂಗಳೂರು ತಾಲ್ಲೂಕಿನ ವ್ಯಾಪ್ತಿಯಲ್ಲಿದ್ದು ಮತ್ತು ಮಂಗಳೂರು ತಾಲ್ಲೂಕಿನ ನೋಂದಣಿ ಉಪಜಿಲ್ಲೆಯಲ್ಲಿದೆ. ಸರ್ವೆ ನಂ.58–1ಎ(ಪಿ), ನಿವೇಶನ ಸಂಖ್ಯೆ: 275, ಬ್ಲಾಕ್. ಸಂಖ್ಯೆ.2, ಕಿಸ್ಸಾಂ: ಮನೆ ನಿವೇಶನ, ವಿಸ್ತೀರ್ಣ (ಸೆಂಟ್ಸ್) : 12.00. ಜೊತೆಗೆ ಎಲ್ಲಾ ಮಾಮೂಲಿ ಮತ್ತು ಸುಲಭ ಹಕ್ಕುಗಳು ಇತ್ಯಾದಿ, ಚಕ್ಕುಬಂದಿ: ಉತ್ತರಕ್ಕೆ : ಸರ್ಕಾರಿ ಭೂಮಿ, ದಕ್ಷಿಣಕ್ಕೆ: ಮನೆ ನಿವೇಶನ ನಂ.2/276, ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ: ಮನೆ ನಿವೇಶನ ನಂ.2/280 & 2281. **ಷೆಡ್ಯೂಲ್–ಬಿ: (ಅಪಾರ್ಟ್‌ಮೆಂಟ್‌ನ ವಿವರಗಳು) :** ವಸತಿ ಅಪಾರ್ಟ್‌ಮೆಂಟ್ ನಂ.ಜಿ01 & ಜಿ02 (ಏಕ ಘಟಕ) ಕಾರ್ಪೊರೇಷನ್ ಬಾಗಿಲು ಸಂಖ್ಯೆ 2–201, 2–201/1 "ನಫೀಸಾ ಎನ್‌ಕ್ಲೇವ್" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡದ ನೆಲ ಮಹಡಿಯಲ್ಲಿದ್ದು ವಿಸ್ತೀರ್ಣ 1720.28 ಚದರ ಅಡಿಯ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ ಮತ್ತು ಬೇಸ್‌ಮೆಂಟ್ ಮಹಡಿಯಲ್ಲಿ 2 ಕಾರ್ ಪಾರ್ಕಿಂಗ್ ಸ್ಲಾಟ್‌ಗಳು ನಂ. ಜಿ 01 ಜೊತೆಗೆ 10.872% ಅವಿಭಜಿತ ಪಾಲು ಹಕ್ಕು ಶೀರ್ಷಿಕೆ ಮತ್ತು ಅಪಾರ್ಟ್ಮೆಂಟ್ ಕಟ್ಟಡದ ಮೇಲಿನ ಸಾಮಾನ್ಯ ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಕಟ್ಟಡದ ಹೊಂದಿದೆ. ಸೌಲಭ್ಯಗಳನ್ನು ಡಿಕ್ಲರೇಶನ್ ಪತ್ರದಲ್ಲಿ ವಿವರಿಸಲಾಗಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ : 9611067929 ರವರನ್ನು ಸಂಪರ್ಕಿಸಿ.**	14.03.2025 ಎನ್‌ಪಿಎ ದಿನಾಂಕ 10.01.2025	POWER HOME VANILLA BRE Loan A/c No. PHR007710801444 Rs.61,80,000/- Outstanding Amount Rs.63,77,336/- POWER HOME VANILLA BRE Loan A/c No. PHR007710802069 Rs.61,44,800/- Outstanding Amount Rs.63,40,573/- ಒಟ್ಟು ಬಾಕಿ ಮೊತ್ತ ರೂ.1,27,17,909/– ದಿನಾಂಕ: 03.02.2025 ರಂದು ಇದ್ದಂತೆ
2	1. ಎಂ ಹೆಚ್ ಯತಿರಾಜು ಸಿವಿಲ್ ಗುತ್ತಿಗೆದಾರರು, ಪ್ರತಿನಿಧಿಸುವ ಜಾಮೀನುದಾರರು: ಶ್ರೀ ಎಂ.ಹೆಚ್. ಯತಿರಾಜು ಮತ್ತು ಶ್ರೀ ಮರಿಗೌಡ ಹೆಚ್ ಸಿವಿಲ್ ಗುತ್ತಿಗೆದಾರರು, ಮುತ್ತಗೆರೆ ಮಂಡ್ಯ, ಮುತ್ತಗೆರೆ, ಮಂಡ್ಯ–571416. **ಮತ್ತೊಂದು ವಿಳಾಸ: ಪ್ರತಿನಿಧಿಸುವ ಜಾಮೀನುದಾರರು: ಶ್ರೀ ಎಂ.ಹೆಚ್. ಯತಿರಾಜು ಮತ್ತು ಶ್ರೀ ಮರಿಗೌಡ ಹೆಚ್** ಬಸರಾಳು ಹೋಬಳಿ ಮಂಡ್ಯ ತಾಲ್ಲೂಕು, ಮುತ್ತಗೆರೆ, ಕೃಷ್ಣರಾಜ್ ಪೇಟೆ ಮಂಡ್ಯ, ಮಂಡ್ಯ, ಕರ್ನಾಟಕ–571416. 2. ಶ್ರೀ.ಎಂ.ಹೆಚ್. ಯತಿರಾಜು ಬಿನ್ ಹೊನ್ನೇಗೌಡ ಎಂ, 742,11ನೇ ಕ್ರಾಸ್ ಸ್ವರ್ಣಸಂದ್ರ ವಾರ್ಡ್ ನಂ–33, ಮಂಡ್ಯ, ಕರ್ನಾಟಕ–571402. 3. ಶ್ರೀ.ಎಂ.ಹೆಚ್. ಯತಿರಾಜು ಬಿನ್ ಹೊನ್ನೇಗೌಡ ಎಂ, 4. ಶ್ರೀ ಮರಿಗೌಡ ಹೆಚ್ ಬಿನ್ ಹೊನ್ನೇಗೌಡ ಎಂ, ಇವರಿಬ್ಬರ ವಿಳಾಸ: ಬಸರಾಳು ಹೋಬಳಿ ಮಂಡ್ಯ ತಾಲ್ಲೂಕು, ಮುತ್ತಗೆರೆ, ಕೃಷ್ಣರಾಜ್ ಪೇಟೆ ಮಂಡ್ಯ, ಮಂಡ್ಯ, ಕರ್ನಾಟಕ–571416.	**ಸಂಪೂರ್ಣ ಆಸ್ತಿಯ ವಿವರಣೆ : ಆಸ್ತಿಯು ಶ್ರೀ ಮರಿಗೌಡ ಹೆಚ್ ರವರಿಗೆ ಸೇರಿದೆ.** ಆಸ್ತಿಯ ಮುತ್ತಿಗೆರೆ ಗ್ರಾಮಪಂಚಾಯತ್ ಖಾತೆ ನಂ.590 ಮತ್ತು ಫಾರ್ಮ್ ನಂ.9 ಮತ್ತು 11 ರ ಪ್ರಕಾರ, ವಿಶಿಷ್ಟ ನಂ. 152100407800720010, ಈ ಆಸ್ತಿಯು ಮುತ್ತಿಗೆರೆ ಗ್ರಾಮ, ಮನೋಯ ತಾಲ್ಲೂಕು, ಮುತ್ತಿಗೆರೆ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 14.478 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 10.82 ಮೀಟರ್ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ವಸಂತರವರಿಗೆ ಸೇರಿದ ಆಸ್ತಿ, ಉತ್ತರ: ರಾಜಶೇಖರ ರವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಬಸವರಾಜ್ : ಕಲೆಕ್ಷನ್ ಮ್ಯಾನೇಜರ್ 7349404449 ರವರನ್ನು ಸಂಪರ್ಕಿಸಿ.**	17.03.2025 ಎನ್‌ಪಿಎ ದಿನಾಂಕ 30.12.2021	SBB OVERDRAFT Loan A/c No. 918030001167718 Rs.12,00,000/- ಒಟ್ಟು ಬಾಕಿ ಮೊತ್ತ ರೂ.5,58,307/– (ದಿನಾಂಕ 15.03.2025 ರವರೆಗಿನ ಬಡ್ಡಿ ಸೇರಿದೆ)
3	1. ಶ್ರೀ ಮೊಹಮ್ಮದ್ ರಹಮತ್ ಉಲ್ಲಾ ಬಿನ್ ಶ್ರೀ ಅಬ್ದುಲ್ ರಹಮಾನ್ ಸಾಬ್, ರಾಮಕೃಷ್ಣ ಪಾಲಿಟೆಕ್ನಿಕ್ ರಸ್ತೆ, ಶ್ರೀನಿವಾಸಪುರ, ಕೋಲಾರ, ಶ್ರೀನಿವಾಸಪುರ, ಸರ್ಕಾರಿ ಉರ್ದು ಶಾಲೆಯ ಹಿಂದೆ, ಕರ್ನಾಟಕ–563135.	**ಸಂಪೂರ್ಣ ಆಸ್ತಿಯ ವಿವರಣೆ : ಆಸ್ತಿಯು ಶ್ರೀ ಮೊಹಮ್ಮದ್ ರಹಮತ್ ಉಲ್ಲಾ ರವರಿಗೆ ಸೇರಿದೆ.** ವಸತಿ ಗೃಹ ಆಸ್ತಿಯ ಮೇಲೆ ನಮ್ಮ ಬ್ಯಾಂಕ್ ಶುಲ್ಕವನ್ನು ಹೊರತುಪಡಿಸಿದ್ದು ಪಿಐಡಿ ಸಂಖ್ಯೆ:25–510–2, ಅಸೆಸ್‌ಮೆಂಟ್ ನಂ.3044/3025 ಮತ್ತು 3016/3017, ವಿಸ್ತೀರ್ಣ 3000 ಚದರ ಅಡಿ ಮತ್ತು ಅದರ ಮೇಲೆ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಆಸ್ತಿಯು ವಾರ್ಡ್ ನಂ.16, ರಾಮಕೃಷ್ಣ ಪಾಲಿಟೆಕ್ನಿಕ್ ರಸ್ತೆ, ಝಾಕಿರ್ ಹುಸೇನ್ ಮೊಹಲ್ಲಾ, ಶ್ರೀನಿವಾಸಪುರ ತಾಲ್ಲೂಕಿನ ಮುನಿಸಿಪಲ್ ವ್ಯಾಪ್ತಿಯಲ್ಲಿದ್ದು, ಕೋಲಾರ ಜಿಲ್ಲೆಯದೆ, ಶ್ರೀ ಮೊಹಮ್ಮದ್ ರಹಮತ್ ಉಲ್ಲಾ ಅವರ ಹೆಸರಿನಲ್ಲಿದೆ, ಪಿನ್‌ಕೋಡ್ – 563135. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ಆಸ್ತಿಯ ಮುನಿಸಿಪಲ್ ನಂ.3044/3045, 3016/3017, ಪಿಐಡಿ ನಂ.25–510–2, ಈ ಆಸ್ತಿಯು ಜಾಕೀರ್ ಹುಸೇನ್ ಮೊಹಲ್ಲ, ಶ್ರೀನಿವಾಸಪುರ, ವಾರ್ಡ್ ನಂ.16, ಶ್ರೀನಿವಾಸಪುರ, ಖಾತಾ ಪ್ರಮಾಣಪತ್ರದ ಪ್ರಕಾರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 18.288037 ಮತ್ತು ಉತ್ತರದಿಂದ ದಕ್ಷಿಣಕ್ಕೆ 15.240030 ಮೀಟರ್, ಒಟ್ಟು ವಿಸ್ತೀರ್ಣ 278.7090 ಚದರ ಮೀಟರ್, ಜೊತೆಗೆ ಕಟ್ಟಡವನ್ನು ನಿರ್ಮಿಸಲಾಗಿದ್ದು ವಿಸ್ತೀರ್ಣ 188.128575 ಚದರ ಮೀಟರ್ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಇಲಿಯಾಸ್ ಸಾಬ್ ಅವರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಅನೀಸ್ ಸಾಬ್ ಅವರ ಆಸ್ತಿ, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ನಂದೀಶ್ ಕೆ ಬಿ, ಕಲೆಕ್ಷನ್ ಮ್ಯಾನೇಜರ್ 9986043776 ರವರನ್ನು ಸಂಪರ್ಕಿಸಿ.**	07.03.2025 ಎನ್‌ಪಿಎ ದಿನಾಂಕ 23.02.2025	Over Draft Loan A/c No. 921030004307885 Rs.25,00,000/- Outstanding Amount Rs.25,05,575/- Production Credit-Horticulture (Working Capital) Loan A/c No. 921030004307898 Rs.30,000/- Outstanding Amount Rs.33,655/- ಒಟ್ಟು ಬಾಕಿ ಮೊತ್ತ ರೂ.25,39,230/– ದಿನಾಂಕ 28.02.2025 ರಂದು ಇದ್ದಂತೆ
4	1. ಮೆ॥ ಕೆ ಎಸ್ ಕೃಷ್ಣ ಮೂರ್ತಿ ಪ್ರತಿನಿಧಿಸುವ ಮಾಲೀಕರು ಶ್ರೀ ಕೃಷ್ಣಮೂರ್ತಿ ಕೆ ಎಸ್, ಅಂಗಡಿ ನಂ.01, ವೆಜಿಟೆಬಲ್ ಮಾರುಕಟ್ಟೆ ಯಾರ್ಡ್, 24 ಅಂಗಡಿಗಳು ಮತ್ತು ಮಳಿಗೆ 01. ಚಿಂತಾಮಣಿ ಚೇಳೂರು ರಸ್ತೆ, ಚಿಂತಾಮಣಿ ಮಾರುಕಟ್ಟೆ, ಚಿಕ್ಕಬಳ್ಳಾಪುರ, ಕರ್ನಾಟಕ–563125. **ಮತ್ತೊಂದು ವಿಳಾಸ: ಮೆ॥ ಕೆ ಎಸ್ ಕೃಷ್ಣ ಮೂರ್ತಿ ಪ್ರತಿನಿಧಿಸುವ ಮಾಲೀಕರು ಶ್ರೀ ಕೃಷ್ಣಮೂರ್ತಿ ಕೆ ಎಸ್,** 2. ಶ್ರೀ ಕೃಷ್ಣ ಮೂರ್ತಿ ಕೆ ಎಸ್ ಬಿನ್ ಶ್ರೀ ಶ್ರೀಪಾಮಪ್ಪ, ಇವರಿಬ್ಬರ ವಿಳಾಸ: ವಾರ್ಡ್ ನಂ.8, ಪ್ರಭಾಕರ್ ಲೇಔಟ್, ರಾಜೀವ ನಗರ, ಕಾನಮಂಪಲ್ಲಿ, ಚಿಂತಾಮಣಿ, ಚಿಕ್ಕಬಳ್ಳಾಪುರ, ಕರ್ನಾಟಕ–563125.	**ಸಂಪೂರ್ಣ ಆಸ್ತಿಯ ವಿವರಣೆ : ಆಸ್ತಿಯು ಕೆ ಎಸ್ ಕೃಷ್ಣ ಮೂರ್ತಿ ರವರಿಗೆ ಸೇರಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ವಸತಿ ಕಟ್ಟಡ ಆಸ್ತಿಯ ಮುನಿಸಿಪಲ್ ಅಸೆಸ್‌ಮೆಂಟ್ ನಂ.400/353, (ಹಳೆ ನಂ.400/353), ಪಿಐಡಿ ನಂ.8–2–618–40, ಈ ಆಸ್ತಿಯು ಕನಂಪಲ್ಲಿ ಲೇಔಟ್‌ನ ಉತ್ತರ ಭಾಗ, 1ನೇ ಕ್ರಾಸ್, 1ನೇ ವಿಭಾಗ, ವಾರ್ಡ್ ನಂ.8, ಚಿಂತಾಮಣಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 55 ಅಡಿ, (ಖಾತಾ ಪ್ರಮಾಣಪತ್ರದ ಪ್ರಕಾರ ಪೂರ್ವದಿಂದ ಪಶ್ಚಿಮಕ್ಕೆ 9.144018 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 16.764034 ಮೀಟರ್ ಒಟ್ಟು 153.28995 ಚದರ ಮೀಟರ್) ಆಸ್ತಿಯು ಶ್ರೀ ಕೆ.ಎಸ್. ಕೃಷ್ಣಮೂರ್ತಿ ಬಿನ್ ಶ್ರೀರಾಮಪ್ಪ ಅವರಿಗೆ ಸೇರಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.3, ಪಶ್ಚಿಮಕ್ಕೆ: ಜೀವನ್ ರೆಡ್ಡಿ ಅವರ ಮನೆ, ಉತ್ತರಕ್ಕೆ: 20 ಅಡಿ ರಸ್ತೆ, ದಕ್ಷಿಣಕ್ಕೆ: ಜಿ.ಇ.ಹೆಚ್.ಸಿ.ಎಸ್ ಸೊಸೈಟಿಯ ನಿವೇಶನಗಳು. **ಯಾವುದೇ ಮಾಹಿತಿಗಾಗಿ ನಂದೀಶ್ ಕೆ ಬಿ, ಕಲೆಕ್ಷನ್ ಮ್ಯಾನೇಜರ್ 9986043776 ರವರನ್ನು ಸಂಪರ್ಕಿಸಿ.**	17.03.2025 ಎನ್‌ಪಿಎ ದಿನಾಂಕ 24.02.2025	Over Draft - Kisan Mitra - AVCP Loan A/c No. 921030058387554 Rs.44,90,000/- ಒಟ್ಟು ಬಾಕಿ ಮೊತ್ತ ರೂ.46,11,601/– ದಿನಾಂಕ 14.03.2025 ರಂದು ಇದ್ದಂತೆ
5	(1) ಶ್ರೀ ಸಂದೇಶ್ ಕೆ ಬಿ ಬಿನ್ ಶ್ರೀ ಬಸವೇಗೌಡ ಕೆ ಎಂ, (2) ಶ್ರೀಮತಿ ಯಶೋದಾ ಕೆ ಎ ಕೋಂ. ಶ್ರೀ ಕೃಷ್ಣೇಗೌಡ ಬಿ ಎನ್, (3) ಶ್ರೀಮತಿ ಬಿ ಕೆ ಯಶಸ್ವಿನಿ ಕೋಂ. ಶ್ರೀ ಸಂದೇಶ್ ಕೆ ಬಿ, ಇವರೆಲ್ಲರ ವಿಳಾಸ: ವೆಂಕಟೇಶ್ವರ ನಿಲಯ, 2ನೇ ಕ್ರಾಸ್, ಕುವೆಂಪು ನಗರ, ಚಿಕ್ಕಮಗಳೂರು, ಕರ್ನಾಟಕ–577101. **ಮತ್ತೊಂದು ವಿಳಾಸ:** ನೇರಂಕಿ ಇಡ್ಕಣಿ, ಹೆರೆಬೈಲ್, ಮೂಡಿಗೆರೆ, ಚಿಕ್ಕಮಗಳೂರು, ಕರ್ನಾಟಕ–577121.	**ಸಂಪೂರ್ಣ ಆಸ್ತಿಯ ವಿವರಣೆ : ಆಸ್ತಿಯು ಶ್ರೀಮತಿ ಯಶೋದಾ ಕೆ ಎ ಅವರಿಗೆ ಸೇರಿದೆ.** ಆರ್‌ಸಿಸಿ ವಸತಿ ಕಟ್ಟಡವು ನೆಲ ಮಹಡಿ ಮತ್ತು ಮೊದಲನೇ ಮಹಡಿಯನ್ನು ಒಳಗೊಂಡಿದ್ದು, ಪ್ರತಿ ಮಹಡಿಯೂ 705 ಚದರ ಅಡಿ ಅಳತೆಯಲ್ಲಿ ನಿರ್ಮಿಸಲಾಗಿದೆ, 30 ಅಡಿ X 60 ಅಡಿ = 1800 ಚದರ ಅಡಿ ಅಳತೆಯ ಸ್ಥಳದಲ್ಲಿ ನಿರ್ಮಿಸಲಾಗಿದೆ, ಚಿಕ್ಕಮಗಳೂರು ಮುನಿಸಿಪಲ್ ಎಂ.ಎ. ಸಂಖ್ಯೆ.2045/1867, ಪಿ.ಐ.ಡಿ. ಸಂಖ್ಯೆ. 5–4–528–246ಎ, ಇದು ಕುವೆಂಪು ನಗರ ಎಕ್ಸ್‌ಟೆನ್ಶನ್, ವಾರ್ಡ್ ಸಂಖ್ಯೆ.5 ಚಿಕ್ಕಮಗಳೂರು ನಗರದಲ್ಲಿದೆ, ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ.5–ಅಂಬಳೆ ಶಿವಕುಮಾರ್ ರವರ ಮನೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ.7. ಕೃಷ್ಣಮೂರ್ತಿ ರವರ ನಿವೇಶನ, ಉತ್ತರಕ್ಕೆ: 30 ಅಡಿ ರಸ್ತೆ, ದಕ್ಷಿಣಕ್ಕೆ: ಶ್ರೀ. ಹಾಲಪ್ಪ ರವರ ಆಸ್ತಿ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ 9620703099 ರವರನ್ನು ಸಂಪರ್ಕಿಸಿ.**	13.03.2025 ಎನ್‌ಪಿಎ ದಿನಾಂಕ 16.03.2018	ASSET POWER Loan A/c No. LPR007701818384 ರೂ.42,40,000/– ಒಟ್ಟು ಬಾಕಿ ಮೊತ್ತ ರೂ.97,66,046/– ದಿನಾಂಕ: 12.03.2025 ರಂದು ಇದ್ದಂತೆ
6	(1) ಶ್ರೀ ಮರುಳಸಿದ್ದೇಶ್ವರ ಟ್ರೇಡರ್ಸ್ – ಮಾಲೀಕರು ಶ್ರೀ ಅಶೋಕ್ ಆರ್ ಪ್ರತಿನಿಧಿಸುತ್ತಾರೆ ಮತ್ತು **ಜಾಮೀನುದಾರರು ಶ್ರೀ ಸಿ ಎಚ್ ರೇವಣ್ಣ** ಪ್ರತಿನಿಧಿಸುತ್ತಾರೆ, ನೆಲ ಮಹಡಿ, ಮನೆ ಸಂಖ್ಯೆ 6405/ಎ/470/ಎ/165/19, ಪರಮೇಶ್ವರಪ್ಪ ಸಂಕೀರ್ಣ, ಬಿ ಎಚ್ ರಸ್ತೆ, ತರೀಕೆರೆ, ಚಿಕ್ಕಮಗಳೂರು–577228. (2) **ಶ್ರೀ ಅಶೋಕ್ ಆರ್** ಬಿನ್ ಶ್ರೀ ಸಿ.ಎಚ್.ರೇವಣ್ಣ, (3) **ಶ್ರೀ ಸಿ.ಎಚ್.ರೇವಣ್ಣ** ಬಿನ್ ಶ್ರೀ ಲೇಟ್ ಹನುಮಂತಪ್ಪ, **ಇವರಿಬ್ಬರ ವಿಳಾಸ:** ನಂ.26, ಈಶ್ವರ ದೇವಸ್ಥಾನ, ಸಿದ್ದಸಹಳ್ಳಿ, ದುಗ್ಲುಪುರೆ, ಚಿಕ್ಕಮಗಳೂರು, ಕರ್ನಾಟಕ–577144.	**ಶ್ರೀ.ಸಿ.ಎಚ್.ರೇವಣ್ಣ, ಶ್ರೀ. ಅಶೋಕ್ ಆರ್ ಮತ್ತು ಶ್ರೀ.ಜಗದೀಶ್ ಅವರಿಗೆ ಸೇರಿದ್ದು** **ಐಟಂ ಸಂಖ್ಯೆ.1:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಗ್ರಾಮಠಾಣಾ ಆಸ್ತಿಯ ವಿ.ಪಿ. ಖಾತಾ ಸಂಖ್ಯೆ.31/54, ಪಿಐಡಿ ಸಂಖ್ಯೆ. 150900704000800058, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 16.764 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 18.288 ಮೀಟರ್, ಒಟ್ಟು ವಿಸ್ತೀರ್ಣ 306.58 ಚದರ ಮೀಟರ್, ಜೊತೆಗೆ 306.58 ಚದರ ಮೀಟರ್ ಅಳತೆಯ ಕಟ್ಟಡ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಪಾರ್ವತಪ್ಪ ರವರ ಆಸ್ತಿ, ಪಶ್ಚಿಮಕ್ಕೆ: ಹಾಲಪ್ಪ ರವರ ಆಸ್ತಿ, ಉತ್ತರಕ್ಕೆ: ಹಿಡುವಳಿ ಭೂಮಿ, ದಕ್ಷಿಣಕ್ಕೆ: ಸ್ವಂತ ಆಸ್ತಿ. **ಐಟಂ ಸಂಖ್ಯೆ.2:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಗ್ರಾಮಠಾಣಾ ವಿ.ಪಿ. ಖಾತಾ ಸಂಖ್ಯೆ.55, ಪಿಐಡಿ ಸಂಖ್ಯೆ. 150900704000800059, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 16.764 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 27.432000000000002 ಮೀಟರ್, ಒಟ್ಟು 459.87 ಚದರ ಮೀಟರ್, ಜೊತೆಗೆ 459.87 ಚದರ ಮೀಟರ್ ಅಳತೆಯ ಕಟ್ಟಡದೊಂದಿಗೆ, ಎರಡೂ ಐಟಂಗಳು ಸಿದ್ದರಹಳ್ಳಿ ಗ್ರಾಮ, ಸಿದ್ದರಹಳ್ಳಿ ಗ್ರಾಮ ಪಂಚಾಯಿತಿ, ತರೀಕೆರೆ ಬ್ಲಾಕ್ ಮತ್ತು ತಾಲ್ಲೂಕು, ಚಿಕ್ಕಮಗಳೂರು ವ್ಯಾಪ್ತಿಯಲ್ಲಿವೆ, ಈ ಆಸ್ತಿಯು ಶ್ರೀ. ಸಿ. ಹೆಚ್. ರೇವಣ್ಣ, ಶ್ರೀ. ಹನುಮಂತಪ್ಪ ರವರಿಗೆ ಸೇರಿದೆ. ಚಕ್ಕುಬಂದಿ: ಪೂರ್ವಕ್ಕೆ: ಪಾರ್ವತಪ್ಪ ರವರ ಆಸ್ತಿ, ಪಶ್ಚಿಮಕ್ಕೆ: ಹಾಲಪ್ಪ ರವರ ಆಸ್ತಿ, ಉತ್ತರಕ್ಕೆ: ಸ್ವಂತ ಆಸ್ತಿ, ದಕ್ಷಿಣಕ್ಕೆ: ರಸ್ತೆ. **ಯಾವುದೇ ಸ್ಪಷ್ಟೀಕರಣಕ್ಕಾಗಿ, ದಯವಿಟ್ಟು ಸಂಪರ್ಕಿಸಿ ನಂದೀಶ್ ಕೆ. ಬಿ, ಸಂಗ್ರಹ ವ್ಯವಸ್ಥಾಪಕ ಸಂಖ್ಯೆ. 9986043776.**	17.03.2025 ಎನ್‌ಪಿಎ ದಿನಾಂಕ 28.12.2024	Overdraft-MSME - GSTOP (Overdra ft) Loan A/c No. 923030001461047 ರೂ.45,00,000/– ಒಟ್ಟು ಬಾಕಿ ಮೊತ್ತ ರೂ.46,19,786/– ದಿನಾಂಕ: 17.03.2025 ರಂದು ಇದ್ದಂತೆ
7	(1) ಶ್ರೀ ಬಸಂತ್ ಬಹದ್ದೂರ್ ಬಿನ್ ಶ್ರೀ ಜೈ ಬಹದ್ದೂರ್, (2) **ಶ್ರೀಮತಿ ಲಲಿತಾ ಬಿ** ಕೋಂ ಶ್ರೀ ಬಸಂತ್ ಬಹದ್ದೂರ್, **ಇವರಿಬ್ಬರ ವಿಳಾಸ:** 25, 1ನೇ ಮಹಡಿ, 2ನೇ ಮುಖ್ಯ ರಸ್ತೆ, ಬಿಡಿಎ ಲೇಔಟ್, ಎಲ್.ಜಿ. ಹಳ್ಳಿ, ಆರ್‌ಎಂವಿ ಎಕ್ಸ್‌ಟೆನ್ಶನ್, ಬೆಂಗಳೂರು–560094. **ಮತ್ತೊಂದು ವಿಳಾಸ:** ಬಿ–5,1003, 2 ಬಿಎಚ್‌ಕೆ ಊದ್ದಬನಹಲ್ಸ್ ಹಂತ–2, ಬೆಂಗಳೂರು, ಕರ್ನಾಟಕ–560079. **ಮತ್ತೊಂದು ವಿಳಾಸ: ಶ್ರೀ ಬಸಂತ್ ಬಹದ್ದೂರ್** ಬಿನ್ ಶ್ರೀ ಜೈ ಬಹದ್ದೂರ್, 4ನೇ, ಮಂಜುನಾಥ ಲೇಔಟ್ ಮಗಶೆಟ್ಟಿಹಳ್ಳಿ, ಬೆಂಗಳೂರು–560094.	**ಈ ಆಸ್ತಿಯು ಶ್ರೀ ಬಸಂತ್ ಬಹದ್ದೂರ್ ಅವರಿಗೆ ಸೇರಿದ್ದು** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಎಪಿಟಿ ನಂ.ಬಿ5–1003, ಬಿ5 ಬ್ಲಾಕ್, ಬಿಡಿಎ ಅಪಾರ್ಟ್‌ಮೆಂಟ್, ದೊಡ್ಡಬಣಹಳ್ಳಿ ಫೇಸ್ 2 ಬೆಂಗಳೂರು 560049, ಜೊತೆಗೆ ಸಾಮಾನ್ಯ ಪ್ರದೇಶಗಳನ್ನೊಳಗೊಂಡಿದ್ದು, ಬಚ್ಚಲು ಮನೆ, ಒಳಚರಂಡಿ, ಶೌಚಾಲಯ ಮತ್ತು ಇತರ ಅನುಕೂಲಗಳು ಮತ್ತು ಅದಕ್ಕೆ ಸಂಬಂಧಿಸಿದ ಸೌಲಭ್ಯಗಳು ಅಥವಾ ಫ್ಲಾಟ್/ಘಟಕ/ಕಚೇರಿ ಆವರಣಗಳು ಮತ್ತು ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ. ಚಕ್ಕುಬಂದಿ: ಉತ್ತರಕ್ಕೆ: ಡಿಬಿ–ಬಿ5 ಮನೆಯ ನಂ.1004, ದಕ್ಷಿಣಕ್ಕೆ: ಆಕಾಶಕ್ಕೆ ತೆರೆದ ಜಾಗ, ಪೂರ್ವಕ್ಕೆ: ಪ್ಯಾಸೇಜ್ & ಆಕಾಶಕ್ಕೆ ತೆರೆದ ಜಾಗ, ಪಶ್ಚಿಮಕ್ಕೆ: ಆಕಾಶಕ್ಕೆ ತೆರೆದ ಜಾಗ. ವಿಸ್ತೀರ್ಣ: 674 ಚದರ ಅಡಿ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ 9620703099 ರವರನ್ನು ಸಂಪರ್ಕಿಸಿ.**	18.03.2025 ಎನ್‌ಪಿಎ ದಿನಾಂಕ 18.11.2024	POWER HOME BRE Loan A/c No. PHR000904298374 ರೂ.23,02,987/– ಒಟ್ಟು ಬಾಕಿ ಮೊತ್ತ ರೂ.20,25,494/– ದಿನಾಂಕ: 03.02.2025ರಂದು ಇದ್ದಂತೆ
8	(1) ಶ್ರೀಮತಿ ಜಯಲಕ್ಷ್ಮಿ ಬಿ ವಿ D/o ವಾಸುದೇವ ರಾವ್ ಬಿ, (2) **ಶ್ರೀ ಪ್ರೀತಮ್ ಬಿ ಪಿ** ಬಿನ್ ಶ್ರೀ ಪ್ರಭಾಕರ, **ಇವರಿಬ್ಬರ ವಿಳಾಸ:** ಫ್ಲಾಟ್–ಬಿ–104, ಆರ್‌ಎನ್‌ಎಸ್ ಶಾಂತಿ ನಿವಾಸ, ತುಮಕೂರು ರಸ್ತೆ ಯಶವಂತಪುರ ಕರ್ನಾಟಕ, ಭಾರತ–560022. **ಮತ್ತೊಂದು ವಿಳಾಸ:** ಫ್ಲಾಟ್ ಇಎಲ್ 1204, 11ನೇ ಮಹಡಿ ಹಂತ 1 ಬ್ಲಾಕ್ ಒ ಪ್ಲಾಟಿಯಮ್ ಸಿಟಿ ಪ್ರಾಜೆಕ್ಟ್ ಆಸ್ತಿ ನಂ.2 ಎಚ್‌ಎಂಟಿ ಮುಖ್ಯ ರಸ್ತೆ, ಪೀಣ್ಯ ಗ್ರಾಮ ಯಶವಂತಪುರ ಕೋ ಬೆಂಗಳೂರು–560013.	**ಈ ಆಸ್ತಿಯು ಶ್ರೀಮತಿ ಜಯಲಕ್ಷ್ಮೀ ಬಿ.ವಿ. ರವರಿಗೆ ಸೇರಿದ್ದು** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.ಇಎಲ್–1204 11ನೇ ಮಹಡಿಯ ಫೇಸ್ I 'O' ಬ್ಲಾಕ್‌ನಲ್ಲಿರುವ 'ಪ್ಲಾಟಿನಂ ಸಿಟಿ ಪ್ರಾಜೆಕ್ಟ್' ಎಂದು ಕರೆಯಲ್ಪಡುವ ಬಹುಮಹಡಿಯಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು, ಯಶವಂತಪುರ ಹೋಬಳಿಯ H.M.T. ಮುಖ್ಯ ರಸ್ತೆಯಲ್ಲಿರುವ ಆಸ್ತಿ ಸಂಖ್ಯೆ 2 ರ ದೊಡ್ಡ ಪ್ರಮಾಣದ ಆಸ್ತಿಯ ಒಂದು ಭಾಗವಾಗಿದೆ, ಇದು 117.86 ಚದರ ಅಡಿ ಅವಿಭಾಜಿತ ಪಾಲನ್ನು ಹೊಂದಿದೆ, 710 ಚದರ ಅಡಿ ಸೂಪರ್ ಬಿಲ್ಟ್–ಅಪ್ ಪ್ರದೇಶವನ್ನು ಹೊಂದಿದೆ. ಒಟ್ಟು ಆಸ್ತಿಯ ಚಕ್ಕುಬಂದಿ ಈ ಕೆಳಗಿನಂತಿದೆ, ಪೂರ್ವಕ್ಕೆ: ಪ್ಲಾಟಿನಂ ಸಿಟಿ ಪ್ರಾಜೆಕ್ಟ್‌ನ 'ಬಿ' ಬ್ಲಾಕ್, ಪಶ್ಚಿಮಕ್ಕೆ: ಭಾರತ್ ಫ್ರಿಟ್ಜ್ ವರ್ನರ್ ಫ್ಯಾಕ್ಟರಿ, ಉತ್ತರಕ್ಕೆ: ಪ್ಲಾಟಿನಂ ಸಿಟಿ ಪ್ರಾಜೆಕ್ಟ್‌ನ ಮುಕ್ತ ಸ್ಥಳ, ದಕ್ಷಿಣಕ್ಕೆ: ಪ್ಲಾಟಿನಂ ಸಿಟಿ ಪ್ರಾಜೆಕ್ಟ್‌ನ ಮುಕ್ತ ಸ್ಥಳ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ 9620703099 ರವರನ್ನು ಸಂಪರ್ಕಿಸಿ.**	13.03.2025 ಎನ್‌ಪಿಎ ದಿನಾಂಕ 12.05.2021	ASSET POWER BRE Loan A/c No. LPR000903058991 ರೂ.23,75,238/– ಒಟ್ಟು ಬಾಕಿ ಮೊತ್ತ ರೂ.36,64,436/– ದಿನಾಂಕ: 12.03.2025 ರಂದು ಇದ್ದಂತೆ
9	(1) ಶ್ರೀ ಸಿ ಮಂಜುನಾಥ್ ಸ್ವರೂಪ್ ಬಿನ್ ಚಿಕ್ಕಬೈರೇಗೌಡ, (2) **ಶ್ರೀಮತಿ ರಶ್ಮಿ ಹೆಚ್ ಕೆ** ಕೋಂ. ಶ್ರೀ ಸಿ ಮಂಜುನಾಥ್ ಸ್ವರೂಪ್, **ಇವರಿಬ್ಬರ ವಿಳಾಸ:** 92, 7ನೇ ಕ್ರಾಸ್, 7ನೇ ಮುಖ್ಯರಸ್ತೆ, 3ನೇ ಹಂತ, ಜೆಪಿ ನಗರ, ಬೆಂಗಳೂರು, ಕರ್ನಾಟಕ–560078. **ಮತ್ತೊಂದು ವಿಳಾಸ:** ಫ್ಲಾಟ್ ನಂ.ಜೆ. 207, 2ನೇ ಮಹಡಿ, ಟಿ–ಬ್ಲಾಕ್, ಬೆಂಗಳೂರು, ಕರ್ನಾಟಕ–560070. **ಮತ್ತೊಂದು ವಿಳಾಸ:** ಶ್ರೀ ಸಿ ಮಂಜುನಾಥ್ ಸ್ವರೂಪ್ ಬಿನ್ ಚಿಕ್ಕಬೈರೇಗೌಡ, ನಂ.150/15, 69ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು–560010.	**ಈ ಆಸ್ತಿಯು ಸಿ ಮಂಜುನಾಥ್ ಸ್ವರೂಪ್ ರವರಿಗೆ ಸೇರಿದ್ದು** **ಷೆಡ್ಯೂಲ್ 'ಎ' ಆಸ್ತಿ** (ಸಂಪೂರ್ಣ ಆಸ್ತಿಯ ವಿವರಣೆ) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಮುನಿಸಿಪಲ್ ನಂ.9, (ಹಳೆಯ ಮುನಿಸಿಪಲ್ ನಂ.1, 3, 4, 5, 5/1, 6, 7, 7/1, 8, 8/1 ಮತ್ತು 9) ಈ ಆಸ್ತಿಯು ಬಿನ್ನಿಸ್ಸನ್ ಗಾರ್ಡನ್, ಮಾಗಡಿ ರಸ್ತೆ, ಮುನಿಸಿಪಲ್ ವಾರ್ಡ್ ನಂ.29, ಬೆಂಗಳೂರಿನಲ್ಲಿದೆ, ವಿಸ್ತೀರ್ಣ 7,05,759 ಚದರ ಅಡಿ ಹೊಂದಿದೆ, (ರಸ್ತೆಯ ಅಗಲೀಕರಣಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಗೆ 11025 ಚದರ ಅಡಿ ಕಡಿಮೆ) ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಗುರುವಣ್ಣ ದೇವರ ಮಠ ಮತ್ತು ಸಾರ್ವಜನಿಕ ರಸ್ತೆಯ ಮಾಗಡಿ ರಸ್ತೆ ಮತ್ತು ಆಸ್ತಿ, ಪಶ್ಚಿಮಕ್ಕೆ: ಖಾಸಗಿ ಆಸ್ತಿಗಳು, ಉತ್ತರಕ್ಕೆ: ಆರೋಗ್ಯ ಭವನ ಮತ್ತು ಗುರುವಣ್ಣ ದೇವರ ಮಠ ಮತ್ತು ದಕ್ಷಿಣಕ್ಕೆ: ಭೂಮಿ ಮತ್ತು ಕಟ್ಟಡಗಳು: ಕೆಂಪಾಪುರ ಅಗ್ರಹಾರ ಮುಖ್ಯ ರಸ್ತೆ ಎಂದು ಕರೆಯಲ್ಪಡುವ 11 ನೇ ಮುಖ್ಯ ರಸ್ತೆ, ಮಾರ್ಲಪ್ಪಣ್ಣ ಪಾಳೆಯ ಮತ್ತು ಖಾಸಗಿ ಆಸ್ತಿಗಳು. **ಷೆಡ್ಯೂಲ್ 'ಬಿ' ಆಸ್ತಿ** (ಇದರಿಂದ ತಿಳಿಸಲಾದ ಆಸ್ತಿ): ಷೆಡ್ಯೂಲ್ 'ಎ' ಆಸ್ತಿಯಲ್ಲಿ 0.0579% ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ, ಬಡ್ಡಿ ಮತ್ತು ಮಾಲೀಕತ್ವ (ಇದು ಷೆಡ್ಯೂಲ್ 'ಎ' ಆಸ್ತಿಯಲ್ಲಿ 402.298 ಚದರ ಅಡಿ ಭೂ ಪಾಲು ಹೊಂದಿರುತ್ತದೆ). **ಷೆಡ್ಯೂಲ್ 'ಸಿ' ಆಸ್ತಿ** (ಇದರಿಂದ ತಿಳಿಸಲಾದ ಆಸ್ತಿ): ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.ಜೆ–207, ಟುಲಿಪ್ ಬ್ಲಾಕ್‌ನ ಎರಡನೇ ಮಹಡಿಯ ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾದ "ದಿ ಗಾರ್ಡನ್ಸ್" ನ ಭಾಗವಾಗಿದೆ ಮತ್ತು 966 ಚದರ ಅಡಿ ಅಪಾರ್ಟ್‌ಮೆಂಟ್. ಪ್ಯಾಸೇಜ್‌ಗಳು, ಲಾಬಿಗಳು, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರ ಪ್ರದೇಶಗಳಲ್ಲಿ ಅನುಪಾತದ ಪಾಲನ್ನು ಒಳಗೊಂಡಂತೆ ಮತ್ತು ಕೆಳ ಬೇಸ್‌ಮೆಂಟ್‌ನಲ್ಲಿ ಒಂದು ಕಾರ್ ಪಾರ್ಕಿಂಗ್ ಸ್ಲಾಟ್ ಸಂಖ್ಯೆ.ಎ–207 ಮತ್ತು ಚಿಕ್ಕಪೇಟೆಯ ಮುನಿಸಿಪಲ್ ಸಂಖ್ಯೆ.9/860, ಬಿನ್ನಿಸ್ಸನ್ ಗಾರ್ಡನ್, ಮಾಗಡಿ ರಸ್ತೆ, ಪುರಸಭೆ ವಾರ್ಡ್ ಸಂಖ್ಯೆ.120 ಹೊಂದಿರುವ ಅಪಾರ್ಟ್‌ಮೆಂಟ್‌ನ ಬಳಕೆಯ ವಿಶೇಷ ಹಕ್ಕನ್ನು ಹೊಂದಿರುವ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ ಮತ್ತು ಅಪಾರ್ಟ್‌ಮೆಂಟ್ ಚಕ್ಕುಬಂದಿ: ಪೂರ್ವಕ್ಕೆ: "ದಿ ಗಾರ್ಡನ್ಸ್" ನ ಟುಲಿಪ್ ಬ್ಲಾಕ್‌ನಲ್ಲಿ ಎರಡನೇ ಮಹಡಿಯಲ್ಲಿ ಓಪನ್ ಸ್ಪೇಸ್ ಮತ್ತು ಅಪಾರ್ಟ್‌ಮೆಂಟ್ ಸಂಖ್ಯೆ.ಎ–203 ಕಡೆಗೆ ತೆರೆದಿರುತ್ತದೆ, ಪಶ್ಚಿಮಕ್ಕೆ: 'ದಿ ಗಾರ್ಡನ್ಸ್' ನ ಟುಲಿಪ್ ಬ್ಲಾಕ್‌ನಲ್ಲಿ ಎರಡನೇ ಮಹಡಿಯಲ್ಲಿ ಓಪನ್ ಸ್ಪೇಸ್, ಉತ್ತರಕ್ಕೆ: 'ದಿ ಗಾರ್ಡನ್ಸ್' ನ ಟುಲಿಪ್ ಬ್ಲಾಕ್‌ನಲ್ಲಿ ಎರಡನೇ ಮಹಡಿಯಲ್ಲಿ ಅಪಾರ್ಟ್‌ಮೆಂಟ್ ಸಂಖ್ಯೆ.ಎ–208, ದಕ್ಷಿಣಕ್ಕೆ: 'ದಿ ಗಾರ್ಡನ್ಸ್' ನ ಟುಲಿಪ್ ಬ್ಲಾಕ್‌ನಲ್ಲಿ ಎರಡನೇ ಮಹಡಿಯಲ್ಲಿ ಲಿಫ್ಟ್ ಮತ್ತು ಲಾಬಿ. **ಯಾವುದೇ ಸ್ಪಷ್ಟೀಕರಣಕ್ಕಾಗಿ, ದಯವಿಟ್ಟು ಶ್ರೀ ಸುದರ್ಶನ್ ಅವರನ್ನು ಸಂಪರ್ಕಿಸಿ.**	13.03.2025 ಎನ್‌ಪಿಎ ದಿನಾಂಕ 03.01.2022	POWER HOME Loan A/c No. PHR000901725745 ರೂ.36,46,468/– ಒಟ್ಟು ಬಾಕಿ ಮೊತ್ತ ರೂ.32,05,459/– ದಿನಾಂಕ: 12.03.2025 ರಂದು ಇದ್ದಂತೆ
10	(1) ಶ್ರೀ ಲೋಕೇಶ್ ಬಿ ಎಂ ಬಿನ್ ಶ್ರೀ ಮರಿಷಮಯ್ಯ ಚಿಕ್ಕಲಿಂಗಯ್ಯ, (2) **ಶ್ರೀಮತಿ ಕಾವ್ಯ ಭಾಷಿಣಿ ಚಂದ್ರ ಶೇಖರ್** ಕೋಂ ಶ್ರೀ ಲೋಕೇಶ್ ಬಿ ಎಂ, **ಇವರಿಬ್ಬರ ವಿಳಾಸ:** ನಂ.90, 3ನೇ ಕ್ರಾಸ್, ಬಿ.ಎಂ. ರಸ್ತೆ, ಎಸ್‌ಬಿಐ ಎದುರು, ಬಿಡದಿ, ರಾಮನಗರ, ಜಿಲ್ಲೆ ಮತ್ತು ತಾಲ್ಲೂಕು, ಕರ್ನಾಟಕ–562109. **ಮತ್ತೊಂದು ವಿಳಾಸ:** ನಿವೇಶನ ನಂ.877, ಬಿನ್ನಮಂಗಲ, 1ನೇ ಹಂತ, ಇಂದಿರಾ ನಗರ ಬೆಂಗಳೂರು, ಕರ್ನಾಟಕ–560038. **ಮತ್ತೊಂದು ವಿಳಾಸ:** ಶ್ರೀಮತಿ ಕಾವ್ಯ ಭಾಷಿಣಿ ಚಂದ್ರ ಶೇಖರ್, ಶ್ರೀ ಲೋಕೇಶ್ ಬಿ ಎಂ, 170, ಅನುಚಂದ್ರ, 5ನೇ ಮೇನ್, 2ನೇ ಹಂತ, 2ನೇ ಹಂತ, ನಂದಿನಿ ರಂಗಮಂದಿರದ ಹತ್ತಿರ, ಮಹಾಲಕ್ಷ್ಮೀಪುರಂ ಲೇಔಟ್, ಬೆಂಗಳೂರು–560086.	**ಈ ಆಸ್ತಿಯು ಶ್ರೀಮತಿ ಕಾವ್ಯಾ ಭಾಷಿಣಿ ಚಂದ್ರ ಶೇಖರ್ ರವರಿಗೆ ಸೇರಿದ್ದು** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಮುನಿಸಿಪಲ್ ನಂ.877 (ಎಂಟುನೂರ ಎಪ್ಪತ್ತೇಳು), ಪಿಐಡಿ ನಂ.82–18–877, ಈ ಆಸ್ತಿಯು ಬಿ.ಎಂ.ಕಾವಲ್ ಬಿನ್ನಮಂಗಲ 1ನೇ ಹಂತ, ಇಂದಿರಾನಗರ, ಬೆಂಗಳೂರು–560038ನಲ್ಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.82 ಹೊಯ್ಸಳ ನಗರದಲ್ಲಿದೆ, ಜೊತೆಗೆ ವಾಸಯೋಗ್ಯ ಸ್ಥಳದ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ (11.58 + 12.50)/2 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 20.73 ಮೀಟರ್, ಕಟ್ಟಡದ ನಿರ್ಮಿತ ಪ್ರದೇಶವು ನೆಲ ಮಹಡಿಯಲ್ಲಿ 1250 ಚದರ ಅಡಿ ಮತ್ತು ಮೊದಲ ಮಹಡಿಯಲ್ಲಿ 1250 ಚದರ ಅಡಿ, ಒಟ್ಟು ವಿಸ್ತೀರ್ಣ 2500 ಚದರ ಅಡಿ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆಸ್ತಿ ನಂ.878, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿ ನಂ.749. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್ ಮೊ: 8880041234 ರವರನ್ನು ಸಂಪರ್ಕಿಸಿ.**	19.03.2025 ಎನ್‌ಪಿಎ ದಿನಾಂಕ 10.03.2025	ASSET POWER BRE Loan A/c No. LPR056106814280 ರೂ.4,00,00,000/– ಒಟ್ಟು ಬಾಕಿ ಮೊತ್ತ ರೂ.4,02,84,743/– ದಿನಾಂಕ: 18.03.2025 ರಂದು ಇದ್ದಂತೆ
11	(1) ಶ್ರೀ ನಾಗರಾಜನ್ ನಾರಾಯಣಸ್ವಾಮಿ ಬಿನ್ ಶ್ರೀ ನಾರಾಯಣಸ್ವಾಮಿ ಯು, (2) **ಶ್ರೀಮತಿ ಜಯಶ್ರೀ ಮಾರಿಯಪ್ಪನ್** ಕೋಂ ಶ್ರೀ ನಾಗರಾಜನ್ ನಾರಾಯಣಸ್ವಾಮಿ, **ಇವರಿಬ್ಬರ ವಿಳಾಸ:** ಫ್ಲಾಟ್ ನಂ.ಬಿ. 94, ನೈಟ್ ಬ್ರಿಡ್ಜ್, ಕುಂದನಹಳ್ಳಿ, ಹೆಚ್.ಪಿ.ಪೆಟ್ರೋಲ್ ಬಂಕ್ ಎದುರು, ಬೆಂಗಳೂರು–560066. **ಮತ್ತೊಂದು ವಿಳಾಸ:** ಸರೋಜಾ ಇಲ್ಲಂ ಫ್ರೆಂಡ್ಸ್ ಕಾಲೋನಿ, ತಿರುಚಿ–621601. **ಮತ್ತೊಂದು ವಿಳಾಸ:** ನಿವೇಶನ ನಂ.63, ರೂಬಿ ರೆಸಿಡೆನ್ಶಿಯಲ್ ಪ್ಯಾರಡೈಸ್, ದಂಡುಪಾಳ್ಯ ಗ್ರಾಮ ಹೊಸಕೋಟೆ ತಾಲ್ಲೂಕು, ಹಳೇ ಕಸಬಾ ಹೋಬಳಿ. ಬೆಂಗಳೂರು, ಕರ್ನಾಟಕ–561124.	**ಈ ಆಸ್ತಿಯು ಶ್ರೀ ನಾಗರಾಜನ್ ನಾರಾಯಣಸ್ವಾಮಿ ರವರಿಗೆ ಸೇರಿದ್ದು** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಖಾಲಿ ನಿವೇಶನ ನಂ.63, ಖಾತಾ ನಂ.11362/40/1/63 ರ ಸರ್ವೆ ನಂ.40/1 ರಿಂದ ರಚಿಸಲಾಗಿದ್ದು, ಈ ಆಸ್ತಿಯು ದಂಡುಪಾಳ್ಯ ಗ್ರಾಮ, ಹಳೆಯ ಕಸಬಾ ಹೋಬಳಿ, ಈಗ ಹೊಸಕೋಟೆ ಪುರಸಭೆಯ ಪಟ್ಟಣ ವ್ಯಾಪ್ತಿಯಲ್ಲಿದ್ದು, ಹೊಸಕೋಟೆ ತಾಲ್ಲೂಕು, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು ವಿಸ್ತೀರ್ಣ 1,200 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.67, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.62, ದಕ್ಷಿಣಕ್ಕೆ: ಪ್ಲಾಟ್ ನಂ.64. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಮೊ: 9620703099 ರವರನ್ನು ಸಂಪರ್ಕಿಸಿ.**	14.03.2025 ಎನ್‌ಪಿಎ ದಿನಾಂಕ 05.03.2025	POWER HOME Loan A/c No. PHR000900615401 ರೂ.10,35,000/– ಒಟ್ಟು ಬಾಕಿ ಮೊತ್ತ ರೂ.2,92,323/– ದಿನಾಂಕ: 12.03.2025 ರಂದು ಇದ್ದಂತೆ

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.
ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದ್ರತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.
ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 23.04.2025
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕದ ನೃತ್ಯ, ಸಂಗೀತ ಶಿಕ್ಷಕರಿಗೆ 5 ಲಕ್ಷ ಜೀವ ವಿಮೆ

ಬೆಂಗಳೂರು: ನಗರದ ವೀಣಾವಾಣಿ ಸಂಗೀತ ಶಾಲೆಯು ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳ ನಿರ್ವಹಣಾ ಮಂಡಳಿಯಂತೆ ಸಂಗೀತ ಮತ್ತು ನೃತ್ಯ ಪರೀಕ್ಷೆಗಳಿಗೂ ಮಂಡಳಿ ಸ್ಥಾಪಿಸಲು ಮುಂದಾಗಿದೆ.

ವೀಣಾ ವಾಣಿ ಮಹಾ ವಿದ್ಯಾಲಯದ ನಿರ್ದೇಶಕ ಡಾ. ಗಿರೀಶ್ ಕುಮಾರ್ ಮಾತನಾಡಿ, ಮೇ. 10ರಂದು ಪ್ರತಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ, ಲೋಕಸಭಾ ಸದಸ್ಯ ತೇಜಸ್ವಿ ಸೂರ್ಯ ಹಾಗೂ ಪ್ರಮುಖ ಸಂಗೀತಗಾರರಿಂದ ಮಹಾ ವಿದ್ಯಾಲಯವು ಉದ್ಘಾಟನೆ ಯಾಗಲಿದೆ. ಎಸ್ ಎಸ್‌ಎಲ್‌ಸಿ, ಪಿಯುಸಿ ಶಿಕ್ಷಕರು ಪ್ರಶ್ನೆ ಪತ್ರಿಕೆಗಳನ್ನು ತಮ್ಮ ಉಸ್ತುವಾರಿಯಲ್ಲಿಯೇ ಸಿದ್ಧಪಡಿಸಿ ಪರೀಕ್ಷೆ ನಿರ್ವಹಣೆ ಹೊಣೆಗಾರಿಗೆ ಆಯಾ ಶಾಲೆಗಳಿಗೆ ಬಿಡುತ್ತವೆಯಾದರೆ ಇಲ್ಲಿ ಮಾತ್ರ ಒಂದು ಸಂಗೀತ–ನೃತ್ಯ ಶಾಲೆ ಶಿಕ್ಷಕರು ಇನ್ನೊಂದು ಶಾಲಾ ವಿದ್ಯಾರ್ಥಿಗಳ ಪರೀಕ್ಷೆ ನಿರ್ವಹಿಸಬೇ ಕಾಗಿದೆ. ಆರಂಭಿಕ ಹಂತದಲ್ಲಿ ಇಂಥ ಒಂದು ಸಹಸ್ರ ಶಾಲೆಗಳ ಸದಸ್ಯತ್ವ ಪಡೆಯಲು ಯೋಚಿಸಲಾಗಿದೆ ಎಂದರು.

ಜ್ಯೂನಿಯರ್‌1ರಿಂದ 6ರ ಮಟ್ಟದವರೆಗೆ, ನಂತರ 6 ತಿಂಗಳ ಡಿಪ್ಲೊಮಾ ಕೋರ್ಸ್ ಮತ್ತು ಮಹಾ ವಿದ್ಯಾಲಯ ಮಟ್ಟದ ಕೋರ್ಸುಗಳು. ಇವುಗಳಲ್ಲಿ ರಾಷ್ಟ್ರೀಯ ಅಂತಾ ರಾಷ್ಟ್ರೀಯ ಮಟ್ಟದ ಆರು ತಿಂಗಳ ಸರ್ಟಿಫಿಕೇಟ್ ಕೋರ್ಸುಗಳು. ಮಹಾ ವಿದ್ಯಾಲಯಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಮತ್ತು ಪರೀಕ್ಷೆಯಲ್ಲಿ ಪಾಲ್ಗೊಳ್ಳುವವರಿಗೆ ಕಾಮನ್ ವೆಲ್ತ್ ಸಂಘಟನೆ ಸಹಯೋಗದಲ್ಲಿ ಬ್ರಿಟನ್, ಶ್ರೀಲಂಕಾ, ಸಿಂಗಾಪುರ ಮತ್ತು ಮಲೇಷ್ಯಾದಲ್ಲಿಜಾಗತಿಕ ಪ್ರದರ್ಶನಗಳು ಆಯ್ಕೆ ಪ್ರಕ್ರಿಯೆಯ ಅವಕಾಶವಿರಲಿದೆ ಎಂದರು.

IN THE COURT OF THE CITY CIVIL JUDGE AND COMMERCIAL COURT (CCH-84) AT BANGALORE

COM.O.S. No.555/2024

BETWEEN:
THE KARNATAKA BANK LTD.
A banking company incorporate Under the Companies Act, 1913, Having its Registered and Head office At Mahaveer Circle, P.B. No. 599, Kankanady, Manguluru-575002, and one of its Branch situated at Karnataka Bank, K.R.Puram Branch, No.160, 3rd Cross, Kumbar Street, K.R.Puram, Bengaluru -560036, **Mobile No.7411066701**
E-mail.ID:- blr.krpuram@ktkbank.com
Represented by its Branch Manager, **Satish Bhat B,** S/o. Late Padmanabha Bhat Aged about 43 years **...PLAINTIFF**

AND:
Mr. S.MAHABOOB BASHA and Another ...DEFENDANTS

SUMMONS TO DEFENDANT No.2 UNDER ORDER V RULE 20(1-A) OF CIVIL PROCEDURE CODE

Rafi UR Rahman, S/o. Shaik Dastagir Aged about 38 years, No.628, Lakshminarasimha Nilaya, 1st Main, 1st Cross, next to Vinayaka Stores, V.B.Layout,K.R.Puram, Bengaluru-560036

Whereas, the Plaintiff has filed the suit for money recovery of sum of Rs.9,41,532.40/- (Rupees Nine Lakh Forty One Thousand Five Hundred Thirty Two and Paise Four Zero Only) with interest against the Defendants before the LXXXVI Addl City Civil and Session Judge (CCH84) At Bangalore. You are hereby summoned to appear in the LXXXVI Addl City Civil and Session Judge (CCH84) Bangalore in person or by a pleader duly instructed on 09.06.2025 at 11 a.m., to answer the same, failing which the appearance will be heard and declared Ex-parte.

Given under my hand and seal of the court this 1st day of April 2025.

ADVOCATE FOR PLAINTIFF
SUBRAHMANYA HEGDE, *Advocate*
ANANDA & HEGDE LAW ASSOCIATES
No.76-77, Krishna Krupa Building, Ground Floor, 2nd Main Road, Sheshadripuram, Bangalore- 560020.

By Order of this court
Sd/-
Senior Sheristedar
Commercial Court Unit
City Civil Court
Bengaluru

ಪಿಯುಸಿ ಪರೀಕ್ಷೆ-2: ಉಚಿತ ಪ್ರಯಾಣಕ್ಕೆ ಅವಕಾಶ

ಬೆಂಗಳೂರು: ದ್ವಿತೀಯ ಪಿ.ಯು.ಸಿ ಪರೀಕ್ಷೆ – 02, ಏಪ್ರಿಲ್ 24 ರಿಂದ ಮೇ 08 ರವರೆಗೆ ಪರೀಕ್ಷೆಗಳು ಬೇರೆ ಬೇರೆ ಕಾಲೇಜುಗಳಲ್ಲಿ ನಡೆಯಲಿದ್ದು, ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಪರೀಕ್ಷಾ ದಿನಾಂಕಗಳಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದವರೆಗೆ ಹೋಗುವಾಗ ಮತ್ತು ಹಿಂದಿರುಗುವಾಗ ಬಿಎಂಟಿಸಿ ಬಸ್ಸುಗಳ ಸಾಮಾನ್ಯ ಸೇವೆಗಳಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ, ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ದ್ವಿತೀಯ ಪಿ.ಯು.ಸಿ ಪರೀಕ್ಷಾ ದಿನಾಂಕಗಳಂದು ಪರೀಕ್ಷಾ ಕೇಂದ್ರಗಳ ಮಾರ್ಗಗಳಲ್ಲಿ ಕಡ್ಡಾಯವಾಗಿ ಎಲ್ಲಾ ಮಾರ್ಗಗಳನ್ನು, ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸಲಾಗುವುದು. ಹೆಚ್ಚುವರಿ ಸುತ್ತುವಳಿಗಳ ಕಾರ್ಯಾಚರಣೆಯ ಅಗತ್ಯತೆ ಕಂಡುಬಂದಲ್ಲಿ ಕಾರ್ಯಾಚರಣೆ ಮಾಡಲಾಗುವುದು. ಪರೀಕ್ಷಾ ಕೇಂದ್ರಗಳ ಬಳಿ ವಿದ್ಯಾರ್ಥಿಗಳು/ಪೋಷಕರು ಕೋರಿಕೆ ನಿಲುಗಡೆ ಕೋರಿದಲ್ಲಿ, ಕೋರಿಕೆ ನಿಲುಗಡೆ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

NOTICE OF LOSS OF SHARES CERTIFICATE(S)
Company Name: ICICI BANK LIMITED
Registered Address: ICICI Bank Tower, Near Chakli Circle, Old Padra Road, Vadodara, Gujarat, 390007

Notice is hereby given that the following share certificates have been reported as lost/misplaced and the Company intends to issue duplicate certificates in lieu thereof, in due course.

Name of the Shareholder	Folio No.	Certificate No.(s)	No. of shares	Distinctive No.(s)	Face Value
PR SURESH	1033660	30159	455	12862506-12862960	2
PR SURESH	1033660	924254	45	5830939151-5830939195	2

Any person who has/have a valid claim in respect of the said certificate(s) should lodge his/her their claim with all supporting documents with the Registered company. If no valid and legitimate claims are received within 15 days from the date of publication of this notice, the company will proceed to issue Duplicate Share Certificate(s) to the shareholder listed above and no further claim would be entertained from any other person(s).

Place: BANGALORE
Date : 24/04/2025
Name of the shareholder
PR SURESH

ಎನ್ವಿರಾನ್ಮೆಂಟಲ್ ಕ್ಲಿಯರೆನ್ಸ್

ಕರ್ನಾಟಕ ರಾಜ್ಯಮಟ್ಟದ ಪ್ರಧಾನ ಅಧ್ಯಯನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ರಚಿಸಲ್ಪಡಲಾಗಿದೆ) ಮೆ: ಆದರ್ಶ್ ಎಕ್ಸಾಸಿ ಪ್ರೈವೇಟ್ ಲಿಮಿಟೆಡ್ ಮತ್ತು ಆದರ್ಶ್ ಡೆವಲಪರ್ಸ್, ಬೆಂಗಳೂರು ಅವರಿಗೆ ತಮ್ಮ ಪತ್ರ ಸಂಖ್ಯೆ No.SEIAA:185 CON:2024 ದಿನಾಂಕ: 16.04.2025 ಮೂಲಕ ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಯಮಲೂರು ಗ್ರಾಮದ, ಸರ್ವೆ ನಂಬರ್ 57/2, 58, 59/3, 59/4, 59/5, 60/1ಬಿ(ಪಿ), 60/2, ಮತ್ತು ಬೆಳ್ಳಂದೂರು ಅಮ್ಮಣ್ಣಿಕೆರೆ ಗ್ರಾಮದ, ಸರ್ವೆ ನಂಬರ್ 4/2, 5/1, 5/2, 5/3, 5/4, 5/5, 5/6, 6/1, 6/3, 6/4, 6/5, 6/6, 6/7, 6/8, 6/9, 7/2, 7/3ಪಿ, 7/4, 7/5ಪಿ, 7/6ಡಿಪಿ, 7/7, 9/1ಪಿ, 9/2, 9/3, 9/4ಪಿ, 10/1, 10/2, 10/3, 10/4, 11/1, 11/2, ಮತ್ತು 11/3 (11/1) ರಲ್ಲಿ ವಸತಿ ಯೋಜನೆಗೆ ಪರಿಸರ ಅನುಮೋದನೆನೀಡಿದೆ. ಅನುಮತಿ ಪತ್ರದ ಪ್ರತಿಯು MoEFCC/SEIAA ಕರ್ನಾಟಕ ವೆಬ್ ಸೈಟ್ http://parivesh.nic.in. http://envrionmentclearance.nic.in. http://seiaa.karnataka.gov.in ನಲ್ಲೂ ಲಭ್ಯವಿದೆ.
ಈ ಮೇಲಿನ ಪರಿಸರ ನಿರಾಕ್ಷೇಪಣಾ ಪತ್ರ ನಿಗದಿಸಿದ ಷರತ್ತಿಗೆ ಬದ್ಧವಾಗಿ ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ.

₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಗುರುವಾರ 24.04.2025** **ಸಂಪುಟ:** 10 **ಸಂಚಿಕೆ:** 100 **ಪುಟಗಳು:** 12 **ಪ್ರಧಾನ ಸಂಪಾದಕ:** ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ರೋಹಿಟ್ ಅರ್ಧ ಶತಕ

ಟ್ರೆಂಟ್ ಬೌಲ್ಟ್ (26 ಕ್ಕೆ 4) ಘಾತಕ ಬೌಲಿಂಗ್ ದಾಳಿ ಮತ್ತು ರೋಹಿತ್ ಶರ್ಮ (70) ಅಬ್ಬರದ ಅರ್ಧಶತಕದ ನೆರವಿನಿಂದ ಬುಧವಾರ ಹೈದರಾಬಾದ್‌ನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 7 ವಿಕೆಟ್ ಅಂತರದಲ್ಲಿ ಗೆಲುವು ಸಾಧಿಸಿದೆ. ರೋಹಿತ್ ಶರ್ಮ 46 ಎಸೆತಗಳಲ್ಲಿ 70 ರನ್ ಗಳಿಸಿ ಸತತ ಎರಡನೇ ಅರ್ಧಶತಕ ಬಾರಿಸಿ ಮಿಂಚಿದರು.

ಸೊಂಪಾದ ಪುಟಗಳು

ವಿಶ್ವಶಾಂತಿ ಕದಡಲು ಅಮೆರಿಕ ಅಧ್ಯಕ್ಷರ ಒಂದು ಮಾತು ಸಾಕು!

ನೂರೆಂಟು ವಿಶ್ವ – ವಿಶ್ವೇಶ್ವರ ಭಟ್ 6

ಹಿಂಸೆ, ರಕ್ತ, ಭಯ ಮತ್ತು ಉತ್ತರ

ಕಾಡುದಾರಿ – ಹರೀಶ್ ಕೇರ 7

ದಾರಿದೀಪೋಕ್ತಿ

ಯಾವಾಗ ನಿಮ್ಮನ್ನು ನೀವು ಸಂದೇಹದಿಂದ ನೋಡಲು ಆರಂಭಿಸುತ್ತೀರೋ, ಆಗ ನಿಮ್ಮಲ್ಲಿರುವ ಸೃಜನಶೀಲ ಕಲಾವಿದ ಅಥವಾ ಅಸಾಮಾನ್ಯ ವ್ಯಕ್ತಿಯನ್ನು ಸಾಯಿಸುತ್ತಾ ಹೋಗುತ್ತೀರಿ. ನಿಮ್ಮ ಬಗ್ಗೆ ಯಾವತ್ತೂ ಸಕಾರಾತ್ಮಕ ಮತ್ತು ಆತ್ಮವಿಶ್ವಾಸಭರಿತ ಅಭಿಪ್ರಾಯವನ್ನು ಹೊಂದಿರಬೇಕು.

ವಕ್ರತುಂಡೋಕ್ತಿ

ಕೆಲವರ ಮೂಡು ಹೇಗಿದೆ ಎಂಬುದನ್ನು ತಿಳಿಯಲು ಅವರ ಮುಖ ನೋಡಬೇಕು. ಇನ್ನು ಕೆಲವರ ಉಗುರು ನೋಡಬೇಕು.

ಫನ್‌ತರಂಗ

– ರಘುಪತಿ ಶೃಂಗೇರಿ –

ಮದರಂಗಿ ಹಾಕಿಸಿಕೊಂಡು ಬರುವೆನೆಂದು ಬ್ಯೂಟಿಪಾರ್ಲರ್‌ಗೆ ಹೋದ ವಧು ನಾಪತ್ತೆ ಸುದ್ದಿ

ವಧು ಹೋದ್ರು ಹಾಕ್ಕೊಂಡ್ಬರೋಕೆ 'ಮದರಂಗಿ'...ಪಾಪ ಆದ ಆ ವರ 'ಕೋಡಂಗಿ'...!

ಉಗ್ರ ಪೋಷಕ ರಾಷ್ಟ್ರದ ಮೇಲೆ ಕಠಿಣ ಕ್ರಮ, ಸಿಂಧೂ ನದಿ ಜಲ ಒಪ್ಪಂದ ರದ್ದು

ಪಾಕ್ ರಾಜತಾಂತ್ರಿಕರು, ಪ್ರಜೆಗಳಿಗೆ ಗೇಟ್‌ಪಾಸ್, ಅಟ್ಟಾರಿ–ವಾಘಾ ಗಡಿ ಬಂದ್

ಉಗ್ರ ದಾಳಿ: ಪಾಕ್ ಮೇಲೆ ಪ್ರಹಾರ

ದೆಹಲಿ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮೂವರು ಕನ್ನಡಿಗರು ಸೇರಿದಂತೆ 26 ಜನರನ್ನು ಬರ್ಬರವಾಗಿ ಹತ್ಯೆ ಮಾಡಿದ ಪಾಕಿಸ್ತಾನ ಬೆಂಬಲಿತ ಉಗ್ರರ ಕೃತ್ಯವನ್ನು ಇಡೀ ದೇಶ ಒಕ್ಕೊರಲಿನಿಂದ ಖಂಡಿಸಿದೆ. ದಾಳಿಗೆ ಕಾರಣರಾದವನ್ನು ಪತ್ತೆ ಹಚ್ಚಿ ಶಿಕ್ಷಿಸಲು ಪಣ ತೊಟ್ಟಿರುವ ಕೇಂದ್ರ ಸರಕಾರ ಪೈಶಾಚಿಕ ದಾಳಿಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಮುಂದಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಭದ್ರತೆಗೆ ಸಂಬಂಧಿಸಿದ ಸಂಪುಟ ಉಪಸಮಿತಿ ಸಭೆಯಲ್ಲಿ ಪಾಕಿಸ್ತಾನದೊಂದಿಗಿನ ಸಿಂಧೂ ನದಿ ಒಪ್ಪಂದ ಅಮಾನತು, ರಾಜತಾಂತ್ರಿಕರ ಉಚ್ಚಾಟನೆ, ಪಾಕ್ ಪ್ರಜೆಗಳ ವಾಸ್ತವ್ಯಕ್ಕೆ ನಿರ್ಬಂಧ, ಅಟ್ಟಾರಿ–ವಾಘಾ ಗಡಿ ಬಂದ್ ಸೇರಿದಂತೆ ಕಠಿಣ ಕ್ರಮ ಜರುಗಿಸಲು ತೀರ್ಮಾನಿಸಿದೆ. ಗೃಹಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಜೈಶಂಕರ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಸೇರಿದಂತೆ ಪ್ರಮುಖರು ಸೇರಿದ್ದ ಸಭೆಯಲ್ಲಿ ದಾಳಿ ಸಂಬಂಧ 9 ಪ್ರಮುಖ ನಿರ್ಧಾರಗಳನ್ನು ಪ್ರಧಾನಿ ಮೋದಿ ಕೈಗೊಂಡಿದ್ದಾರೆ. ವಿದೇಶಾಂಗ ಇಲಾಖೆ ಕಾರ್ಯದರ್ಶಿ ವಿಕ್ರಂ ಮಿಶ್ರಿ ಸುದ್ದಿಗೋಷ್ಠಿ ನಡೆಸಿ ಈ ಸಂಬಂಧ ಮಾಹಿತಿ ನೀಡಿದ್ದಾರೆ.

1960ರ ಸಿಂಧೂ ಜಲ ಒಪ್ಪಂದವು ಸಿಂಧೂ ನದಿ ಮತ್ತು ಅದರ ಉಪನದಿಗಳ ನೀರನ್ನು ಎರಡೂ ದೇಶಗಳ ನಡುವೆ ಹಂಚುವ ನೀರು ಹಂಚಿಕೆ ಒಪ್ಪಂದವಾಗಿದೆ. ಆದರೆ ಇದೀಗ ಆ ನದಿ ನೀರನ್ನೇ ಬಂದ್ ಮಾಡುವ ಮೂಲಕ ಪಾಕಿಸ್ತಾನಕ್ಕೆ ಬಿಸಿ ಮುಟ್ಟಿಸಲು ಸರಕಾರ ಮುಂದಾಗಿದೆ.

ಅಟ್ಟಾರಿ ಗಡಿಯನ್ನು ಬಂದ್ ಮಾಡುವಂತೆ ಕೇಂದ್ರ ಸರಕಾರ ಸೂಚನೆ ನೀಡಿದ್ದು, ಅಲ್ಲಿ ನಡೆಯುತ್ತಿದ್ದ ಎಲ್ಲಾ ಸೇನಾ ಕಾರ್ಯಕ್ರಮಗಳನ್ನು ರದ್ದು ಮಾಡುವಂತೆ ತಿಳಿಸಿದೆ. ಒಪ್ಪಿಗೆಯೊಂದಿಗೆ ಇಲ್ಲಿಂದ ಗಡಿಯನ್ನು ದಾಟಿದವರು ಮೇ1 ರ ಒಳಗಾಗಿ ಈ ಮಾರ್ಗದ ಮೂಲಕವೇ ವಾಪಸಾಗಬೇಕು ಎಂದು ತಿಳಿಸಲಾಗಿದೆ.

ವೀಸಾ ರದ್ದು: ಸಾರ್ಕ್ ವೀಸಾ ವಿನಾಯಿತಿ ಯೋಜನೆಯಡಿಯಲ್ಲಿ ಪಾಕಿಸ್ತಾನಿ ಪ್ರಜೆಗಳಿಗೆ ಭಾರತಕ್ಕೆ ಪ್ರಯಾಣಿಸಲು ಇನ್ನುಮುಂದೆ ಅನುಮತಿ ಇರುವುದಿಲ್ಲ. ಪಾಕಿಸ್ತಾನಿ ಪ್ರಜೆಗಳಿಗೆ ಹಿಂದೆ ನೀಡಲಾದ ಎಲ್ಲಾ ಎಸ್‌ಪಿಇಎಸ್ ವೀಸಾಗಳನ್ನು ರದ್ದುಗೊಳಿಸಲಾಗಿದೆ. ಪ್ರಸ್ತುತ ಭಾರತದಲ್ಲಿರುವ ಪಾಕಿಸ್ತಾನದವರಿಗೆ ಭಾರತವನ್ನು ತೊರೆಯಲು 48 ಗಂಟೆಗಳ ಗಡುವನ್ನು ನೀಡಲಾಗಿದೆ. ಸರಕಾರದ ಎದುರು ಮಿಲಿಟರಿ ಕ್ರಮದ ಆಯ್ಕೆಯೂ ಇದ್ದು, ಇದರ ಬಗ್ಗೆಯೂ ಸಿಸಿಎಸ್‌ನಲ್ಲಿ ಚರ್ಚೆಯಾಗಿದೆ. ಈ ಬಗ್ಗೆ ವಿದೇಶಾಂಗ ವ್ಯವಹಾರಗಳ ಇಲಾಖೆ ಯಾವುದೇ ಮಾಹಿತಿಯನ್ನು ನೀಡಿಲ್ಲ.

ಪಾಕಿಸ್ತಾನ ಹೈಕಮಿಶನ್ ಕಚೇರಿಯಲ್ಲಿ ರುವ ಮಿಲಿಟರಿ ಸಲಹೆಗಾರರಿಗೆ ವಾರದೊಳಗೆ ದೇಶ ತೊರೆಯಲು ಆದೇಶ ನೀಡಲಾಗಿದೆ.ಇದೇ ವೇಳೆ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ಹೈಕಮಿಷನ್‌ನ ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆಯ ಅಧಿಕಾರಿಗಳನ್ನು ಭಾರತ ವಾಪಾಸ್ ಕರೆಸಿಕೊಳ್ಳಲಿದೆ. ಆಯಾ ಹೈಕಮಿಷನ್‌ಗಳಲ್ಲಿನ ಈ ಹುದ್ದೆಗಳನ್ನು ರದ್ದುಗೊಳಿಸಲಾಗಿದೆ. ಆಯಾ ಹೈಕಮಿಷನ್‌ಗಳ ಒಟ್ಟಾರೆ ಬಲವನ್ನು 30 ಕ್ಕೆ ಇಳಿಸಲಾಗುತ್ತದೆ ಎಂದು ತಿಳಿಸಲಾಗಿದೆ.

→ 8

ಲಷ್ಕರೆ ಕಮಾಂಡರ್ ರೂವಾರಿ

ಲಷ್ಕರೆ ತೊಯ್ಬಾ ಸಂಘಟನೆಯ ಟಾಪ್ ಕಮಾಂಡರ್ ಆಗಿರುವ ಸೈಫುಲ್ಲಾ ಖಾಲಿದ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಇಬ್ಬರು ಈ ಕೃತ್ಯದ ಹಿಂದೆ ಇರುವುದು ಖಚಿತವಾಗಿದೆ. ಪಾಕ್ ಸೇನೆಯ ನಿಕಟ ನಂಟು ಹೊಂದಿರುವ ಸೈಫುಲ್ಲಾ ಮುಂಬೈ ದಾಳಿ ಸೂತ್ರದಾರ ಅಫೀಜ್ ಸಯೀದ್ ಆಪ್ತ. ಪಾಕಿಸ್ತಾನದ ಕೈಬರ್ ಪಖ್ತುನ್ವಾದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದ ವೇಳೆ ಈತ ಭಾರತದ ವಿರುದ್ಧ ಕಿಡಿಕಾರಿ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಎಲ್ಲ ಪ್ರಯತ್ನವನ್ನು ಮಾಡುತ್ತೇವೆ. ಫೆ. 2, 2025 ಇಲ್ಲವೇ ಫೆ.2, 2025ರೊಳಗೆ ಕಾಶ್ಮೀರ ವಿಮೋಚನೆಯಾ ಗಲಿದೆ ಎಂದು ಹೇಳಿದ್ದ.



ಪಹಲ್ಗಾಮ್ ದಾಳಿ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಹಿರಿಯ ಸಚಿವರು, ಅಧಿಕಾರಿಗಳು ಪಾಲ್ಗೊಂಡಿದ್ದರು.

ಪ್ರಧಾನಿ ಮೋದಿ ಸರಣಿ ಸಭೆ

ಭಯೋತ್ಪಾದಕರ ದಾಳಿಯ ಬೆನ್ನಲ್ಲೇ ತಮ್ಮ ಸೌದಿಅರೇಬಿಯಾ ಪ್ರವಾಸವನ್ನು ಮೊಟಕುಗೊಳಿಸಿ ದೆಹಲಿಗೆ ವಾಪಸಾದ ಪ್ರಧಾನಿ ನರೇಂದ್ರ ಮೋದಿ ಅವರು ವಿಮಾನ ನಿಲ್ದಾಣದಲ್ಲೇ ಉನ್ನತ ಮಟ್ಟದ ಸಭೆ ನಡೆಸಿ ಉಗ್ರರನ್ನು ಮಟ್ಟಹಾಕುವ ನಿಟ್ಟಿನಲ್ಲಿ ಮುಂದಿನ ಕ್ರಮಗಳ ಬಗ್ಗೆ ಚರ್ಚೆ ನಡೆಸಿದರು. ಮೋದಿ ಪಾಕಿ ಸ್ತಾನದ ವಾಯು ಮಾರ್ಗ ಬಳಸದೇ ಓಮನ್ ಮಾರ್ಗವಾಗಿ ಬುಧವಾರ ಬೆಳಿಗ್ಗೆ ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ವಿಮಾನ ನಿಲ್ದಾಣದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್‌ದೋಹಲ್, ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಶ್ರಾ, ಮತ್ತು ಇತರ ಹಿರಿಯ ಅಧಿಕಾರಿಗಳೊಂದಿಗೆ ಮುಂದಿನ ನಿರ್ಧಾರಗಳ ಬಗ್ಗೆ ಬಗ್ಗೆ ಸಮಾಲೋಚನೆ ನಡೆಸಿದರು.

10 ಲಕ್ಷ ಪರಿಹಾರ

ಜಮ್ಮು–ಕಾಶ್ಮೀರ ಸರಕಾರ ಉಗ್ರರ ದಾಳಿ ಯಲ್ಲಿ ಪ್ರಾಣ ಕಳೆದುಕೊಂಡ 26 ಮಂದಿಯ ಕುಟುಂಬಸ್ಥರಿಗೆ ಕಾಶ್ಮೀರ ಸರಕಾರ ತಲಾ 10 ಲಕ್ಷ ರೂ. ಪರಿಹಾರವನ್ನು ಪ್ರಕಟಿಸಿದೆ. ಗಂಭೀರವಾಗಿ ಗಾಯಗೊಂಡವರಿಗೆ 2 ಲಕ್ಷ ರೂ. ಹಾಗೂ ಸಣ್ಣಪುಟ್ಟ ಗಾಯಗೊಂಡವರಿಗೆ ಲಕ್ಷ ರೂ. ಪರಿಹಾರ ಪ್ರಕಟಿಸಿದೆ. ಇದೇ ವೇಳೆ ರಾಜ್ಯ ಸರಕಾರ ಮೂವರು ಕನ್ನಡಿಗರ ಕುಟುಂಬಕ್ಕೆ ತಲಾ 10 ಲಕ್ಷ ರು. ಪರಿಹಾರ ಪ್ರಕಟಿಸಿದೆ.

ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾದ ಉಗ್ರರ ರೇಖಾಚಿತ್ರಗಳನ್ನು ಬಿಡುಗಡೆ ಮಾಡಲಾಗಿದೆ. ಇದರ ಬೆನ್ನಿಗೇ ನಾಲ್ವರು ಉಗ್ರರ ಜತೆಗಿರುವ ಫೋಟೋ ಸಿಕ್ಕಿದೆ

ಕರ್ನಾಟಕದ ಮೂರು ಕುಟುಂಬಗಳ ಮೇಲೆ ಉಗ್ರರ ಅಟ್ಟಹಾಸ

ಬೆಂಗಳೂರು: ಉಗ್ರರ ದಾಳಿಯಲ್ಲಿ ರಾಜ್ಯದ ಮತ್ತೊಬ್ಬ ವ್ಯಕ್ತಿ ಮೃತಪಟ್ಟಿದ್ದು ಮೃತರ ಸಂಖ್ಯೆ ಮೂರಕ್ಕೇರಿದೆ. ಶಿವಮೊಗ್ಗದ ಮಂಜುನಾಥ್ ಮತ್ತು ಬೆಂಗಳೂರಿನ ಭರತ್ ಭೂಷಣ್ ಉಗ್ರರ ಗುಂಡಿನ ದಾಳಿಯಲ್ಲಿ ಮೃತಪಟ್ಟಿರುವುದು ಮಂಗಳವಾರ ಬೆಳಕಿಗೆ ಬಂದಿತ್ತು. ಇದೀಗ ಬೆಂಗಳೂರಿನಲ್ಲಿ ಸಾಫ್ಟ್ ವೇರ್ ಕಂಪನಿ ಉದ್ಯೋಗಿಯಾಗಿದ್ದ ಮಧು ಸೂದನ್ ರಾವ್ ಎಂಬುವರು ಉಗ್ರರ ಗುಂಡಿಗೆ ಬಲಿಯಾಗಿ ರುವುದು ಬೆಳಕಿಗೆ ಬಂದಿದೆ.

ಮೂಲತಃ ಆಂಧ್ರದ ನೆಲ್ಲೂರು ಜಿಲ್ಲೆಯ ಕಾವಲಿ ಗ್ರಾಮದವರಾದ ಮಧುಸೂದನ್ ನಗರದ ಸಾಫ್ಟ್ ವೇರ್ ಸಂಸ್ಥೆಯೊಂದರಲ್ಲಿ ಟೆಕ್ಕಿಯಾಗಿದ್ದು, ರಾಮ ಮೂರ್ತಿ ನಗರದ ಕಲ್ಕೆರೆಯಲ್ಲಿ ವಾಸವಾಗಿದ್ದರು. ಪತ್ನಿ ಹಾಗೂ ತಮ್ಮ ಇಬ್ಬರು ಮಕ್ಕಳೊಂದಿಗೆ ಎರಡು ದಿನಗಳ ಹಿಂದೆ ಬೇಸಿಗೆ ರಜೆ ಕಳೆಯಲು ಕಾಶ್ಮೀರಕ್ಕೆ ತೆರಳಿದ್ದರು. ಪಹಲ್ಗಾಮ್‌ನಲ್ಲಿ ಕುದುರೆ ಸವಾರಿ ಮುಗಿಸಿ ಜತೆಯಲ್ಲಿದ್ದವರೆಲ್ಲಾ ಕುಳಿತಿದ್ದಾಗ ಮಧುಸೂದನ್ ಊಟ ತರುವುದಾಗಿ ತೆರಳಿದವರು ಉಗ್ರರ ಗುಂಡಿಗೆ ಬಲಿಯಾಗಿದ್ದಾರೆ. ಪಿಯುಸಿಯಲ್ಲಿ ಶೇ. 97ರಷ್ಟು ಅಂಕ ಗಳಿಸಿದ್ದ ಪುತ್ರನ ಪರೀಕ್ಷಾ ಸಾಧನೆಯನ್ನು ಸಂಭ್ರಮಿಸಲು ಕಾಶ್ಮೀರ ಪ್ರವಾಸಕ್ಕೆ ತೆರಳಿದ್ದ ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಪತ್ನಿ, ಪುತ್ರನ ಮುಂದೆಯೇ ಉಗ್ರರ ಗುಂಡಿಗೆ ಬಲಿಯಾಗಿದ್ದರು. ಮತ್ತಿಕೆರೆಯ ಟೆಕ್ಕಿ ಭರತ್ ಭೂಷಣ್ ಕೂಡ ಪತ್ನಿ ಹಾಗೂ ಮೂರು ವರ್ಷದ ಮಗನ ಜತೆ ಕಾಶ್ಮೀರ ಪ್ರವಾಸಕ್ಕೆ ತೆರಳಿದ್ದರು. ಉಗ್ರರ ದಾಳಿ ವೇಳೆ ಭೂಷಣ್ ಅವರು ಪತ್ನಿ, ಮಗುವಿನ ಜತೆ ಮರವೊಂದರ ಬಳಿ ಅವಿತು ಕುಳಿತಿದ್ದರು. ಆದರೆ ಭೂಷಣ್ ಅವರ ಇರುವಿಕೆ ಕಂಡ ಉಗ್ರರು ನೇರವಾಗಿ ತಲೆಗೆ ಗುಂಡು ಹಾರಿಸಿದ್ದರು. ಭರತ್ ಕಳೆದ ಎಂಟು ವರ್ಷದ ಹಿಂದೆ ಮತ್ತಿಕೆರೆ ಮೂಲದ ಯುವತಿಯನ್ನು ಮದುವೆಯಾಗಿದ್ದರು.

ಸಿಎಂ ಸಿದ್ದರಾಮಯ್ಯ ಸೂಚನೆ, ಮೃತಪಟ್ಟ ಮೂವರ ಕುಟುಂಬಕ್ಕೆ 10 ಲಕ್ಷ ರು. ಪರಿಹಾರ

40 ಕನ್ನಡಿಗರನ್ನು ಕರೆತರಲು ವಿಶೇಷ ವಿಮಾನ

ಬೆಂಗಳೂರು: ಕಾಶ್ಮೀರ ಪ್ರವಾಸಕ್ಕೆ ತೆರಳಿದ್ದ 40ಕ್ಕೂ ಹೆಚ್ಚು ಕನ್ನಡಿಗರು ಭಯೋತ್ಪಾದಕ ದಾಳಿಯಲ್ಲಿ ಸಿಲುಕಿಕೊಂಡಿದ್ದು ಅವರೆಲ್ಲರನ್ನೂ ಸುರಕ್ಷಿತವಾಗಿ ರಾಜ್ಯಕ್ಕೆ ಮರಳಿ ಕರೆತರಲು ವಿಶೇಷ ವಿಮಾನ ವ್ಯವಸ್ಥೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಇದೇ ವೇಳೆ ಉಗ್ರರ ದಾಳಿಗೆ ಮೃತಪಟ್ಟ ಮೂವರ ಕುಟುಂಬಕ್ಕೆ ತಲಾ 3 ಲಕ್ಷ ರು. ಪರಿಹಾರ ಘೋಷಿಸಿದ್ದಾರೆ.

ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಸಿಎಂ ಸಂತಾಪ ಸೂಚಿಸಿದ್ದಾರೆ. ಶಿವಮೊಗ್ಗದ ಮಂಜುನಾಥ ರಾವ್ ಅವರ ಪತ್ನಿ ಪಲ್ಲವಿ ಮತ್ತು ಬೆಂಗಳೂರಿನ ಮತ್ತಿಕೆರೆಯ ಭರತ್ ಭೂಷಣ್ ಅವರ ಪತ್ನಿ ಸುಜಾತಾ ಅವರೊಂದಿಗೆ ಮುಖ್ಯಮಂತ್ರಿ ಮಾತನಾಡಿ ಸಂತಾಪ ಸೂಚಿಸಿದರು.

ದಾಳಿಯಲ್ಲಿ ಮೃತಪಟ್ಟ ಆಂಧ್ರ ಮೂಲದ ಇನ್ನೊಬ್ಬ ಟೆಕ್ಕಿ ಬೆಂಗಳೂರು ನಿವಾಸಿಯಾಗಿದ್ದು, ಇವರ ಕುಟುಂಬ ವರ್ಗವನ್ನುಸಂಪರ್ಕಿಸುವ ಪ್ರಯತ್ನ ನಡೆದಿದೆ.

→ 8

ಸಹಾಯವಾಣಿ

ಜಮ್ಮು ಮತ್ತು ಕಾಶ್ಮೀರಕ್ಕೆ ಹೋಗಿರುವ ಪ್ರವಾಸಿಗರ ಸಂಬಂಧಿಕರು ಮತ್ತು ಪರಿಚಯಸ್ಥರು ಸಹ ಸಹಾಯವಾಣಿ ಸಂಖ್ಯೆಗಳ ಮೂಲಕ ತಮ್ಮ ವಿವರಗಳನ್ನು ಹಂಚಿಕೊಳ್ಳುವಂತೆ ಸೂಚಿಸಲಾಗಿದೆ: 080-43344334, 080-43344335, 080-43344336, 080-43344342.

ದಾಳಿಯಿಂದ ಬಾಗಲಕೋಟೆಯ ಕುಟುಂಬ ಅದೃಷ್ಟವಶಾತ್ ಪಾರು

ಗುಡ್ಡ ಕುಸಿತ: 13 ಕನ್ನಡಿಗರು ಬಚಾವ್

ಶ್ರೀನಗರ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯಲ್ಲಿ ಬಾಗಲಕೋಟೆಯ 13 ಕನ್ನಡಿಗರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪಹಲ್ಗಾಮ್‌ಗೆ ಹೋಗುವ ರಸ್ತೆಯಲ್ಲಿ ಗುಡ್ಡಕುಸಿತವಾಗಿದ್ದರಿಂದ ಇವರ ಜೀವ ಉಳಿದಿದೆ.

ಬಾಗಲಕೋಟೆಯ ಮಾರವಾಡಿ ಗಲ್ಲಿಯ ನಿವಾಸಿಗಳಾದ ಕಿಶೋರ್ ಕಾಸಟ್, ಸೂರಜ್ ಕಾಸಟ್, ಗಿರೀಶ್ ಕಾಸಟ್, ನಿತೀಶ್ ಬಂಗ್ ಹಾಗೂ ಮಕ್ಕಳು ಸೇರಿದಂತೆ ಒಟ್ಟು 13 ಜನ ಏಪ್ರಿಲ್ 19 ರಂದು ಕಾಶ್ಮೀರ ಪ್ರವಾಸಕ್ಕೆ ಹೋಗಿದ್ದರು.

ವೈಷ್ಣೋದೇವಿ ದರ್ಶನ ಮಾಡಿ, ಮಂಗಳವಾರ ಪಹಲ್ಗಾಮ್‌ಗೆ ಹೊರಟಿದ್ದರು. ಆದರೆ ಮಾರ್ಗಮಧ್ಯೆ ಗುಡ್ಡ ಕುಸಿತವಾಗಿತ್ತು. ಇದರಿಂದ ಪಹಲ್ಗಾಮ್‌ಗೆ 70 ಕಿ.ಮೀ ಬಳಸಿಕೊಂಡು ಹೋಗಬೇಕಿತ್ತು. ಸುತ್ತುವರಿದು ಹೋಗುತ್ತಿರುವಾಗ ಪ್ರಯಾಣಿಕರಿಗೆ ಮನೆಯವರು ಕರೆ ಮಾಡಿದ್ದು, ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿಯಾಗಿರುವ ಕುರಿತು ಮಾಹಿತಿ ನೀಡಿದ್ದರು.

→ 8

ಇಂದು ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ

ಬೆಂಗಳೂರು: ಕನ್ನಡ ಪತ್ರಿಕೋದ್ಯಮದಲ್ಲಿ ಮೊದಲ ಬಾರಿಗೆ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಈ ಬಾರಿ ರಷ್ಯಾದ ಆಯೋಜಿಸಲಾಗಿದ್ದು, ಗುರುವಾರ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ವಿಶ್ವವಾಣಿ ಗ್ಲೋಬಲ್ ಫೋರಂ ರಷ್ಯಾ ರಾಜಧಾನಿ ಮಾಸ್ಕೋದ ಸ್ವಿಸ್ ಹೋಟೆಲ್‌ನಲ್ಲಿ ಕರ್ನಾಟಕದ ಅಪರೂಪದ ಸಾಧಕರಿಗೆ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ನೀಡಿ ಗೌರವಿಸಲಾಗುತ್ತಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕುಂಚಿಟಿಗ ಸಂಸ್ಥಾನದ ಶ್ರೀ ಶಾಂತವೀರ ಸ್ವಾಮೀಜಿ, ಭೋವಿ ಗುರು ಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹಾಗೂ ಭಗೀರಥ ಮಹಾ ಸಂಸ್ಥಾನದ ಶ್ರೀ ಡಾ. ಪುರುಷೋತ್ತಮಾನಂದಪುರಿ ಸ್ವಾಮೀಜಿ, ವಿಶ್ವವಾಣಿ ಸಮೂಹ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹಾಗೂ ರಷ್ಯಾದ ಡೆಪ್ಯುಟಿ ಆಫ್ ದಿ ಟೇಟ್ ಗ್ಲಾಸ್ಕೋವಾ ಆಂಜೆಲಿಕಾ ಇಗೋರ್ವ ಸೇರಿದಂತೆ ಹಲವು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಒಟ್ಟು 21 ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿ ಪರಿಚಯ ಈ ಕಾರ್ಯಕ್ರಮದ ಆಶಯ. ಕಳೆದ ವರ್ಷದಿಂದ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ, ಮಾರಿಷಸ್, ಮಾಲ್ಡೀವ್ಸ್, ಜಪಾನ್ ಹಾಗೂ ಒಮಾನ್ ದೇಶಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಗೊಳಿಸಲಾಗಿದೆ. ಇಂಥ ವಿಶಿಷ್ಟ ಸಾಂಸ್ಕೃತಿಕ ಸಮ್ಮಿಲನ ಈ ಬಾರಿ ರಷ್ಯಾ ದೇಶದ ರಾಜಧಾನಿ ಮಾಸ್ಕೋದಲ್ಲಿ ನಡೆಯಲಿದೆ.

ನುಸುಳಲೆತ್ನ: 2 ಉಗ್ರರು ಬಾರಾಮುಲ್ಲಾದಲ್ಲಿ ಹತ

ಶ್ರೀನಗರ: ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭೀಕರ ಭಯೋತ್ಪಾದಕ ದಾಳಿ ನಡೆದು 28 ಜನರು ಮೃತಪಟ್ಟು ಇಡೀ ದೇಶ ಆಘಾತಕ್ಕೊಳಗಾಗಿದ್ದರೆ, ಶೋಕದಲ್ಲಿ ಮುಳುಗಿದ್ದರೆ, ಪಾಕಿಸ್ತಾನದ ಉಗ್ರರು ಮಾತ್ರ ತಮ್ಮ ಚಾಳಿ ಮುಂದುವರಿಸಿಯೇ ಇದ್ದಾರೆ. ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ಬಳಿ ಒಳನುಸುಳಲು ಯತ್ನಿಸಿದ ಉಗ್ರರನ್ನು ತಡೆದು ಇಬ್ಬರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ. ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಉರಿ ನಾಲಾದ ಸರ್ಜೀವನ್ ಪ್ರದೇಶದಲ್ಲಿ ಮೂವರು ಉಗ್ರರು ಭಾರತದೊಳಕ್ಕೆ ನುಸುಳಿಕೊಂಡು ಬರಲು ಹೊಂಚು ಹಾಕಿದ್ದರು. ಅವರಲ್ಲಿ ಇಬ್ಬರನ್ನು ಭದ್ರತಾ ಪಡೆ ಯೋಧರು ಗುಂಡಿಕ್ಕಿ ಕೊಂದಿದ್ದಾರೆ. ಉಗ್ರರಿಬ್ಬರ ಮೃತದೇಹದ ಬಳಿ ಭಾರೀ ಶಸ್ತ್ರಾಸ್ತ್ರಗಳು, ಮದ್ದುಗುಂಡು ಮತ್ತು ಸ್ಫೋಟಗಳು ಪತ್ತೆಯಾಗಿದ್ದು, ಎಲ್ಲವನ್ನೂ ವಶಪಡಿಸಿಕೊಳ್ಳಲಾಗಿದೆ ಎಂದು ಭದ್ರತಾ ಪಡೆ ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ಉಳಿದಿರುವ ಉಗ್ರರನ್ನು ಪತ್ತೆಹಚ್ಚಲು ವೈಮಾನಿಕ ಕಣ್ಗಾವಲುಗಾಗಿ ಡ್ರೋನ್‌ಗಳು ಮತ್ತು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ. ಹೆಚ್ಚುವರಿ ಪಡೆಗಳನ್ನು ಪ್ರದೇಶಕ್ಕೆ ರವಾನಿಸಲಾಗಿದೆ.

ಹತ್ಯೆ ಖಂಡಿಸಿ ಕಾಶ್ಮೀರ ಪತ್ರಿಕೆ ಮುಖಪುಟ ಕಪ್ಪು!

ಶ್ರೀನಗರ: ಪಹಲ್ಗಾಮ್ ಭಯೋತ್ಪಾದಕರ ದಾಳಿಯಲ್ಲಿ 28 ಪ್ರವಾಸಿಗರ ಹತ್ಯೆಯಾಗಿರುವ ಹಿನ್ನೆಲೆಯಲ್ಲಿ ಜಮ್ಮು-ಕಾಶ್ಮೀರದಲ್ಲಿನ ಬಹುತೇಕ ಪತ್ರಿಕೆಗಳ ಬುಧವಾರದ ಸಂಚಿಕೆಯ ಮುಖಪುಟ ಪೂರ್ಣ ಕಪ್ಪು ವರ್ಣದಲ್ಲಿದ್ದು, ಹತ್ಯಾಕಾಂಡದ ಸುದ್ದಿಗಳು ಬಿಳಿ ಮತ್ತು ಕೆಂಪು ಅಕ್ಷರಗಳಲ್ಲಿ ಮುದ್ರಿತವಾಗಿದ್ದವು. 'ಗ್ರೇಟರ್ ಕಾಶ್ಮೀರ್' ಆಂಗ್ಲ ಪತ್ರಿಕೆಯ ಮುಖಪುಟವೂ ಪೂರ್ಣ ಕಪ್ಪು ಬಣ್ಣದಲ್ಲಿತ್ತು. 'ಗ್ರ್ಯಾಸಮ್: ಕಾಶ್ಮೀರ್ ಗಟ್ಟೆಡ್, ಕಾಶ್ಮೀರ್ ಗ್ರೀವಿಂಗ್' ಎಂಬ ಶೀರ್ಷಿಕೆ ನೀಡಲಾಗಿತ್ತು. ಪಹಲ್ಗಾಮ್‌ನಲ್ಲಿನ ಭೀಕರ ಭಯೋತ್ಪಾದಕ ದಾಳಿಗೆ 26 ಜೀವಗಳ ಬಲಿ ಎಂದು ಕೆಂಪು ಅಕ್ಷರಗಳಲ್ಲಿ ಅಡಿಬರಹ ಅಚ್ಚು ಹಾಕಲಾಗಿತ್ತು. ಪ್ರಧಾನಿ ಮೋದಿ ಹೇಳಿಕೆ, ವಿಶ್ವದ ವಿವಿಧ ನಾಯಕರ ಖಂಡನೆ ಮುಖಪುಟದಲ್ಲಿ ಪ್ರಕಟವಾಗಿತ್ತು. 'ರೈಸಿಂಗ್ ಕಾಶ್ಮೀರ್' ಪತ್ರಿಕೆಯ ಮುಖಪುಟವೂ ಕಪ್ಪು ಬಣ್ಣದಲ್ಲಿ ಅದ್ದಿ ತೆಗೆದಂತಿದ್ದು, 'ಟೆರ್ರರ್ ಸ್ಟ್ರೈಕ್ ಪಹಲ್ಗಾಮ್' ಎಂಬ ತಲೆ ಬರಹ ನೀಡಲಾಗಿತ್ತು. ಉರ್ದು ಪತ್ರಿಕೆಗಳೂ ಮುಖಪುಟವನ್ನು ಶೋಕ ಸೂಚಕವಾಗಿ ಕಪ್ಪಾಗಿಸಿದ್ದವು.

ಪಿಒಕೆ ಉಗ್ರನಿಂದ ಸುಳಿವು | ಭದ್ರತಾ ಪಡೆ ನಿರ್ಲಕ್ಷ್ಯ-ಗುಪ್ತಚರ ಇಲಾಖೆ ಬೊಟ್ಟು

ಉಗ್ರರ ಬೆದರಿಕೆ ನಿರ್ಲಕ್ಷಿಸಿದ್ದೇ ಪಹಲ್ಗಾಮ್ ದುರಂತಕ್ಕೆ ಕಾರಣ

ದೆಹಲಿ: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮಂಗಳವಾರ ಮಧ್ಯಾಹ್ನ ನಡೆದ ಭೀಕರ ಭಯೋತ್ಪಾದಕ ದಾಳಿಯಲ್ಲಿ ಮಹಾರಾಷ್ಟ್ರದ ಐವರು ಮತ್ತು ಕರ್ನಾಟಕದ ಮೂವರು ಹಾಗೂ ದೇಶದ ವಿವಿಧೆಡೆಯವರು ಮತ್ತು ವಿದೇಶದವರೂ ಸೇರಿ ಒಟ್ಟು 28 ಜನರು ಸಾವನ್ನಪ್ಪಿದ್ದಾರೆ. ಹಲವಾರು ಮಂದಿ ಗಾಯಗೊಂಡಿದ್ದಾರೆ.

ಉಗ್ರರಿಂದ ಪಹಲ್ಗಾಮ್ ಭಾಗದಲ್ಲಿ ದಾಳಿ ಸಾಧ್ಯತೆ ಇದೆ, ಆ ಬಗ್ಗೆ ಬೆದರಿಕೆಯೂ ಕೇಳಿಬರುತ್ತಿದೆ ಎಂಬ ಮಾಹಿತಿ ಇದ್ದರೂ ಅದನ್ನು ಭದ್ರತಾ ಪಡೆಗಳು ನಿರ್ಲಕ್ಷಿಸಿದ್ದೇ ಪಹಲ್ಗಾಮ್ ದುರಂತಕ್ಕೆ ಕಾರಣವಾಗಿದೆ. ಇದೊಂದು ಗಂಭೀರ ಸ್ವರೂಪದ ಗುಪ್ತಚರ ಮತ್ತು ಭದ್ರತಾ ವೈಫಲ್ಯ ಎಂದು ಗುಪ್ತಚರ ಸಂಸ್ಥೆಗಳ ಮೂಲಗಳು ತಿಳಿಸಿವೆ.

ಪಹಲ್ಗಾಮ್‌ನ ಬೈಸರನ್ ಹುಲ್ಲುಗಾವಲಿನ ಪಿಕ್‌ನಿಕ್ ಸ್ಪಾಟ್‌ನತ್ತ ಉಗ್ರರು ಕಣ್ಣು ಹರಿಸಿದ್ದಾರೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಇರುವ ಭಯೋತ್ಪಾದಕನೊಬ್ಬ ದಾಳಿ ಬಗ್ಗೆ ಸುಳಿವು ನೀಡಿದ್ದ. ಆದರೆ ಗುಪ್ತಚರ ಸಂಸ್ಥೆಗಳು ಮತ್ತು ಭದ್ರತಾ ಪಡೆಗಳು ಆ ಸುಳಿವನ್ನು ಗಂಭೀರವಾಗಿ ಪರಿಗಣಿಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಲ್ಲಿ ವಿಫಲವಾದವು. ಇದುವೇ ಭೀಕರ ದುರಂತಕ್ಕೆ ಕಾರಣವಾಯಿತು ಎಂಬ ಕಳವಳಕಾರಿ ಅಂಶವೊಂದು ಗುಪ್ತಚರ ಸಂಸ್ಥೆಯ ಮೂಲದಿಂದ ಹೊರಬಿದ್ದಿದೆ.

ಸ್ಥಳೀಯರಿಂದಲೂ ಮಾಹಿತಿ: ಪಾಕ್ ಆಕ್ರಮಿತ ಕಾಶ್ಮೀರದ(ಪಿಒಕೆ) ಮತ್ತು ಪಾಕಿಸ್ತಾನದಲ್ಲಿ ನೆಲೆಸಿರುವ ಅಂತಾರಾಷ್ಟ್ರೀಯ ಕಮಾಂಡರ್‌ಗಳು ಪಹಲ್ಗಾಮ್ ದಾಳಿ ವೇಳೆ ಉಗ್ರರಿಗೆ ನಿರ್ದೇಶನಗಳನ್ನು ನೀಡುತ್ತಿದ್ದರು ಎಂಬುದೂ ವರದಿಯಾಗಿದೆ. ದಾಳಿ ನಡೆಸಿದ ಉಗ್ರರು ಶಸ್ತ್ರಾಸ್ತ್ರಗಳನ್ನು ಬಳಸುವಲ್ಲಿ ಉತ್ತಮ ತರಬೇತಿ ಪಡೆದಿದ್ದರು. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಜನಪ್ರಿಯ ಪ್ರವಾಸಿ ತಾಣಗಳಾಗಿದ್ದರೂ ಭದ್ರತಾ ಪಡೆಗಳ ಕಡಿಮೆ ಸಂಖ್ಯೆಯಲ್ಲಿರುವ ಪ್ರದೇಶಗಳ ವಿವರ ಮಾಹಿತಿಗಳನ್ನು ಉಗ್ರರು ಸ್ಥಳೀಯರಿಂದಲೇ ಪಡೆದುಕೊಂಡಿದ್ದರು ಎಂದು ಗುಪ್ತಚರ ಮೂಲಗಳು ತಿಳಿಸಿವೆ. ದಾಳಿಕೋರರು ಹೆಲ್ಮೆಟ್‌ಗಳನ್ನು ಧರಿಸಿದ್ದರು. ಅದರಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಇದು ಬೈಸರನ್ ಹುಲ್ಲುಗಾವಲಿನಲ್ಲಿ ಪ್ರವಾಸಿಗರ ಮೇಲಿನ ಹತ್ಯಾಕಾಂಡವನ್ನು ದಾಖಲಿಸಿಕೊಳ್ಳಲು ಮತ್ತು ಆ ದೃಶ್ಯಾವಳಿಗಳನ್ನು ಪಾಕ್‌ನಲ್ಲಿರುವ ಉಗ್ರ ಸಂಘಟನೆಗಳ ಪ್ರಧಾನ ಘಟಕಗಳಿಗೆ ರವಾನಿಸಲಾಗಿದೆ ಎಂದು ಗುಪ್ತಚರ ಮೂಲಗಳಿಂದ ತಿಳಿದುಬಂದಿದೆ.

ರಕ್ಷಣಾ ಸಚಿವ, ಗೃಹ ಸಚಿವರ ಸಭೆ





ಈ ಮಧ್ಯೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಕಾಶ್ಮೀರದಲ್ಲಿ ಭದ್ರತಾ ಪರಿಶೀಲನಾ ಸಭೆ ನಡೆಸಿದ್ದಾರೆ. ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮತ್ತು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಕೂಡ ಭಾಗವಹಿಸಿದ್ದರು. ದೇಶ ಭಯೋತ್ಪಾದನೆಗೆ ಮಣಿಯುವುದಿಲ್ಲ. ಪ್ರವಾಸಿಗರ ಹತ್ಯೆಗೆ ಕಾರಣರಾದವರನ್ನು ಬಿಡಲಾಗುವುದಿಲ್ಲ ಎಂದು ಅಮಿತ್ ಶಾ ಗುಡುಗಿದ್ದಾರೆ.
ಸಭೆಗೂ ಮುನ್ನ ಸಚಿವ ಅಮಿತ್ ಶಾ, ಉಗ್ರರ ದಾಳಿ ನಡೆದ ಬೈಸರನ್ ಹುಲ್ಲುಗಾವಲು ಪ್ರದೇಶಕ್ಕೂ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು. ಭದ್ರತಾಪಡೆಗಳ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಇನ್ನೊಂದೆಡೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೂ ಮೂರೂ ರಕ್ಷಣಾ ಪಡೆಗಳ ಕಮಾಂಡರ್ ಇನ್ ಚೀಫ್ ಹಾಗೂ ಭಾರತೀಯ ಸೇನೆ, ವಾಯುಪಡೆ ಮತ್ತು ನೌಕಾಪಡೆಗಳ ಮುಖ್ಯಸ್ಥರ ಜತೆ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಪಾಕಿಸ್ತಾನದ ಗಡಿ ಭಾಗ ಸೇರಿದಂತೆ ದೇಶದ ವಿವಿಧ ಗಡಿಗಳಲ್ಲಿನ ಪರಿಸ್ಥಿತಿ, ಭದ್ರತಾ ವ್ಯವಸ್ಥೆ, ಸೇನಾಪಡೆಗಳ ನಿಯೋಜನೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಯೋಜನೆ ರೂಪಿಸುತ್ತಿರುವ ರಕ್ಷಣಾ ಇಲಾಖೆ

ಬೈಸರನ್ ಹುಲ್ಲುಗಾವಲು ಬಳಿ ಭದ್ರತಾ ಪಡೆಗಳ ನಿಯೋಜನೆ

ಶ್ರೀನಗರ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ 28 ಪ್ರವಾಸಿಗರು ಬಲಿಯಾದ ಪ್ರವಾಸಿ ತಾಣ ಬೈಸರನ್ ಹುಲ್ಲುಗಾವಲು ಪ್ರದೇಶ ಹಾಗೂ ಸುತ್ತಲ ಪರ್ವತಗಳ ಪ್ರದೇಶಗಳಲ್ಲಿ ಸೇನೆ ಮತ್ತು ಅರೆಸೇನಾ ಪಡೆಗಳನ್ನು ಶಾಶ್ವತವಾಗಿ ನಿಯೋಜಿಸಲು ರಕ್ಷಣಾ ಇಲಾಖೆ ಅಧಿಕಾರಿಗಳು ಯೋಜನೆ ರೂಪಿಸುತ್ತಿದ್ದಾರೆ.

ಈ ಮಧ್ಯೆ, ಜು.3ಕ್ಕೆ ವಾರ್ಷಿಕ ಅಮರನಾಥ ಯಾತ್ರೆ ಆರಂಭಗೊಳ್ಳಲಿದ್ದು, ಅದಕ್ಕೂ ಮುನ್ನವೇ ಭದ್ರತಾ ಪಡೆಗಳ ಮರು ನಿಯೋಜನೆ ಅಗತ್ಯವಾಗಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ಬುಧವಾರ ತಿಳಿಸಿದ್ದಾರೆ. ಉಗ್ರರು ದಾಳಿ ನಡೆಸಿದ ಬೈಸರನ್ ಹುಲ್ಲುಗಾವಲು ಪ್ರದೇಶ ದಟ್ಟವಾದ ಕಾಡು, ಪರ್ವತ ಪ್ರದೇಶದಿಂದ ಸುತ್ತುವರಿದಿದೆ. ಇದರ ಸಮೀಪದಲ್ಲಿ ಯಾವುದೇ ಭದ್ರತಾ ಪಡೆಗಳ ನಿಯೋಜನೆಗೊಂಡಿರಲಿಲ್ಲ. ಬದಲಾಗಿ ಭದ್ರತಾ ಪಡೆಗಳು ಸಾಮಾನ್ಯವಾಗಿ ಶಿಖರಗಳಲ್ಲಿ ಗಸ್ತು ತಿರುಗುತ್ತವೆ. ಕಾಶ್ಮೀರ ಕಣಿವೆಯಲ್ಲಿ ಚೆಕ್ ಪೋಸ್ಟ್‌ಗಳನ್ನು ನಿಯೋಜಿಸುವ ಮೂಲಕ ಹುಲ್ಲುಗಾವಲುಗಳಿಗೆ ಪ್ರವೇಶವನ್ನು ನಿಯಂತ್ರಿಸುತ್ತವೆ. ಭದ್ರತಾ ಸಂಸ್ಥೆಗಳು, ಈಗ ಬೈಸರನ್ ಕಣಿವೆ ಪ್ರದೇಶದ ಸಮೀಪದಲ್ಲಿ ಭಯೋತ್ಪಾದಕರ ಚಲನವಲನದತ್ತ ನಿಗಾ ಇಡಲು ಹುಲ್ಲುಗಾವಲು ಮತ್ತು ಅರಣ್ಯ ಪ್ರವೇಶದ ಪ್ರದೇಶಗಳನ್ನು ಸುರಕ್ಷಿತವಾಗಿಡಲು ಸೈನಿಕರ ನಿಯೋಜನೆಯಲ್ಲಿ ಮರುಹೊಂದಾಣಿಕೆಗೆ ಯೋಜನೆ ರೂಪಿಸುತ್ತಿವೆ. ದೆಹಲಿ ಮತ್ತು ಶ್ರೀನಗರದಲ್ಲಿ ಕೇಂದ್ರ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಗಳ ನಂತರ ಕ್ರಿಯಾ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎನ್ನಲಾಗಿದೆ.

10 ಕಿ.ಮೀ. ದೂರದಲ್ಲಿ...

ಭಾರತೀಯ ಸೇನಾಪಡೆಯ ರಾಷ್ಟ್ರೀಯ ರೈಫಲ್ಸ್‌ನ 3ನೇ ಬೆಟಾಲಿಯನ್ ಒಂದು ತುಕಡಿ ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆಯ(ಸಿಆರ್‌ಪಿಎಫ್) 116ನೇ ಬೆಟಾಲಿಯನ್‌ನ ಒಂದು ತುಕಡಿ ಸಮೀಪದ ಸ್ಥಳದಲ್ಲಿರುತ್ತವೆ. ಅಲ್ಲಿಂದ 10 ಕಿ.ಮೀ. ದೂರದಲ್ಲಿರುವ ಬೈಸರನ್ ಹುಲ್ಲುಗಾವಲನ್ನು ನಡಿಗೆ ಅಥವಾ ಕುದುರೆ ಸವಾರಿ ಮೂಲಕ ತಲುಪಬಹುದಾಗಿದೆ. ವಾಹನ ಸಂಚಾರ ಕಷ್ಟ. ಹೀಗಾಗಿ ಭದ್ರತಾ ಪಡೆ ತುಕಡಿಗಳು ಬೈಸರನ್ ಪ್ರದೇಶದ ಈ ಸ್ಥಳವನ್ನು ತಲುಪಲು ಸಮಯ ತೆಗೆದುಕೊಳ್ಳುತ್ತದೆ ಎಂದು ರಕ್ಷಣಾ ಇಲಾಖೆ ಅಧಿಕಾರಿಯೊಬ್ಬರು ಹೇಳಿದ್ದಾರೆ.

ವಾಯುಪಡೆ, ನೌಕಾಪಡೆ, ಐಬಿ ಅಧಿಕಾರಿಗಳ ಸಾವು

ಉಗ್ರರ ಗುಂಡಿಗೆ ಪಹಲ್ಗಾಮ್‌ನಲ್ಲಿ ಮೃತರಾದವರಲ್ಲಿ ಹೆಚ್ಚಿನವರು ಪ್ರವಾಸಿಗರು. ಆದರೆ, ಇವರಲ್ಲಿ ಮೂವರು ದೇಶದ ಭದ್ರತೆ ಮತ್ತು ರಕ್ಷಣೆಗೆ ಸಂಬಂಧಿಸಿ ಇಲಾಖೆಗಳ ಯುವ ಅಧಿಕಾರಿಗಳು ಎಂಬುದು ಗಮನಾರ್ಹ. ಒಬ್ಬರು ಭಾರತೀಯ ವಾಯುಪಡೆ ಅಧಿಕಾರಿಯಾಗಿದ್ದು, ಶ್ರೀನಗರದಲ್ಲಿ ಸೇವೆಗೆ ನಿಯೋಜನೆ ಗೊಂಡಿದ್ದರು, ಇನ್ನೊಬ್ಬರು ಭಾರತೀಯ ನೌಕಾಪಡೆಯಲ್ಲಿ ಲೆಫ್ಟಿನೆಂಟ್ ಶ್ರೇಣಿಯವರಾಗಿದ್ದು, ಕೊಚ್ಚಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಾರತೀಯ ವಾಯು ಪಡೆಯ ಯುವ ಅಧಿಕಾರಿ ತೇಜ್ ಹೈಲ್ಯಾಂಗ್ ಮತ್ತು ನೌಕಾ ಪಡೆಯ ಯುವ ಅಧಿಕಾರಿ ವಿನಯ್ ನರ್ವಾಲ್ ಇತ್ತೀಚೆಗಷ್ಟೇ ವಿವಾಹವಾಗಿದ್ದು, ಪತ್ನಿಯರ ಜತೆಗೆ ಮಧುಚಂದ್ರಕ್ಕೆಂದು ಪಹಲ್ಗಾಮ್‌ಗೆ ಬಂದಿದ್ದರು.



ಮತ್ತೊಬ್ಬರು ಕೇಂದ್ರ ಸರಕಾರದ ಮಹತ್ವದ ಇಲಾಖೆಯಾಗಿರುವ 'ಇಂಟೆಲಿಜೆನ್ಸ್ ಬ್ಯೂರೊ'(ಐಬಿ)ಗೆ ಸೇರಿದವರು. ಐಬಿ ಅಧಿಕಾರಿ ಮನೀಶ್ ರಂಜನ್ ಸದ್ಯ ಹೈದರಾಬಾದ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಬೇಸಿಗೆ ರಜೆ ಪ್ರಯುಕ್ತ ಕುಟುಂಬ ಸಮೇತ ಕಾಶ್ಮೀರಕ್ಕೆ ಪ್ರವಾಸ ಬಂದಿದ್ದರು.

ಮಾಹಿತಿ ರವಾನೆ ಶಂಕೆ: ಐಬಿ, ವಾಯುಪಡೆ ಮತ್ತು ನೌಕಾಪಡೆ ಅಧಿಕಾರಿಗಳು ಇರುವುದರ ಬಗ್ಗೆ ಮಾಹಿತಿ ಸಿಕ್ಕಿದ್ದರಿಂದಲೇ ಉಗ್ರರು ಮಂಗಳವಾರ ದಾಳಿ ನಡೆಸಿರುವ ಸಾಧ್ಯತೆ ಇದೆ. ಈ ಅಧಿಕಾರಿಗಳು ಕುಟುಂಬ ಸಮೇತ ಪ್ರವಾಸಕ್ಕೆ ಬಂಧಿರುವ ಬಗ್ಗೆ ಸ್ಥಳೀಯರಿಂದಲೇ ಉಗ್ರರಿಗೆ ಮಾಹಿತಿ ಹೋಗಿರ ಬಹುದು ಎಂಬ ಶಂಕೆ ಇದೆ.

ಮಹಾರಾಷ್ಟ್ರ 5 ಕರ್ನಾಟಕದ 3 ಮಂದಿ ಸೇರಿ 28 ಸಾವು

ಪಹಲ್ಗಾಮ್: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ಮಂಗಳವಾರ ನಡೆಸಿದ ದಾಳಿಯಲ್ಲಿ ಮಹಾರಾಷ್ಟ್ರದ ಐವರು, ಕರ್ನಾಟಕದ ಮೂವರು ಸೇರಿದಂತೆ ಒಟ್ಟು 28 ಮಂದಿ ಬಲಿಯಾಗಿದ್ದಾರೆ. ಅವರಲ್ಲಿ ಒಬ್ಬ ವಿದೇಶಿ ವ್ಯಕ್ತಿಯೂ ಇದ್ದಾರೆ. ಹಲವು ಪ್ರವಾಸಿಗರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಗ್ರರ ದಾಳಿಗೆ ಬಲಿಯಾದವರಲ್ಲಿ ಗುಜರಾತ್, ಹರಿಯಾಣ ಮತ್ತು ಉತ್ತರ ಪ್ರದೇಶದ ಪ್ರವಾಸಿಗರೂ ಇದ್ದಾರೆ. ಯಾವ ಧರ್ಮ? ಎಂದು ಪ್ರಶ್ನೆ ಮಾಡಿ, ಹಿಂದೂ ಎಂಬುದನ್ನು ಖಚಿತಪಡಿಸಿಕೊಂಡ ಬಳಿಕವಷ್ಟೇ ಪ್ರವಾಸಿಗರ ಮೇಲೆ ಉಗ್ರರು ಗುಂಡು ಹಾರಿಸಿದ್ದಾರೆ. ಉಗ್ರರು ಪುರುಷರಿಗಷ್ಟೇ ಗುಂಡಿಕ್ಕಿ, ಮಹಿಳೆಯರು-ಮಕ್ಕಳನ್ನು ಬಿಟ್ಟುಬಿಟ್ಟಿದ್ದಾರೆ. ಉಗ್ರರು ಮೊದಲ ಬಾರಿಗೆ ಪ್ರವಾಸಿಗರನ್ನು ಗುರಿಯಾಗಿಸಿ ದಾಳಿ ನಡೆಸಿದ್ದಾರೆ. ಶವಪೆಟ್ಟಿಗೆಗಳನ್ನು ಶ್ರೀನಗರ ವಿಮಾನ ನಿಲ್ದಾಣದಿಂದ ಆಯಾ ರಾಜ್ಯಗಳಿಗೆ ವಿಮಾನಗಳ ಮೂಲಕ ಕಳುಹಿಸಿಕೊಡಲು ವ್ಯವಸ್ಥೆ ಮಾಡಲಾಗಿದೆ. ಹಲವು ರಾಜ್ಯಗಳ ಸರಕಾರದ ಪ್ರತಿನಿಧಿಗಳು ಸಂತ್ರಸ್ತರು ಮತ್ತು ಪ್ರವಾಸಿಗರನ್ನು ಆಯಾ ರಾಜ್ಯಗಳಿಗೆ ವಾಪಸ್ ಕಳುಹಿಸುವಲ್ಲಿ ಸಹಾಯ ಮಾಡಲು ಕಾಶ್ಮೀರಕ್ಕೆ ಬಂದಿಳಿದಿದ್ದಾರೆ.

ಪಹಲ್ಗಾಮ್, ನೇಪಾಳದ ವ್ಯಕ್ತಿ ಸಾವು

ಬೆಂಗಳೂರಿನ ಮಧುಸೂದನ್ ಸೋಮಿಶೆಟ್ಟಿ ಮತ್ತು ಭರತ್ ಭೂಷಣ್ ಹಾಗೂ ಶಿವಮೊಗ್ಗದ ಮಂಜುನಾಥ್ ರಾವ್, ಮಹಾರಾಷ್ಟ್ರದ ಅತುಲ್ ಶ್ರೀಕಾಂತ್ ಮೋನಿ, ಹೇಮಂತ್ ಸುಹಾಸ್ ಜೋಶಿ ಮತ್ತು ದಿಲೀಪ್ ದಾಸಾಲಿ(ಮುಂಬೈ), ಸಂಜಯ್ ಲಕ್ಷ್ಮಣ್ ಲಾಲಿ(ಥಾಣೆ), ಸಂತೋಷ್ ಜಘಾಡ ಮತ್ತು ಕಸ್ತೂಬಾ ಗನ್ಬೋಟೆ(ಪುಣೆ), ಗುಜರಾತ್ ರಾಜ್ಯದ ಸುಮಿತ್ ಪರ್ಮಾರರ್ ಮತ್ತು ಯತೇಶ್ ಪರ್ಮಾರರ್ ಹಾಗೂ ಶೈಲೇಶಭಾಯ್ ಎಚ್.ಹಿಮ್ಮತ್ ಭಾಯ್ ಕಲಾಥಿಯ, ಮಧ್ಯಪ್ರದೇಶದ ಇಂದೋರ್‌ನ ಸುಶೀಲ್ ನಾಥ್ಯಾಲ್, ಹರಿಯಾಣದ ವಿನಯ್ ನರ್ವಾಲ್, ಚಂಡೀಗಢದ ದಿನೇಶ್ ಅಗರ್ವಾಲ್, ಕೋಲ್ಕತ್ತದ ಸಮೀರ್ ಗುಹರ್ ಮತ್ತು ಬಿತಾನ್ ಅಧಿಕಾರಿ, ಉತ್ತರಾಖಂಡ್‌ನ ನೀರಜ್ ಉಧವಾನಿ, ಉತ್ತರ ಪ್ರದೇಶದ ಕಾನ್ಪುರದ ಶುಭಂ ದ್ವಿವೇದಿ, ಬಿಹಾರದ ಪ್ರಶಾಂತ್ ಕುಮಾರ್ ಸತ್ಪತಿ, ಮಲಶ್ವರ ಒಡೆಸಾ ಮತ್ತು ಮನೀಶ್ ರಂಜನ್, ಕೇರಳದ ಎನ್. ರಾಮಚಂದ್ರ, ವಿಶಾಖಪಟ್ಟಣದ ಜೆ.ಸಚಂದ್ರ ಮೌಳಿ, ಅರುಣಾಚಲ ಪ್ರದೇಶದ ತಗೆಹಲಿಂಗ್, ಜಮ್ಮು-ಕಾಶ್ಮೀರದ ಪಹಲ್ಗಾಮ್‌ನ ಸೈಯದ್ ಆದಿಲ್ ಹುಸೇನ್ ಶಾ ಹಾಗೂ ನೇಪಾಳದ ಸುದೀಪ್ ನ್ಯೂಪಾನೆ.

ಪಹಲ್ಗಾಮ್ ದಾಳಿ ಖಂಡಿಸಿದ ಟ್ರಂಪ್, ಪುಟಿನ್, ನೆತನ್ಯಾಹು



ದೆಹಲಿ: ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಇಸ್ರೇಲ್ ಅಧ್ಯಕ್ಷ ಬೆಂಜಮಿನ್ ನೆತನ್ಯಾಹು ಸೇರಿದಂತೆ ಹಲವು ಜಾಗತಿಕ ನಾಯಕರು ಖಂಡಿಸಿದ್ದಾರೆ. ಸದ್ಯ ಭಾರತ ಪ್ರವಾಸ ದಲ್ಲಿರುವ ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಕೂಡಾ ಭಯೋತ್ಪಾದನಾ ದಾಳಿಯನ್ನು ಬಲವಾಗಿ ಖಂಡಿಸಿದ್ದಾರೆ. ಮೃತರಿಗೆ ಸಂತಾಪ ಸೂಚಿಸಿದ್ದಾರೆ.

ಕಾಶ್ಮೀರದ ಸುದ್ದಿ ಬಲು ಆಘಾತಕಾರಿ. ಪಹಲ್ಗಾಮ್ ಭಯೋ ತ್ಪಾದಕ ದಾಳಿ ಖಂಡನಾರ್ಹ. ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟದಲ್ಲಿ ಅಮೆರಿಕ ಕೂಡಾ ಜತೆಗಿರಲಿದೆ, ಭಾರತದೊಂದಿಗೆ ಬಲವಾಗಿ ನಿಲ್ಲಲಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಭಾರತದ ಜನರಿಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಮೃತರ ಆತ್ಮಗಳಿಗೆ ಶಾಂತಿ ಕೋರುವೆ. ಗಾಯಾಳುಗಳ ಚೇತರಿಕೆಗೆ ಪ್ರಾರ್ಥಿಸುವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಭಯೋತ್ಪಾದಕ ದಾಳಿ ಕ್ರೂರ ಅಪರಾಧ. ಇದಕ್ಕೆ ಯಾವುದೇ ಸಮರ್ಥನೆ ಇಲ್ಲ. ಅಪರಾಧಿಗಳಿಗೆ ತಕ್ಕ ಶಿಕ್ಷೆ ಎದುರಿಸಬೇಕಾಗುತ್ತದೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹೇಳಿದ್ದಾರೆ. ಭಯೋತ್ಪಾದಕ ದಾಳಿಗೆ 28 ಮಂದಿ ಬಲಿಯಾಗಿರುವುದು ಭಾರೀ ಶೋಕ ಉಂಟು ಮಾಡಿದೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ಇಸ್ರೇಲ್ ಬೆಂಬಲ ಸದಾ ಇರಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಪಹಲ್ಗಾಮ್ ಉಗ್ರ ದಾಳಿ ಖಂಡಿಸಿ ಜಮ್ಮು-ಕಾಶ್ಮೀರ ಪೂರ್ಣ ಬಂದ್

ಶ್ರೀನಗರ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನ ಬೈಸರನ್ ಪ್ರದೇಶದಲ್ಲಿ ಉಗ್ರರು ದಾಳಿ ನಡೆಸಿ 28 ಪ್ರವಾಸಿಗರನ್ನು ಕೊಂದಿರುವುದನ್ನು ಖಂಡಿಸಿ ಜಮ್ಮು-ಕಾಶ್ಮೀರದಲ್ಲಿ ಬುಧವಾರ ಪೂರ್ಣ ಬಂದ್ ಆಚರಿಸಲಾಗಿದೆ. ಉಗ್ರರ ದಾಳಿ ಖಂಡಿಸಿ ಕಣಿವೆ ರಾಜ್ಯದಲ್ಲಿ ಇಂಥದೊಂದು ಪ್ರತಿಭಟನೆ ಕಳೆದ 35 ವರ್ಷಗಳಲ್ಲೇ ಮೊದಲ ಬಾರಿ ನಡೆದಿದೆ ಎಂಬುದು ಗಮನಾರ್ಹ.

ವಾಣಿಜ್ಯ ಸಂಘಟನೆಗಳ ಪ್ರಾತಿನಿಧಿಕ ಸಂಸ್ಥೆ 'ಕಾಶ್ಮೀರ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ' ಹಾಗೂ 'ಕಾಶ್ಮೀರ ವ್ಯಾಪಾರಿಗಳು ಮತ್ತು ತಯಾರಕರ ಒಕ್ಕೂಟ', ಮುತ್ತಹಿದಾ ಮಜ್ಲಿಸ್ ಉಲೇಮಾ ಮತ್ತು ಜಮ್ಮು-ಕಾಶ್ಮೀರ ಗ್ರ್ಯಾಂಡ್ ಮುಫ್ತಿ ನಾಸಿರ್-ಉಲ್-ಇಸ್ಲಾಂ ಸಂಘಟನೆಗಳು ಜಂಟಿಯಾಗಿ ಜಮ್ಮು-ಕಾಶ್ಮೀರ ಬಂದ್‌ಗೆ ಕರೆ ನೀಡಿದ್ದವು. ಶ್ರೀನಗರ ಸೇರಿದಂತೆ ಕಣಿವೆ ರಾಜ್ಯದ ವಿವಿಧೆಡೆ ವರ್ತಕರು ಸ್ವಯಂ ಪ್ರೇರಿತರಾಗಿ ಅಂಗಡಿಗಳು, ಪೆಟ್ರೋಲ್ ಬಂಕ್ ಮುಚ್ಚಿ ಬಂದ್ ಕರೆಗೆ ಓಗೊಟ್ಟರು. ರಸ್ತೆಗಳಲ್ಲಿ ವಾಹನಗಳ ಸಂಚಾರ ವಿರಳವಾಗಿತ್ತು. ಖಾಸಗಿ ಶಾಲೆಗಳು ಮುಚ್ಚಿದ್ದವು. ಸರಕಾರಿ ಶಾಲೆಗಳು ಮಾತ್ರ ಕಾರ್ಯನಿರ್ವಹಿಸಿದವು. ಕಣಿವೆಯಾದ್ಯಂತ ವಿಶೇಷವಾಗಿ ಪ್ರಮುಖ ಪ್ರವಾಸಿ ತಾಣಗಳಲ್ಲಿ ಭದ್ರತಾ ವ್ಯವಸ್ಥೆ ಹೆಚ್ಚಿಸಲಾಗಿದೆ. ಜೀವನಾವಶ್ಯಕ ವಸ್ತುಗಳ ಅಂಗಡಿಗಳನ್ನು ತೆರೆಯಲಷ್ಟೇ ಅನುಮತಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಹಲ್ಗಾಮ್‌ನಲ್ಲಿನ ಉಗ್ರರ ದಾಳಿ ಖಂಡಿಸಿ ಜಮ್ಮು-ಕಾಶ್ಮೀರ ಬುಧವಾರ ಬಂದ್ ಆಗಿತ್ತು.

ಜಮ್ಮು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ(ಅಧ್ಯಕ್ಷ ಅರುಣ್ ಗುಪ್ತಾ), ಜಮ್ಮು ಬಾರ್ ಅಸೋಸಿಯೇಷನ್ ಬುಧವಾರ ಪೂರ್ಣ ಬಂದ್ ಆಚರಣೆಗೆ ಕರೆ ನೀಡಿದ್ದವು. ಪರಿಣಾಮ, ಜಮ್ಮು ಭಾಗದಲ್ಲಿ ಬಂದ್ ಕರೆಗೆ ಉತ್ತಮ ಸ್ಪಂದನೆ ಸಿಕ್ಕಿದೆ. ರಾಜಕೀಯ ಪಕ್ಷಗಳು, ರಾಜಕೀಯ ಮುಖಂಡರು ಬಂದ್ ಕರೆ ಬೆಂಬಲಿಸಿದ್ದರು. ಪೀಪಲ್ಸ್ ಕಾನ್ಫರೆನ್ಸ್(ಪಿಸಿ) ಅಧ್ಯಕ್ಷರಾದ ಶಾಸಕ ಹಂದ್ವಾರ, ಸಜದ್ ಗನಿ ಲೋನ್, ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಉಗ್ರ ಕೃತ್ಯವನ್ನು ಖಂಡಿಸಿದ್ದಾರೆ. ಸಾರ್ವಜನಿಕರು, ರಾಜಕೀಯ ಪಕ್ಷಗಳು, ಧಾರ್ಮಿಕ ಸಂಸ್ಥೆಗಳು ಒಗ್ಗೂಡಿ ಉಗ್ರ ಚಟುವಟಿಕೆ ವಿರುದ್ಧ ಬಲವಾದ ಸಂದೇಶ ರವಾನಿಸಿವೆ. ಉಗ್ರ ದಾಳಿ ಖಂಡಿಸಿ ಮಂಗಳವಾರ ರಾತ್ರಿ, ರಾಜ್ಯದ ಕೆಲವೆಡೆ ಮೇಣದಬತ್ತಿ ಉರಿಸಿ ಮೆರವಣಿಗೆ, ಪ್ರದರ್ಶನ ನಡೆಸಲಾಗಿದೆ.

ಜಮ್ಮು-ಕಾಶ್ಮೀರ ಜನರು ಮೇಣದಬತ್ತಿ ಮೆರವಣಿಗೆ ನಡೆಸಿ ಖಂಡನೆ ವ್ಯಕ್ತಪಡಿಸಿದರು.

ಡಿಸೆಂಬರ್, ಫೆಬ್ರವರಿಯಲ್ಲಿ ಮದುವೆಯಾದವರೂ ಬಲಿಯಾದರು | ವಾಯುಪಡೆ, ನೌಕಾಪಡೆ ಅಧಿಕಾರಿಗಳು, ಒಬ್ಬ ವರ್ತಕನ ಹತ್ಯೆ

ಮಧುಚಂದ್ರಕ್ಕೆಂದು ಕಾಶ್ಮೀರಕ್ಕೆ ಹೋದವರಿಗೆ ಕಂಡಿದ್ದು ದುಃಸ್ವಪ್ನ

ಪಹಲ್ಗಾಮ್: ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಉಗ್ರರ ಗುಂಡೇಟಿಗೆ ಬಲಿಯಾದ 28 ಮಂದಿಯಲ್ಲಿ ಕೆಲವರು ನವ ವಿವಾಹಿತರೂ ಇದ್ದಾರೆ. ಕೆಲವು ನವ ವಧು-ವರ ಜೋಡಿ 'ಮಧುಚಂದ್ರ'ಕ್ಕೆಂದೇ ಭೂಮಿಯ ಮೇಲಿನ ಸ್ವರ್ಗವೆನಿಸಿದ ಪಹಲ್ಗಾಮ್‌ಗೆ ದೀರ್ಘ ಪ್ರವಾಸದ ಯೋಜನೆ ರೂಪಿಸಿಕೊಂಡು ತೆರಳಿದೆ. ಆದರೆ, ಹನಿಮೂನ್ ಈ ನವ ಜೋಡಿಗಳ ಪಾಲಿಗೆ ದುಸ್ವಪ್ನವಾಗಿಬಿಟ್ಟಿದೆ.

ಉಗ್ರರ ಗುಂಡಿನೇಟಿಗೆ ಬಲಿಯಾದವರಲ್ಲಿ 2 ತಿಂಗಳ ಹಿಂದೆಯಷ್ಟೇ ವಿವಾಹವಾಗಿದ್ದ ಉತ್ತರ ಪ್ರದೇಶದ ಕಾನ್ಪುರದ ಶುಭಂ ದ್ವಿವೇದಿ, ಡಿಸೆಂಬರ್‌ನಲ್ಲಿ ಮದುವೆಯಾಗಿದ್ದ ಐಎಎಫ್ ಅಧಿಕಾರಿ ತೇಜ್ ಕೂಡಾ ಸೇರಿದ್ದಾರೆ.

ತೇಜ್ ಹೈಲ್ಯಾಂಗ್: ಪಹಲ್ಗಾಮ್ ಉಗ್ರರ ದಾಳಿಗೆ ಬಲಿಯಾದವರಲ್ಲಿ ಭಾರತೀಯ ವಾಯುಪಡೆಯ ಯುವ ಅಧಿಕಾರಿ, ಅರುಣಾಚಲ ಪ್ರದೇಶದ ಝಿರೋದ ತಾಜಾಂಗ್ ಗ್ರಾಮದ ತೇಜ್ ಹೈಲ್ಯಾಂಗ್ (30) ಸೇರಿದ್ದಾರೆ. ಶ್ರೀನಗರದ ವಾಯು ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ತೇಜ್ ಅವರು ಡಿಸೆಂಬರ್‌ನಲ್ಲಷ್ಟೇ ಮದುವೆಯಾಗಿದ್ದರು. ಹಾಗಾಗಿ ಪತ್ನಿ ಜತೆ ಪಹಲ್ಗಾಮ್‌ಗೆ ಪ್ರವಾಸಕ್ಕೆಂದು ತೆರಳಿದ್ದರು.ತೇಜ್ ತಂದೆ ತೇಗೆ ತಾಡೆ ಗ್ರಾಮದ ಮುಖಂಡರು. ಹೈಲ್ಯಾಂಗ್ 9 ವರ್ಷ ಹಿಂದೆ ಪದವೀಧರರಾದ ನಂತರ ಐಎಎಫ್ ಸೇರಿದ್ದರು. ತೇಜ್ ಸೋದರ ತೇಜ್ ಮಾಲಿ ಕೂಡಾ ಭಾರತೀಯ ಸೇನೆಯಲ್ಲಿದ್ದಾರೆ. ಸದ್ಯ ಝಿರೋದಲ್ಲಿ ಕರ್ತವ್ಯದಲ್ಲಿದ್ದಾರೆ. ವಾಯುಪಡೆ ಅಧಿಕಾರಿ ತೇಜ್ ಸಾವಿಗೆ ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು ಸಂತಾಪ ಸೂಚಿಸಿದ್ದಾರೆ. ಹೈಲ್ಯಾಂಗ್ ಧೈರ್ಯ ಮತ್ತು ಗೌರವದಿಂದ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ್ದಾರೆ. ಅವರ ಅಕಾಲಿಕ ಮರಣ ಅವರ ಕುಟುಂಬಕ್ಕೆ ಮಾತ್ರವಲ್ಲದೆ ಇಡೀ ದೇಶಕ್ಕೆ ದೊಡ್ಡ ನಷ್ಟ ಉಂಟು ಮಾಡಿದೆ. ಅವರ ಸೇವೆ ಮತ್ತು ತ್ಯಾಗಕ್ಕಾಗಿ ಸದಾ ಸ್ಮರಿಸುತ್ತೇವೆ ಎಂದು ಖಂಡು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಮದುವೆಯಾಗಿ 2 ತಿಂಗಳು: ಪತ್ನಿ ಎದುರೇ ಗುಂಡಿಕ್ಕಿದರು

ಲಖನೌ: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನ ಭಯೋತ್ಪಾದಕ ದಾಳಿಯಲ್ಲಿ ಮಡಿದ ಉತ್ತರ ಪ್ರದೇಶದ ಕಾನ್ಪುರದ ಉದ್ಯಮಿ ಶುಭಂ ದ್ವಿವೇದಿ(31) 2 ತಿಂಗಳ ಹಿಂದಷ್ಟೇ ವಿವಾಹವಾಗಿದ್ದರು. ಪತ್ನಿ ಮತ್ತು ಕುಟುಂಬದ 11 ಸದಸ್ಯರೊಂದಿಗೆ ಕಾಶ್ಮೀರಕ್ಕೆ ತೆರಳಿದ್ದರು. ದ್ವಿವೇದಿ ಅವರಿಗೆ ಕಾಶ್ಮೀರ ಪ್ರವಾಸವೇ ಬದುಕಿನ ಕೊನೆ ಪ್ರವಾಸವಾಗಿದೆ.

ಶುಭಂ ದ್ವಿವೇದಿ ಪತ್ನಿ ಐಶಾನ್ಯಾ(27) ಲಖನೌನವರು. ಫೆ.12ರಂದು ಝೂನ್ಸಿಯಲ್ಲಿ ಶುಭಂ ಮತ್ತು ಐಶಾನ್ಯಾ ವಿವಾಹ ನಡೆದಿತ್ತು. ಪತಿ ದ್ವಿವೇದಿಗೆ ತಮ್ಮ ಕಣ್ಣೆದುರೇ ಉಗ್ರರು ಗುಂಡಿಕ್ಕಿದ್ದರಿಂದ ಪತ್ನಿ ಆಘಾತಕ್ಕೀಡಾಗಿದ್ದಾರೆ. ದ್ವಿವೇದಿ ಕುಟುಂಬದವರೂ ಆಘಾತಗೊಂಡಿದ್ದಾರೆ. ಕುಟುಂಬ ಸದಸ್ಯರೆಲ್ಲಾ ನವ ವಧು-ವರ ಜತೆಗೂಡಿ ಮಂಗಳವಾರ ಪಹಲ್ಗಾಮ್‌ಗೆ ಭೇಟಿ ನೀಡಿ ಬೈಸರನ್ ಕಣಿವೆಗೆ ತೆರಳಿದ್ದರು. ಶುಭಂ, ಪತ್ನಿ ಐಶಾನ್ಯಾ ಮತ್ತು ಅತ್ತಿಗೆ ಕುದುರೆ ಸವಾರಿ ಮಾಡುತ್ತಾ ಮಧ್ಯಾಹ್ನ 1 ಗಂಟೆಯಲ್ಲಿ ಬೆಟ್ಟವನ್ನೇರುತ್ತಿದ್ದರು. ಆಗ ಉಗ್ರರು ಎದುರಾಗಿದ್ದಾರೆ. ಐಶಾನ್ಯಾ ಅವರನ್ನು 'ನೀವು ಯಾವ ಧರ್ಮದವರು? ಜತೆಗಿರುವವರು ಯಾರು?' ಎಂದು ಪ್ರಶ್ನಿಸಿದ್ದಾರೆ. ಐಶಾನ್ಯ ತಮ್ಮ ಹೆಸರು ಹೇಳಿ, 'ಅವರು ಶುಭಂ. ನನ್ನ ಪತಿ' ಎಂದು ಹೇಳುತ್ತಲೇ ಉಗ್ರರು ಆಕೆ ಕಣ್ಣೆದುರೇ ಶುಭಂಗೆ ಗುಂಡಿಕ್ಕಿದ್ದಾರೆ.

ಧರ್ಮ ಕೇಳಿ ತಿಳಿದ ಬಳಿಕವೇ ಉಗ್ರರು ಪುರುಷ ಪ್ರವಾಸಿಗರನ್ನು ಗುರಿಯಾಗಿಸಿ ಗುಂಡಿಕ್ಕಿದರು ಎಂದು ಐಶಾನ್ಯಾ ಕಣ್ಣೀರಾದರು.

ಕಾನ್ಪುರದ ಮಹಾರಾಜಪುರ ಪಟ್ಟಣದಲ್ಲಿ ಸಿಮೆಂಟ್ ವ್ಯಾಪಾರಿಯಾಗಿರುವ ಸಂಜಯ್ ದ್ವಿವೇದಿ (52), ಪತ್ನಿ ಸೀಮಾ (50), ಮಗಳು ಆರತಿ (27) ಮತ್ತು ಇತರೆ 6 ಜನರ ತಂಡ ಜಮ್ಮು-ಕಾಶ್ಮೀರ ಪ್ರವಾಸ ಕೈಗೊಂಡಿದ್ದರು. ಏ.23ರಂದು ಲಖನೌಗೆ ವಾಪಸ್ಸಾಗಬೇಕಿತ್ತು. ಅಷ್ಟರಲ್ಲೇ ಪುತ್ರ ಶುಭಂನನ್ನು ಕುಟುಂಬ ಕಳೆದುಕೊಂಡಿದೆ.

ಐಎನ್‌ಎಸ್ ವಿನಯ್ ಮದುವೆಯಾಗಿ 5 ದಿನ!

ಪಹಲ್ಗಾಮ್‌ನ ಭಯೋತ್ಪಾದಕ ದಾಳಿಯಲ್ಲಿ ಭಾರತೀಯ ನೌಕಾಪಡೆಯ ಲೆಫ್ಟಿನೆಂಟ್, ಹರಿಯಾಣದ ಕರ್ನಾಲ್‌ನ ವಿನಯ್ ನರ್ವಾಲ್(26) ದುರಂತ ಸಾವನ್ನಪ್ಪಿದ್ದಾರೆ.

ನರ್ವಾಲ್ 5 ದಿನಗಳ ಮೊದಲಷ್ಟೇ ವಿವಾಹವಾಗಿದ್ದು, ನವ ದಂಪತಿ 'ಮಧುಚಂದ್ರ'ಕ್ಕಾಗಿ ಕಾಶ್ಮೀರಕ್ಕೆ ತೆರಳಿದ್ದರು. ಎರಡು ವರ್ಷಗಳ ಮೊದಲಷ್ಟೇ ನೌಕಾಪಡೆಗೆ ಸೇರಿದ್ದ ವಿನಯ್, ಕೊಚ್ಚಿಯಲ್ಲಿ ಸೇವೆಗೆ ನಿಯೋಜನೆಗೊಂಡಿದ್ದರು. ಏ.16ರಂದು ವಿವಾಹವಾಗಿದ್ದರು. ವಿವಾಹ ಆರತಕ್ಷತೆ ಏ.19ರಂದು ಜರುಗಿತ್ತು. ನವ ದಂಪತಿಗಳು 'ಭುವಿಯ ಮೇಲಿನ ಸ್ವರ್ಗ' ಎಂದೇ ಹೆಸರಾಗಿರುವ ಪಹಲ್ಗಾಮ್‌ನಲ್ಲೇ ಹನಿಮೂನ್ ನಡೆಸಬೇಕೆಂದು ಬಹಳ ಮುಂಚಿತವಾಗಿಯೇ ಯೋಜಿಸಿ ತೆರಳಿದ್ದರು ಎನ್ನಲಾಗಿದೆ.

ಟ್ವೀಟೂ-ಖಾರಾ

ಕರ್ನಾಟಕ ಬಿಜೆಪಿ

ಸಮಾಜದಲ್ಲಿ ಭಯ ಸೃಷ್ಟಿಸುವ ಭಯೋತ್ಪಾದನೆ ಬದಲಾಗಿದೆ. ಹಿಂದೂಗಳನ್ನು ಟಾರ್ಗೆಟ್ ಮಾಡಿ ಹತ್ಯೆ ಮಾಡುವುದೇ ಭಯೋತ್ಪಾದನೆ ಆಗಿದೆ. ನಮ್ಮೊಳಗೆ ಇರುವ ಹಿಂದೂ ವಿರೋಧಿಗಳು, ಸನಾತನ ವಿರೋಧಿಗಳ ಕಾರಣದಿಂದಲೇ ಭಯೋತ್ಪಾದಕರ ಈ ಕೃತ್ಯಕ್ಕೆ ಪ್ರೇರಣೆ ಆಗಿದೆ. ಒಂದು ಧರ್ಮವನ್ನು ಕೊಂದು ಮತ್ತೊಂದು ಧರ್ಮ ಉಳಿಸಿಕೊಳ್ಳುವ ಸ್ಥಿತಿ ಆ ಧರ್ಮಕ್ಕೆ ಬಂದಿದೆ ಎಂದರೆ, ಆ ಧರ್ಮದ ಭಯೋತ್ಪಾದಕರಿಗೆ ಉಳಿಗಾಲವಿಲ್ಲ ಎಂದೇ ಅರ್ಥ.

ವಿರೇಶ್

ಈ ಧರ್ಮದ ವಿಚಾರ ನೋಡಿಕೊಳ್ಳೋಕೆ ಮಠ ಮಾನ್ಯಗಳು ದೇವಾಲಯಗಳು ಧರ್ಮಶಾಸ್ತ್ರಗಳು ಇವೆ. ನೀವು 11 ವರ್ಷದಿಂದ ಕೇಂದ್ರದಲ್ಲಿ ಕೂತು ದೇಶದ ಆರ್ಥಿಕತೆ ಭದ್ರತೆ ಐಕ್ಯತೆ ಗಳನ್ನ ಹಾಳು ಮಾಡ್ತಿದೀರಾ. ನಿಮಗೆ ನಾವು ಕೊಟ್ಟಿರೋ ಕೆಲಸವನ್ನು ಸರಿಯಾಗಿ ಮಾಡಿ.

ವಿಶ್ವವಾಣಿ ಕ್ಲಬ್ ಹೌಸ್
24.04.2025
ಗುರುವಾರದ ಅತಿಥಿ
ಶ್ರೀ ಸುಚೇಂದ್ರ ಪ್ರಸಾದ್

ವಿಷಯ
'ಸಮಾಗಮ'ದ ಸಂಭ್ರಮ
vishwavani.news

ಬೆಂಗಳೂರಿನಲ್ಲಿ ನೆಲೆಸಿದ್ದ ಆಂಧ್ರ ಮೂಲದ ಮಧುಸೂದನ್ ಸಾವು | ಕಾಶ್ಮೀರದಲ್ಲಿ ಶಾ, ಓಮರ್ ಜತೆ ಚರ್ಚೆ ನಡೆಸಿದ ಸಂತೋಷ್ ಲಾಡ್ | ಹಾವೇರಿ ಮೂಲದ ದಂಪತಿಗಳು ನಾಪತ್ತೆ

ಕಾಶ್ಮೀರ ದಾಳಿ: ಕರ್ನಾಟಕದಿಂದ ತೆರಳಿದ್ದ ಮೂವರು ಗುಂಡಿಗೆ ಬಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಡೀ ವಿಶ್ವವನ್ನೇ ಬೆಚ್ಚಿ ಬೀಳಿಸಿರುವ ಕಾಶ್ಮೀರದ ಪಹಲ್ಗಾಮ್ ಉಗ್ರರ ದಾಳಿಗೆ ವಿಶ್ವಾದ್ಯಂತ ವಿರೋಧ ವ್ಯಕ್ತವಾಗುತ್ತಿದ್ದು, ಈ ನಡುವೆ ಕರ್ನಾಟಕದಿಂದ ಪ್ರವಾಸಕ್ಕೆಂದು ತೆರಳಿದ್ದ 40ಕ್ಕೂ ಹೆಚ್ಚು ಕನ್ನಡಿಗರ ಪೈಕಿ ಇಬ್ಬರು ಅಸುನೀಗಿದ್ದರೆ, ಕರ್ನಾಟಕದಲ್ಲಿ ನೆಲೆಯೂರಿದ್ದ ಆಂಧ್ರಪ್ರದೇಶ ಮೂಲದ ಮಧುಸೂದನ್ ಅವರೂ ಉಗ್ರರ ಗುಂಡೇಟಿಗೆ ಕೊನೆಯುಸಿರು ಎಳೆದಿದ್ದಾರೆ.

ಈಗಾಗಲೇ ಮೃತಪಟ್ಟಿರುವ ಭರತ್ ಭೂಷಣ್, ಮಂಜುನಾಥ್ ರಾವ್ ಹಾಗೂ ಮಧುಸೂದನ್ ಅವರ ಮೃತದೇಹವನ್ನು ಬೆಂಗಳೂರಿಗೆ ತರಲು ಸಿದ್ಧತೆ ನಡೆಸಿಕೊಂಡಿದ್ದು, ಬುಧವಾರ ತಡರಾತ್ರಿ ಅಥವಾ ಗುರುವಾರ ಬೆಳಗ್ಗೆ ಬೆಂಗಳೂರು ತಲುಪಲಿದೆ. ಬೆಂಗಳೂರಿನಿಂದ ಮಧುಸೂದನ್ ಅವರ ಮೃತದೇಹವನ್ನು ಆಂಧ್ರಪ್ರದೇಶದ ನೆಲ್ಲೂರಿನ ಕಳುಹಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಇನ್ನು ಉಗ್ರರ ದಾಳಿಯಲ್ಲಿ ಮೃತಪಟ್ಟಿರುವ ಶಿವಮೊಗ್ಗದ ಮಂಜುನಾಥ್ ರಾವ್ ಪತ್ನಿ ಪಲ್ಲವಿ ಹಾಗೂ ಹಾವೇರಿ ಮೂಲದ ಭರತ್ ಭೂಷನ್ ಪತ್ನಿ ಸುಜಾತ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೂರವಾಣಿ ಮೂಲಕ ಮಾತನಾಡಿ ಧೈರ್ಯ ತುಂಬಿದ್ದಾರೆ. ಕಾಶ್ಮೀರದಲ್ಲಿ ಸಿಲುಕಿರುವ 40ಕ್ಕೂ ಅಧಿಕ ಕನ್ನಡಿಗರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ವಿಶೇಷ ವಿಮಾನದ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಪ್ರತಿಯೊಬ್ಬ ಕನ್ನಡಿಗನನ್ನು ಮರಳಿ ರಾಜ್ಯಕ್ಕೆ ಕ್ಷೇಮವಾಗಿ ಕರೆತರುವ ಸಂಕಲ್ಪದೊಂದಿಗೆ ನಮ್ಮ ಸರಕಾರ ಕಾರ್ಯಾಚರಣೆಗೆ ಇಳಿದಿದೆ. ಯಾರೊಬ್ಬರೂ ಆತಂಕಪಡುವ ಅಗತ್ಯವಿಲ್ಲ ಎಂದು ಭರವಸೆ ನೀಡಿದ್ದಾರೆ.

ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರೊಂದಿಗೂ ಲಾಡ್, ಸಂಸದ ತೇಜಸ್ವಿ ಸೂರ್ಯ ಅವರು ಮಾತುಕತೆ ನಡೆಸಿದರು.

ಅಮಿತ್ ಶಾ, ಒಮರ್ ಜತೆ ಚರ್ಚೆ

ಕನ್ನಡಿಗರ ರಕ್ಷಣೆಗೆ ಕಾಶ್ಮೀರಕ್ಕೆ ತೆರಳಿರುವ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಚರ್ಚಿಸಿದ್ದಾರೆ. ಈ ವೇಳೆ ಕನ್ನಡಿಗರನ್ನು ವಾಪಸು ಕರೆದುಕೊಂಡು ಹೋಗುವ ಬಗ್ಗೆ ಮಾಹಿತಿ ಯೋಜನೆಯ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಇದಕ್ಕೂ ಮೊದಲು ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರೊಂದಿಗೂ ಲಾಡ್ ಅವರು ಮಾತುಕತೆ ನಡೆಸಿದರು. ಸಂಸದ ತೇಜಸ್ವಿ ಸೂರ್ಯ ಅವರೂ ಕೂಡ ಕಾಶ್ಮೀರಕ್ಕೆ ತೆರಳಿದ್ದು, ಈ ಸಂದರ್ಭದಲ್ಲಿ ಸಚಿವರ ಜತೆಗಿದ್ದರು. ಇದೇ ವೇಳೆ, ದಾಳಿಯಲ್ಲಿ ಮೃತರಾದವರ ಪಾರ್ಥಿವ ಶರೀರವನ್ನು ಶ್ರೀನಗರದಲ್ಲಿ ಇರಿಸಲಾಗಿದ್ದು, ಈ ವೇಳೆ ಗೃಹ ಸಚಿವ ಅಮಿತ್ ಶಾ, ಸಚಿವ ಸಂತೋಷ್ ಲಾಡ್, ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಪ್ರವಾಸಿಗರ ಮೇಲೆ ನಡೆಸಿರುವ ದಾಳಿ ಅತ್ಯಂತ ಹೇಯ ಮತ್ತು ಹೇಡಿತನದ ಕೃತ್ಯವಾಗಿದೆ. ಇದಕ್ಕೆ ಕಾರಣರಾದ ಉಗ್ರಗಾಮಿಗಳನ್ನು ಯಾವ ಮುಲಾಜೂ ಇಲ್ಲದೆ ಸದೆಬಡಿಯುವ ಕೆಲಸ ಆಗಬೇಕು. ಉಗ್ರಗಾಮಿಗಳಿಗೆ ಯಾವುದೇ ಧರ್ಮ, ಜಾತಿ, ಸಂಸ್ಕೃತಿ ಏನೂ ಇಲ್ಲ. ಅಮಾಯಕರ ಹತ್ಯೆ ಅಮಾನುಷ ಕೃತ್ಯ. ಅವರನ್ನು ಹತ್ತಿಕ್ಕಬೇಕಷ್ಟೇ. ಇದಕ್ಕೆ ಪಾಕಿಸ್ತಾನದ ಬೆಂಬಲವಿದ್ದರೆ ಆ ದೇಶವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೂಲೆಗುಂಪು ಮಾಡಬೇಕು.

-ಎಂ.ಬಿ ಪಾಟೀಲ್, ಸಚಿವ

ಮಂಜುನಾಥ್ ಕುಟುಂಬದ ಸದಸ್ಯರಿಗೆ ಸಚಿವರ ಸಾಂತ್ವನ

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಶಾಸಕ ಎಸ್.ಎನ್. ಚನ್ನಬಸಪ್ಪ, ಬೇಳೂರು ಗೋಪಾಲಕೃಷ್ಣ, ಬಲ್ಕೀಶ್ ಬಾನು, ಮಾಜಿ ಸಚಿವ ಕಿಮ್ಮನೆ ರತ್ನಾಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಮೊದಲಾದ ರಾಜಕೀಯ ಮುಖಂಡರು, ಅಧಿಕಾರಿಗಳು ಮಂಜುನಾಥ್ ಅವರ ನಿವಾಸಕ್ಕೆ ತೆರಳಿ ಅವರ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಶಿವಮೊಗ್ಗ: ಭಯೋತ್ಪಾದಕರ ದಾಳಿಗೆ ಬಲಿಯಾದ ಶಿವಮೊಗ್ಗದ ಮಂಜುನಾಥ್ ಮನೆಯಲ್ಲಿ ನೀರವ ಮೌನ ಆವರಿಸಿದೆ.

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಶಾಸಕ ಎಸ್.ಎನ್. ಚನ್ನಬಸಪ್ಪ, ಬೇಳೂರು ಗೋಪಾಲಕೃಷ್ಣ, ಬಲ್ಕೀಶ್ ಬಾನು, ಮಾಜಿ ಸಚಿವ ಕಿಮ್ಮನೆ ರತ್ನಾಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಮೊದಲಾದ ರಾಜಕೀಯ ಮುಖಂಡರು, ಅಧಿಕಾರಿಗಳು ಮಂಜುನಾಥ್ ಅವರ ನಿವಾಸಕ್ಕೆ ತೆರಳಿ ಅವರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಧು ಬಂಗಾರಪ್ಪ, ಮಂಜುನಾಥ್ ಅವರ ಪಾರ್ಥಿವ ಶರೀರ ಇಂದು ಬರಬಹುದು ಎಂಬ ನಿರೀಕ್ಷೆ ಇದೆ. ಇದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಜತೆ ಸಂಪರ್ಕದಲ್ಲಿರುವೆ. ಜಿಲ್ಲಾಧಿಕಾರಿ ಮತ್ತು ಜಿಲ್ಲಾ ರಕ್ಷಣಾಧಿಕಾರಿಗಳು ಸಂಪರ್ಕದಲ್ಲಿದ್ದಾರೆ ಎಂದರು.

ಭಯೋತ್ಪಾದಕರ ದಾಳಿಯಲ್ಲಿ ಮೂವರು ಕನ್ನಡಿಗರು ಬಲಿಯಾಗಿದ್ದು, ಅವರ ಮೃತ ದೇಹಗಳನ್ನು ತರಲು ಹಾಗೂ ಗಾಯಾಳುಗಳ ಚಿಕಿತ್ಸೆಗೆ, ಅಲ್ಲಿಗೆ ತೆರಳಿರುವ ಕನ್ನಡಿಗರ ರಕ್ಷಣೆಯಾಗಿ ಸಚಿವ ಸಂತೋಷ್ ಲಾಡ್ ಹಾಗೂ ಅಧಿಕಾರಿಗಳ ತಂಡವನ್ನು ಕಾಶ್ಮೀರಕ್ಕೆ ಸರಕಾರ ಕಳುಹಿಸಿದ್ದು, ಸಚಿವ ಸಂತೋಷ್ ಲಾಡ್ ಅವರೊಂದಿಗೆ ನಾನು ಸಂಪರ್ಕದಲ್ಲಿದ್ದೇನೆ ಎಂದರು.

ಜಮ್ಮು ಮತ್ತು ಕಾಶ್ಮೀರದ ಫಹಲ್ಗಾಮ್ ನಲ್ಲಿ ನಡೆದ ಭೀಕರ ಭಯೋತ್ಪಾದಕರ ದಾಳಿಯಲ್ಲಿ ನಮ್ಮ ಶಿವಮೊಗ್ಗದ ವಿಜಯನಗರ ನಿವಾಸಿ ಮಂಜುನಾಥ್ ಅವರು ಉಗ್ರರ ಗುಂಡೇಟಿಗೆ ಬಲಿಯಾದ ಸಂಗತಿ ಅತ್ಯಂತ ದುಃಖಕರವಾಗಿದೆ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸೂಚನೆಯ ಮೇರೆಗೆ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ಅಧಿಕಾರಿಗಳ ತಂಡ ಕಾಶ್ಮೀರಕ್ಕೆ ಪ್ರಯಾಣ ಬೆಳೆಸಿದ್ದು, ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ.

-ಮಧು ಬಂಗಾರಪ್ಪ, ಸಚಿವ

ಸಮಾಚಾರ ಸಣ್ಣದಲ್ಲ

ಪಹಲ್ಗಾಮ್ ಘಟನೆ ಆಘಾತವಾಗಿದೆ

ಉಡುಪಿ: ಪಹಲ್ಗಾಮ್ ದುರ್ಘಟನೆಯಿಂದ ಬಹಳ ಆಘಾತವಾಗಿದೆ. 'ದಿ ಕಾಶ್ಮೀರ್ ಫೈಲ್ಸ್' ಚಿತ್ರಕ್ಕೂ ಈ ಘಟನೆಗೂ ವ್ಯತ್ಯಾಸವಿಲ್ಲ ಎಂದು ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದ್ದಾರೆ. ಪಹಲ್ಗಾಮ್‌ನಲ್ಲಿ ಹಿಂದೂಗಳ ಮೇಲೆ ಉಗ್ರರು ದಾಳಿ ನಡೆಸಿದ ವಿಚಾರವಾಗಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಆ ಕಡೆ ಪಶ್ಚಿಮ ಬಂಗಾಳ, ಈ ಕಡೆ ಕಾಶ್ಮೀರದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ. ದಿ ಕಾಶ್ಮೀರ್ ಫೈಲ್ಸ್ ಚಿತ್ರಕ್ಕೆ ವ್ಯತಿರಿಕ್ತ ಇಲ್ಲದೇ ಈ ಘಟನೆ ನಡೆದಿದೆ. ಈ ಘಟನೆ ಬಹಳ ಆಘಾತಕಾರಿ, ಸರಕಾರ ಇದಕ್ಕೆ ಬಲವಾದ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಇಂತಹ ಘಟನೆ ದೇಶದಲ್ಲೆಲ್ಲೂ ಮರುಕಳಿಸಬಾರದು. ದೇಶದೊಳಗೆ ಸೂಕ್ತ ಭದ್ರತೆ ಕೈಗೊಳ್ಳುವಂತೆ ಕೇಂದ್ರ ಸರಕಾರವನ್ನು ಮನವಿ ಮಾಡುತ್ತೇನೆ ಎಂದು ಹೇಳಿದರು.

ಕೇಂದ್ರ ಗುಪ್ತಚರ ಇಲಾಖೆಯೇ ಕಾರಣ

ಕಲಬುರಗಿ: ಕೇಂದ್ರ ಗುಪ್ತಚರ ಇಲಾಖೆಯ ವೈಫಲ್ಯದಿಂದ ಇಂತಹ ದುರ್ಘಟನೆ ನಡೆದಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು. ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಹಿಂದೂಗಳನ್ನು ಧರ್ಮ ಕೇಳಿ ಹತ್ಯೆಗೈದ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿ, ಮಂಗಳವಾರ ನಡೆದ ಭೀಕರ ಉಗ್ರರ ಗುಂಡಿನ ದಾಳಿಯಲ್ಲಿ 26ಕ್ಕೂ ಹೆಚ್ಚಿನ ಜನ ಸಾವನ್ನಪ್ಪಿದ್ದು, ಕೇಂದ್ರ ಸರಕಾರದ ವೈಫಲ್ಯದಿಂದಲೇ ಘಟನೆ ಸಂಭವಿಸಿದೆ. ಮೋದಿ ನೇತೃತ್ವದ ಕೇಂದ್ರ ಸರಕಾರ ಕಳೆದ ಎರಡು ಮೂರು ವರ್ಷಗಳಿಂದ ಸೇನಾ ನೇಮಕಾತಿ ಮಾಡಿಕೊಳ್ಳುತ್ತಿಲ್ಲ ಎಂದು ಕಿಡಿಕಾರಿದರು.

ರಾಜ್ಯದಿಂದ ತೆರಳಿರುವ ಪ್ರವಾಸಿಗರನ್ನು ವಾಪಸು ಕರೆತರಲು ಕ್ರಮ | ಮೃತ ಕುಟುಂದವರೊಂದಿಗೆ ಮಾತನಾಡಿ, ಸಾಂತ್ವನ ಹೇಳಿದ ಸಿಎಂ

ಉಗ್ರರ ದಾಳಿಗೆ ರಾಜ್ಯದ ನಾಯಕರ ಖಂಡನೆ

ಕಣಿವೆ ನಾಡು ಕಾಶ್ಮೀರದಲ್ಲಿ ನಡೆದಿರುವ ಉಗ್ರ ದಾಳಿಯನ್ನು ರಾಷ್ಟ್ರಾದ್ಯಂತ ವಿರೋಧಿಸಲಾಗುತ್ತಿದ್ದು, ಕರ್ನಾಟಕದ ಹಲವು ನಾಯಕರು ಉಗ್ರರ ಕೃತ್ಯವನ್ನು ಖಂಡಿಸಿದ್ದಾರೆ. ಕರ್ನಾಟಕದಿಂದ ಪ್ರವಾಸಕ್ಕೆಂದು ತೆರಳಿ ಸಿಕ್ಕಿಹಾಕಿಕೊಂಡಿರುವವರನ್ನು ವಾಪಸು ಕರೆದುಕೊಂಡು ಬರುವ ಜತೆಜತೆಗೆ ಮೃತಪಟ್ಟವರ ಕುಟುಂಬಕ್ಕೆ 10ಲಕ್ಷ ಪರಿಹಾರವನ್ನು ರಾಜ್ಯ ಸರಕಾರ ಘೋಷಿಸಿದೆ. ಉಗ್ರರ ದಾಳಿಯಲ್ಲಿ ರಾಜಕೀಯ ಮಾಡುವುದಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರೂ, ಕಾಂಗ್ರೆಸ್ ಹಲವು ನಾಯಕರು ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿದ್ದಾರೆ. ಉಗ್ರರ ದಾಳಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರು ಖಂಡಿಸಿದ್ದು, ಬಿಜೆಪಿಯ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ವಿವಿಧ ಮಠಗಳ ಪೀಠಾಧಿಪತಿಗಳು ಖಂಡಿಸಿದ್ದಾರೆ.

ಉಗ್ರರ ದಾಳಿ; ಗುಪ್ತಚರ ಇಲಾಖೆಯ ವೈಫಲ್ಯ

ಬೆಂಗಳೂರು: ಕಾಶ್ಮೀರದಲ್ಲಿ ನಡೆದಿರುವ ಕಾಶ್ಮೀರದ ದಾಳಿ ನಡೆಸಿರುವ ಉಗ್ರರ ವಿರುದ್ಧ ಕಠಿಣ ಕ್ರಮಕ್ಕೈಗೊಳ್ಳಬೇಕು. ಆದರೆ ಈ ಇಡೀ ದಾಳಿಯ ಹಿಂದೆ ಕೇಂದ್ರ ಸರಕಾರದ ಗುಪ್ತಚರ ಇಲಾಖೆಯ ವೈಫಲ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಶ್ಮೀರದ ಪಹಲ್ಗಾಮ್ ನಡೆದಿರುವ ಉಗ್ರರ ದಾಳಿ ಪೂರ್ವಯೋಜಿತ ಸಂಚು. ಪ್ರಾಣಹತ್ಯೆ ಮಾಡಿರುವ ಈ ಘಟನೆ ಅತ್ಯಂತ ಖಂಡನೀಯ. ಘಟನೆಯಲ್ಲಿ ಸುಮಾರು 28 ಜನ ಮೃತಪಟ್ಟಿರುವ ಭೀಕರವಾದ ಉಗ್ರರ ದಾಳಿ ನಡೆಯುವ ಮಾಹಿತಿ ಮೊದಲೇ ತಿಳಿಯದಿರುವುದು ಕೇಂದ್ರದ ಗುಪ್ತಚರ ಇಲಾಖೆಯ ವೈಫಲ್ಯವಾಗಿದೆ. ಈ ಹಿಂದೆ ನಡೆದ ಪುಲ್ವಾಮಾ ಘಟನೆಯಲ್ಲಿ ಗುಪ್ತಚರ ಮಾಹಿತಿಯ ವೈಫಲ್ಯವಿದೆ ಎಂದರು.

ಮೃತರ ಕುಟುಂಬಗಳಿಗೆ ಪರಿಹಾರ ನೀಡುವ ಬಗ್ಗೆ ಸರಕಾರ, ಸಕಾರಾತ್ಮಕವಾಗಿ ಚಿಂತಿಸಿ 10 ಲಕ್ಷ ಪರಿಹಾರ ಘೋಷಿಸಿದೆ. ಉಗ್ರರ ದಾಳಿ ಪ್ರಕರಣದಲ್ಲಿ ಕೇಂದ್ರ ಗುಪ್ತಚರ ಇಲಾಖೆ ವಿಫಲವಾಗಿದೆ. ಭಯೋತ್ಪಾದಕರನ್ನು ನಿರ್ಮೂಲನೆಗೊಳಿಸುವ ಜತೆಗೆ ದೇಶದ ಜನರಿಗೆ ಭದ್ರತೆ ನೀಡುವ ಕಾರ್ಯವನ್ನು ಕೇಂದ್ರ ಸಮರ್ಥವಾಗಿ ನಿರ್ವಹಿಸಬೇಕು ಎಂದು ಅಭಿಪ್ರಾಯಪಟ್ಟರು.

ವಾಪಸು ಕರೆತರಲು ಕ್ರಮ

ಕರ್ನಾಟಕದ ಪ್ರವಾಸಿಗರಲ್ಲಿ ಮಂಜುನಾಥ್ ಹಾಗೂ ಭರತ್ ಭೂಷಣ್ ಎಂಬುವರು ಮೃತರಾಗಿರುವ ಬಗ್ಗೆ ಮಾಹಿತಿ ನೀಡಿದರು. ಕನ್ನಡಿಗರ ರಕ್ಷಣೆ ಹಾಗೂ ಇನ್ನಿತರ ವ್ಯವಸ್ಥೆಗಳಿಗಾಗಿ ಅಧಿಕಾರಿಗಳ ತಂಡವನ್ನು ಕಾಶ್ಮೀರಕ್ಕೆ ರವಾನಿಸಲಾಗಿದೆ. ಅಲ್ಲದೇ, ಕಾಶ್ಮೀರಕ್ಕೆ ತೆರಳಿರುವ 40 ಕ್ಕೂ ಅಧಿಕ ಕನ್ನಡಿಗರನ್ನು ವಿಶೇಷ ವಿಮಾನ ವ್ಯವಸ್ಥೆ ಮಾಡಿ ಸುರಕ್ಷಿತವಾಗಿ ಕರೆತರಲು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನೂ ಕಾಶ್ಮೀರಕ್ಕೆ ಕಳಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉಗ್ರರ ದಾಳಿಯಿಂದ ವಿಶ್ವಕ್ಕೆ ಆಘಾತ: ಡಿಸಿಎಂ

ಬೆಂಗಳೂರು: ಕಾಶ್ಮೀರದಲ್ಲಿನ ಉಗ್ರರ ದಾಳಿ ಇಡೀ ಪ್ರಪಂಚಕ್ಕೆ ದೊಡ್ಡ ಆಘಾತ. ಈ ಭಯೋತ್ಪಾದಕ ದಾಳಿಯನ್ನು ನಾವು ಖಂಡಿಸುತ್ತೇವೆ. ಈ ಉಗ್ರರು ಹಾಗೂ ಭಯೋತ್ಪಾದಕ ಸಂಘಟನೆಗಳನ್ನು ಸದೆಬಡಿಯಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಕೇಂದ್ರ ಸರಕಾರ ಈ ವಿಚಾರದಲ್ಲಿ ಜಾಗೃತವಾಗಿ ಕೆಲಸ ಮಾಡಬೇಕಿದೆ. ವಿಚಾರ ತಿಳಿದ ಕೂಡಲೇ ರಾಜ್ಯ ಸರಕಾರದ ಪರವಾಗಿ ಸಚಿವ ಸಂತೋಷ ಲಾಡ್ ನೇತೃತ್ವದಲ್ಲಿ ತಂಡವನ್ನು ಮುಖ್ಯಮಂತ್ರಿಗಳು ಕಳುಹಿಸಿದ್ದಾರೆ. ಧರ್ಮದ ಹೆಸರಿನಲ್ಲಿ ಭಯೋತ್ಪಾದಕ ದಾಳಿ ನಡೆದಿರುವುದು ನಿಜಕ್ಕೂ ಕೆಟ್ಟ ಬೆಳವಣಿಗೆ. ಕಾಂಗ್ರೆಸ್ ಇದನ್ನು ಖಂಡಿಸುತ್ತದೆ. ಈ ವಿಷಯದಲ್ಲಿ ಕೇಂದ್ರ ಸರಕಾರದ ಪರ ನಿಲ್ಲುವುದಾಗಿ ತಿಳಿಸಿದೆ.

ಕೇಂದ್ರ ಸರಕಾರ ಈ ಭಯೋತ್ಪಾದಕರನ್ನು ಸದೆಬಡಿಯಬೇಕು. ಇಂತಹ ಭಯೋತ್ಪಾದಕ ಸಂಘಟನೆಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಇಂತಹ ಸಂಘಟನೆಗಳು ಯಾವುದೇ ದೇಶಕ್ಕೆ ಸಂಬಂಧಿಸಿದರೂ ಇವುಗಳನ್ನು ಬುಡಸಮೇತ ಕಿತ್ತೊಗೆಯಬೇಕು. ಕಾಶ್ಮೀರದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕು ಎಂದು ಹೇಳಿದರು.

ಈ ಘಟನೆ ವಿದೇಶಾಂಗ ನೀತಿಯಿಂದ ಪ್ರವಾಸಿಗರು ಹಾಗೂ ದೇಶದ ಜನರ ಮೇಲೆ ಪ್ರಭಾವ ಬೀರುವುದರಿಂದ ಕೇಂದ್ರ ಸರಕಾರ ಈ ವಿಚಾರವಾಗಿ ಸರ್ವಪಕ್ಷ ಸಭೆ ಕರೆಯಬೇಕು. ದಾಳಿಯಲ್ಲಿ ಮೃತಪಟ್ಟ ಕುಟುಂಬದವರೊಂದಿಗೆ ಚರ್ಚಿಸಿದ್ದೇನೆ. ಶಿವಮೊಗ್ಗ ಜಿಲ್ಲಾ ಸಚಿವರು ಹಾಗೂ ಪೊಲೀಸ್ ಅಧಿಕಾರಿಗಳ ಜತೆ ಮಾತನಾಡಿದ್ದು, ಮೃತರ ಕುಟುಂಬದವರನ್ನು ಭೇಟಿ ಮಾಡುವಂತೆ ತಿಳಿಸಿದ್ದೇನೆ ಎಂದರು.

ಧರ್ಮದ ಆಧಾರದ ಮೇಲೆ ಹತ್ಯೆ ಮಾಡಿರುವ ದಾಳಿಯನ್ನು ಇದೇ ಮೊದಲ ಬಾರಿಗೆ ನೋಡಿದ್ದೇನೆ. ನಮ್ಮ ಸಮಾಜ ಎತ್ತ ಸಾಗುತ್ತಿದೆ ಎಂದು ಆಘಾತವಾಗಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಈ ದುಃಖವನ್ನು ಭರಿಸುವ ಶಕ್ತಿ ಅವರ ಕುಟುಂಬದವರಿಗೆ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಈ ವಿಚಾರದಲ್ಲಿ ನಾವು ರಾಜಕೀಯ ಮಾಡುವುದಿಲ್ಲ. ಕೇಂದ್ರ ಸರಕಾರ ಸರ್ವಪಕ್ಷ ಸಭೆ ಕರೆದು ಈ ವಿಚಾರವನ್ನು ಚರ್ಚಿಸಬೇಕು.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ರಾಜ್ಯದಲ್ಲಿವೆ ಸ್ಲೀಪರ್ ಸೆಲ್:ಆರ್.ಅಶೋಕ

ಬೆಂಗಳೂರು: ರಾಜ್ಯದಲ್ಲಿರುವ ಸ್ಲೀಪರ್ ಸೆಲ್‌ಗಳನ್ನುಪತ್ತೆ ಹಚ್ಚಿ ಕಾನೂನು ಸುವ್ಯವಸ್ಥೆ ಕಾಪಾಡಬೇಕಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ರಾಜ್ಯ ಸರಕಾರವನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರಕಾರ ಕಾನೂನು ಸುವ್ಯವಸ್ಥೆ ಕಾಪಾಡಬೇಕಿದೆ. ಸ್ಲೀಪರ್ ಸೆಲ್‌ಗಳನ್ನು ಪತ್ತೆ ಮಾಡಬೇಕು. . ಅಂಥವರನ್ನು ಪೊಲೀಸರು ಕೂಡಲೇ ವಶಕ್ಕೆ ಪಡೆಯಬೇಕು ಎಂದು ಆಗ್ರಹಿಸಿದರು.

ಜಮ್ಮು-ಕಾಶ್ಮೀರದಲ್ಲಿ ಉಗ್ರರ ದಾಳಿ, ಕೇಂದ್ರ ಸರಕಾರ ಪ್ರತ್ಯುತ್ತರ ನೀಡಲಿದೆ. ಪ್ರಧಾನಿ ನರೇಂದ್ರ ಮೋದಿ ಜಮ್ಮು- ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು ಮಾಡಿ, ಅಭಿವೃದ್ಧಿಗೆ ದಾರಿ ಮಾಡಿದ್ದರು. ನಾನು ಕೂಡ ಎರಡು ವರ್ಷಗಳ ಹಿಂದೆ ಅಲ್ಲಿಗೆ ಭೇಟಿ ನೀಡಿದ್ದೆ. ವ್ಯಾಪಾರ ವಹಿವಾಟು ಉತ್ತಮವಾಗಿ ನಡೆಯುತ್ತಿತ್ತು. ಬಹುಸಂಖ್ಯಾತ ಮುಸ್ಲಿಮರು ಪ್ರತಿ ದಿನ 10,000 ಸಂಪಾದನೆ ಮಾಡುತ್ತಿದ್ದೇವೆ ಎಂದು ಖುಷಿಯಿಂದ ಹೇಳಿಕೊಂಡಿದ್ದರು. ಆದರೆ ಈಗ ಪಾಕಿಸ್ತಾನ ಪ್ರೇರಿತವಾದ ಭಯೋತ್ಪಾದಕ ಸಂಘಟನೆ ಈ ಕೆಲಸ ಮಾಡಿರುವುದು ಖಂಡನೀಯ ಎಂದರು.

ಭಯೋತ್ಪಾದಕರು ಮುಸ್ಲಿಮರನ್ನು ಮುಟ್ಟದೆ ಹಿಂದೂಗಳನ್ನೇ ಹುಡುಕಿ ಗುರಿ ಮಾಡಿ ಕೊಂದಿದ್ದಾರೆ. ಸ್ಥಳೀಯರು ಸ್ಲಿಪರ್ ಸೆಲ್‌ಗಳಾಗಿ ಇದಕ್ಕೆ ಬೆಂಬಲ ನೀಡಿದ್ದಾರೆ. ಕರ್ನಾಟಕ, ಬೆಂಗಳೂರಿನಲ್ಲೂ ಸ್ಲೀಪರ್ ಸೆಲ್‌ಗಳಿವೆ. ಉಗ್ರರು ಬಂದಾಗ ಅವರಿಗೆ ವೋಟರ್ ಐಡಿ ಮಾಡಿಕೊಡುವ ದಂಧೆಯೂ ಇದೆ. ಇದು ಹಿಂದೂಗಳಿಗೆ ಎಚ್ಚರಿಕೆಯ ಗಂಟೆ. ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು.

ಆರ್.ಅಶೋಕ, ಪ್ರತಿಪಕ್ಷ ನಾಯಕ

- ರಾಜ್ಯ ಸರಕಾರ ಕಾನೂನು ಸುವ್ಯವಸ್ಥೆ ಕಾಪಾಡಬೇಕಿದೆ
- ಜಮ್ಮು-ಕಾಶ್ಮೀರದಲ್ಲಿ ಉಗ್ರರ ದಾಳಿಗೆ ಕೇಂದ್ರ ಸರಕಾರ ಪ್ರತ್ಯುತ್ತರ ನೀಡಲಿದೆ
- ಪಾಕಿಸ್ತಾನ ಪ್ರೇರಿತವಾದ ಭಯೋತ್ಪಾದಕ ಸಂಘಟನೆ ಈ ಕೆಲಸ ಮಾಡಿರುವುದು ಖಂಡನೀಯ

ಚಾಣಕ್ಯ ಗೃಹ ಸಚಿವರು ಎಂದು ಕರೆಯಲ್ಪಡುವವರು ಸರಕಾರಗಳನ್ನು ಉರುಳಿಸುವಲ್ಲಿ, ಪಕ್ಷಗಳನ್ನು ಒಡೆಯುವಲ್ಲಿ ಮತ್ತು ಚುನಾವಣೆಗಳಲ್ಲಿ ಅಕ್ರಮ ನಡೆಸುವಲ್ಲಿ ನಿರತರಾಗಿರುವಾಗ ಇದು ನಡೆಯಲು ಸಾಧ್ಯವಾಗಿದೆ. ಗುಪ್ತಚರ ಎಲ್ಲಿದೆ? ಕಣ್ಗಾವಲು ಎಲ್ಲಿದೆ? ಜೇಮ್ಸ್ ಬಾಂಡ್ ದೋವಲ್ ಎಲ್ಲಿದ್ದಾರೆ? ಈ ಸರಕಾರ ಘಟನೆಯನ್ನು ಕಡಿಮೆ ಮಾಡುತ್ತದೆ, ಸಾವುನೋವುಗಳನ್ನು ಕಡಿಮೆ ವರದಿ ಮಾಡುತ್ತದೆ, ಖಂಡಿತವಾಗಿಯೂ ಈ ದುರಂತವನ್ನು ಕೋಮು ಉದ್ವಿಗ್ನತೆಯನ್ನು ಹುಟ್ಟುಹಾಕಲು ಅಥವಾ ಕಾಂಗ್ರೆಸ್ ಅನ್ನು ಎಂದಿನಂತೆ ದೂಷಿಸಲು ಬಳಸುತ್ತದೆ.

- ಪ್ರಿಯಾಂಕ್ ಖರ್ಗೆ, ಸಚಿವ

ಕೇಂದ್ರ ಸರಕಾರ 370 ವಿಧಿ ರದ್ದತಿ ಮತ್ತು ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆಯ ಬಳಿಕ ಭಯೋತ್ಪಾದಕರ ಸದ್ದಡಗಿಸಿದ್ದು, ಪ್ರವಾಸಕ್ಕೆ ಮುಕ್ತವಾಗಿದೆ, ಜನರು ನಿರ್ಭೀತಿಯಿಂದ ಕಾಶ್ಮೀರಕ್ಕೆ ಬನ್ನಿ ಎಂದು ಪದೇ ಪದೇ ಪ್ರಚಾರ ಮಾಡಿದ್ದರಿಂದ ಪ್ರವಾಸಿಗರು ಕೇಂದ್ರದ ಮಾತು ನಂಬಿ ಆಗಮಿಸುತ್ತಿದ್ದರು. ಇವರಿಗೆ ಸೂಕ್ತ ಭದ್ರತೆ ನೀಡಬೇಕಾದ್ದು, ಕೇಂದ್ರ ಹಾಗೂ ಕಾಶ್ಮೀರ ರಾಜ್ಯ ಸರಕಾರದ ಜವಾಬ್ದಾರಿಯಾಗಿತ್ತು. ಆದರೆ ಕೇಂದ್ರ ಗೃಹ ಸಚಿವಾಲಯ ಈ ಜವಾಬ್ದಾರಿ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ. ಹೀಗಾಗಿ ನೈತಿಕ ಹೊಣೆ ಹೊತ್ತು ಅಮಿತ್ ಶಾ ರಾಜೀನಾಮೆ ನೀಡಬೇಕು.

-ಈಶ್ವರ್ ಖಂಡ್ರೆ, ಸಚಿವ

ಕಾಶ್ಮೀರದಲ್ಲಿ ನಡೆದಿರುವ ಕೇವಲ ಉಗ್ರರ ದಾಳಿಯಲ್ಲ. ಅದು ಮನುಷ್ಯತ್ವದ ವಿರುದ್ಧದ ದಾಳಿ, ಈ ದೇಶದ ಸಾರ್ವಭೌಮತ್ವದ ವಿರುದ್ಧದ ದಾಳಿ, ಈ ನೆಲದ ಅಸ್ಮಿತೆಯ ಮೇಲಿನ ದಾಳಿ. ಈ ದಾಳಿಯ ಹಿಂದಿನ ಶಕ್ತಿಗಳನ್ನು ಭಾರತೀಯರಾದ ನಾವು ಒಗ್ಗಟ್ಟಾಗಿ ಹುಟ್ಟಡಗಿಸಲೇಬೇಕಾಗಿದೆ. ಸಂವಿಧಾನದ 370ನೇ ವಿಧಿ ರದ್ದಾದ ಬಳಿಕ ಜಮ್ಮು-ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆಯಾಗಿದೆ ಎಂಬ ಸುಳ್ಳು ನರೇಟಿವ್ ಕೇಂದ್ರ ಸೃಷ್ಟಿಸಿತ್ತು. ಆದರೆ ಕಣಿವೆ ರಾಜ್ಯದಲ್ಲಿ ಉಗ್ರ ಕೃತ್ಯಗಳು ಅವ್ಯಾಹತವಾಗಿ ನಡೆಯುತ್ತಲಿತ್ತು ಎನ್ನುವುದಕ್ಕೆ ಈ ದಾಳಿ ಸಾಕ್ಷಿ. ದೇಶದ ಭದ್ರತೆಯ ವಿಚಾರದಲ್ಲಿ ಕೇಂದ್ರ ಸರಕಾರ ಇನ್ನಾದರೂ ಸುಳ್ಳು ಹೇಳುವ ಚಾಳಿ ಬಿಡಬೇಕಿದೆ.

- ದಿನೇಶ್ ಗುಂಡೂರಾವ್, ಸಚಿವ

ಪ್ರವಾಸಿಗರ ಮೇಲೆ ಭಯೋತ್ಪಾದಕರು ನಡೆಸಿದ ಪೈಶಾಚಿಕ ಕೃತ್ಯವಾಗಿದೆ. ಜಮ್ಮು ಕಾಶ್ಮೀರದಲ್ಲಿ ಉಗ್ರರು ನಡೆಸಿದ ಗುಂಡಿನ ದಾಳಿಗೆ ಪ್ರತೀಕಾರವಾಗಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ ಉಗ್ರರನ್ನು ಸದೆಬಡಿಲಿದ್ದಾರೆ. ಹಿಂದೂಗಳ ಮಾರಣಹೋಮದ ವಿಚಾರ ತಿಳಿದಾಕ್ಷಣ ಅಮಿತ್ ಶಾ, ಅಧಿಕಾರಿಗಳನ್ನು ಕಳಿಸಿದ್ದಾರೆ. ನಾವೆಲ್ಲರೂ ಹಿಂದೂಗಳು ಮೊದಲು. ಆ ಜಾತಿ, ಈ ಜಾತಿ ಅಲ್ಲ ಬದಲಿಗೆ 28 ಜನರ ಹತ್ಯೆಗೆ ಪಾಕಿಸ್ತಾನ ಬೆಲೆ ತೆರಲೇಬೇಕು ಈ ನಿಟ್ಟಿನಲ್ಲಿ ಉಗ್ರರ ವಿರುದ್ಧ ಪ್ರಧಾನಿಯವರು ದಿಟ್ಟ ಕ್ರಮ ಕೈಗೊಳ್ಳಲಿದ್ದಾರೆ.

ಬಿ. ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ಕೃತ್ಯ ಅತ್ಯಂತ ಹೇಯ ಹಾಗೂ ಅಮಾನವೀಯ . ಈ ದಾಳಿಯಲ್ಲಿ ಇಬ್ಬರು ಕನ್ನಡಿಗರು ಸೇರಿದಂತೆ 26 ಮಂದಿ ಬಲಿಯಾಗಿರುವುದು ನೋವು ತಂದಿದೆ. ಪಹಲ್ಗಾಮ್ ಉಗ್ರರ ದಾಳಿ ಈ ಹಿಂದಿನ ಶಕ್ತಿಗಳನ್ನು ಭಾರತೀಯರೆಲ್ಲರೂ ಒಗ್ಗಟ್ಟಾಗಿ ಎದುರಿಸಬೇಕಾಗಿದೆ. ಜಮ್ಮು- ಕಾಶ್ಮೀರ ದಲ್ಲಿ 370 ವಿಧಿ ರದ್ದು ಗೊಂಡ ನಂತರ ಶಾಂತಿ ನೆಲೆಸಿದೆ ಎಂದು ಹೇಳಿದ್ದ ಕೇಂದ್ರ ಸರಕಾರ ದೇಶದ ಭದ್ರತೆಯ ವಿಚಾರದಲ್ಲಿ ಬಿಗಿ ಕ್ರಮ ಕೈಗೊಳ್ಳಬೇಕಿದೆ. ಇಂತಹ ಭಯೋತ್ಪಾದಕ ಸಂಘಟನೆಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು.

-ಜಮೀರ್ ಅಹ್ಮದ್, ಸಚಿವ



ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ನಡೆಸಿದ ಪೈಶಾಚಿಕ ಕೃತ್ಯ. ಭಯೋತ್ಪಾದಕರ ದಾಳಿಯಲ್ಲಿ ಕರ್ನಾಟಕದ ಮೂವರು ಸಾವನ್ನಪ್ಪಿರುವುದು ಅತ್ಯಂತ ದುರದೃಷ್ಟಕರ. ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿರುವ ಸ್ವಾಮೀಜಿಯವರು ಈ ಸಂದರ್ಭದಲ್ಲಿ ಸಂತ್ರಸ್ತರ ಕುಟುಂಬದವರೊಂದಿಗೆ ಶ್ರೀಮಠ ಇರಲಿದೆ. ಭಯೋತ್ಪಾದನೆಗೆ ಜಾತಿ ಮತ್ತು ಧರ್ಮದ ಬಣ್ಣ ಕಟ್ಟುವುದು ಬೇಡ. ಇದರಲ್ಲಿ ಯಾರೇ ಭಾಗಿಯಾಗಿದ್ದರೂ ಅದನ್ನು ನಾವು ಖಂಡಿಸಲೇಬೇಕು. ಪಕ್ಷ ರಾಜಕಾರಣ ಮರೆತು ನಾವೆಲ್ಲರೂ ಒಗ್ಗಟ್ಟಾಗಿರಬೇಕಾದ ಸಮಯ.

- ಶ್ರೀ. ಡಾ ನಿರ್ಮಲಾನಂದನಾಥ ಸ್ವಾಮೀಜಿ.

ಭಯೋತ್ಪಾದನೆಯ ಉದ್ದೇಶ ಯುದ್ಧ ಅಲ್ಲ, ಸಮಾಜದಲ್ಲಿ ಭಯವನ್ನು ಉಂಟುಮಾಡಿ ಅದರ ಶಕ್ತಿಗುಂದಿಸುವುದು. ಆತಂಕವನ್ನು ಹರಡಿ, ಸಮಾಜವನ್ನು ಒಡೆದು, ದೇಶದ ಆರ್ಥಿಕ ಪ್ರಗತಿಯನ್ನು ತಡೆದು ಎಲ್ಲಾ ಹಂತದಲ್ಲೂ ನಿರಂಕುಶತೆಯನ್ನು ನಿರ್ಮಿಸುವುದು. ಈ ದೇಶದ ಸ್ವಾಯತ್ತತೆಯನ್ನು ಕಾಪಾಡಿ ಅದನ್ನು ಪೋಷಿಸಬೇಕೆಂದರೆ, ಇಂತಹ ವಿಷಯಗಳನ್ನು ಅತ್ಯಂತ ಕಠಿಣವಾದ ಕ್ರಮಗಳ ಮೂಲಕ ನಿಭಾಯಿಸಿ ದೀರ್ಘಕಾಲಿಕವಾದ ಪರಿಹಾರವನ್ನು ಕಂಡುಕೊಳ್ಳಬೇಕು. ಶಿಕ್ಷಣ, ಆರ್ಥಿಕತೆ, ಸಂಪತ್ತು ಮತ್ತು ಸೌಖ್ಯ ಎಲ್ಲಾ ಹಂತಗಳಲ್ಲೂ ಸಮಾನ ಅವಕಾಶಗಳು ಸಿಗುವಂತಾದರೆ ಅವು ದೀರ್ಘಕಾಲಿಕ ಪರಿಹಾರವಾಗಬಹುದು.

-ಸದ್ಗುರು ಜಗ್ಗಿ ವಾಸುದೇವ್, ಈಶಾ ಫೌಂಡೇಶನ್, ಸಂಸ್ಥಾಪಕ

ಇಸ್ಲಾಂ ಹೆಸರಿನಲ್ಲಿ ಜಾಗತಿಕ ಭಯೋತ್ಪಾದನೆ ನಡೆಯುತ್ತಿದೆ. ಧರ್ಮ ಕೇಳಿ ಖಾತರಿಪಡಿಸಿಕೊಂಡು ಹಿಂದೂಗಳನ್ನು ಅಥವಾ ಇಸ್ಲಾಮೇತರರನ್ನು ಗುರಿಯಾಗಿಸಿಕೊಂಡು ಹತ್ಯೆ ಮಾಡಿರುವುದು ಖಂಡನೀಯ. ಇಸ್ಲಾಂ ಹೆಸರಿನಲ್ಲಿ ಜಾಗತಿಕ ಭಯೋತ್ಪಾದನೆ ನಡೆಯುತ್ತಿದ್ದು, ಯಾವ ಕಾರಣಕ್ಕೆ ನಡೆಯುತ್ತಿದೆ ಎಂಬುದಕ್ಕೆ ಮತ್ತಷ್ಟು ಸಾಕ್ಷಿಯ ಅವಶ್ಯಕತೆ ಇಲ್ಲ. ಸದರಿ ಭಯೋತ್ಪಾದಕರು ದಾಳಿಯ ಸಂದರ್ಭದಲ್ಲಿ ನಿಮ್ಮ ಭಾಷೆ ಯಾವುದು ಎಂದು ಕೇಳಲಿಲ್ಲ. ನಿಮ್ಮ ಜಾತಿ ಯಾವುದು ಎಂದು ಕೇಳಲಿಲ್ಲ. ನೀವು ತಮಿಳುನಾಡಿನಿಂದ ಬಂದಿದ್ದೀರಾ, ಕೇರಳದಿಂದ ಬಂದಿದ್ದೀರಾ ಅಥವಾ ಕರ್ನಾಟಕದಿಂದ ಬಂದಿದ್ದೀರಾ ಎಂದು ಪ್ರದೇಶ ಕೇಳಿಲ್ಲ.

ಸಿ.ಟಿ ರವಿ, ವಿಧಾನ ಪರಿಷತ್ತಿನ ಸದಸ್ಯ

ವಿಶ್ವವಾಣಿ

ಸಂಪಾದಕೀಯ

ಉಗ್ರರ ದಮನಕ್ಕೆ ದೇಶವೇ ಒಂದಾಗಲಿ

ಜಮ್ಮು-ಕಾಶ್ಮೀರವು ಪ್ರವಾಸಿಗರ ಪಾಲಿನ ಭೂಲೋಕದ ಸ್ವರ್ಗ. 90ರ ದಶಕದಲ್ಲಿ ಕಾಶ್ಮೀರಿ ಪಂಡಿತರನ್ನು ಅಲ್ಲಿಂದ ಬಲವಂತವಾಗಿ ಹೊರದಬ್ಬುವುದರೊಂದಿಗೆ ಆರಂಭವಾದ ಹಿಂಸಾಚಾರ ತಾರಕಕ್ಕೇರಿತ್ತು. ಕೆಲ ವರ್ಷಗಳ ಹಿಂದಿನವರೆಗೂ ಕಾಶ್ಮೀರಕ್ಕೆ ಪ್ರವಾಸಿಗರು ಹೋಗಲು ಭಯಪಡುವ ಪರಿಸ್ಥಿತಿ ಇತ್ತು. ಕಾಶ್ಮೀರ ರಾಜ್ಯದ ವಿಂಗಡನೆ ಮತ್ತು 370ನೇ ವಿಧಿ ರದ್ದಾದ ಬಳಿಕ, ಉಗ್ರರ ಸತತ ದಮನ ಕಾರ್ಯಾಚರಣೆಯೊಂದಿಗೆ ಅಲ್ಲಿನ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿತ್ತು. ಕಳೆದ ವರ್ಷ ಉಗ್ರರ ಬೆದರಿಕೆಯ

ನಡುವೆಯೇ ಅಲ್ಲಿನ ಜನತೆ ವಿಧಾನಸಭೆ ಚುನಾವಣೆಯಲ್ಲಿ ಭಾಗವಹಿಸಿ ಉಮರ್ ಅಬ್ದುಲ್ಲಾ ಸರಕಾರವನ್ನು ಮತ್ತೆ ಅಧಿಕಾರಕ್ಕೆ ತಂದಿದ್ದರು. ಇತ್ತೀಚೆಗೆ ಗಡಿ ಭಾಗದಲ್ಲಿ ಉಗ್ರರೊಂದಿಗಿನ ಚಕಮಕಿ ಹೊರತಾಗಿಯೂ ಸಾವಿರಾರು ಪ್ರವಾಸಿಗರು ಕಾಶ್ಮೀರಕ್ಕೆ ಭೇಟಿ ನೀಡುತ್ತಿದ್ದರು. ಕಾಶ್ಮೀರ ತನ್ನ ಗತ ವೈಭವಕ್ಕೆ ಮರಳುತ್ತಿದೆ ಎನ್ನುವಷ್ಟರಲ್ಲಿ ಪಾಕ್ ಬೆಂಬಲಿತ ಉಗ್ರರು ಮತ್ತೆ ಪೈಶಾಚಿಕ ಕೃತ್ಯ ಮೆರೆದಿದ್ದಾರೆ. ಬೇಸಿಗೆ ರಜೆ ಕಳೆಯಲೆಂದು ಬಂದ ಅಮಾಯಕ ಪ್ರವಾಸಿಗರ ಮೇಲೆ ಉಗ್ರರು ಎರಗಿದ್ದಾರೆ. ಹಿಂದೂ ಧರ್ಮದವರನ್ನೇ ಗುರಿಯಾಗಿಸಿಕೊಂಡು ಕುಟುಂಬದ ಸದಸ್ಯರ ಮುಂದೆಯೇ ಪುರುಷರ ಮೇಲೆ ದಾಳಿ ನಡೆಸಿದ್ದಾರೆ. ಕರ್ನಾಟಕದ ಮೂವರೂ ಸೇರಿದಂತೆ 28 ಮಂದಿ ಈ ದಾಳಿಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಪಾಕ್ ಪ್ರೇರಿತ ಟಿಆರ್‌ಎಫ್ ಉಗ್ರ ಸಂಘಟನೆ ಈ ದಾಳಿಯನ್ನು ತಾನೇ ನಡೆಸಿದ್ದಾಗಿ ಒಪ್ಪಿಕೊಂಡಿದೆ. ಲಷ್ಕರ್-ಎ-ತೊಯ್ಬಾದ ಅಂಗಸಂಸ್ಥೆ ಎಂದು ಕರೆಯಲ್ಪಡುವ ಟಿಆರ್‌ಎಫ್, ಜಮ್ಮು-ಕಾಶ್ಮೀರದಲ್ಲಿ 370ನೇ ವಿಧಿ ರದ್ದಾದ ಬಳಿಕ ಅಸ್ತಿತ್ವಕ್ಕೆ ಬಂದ ಸಂಘಟನೆಯಾಗಿದೆ. ಅನ್ಯ ರಾಷ್ಟ್ರಗಳ ಬೆಂಬಲವಿಲ್ಲದೆ ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲು ಸಾಧ್ಯವಿಲ್ಲ. ಈ ದಾಳಿಯ ಹಿಂದಿನ ಶಕ್ತಿ ಪಾಕಿಸ್ತಾನ ಎನ್ನುವುದು ಇಡೀ ವಿಶ್ವಕ್ಕೆ ಗೊತ್ತು. ವಿಶ್ವದ ಬಹುತೇಕ ದೇಶಗಳು ಈ ದಾಳಿಯನ್ನು ಖಂಡಿಸಿ ಭಾರತಕ್ಕೆ ಬೆಂಬಲ ಘೋಷಿಸಿವೆ. ಇದೀಗ ಅಂತಾರಾಷ್ಟ್ರೀಯ ಸಮುದಾಯ ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರ ಎಂದು ಘೋಷಿಸಿ ಎಲ್ಲ ನೆರವನ್ನು ತಡೆ ಹಿಡಿಯುವಂತೆ ಭಾರತ ಒತ್ತಡ ಹೇರಬೇಕು. ಕಾಶ್ಮೀರ ವಿಚಾರದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಒಂದಾಗಬೇಕು. ಎಲ್‌ಒಸಿಯಿಂದ 200 ಕಿ.ಮೀ. ದೂರವಿರುವ ಪಹಲ್ಗಾಮ್‌ಗೆ ಉಗ್ರರು ಬರಬೇಕೆಂದರೆ ಸ್ಥಳೀಯರಲ್ಲಿ ಕೆಲವರು ಸಹಕಾರ ನೀಡಿರಲೇ ಬೇಕು. ಇವರು ಯಾರೇ ಆಗಿರಲಿ ಹೆಡೆಮುರಿ ಕಟ್ಟಿ ಕಠಿಣ ಶಿಕ್ಷೆಗೆ ಗುರಿ ಪಡಿಸಬೇಕು. ಉಗ್ರರ ದುಷ್ಟಕೂಟವನ್ನು ದಮನ ಮಾಡುವಲ್ಲಿ ಇಡೀ ದೇಶ ಒಂದಾಗಬೇಕು.

ಸೊಂಪಾದಕೀಯ

ಅಂಗೈ ಹುಣ್ಣಿಗೆ ಕನ್ನಡಿಗ ಬೇಕೆ?

ಬೆಂಗಳೂರಿನಲ್ಲಿ ಇತ್ತೀಚೆಗೆ ಕನ್ನಡಿಗರು ಮತ್ತು ಪರಭಾಷಿಕರ ನಡುವಿನ ಸಂಘರ್ಷ ಎಲ್ಲೆ ಮೀರಿದೆ. ಆದರೆ ವಿಪರ್ಯಾಸ ಅಂದ್ರೆ, ಯಾವುದೇ ಕಾರಣಕ್ಕೆ ಕನ್ನಡಿಗರು ಮತ್ತು ಪರಭಾಷಿಕರ ನಡುವೆ ಜಗಳ ನಡೆದರೂ ಅದಕ್ಕೆ ಭಾಷೆಯ ಬಣ್ಣ ಕಟ್ಟಲಾಗುತ್ತಿದೆ. ಕನ್ನಡಿಗರಿಗೆ ಹೇಳಿ ಕೇಳಿ ಗೊತ್ತಿರೋದು ಎರಡೇ ಬಣ್ಣ, ಕೆಂಪು ಮತ್ತು ಹಳದಿ. ಆದರೆ ಪರಭಾಷಿಕರು ನಮ್ಮವರ ಭಾಷಾಪ್ರೇಮವನ್ನೇ ಅಸ್ತ್ರವಾಗಿಸಿಕೊಂಡು ಕನ್ನಡಿಗರ ವಿರುದ್ಧ ಎಲ್ಲರನ್ನೂ ಎತ್ತಿ ಕಟ್ಟುತ್ತಿದ್ದಾರೆ. ಆದರೆ ರಾಜ್ಯೋತ್ಸವದಂದು ಕನ್ನಡದ ಬಾವುಟ ಮಾತ್ರ ಎತ್ತಿ ಕಟ್ಟುವುದು ಗೊತ್ತಿರುವ ಕನ್ನಡಿಗ ಈ ಪರಭಾಷಿಕರ ದಬ್ಬಾಳಿಕೆಯಿಂದ ನರಳುತ್ತಿದ್ದಾನೆ. ಮೊನ್ನೆ ವಿಂಗ್ ಕಮಾಂಡರ್ ಒಬ್ಬ ಕನ್ನಡಿಗನೊಬ್ಬನ ಜೊತೆ ಕಿರಿಕ್ ಮಾಡಿಕೊಂಡು ಅವನ ಮೇಲೆ ತಾನೇ ಕೈ ಮಾಡಿ, ನಂತರ ಅವನಿಂದ ಒದೆ ತಿಂದು ಕೈ ಕೈ ಹಿಸುಕಿಕೊಂಡು ಅವನ ಮೇಲೆಯೇ ಗೂಬೆ ಕೂರಿಸುವ ಪ್ರಯತ್ನ ಮಾಡಿದ್ದಾನೆ. ಕನ್ನಡಿಗನೊಬ್ಬ ನನ್ನ ಮೇಲೆ ನಾನು ಪರಭಾಷಿಕ ಎಂಬ ಕಾರಣಕ್ಕೆ ಹಲ್ಲೆ ಮಾಡಿದ್ದಾನೆ ಅಂತ ವರಾತ ತೆಗೆದಿದ್ದಾನೆ. ಈ ವಿಂಗ್ ಕಮಾಂಡರ್ ಹೀಗೆ ತನ್ನದೇ ತಪ್ಪಿದ್ದ ಪ್ರಕರಣಕ್ಕೆ ವಿಂಗ್ ಅಂದ್ರೆ ರೆಕ್ಕೆ ಪುಕ್ಕ ಕಟ್ಟಿ ಕಾಗಕ್ಕ ಗುಬ್ಬಕ್ಕನ ಸ್ಟೋರಿ ಹೇಳಿದರೆ ಎಲ್ಲರೂ ಅದನ್ನು ಕೇಳಿ ಹೌದು, ಹೌದು ಅಂತಿದ್ದರು. ಆದರೆ ಈಗ ಸಿಸಿಟಿವಿಯಿಂದ ಈ ವಿಂಗ್ ಕಮಾಂಡರ್‌ನ ಕಳ್ಳಾಟ ಬಯಲಾಗಿದೆ. ಕನ್ನಡಿಗನ ಮೇಲೆ ಧಿಮಾಕಿನಿಂದ ಕೈ ಎತ್ತಿ ಹೊಡೆದಿದ್ದನ್ನು ಮುಚ್ಚಿಟ್ಟು, ತನ್ನ ಮೇಲೆ ಹಲ್ಲೆ ಆಗಿದ್ದನ್ನೇ ವೈಭವೀಕರಿಸಿ ಅದಕ್ಕೆ ಕನ್ನಡ ಭಾಷೆ ಕಾರಣ ಎಂದಿದ್ದು ಈಗ ಬೆಂಗಳೂರಿನಲ್ಲಿ ಬ್ಲ್ಯಾಸ್ಟ್ ಆಗದ ಶಿವಕಾಶಿ ಪಟಾಕಿ ಥರ ಠುಸ್ ಆಗಿದೆ. ಈಗ ಸಿಸಿಟಿವಿ ನೋಡಿದ ಮೇಲೆ ಕನ್ನಡಿಗನ ತಪ್ಪಿಲ್ಲ ಅಂತ ಗೊತ್ತಾದ ಮೇಲೆ ಅಂಗೈ ಹುಣ್ಣಿಗೆ ಕನ್ನಡಿ ಬೇಕೆ ಅಂತ ಎಲ್ಲರೂ ಕನ್ನಡಿಗನ ಪರವಾಗಿ ನಿಂತಿದ್ದಾರೆ. ಆದರೆ ಈ ವಿಂಗ್ ಕಮಾಂಡರ್ ವಿರುದ್ಧ ಕೇಸು ದಾಖಲಿಸುವ ಮೊದಲು ಕನ್ನಡಿಗನನ್ನೇ ಬಂಧನ ಮಾಡಿದ್ದ ಪೊಲೀಸರು ಕೂಡಾ ಈ ವಿಷಯದಲ್ಲಿ ಚಳ್ಳೆಹಣ್ಣು ತಿಂದಿದ್ದು ಮಾತ್ರ ವಿಪರ್ಯಾಸ.

ಸಂಪಾದಕರ ಸದ್ಯಶೋಧನೆ

ಇದು ಸೈಕಲ್ ದೇಶ

ನೆದರ್‌ಲ್ಯಾಂಡ್ಸ್‌ನಲ್ಲಿ ಅಲ್ಲಿನ ಜನಸಂಖ್ಯೆಗಿಂತ ಹೆಚ್ಚು ಸೈಕಲ್‌ಗಳಿವೆ ಎಂದರೆ ಆಶ್ಚರ್ಯವಾಗಬಹುದು. ಆ ದೇಶದಲ್ಲಿ 17 ದಶಲಕ್ಷ ಜನರಿದ್ದಾರೆ ಮತ್ತು 23 ದಶಲಕ್ಷ ಸೈಕಲ್ಲುಗಳಿವೆ. ರಾಜಧಾನಿ ಆಮ್‌ಸ್ಟರ್‌ಡ್ಯಾಮ್ ನಗರದಲ್ಲಿ ಮನೆ ಮತ್ತು ಕೆಲಸದ ನಡುವಿನ ಎಲ್ಲ ಪ್ರಯಾಣಗಳಲ್ಲಿ ಸೈಕಲ್ಲುಗಳು ಜನರ ಜೀವನಾಡಿ. ಸೈಕಲ್ಲುಗಳಿಲ್ಲದ ನೆದರ್‌ಲ್ಯಾಂಡ್ಸ್‌ನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಆ ದೇಶವು ತನ್ನನ್ನು ತಾನು 'ಬೈಸಿಕಲ್ ದೇಶ' ಎಂದು ಹೆಮ್ಮೆಯಿಂದ ಕರೆದುಕೊಳ್ಳುತ್ತದೆ. ವಿಶ್ವದಲ್ಲಿಯೇ ನೆದರ್ ಲ್ಯಾಂಡ್ಸ್‌ಗೆ ಸೈಕಲ್ ಬಳಕೆಯಲ್ಲಿ ಮೊದಲ ಸ್ಥಾನ. ಇಬ್ಬರು ಭೇಟಿಯಾದರೆ, ಸೈಕಲ್ ವಿಷಯದಿಂದಲೇ ಅವರ ಮಾತುಕತೆ ಆರಂಭವಾಗುತ್ತದೆ ಮತ್ತು ಕೊನೆಯಲ್ಲಿ ಆ ವಿಷಯದೊಂದಿಗೇ ಅಂತ್ಯವಾಗುತ್ತದೆ. ತಾವು ಖರೀದಿಸಿದ ಹೊಸ ಸೈಕಲ್, ಮಾರುಕಟ್ಟೆಗೆ ಬಂದ ನೂತನ ಸೈಕಲ್‌ಗಳ ಕುರಿತು ಅಲ್ಲಿನ ಜನ ಮಾತಾಡಲು ಇಷ್ಟಪಡುತ್ತಾರೆ. ನಾಲ್ಕು ವರ್ಷಗಳ ಹಿಂದೆ ನೆದರ್‌ಲ್ಯಾಂಡ್ಸ್ ಪ್ರವಾಸೋದ್ಯಮ ಒಂದು ಜಾಹೀರಾತನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ಡಚ್ ಭಾಷೆಯಲ್ಲಿ 'ಸುಸ್ವಾಗತ' ಎಂದಷ್ಟೇ ಬರೆದಿತ್ತು. ಆದರೆ ಅದಕ್ಕೆ ಬಳಸಿದ ಚಿತ್ರದಲ್ಲಿ ಬರೀ ಸೈಕಲ್ಲುಗಳೇ ಇದ್ದವು. ಅದಕ್ಕಿಂತ ಪರಿಣಾಮಕಾರಿಯಾಗಿ ಆ ದೇಶವನ್ನು ಶೋಕೇಸ್ ಮಾಡಲು ಸಾಧ್ಯವೇ ಇರಲಿಲ್ಲ. ಕೆಲ ವರ್ಷಗಳ ಹಿಂದೆ ನಾನು ಆಮ್‌ಸ್ಟರ್‌ಡ್ಯಾಮ್ ವಿಮಾನ ನಿಲ್ದಾಣದಲ್ಲಿ ಇಳಿದಾಗ, ಅಲ್ಲಿನ ಜಾಹೀರಾತು ಫಲಕವೊಂದರಲ್ಲಿ There is something wrong with a society that drives a car to workout in a gym ಎಂದು ಬರೆದಿತ್ತು. ಸೈಕಲ್ ಪ್ರಯಾಣವನ್ನು ಬೇರೆ ದೇಶಗಳಲ್ಲೂ ಪ್ರಚಾರ ಮಾಡಲು ಉತ್ತೇಜಿಸುವ ಜಾಹೀರಾತು ಅದಾಗಿತ್ತು. ಸೈಕಲ್ಲಿನ ಮಹತ್ವವನ್ನು ವಿಶ್ವದಲ್ಲಿಯೇ ಬಹುಬೇಗ ಮನಗಂಡ ನೆದರ್‌ಲ್ಯಾಂಡ್ಸ್, ಸೈಕಲ್ ಬಳಕೆಯನ್ನು ಜನಪ್ರಿಯಗೊಳಿಸಿದೆ. ಮನೆಯಿಂದ ಆಫೀಸಿಗೆ ಸೈಕಲ್ಲಿನಲ್ಲಿ ಹೋಗುವವರಿಗೆ ಅಲ್ಲಿನ ಸರಕಾರ ಪ್ರತಿ ಕಿಮೀಗೆ 0.22 ಡಾಲರ್ ಹಣವನ್ನು ನೀಡುತ್ತದೆ. ಈ ಹಣ ತೆರಿಗೆಮುಕ್ತ. ವ್ಯಾಪಾರ ಉದ್ದೇಶಗಳಿಗಾಗಿ ಯಾರಾದರೂ ತಮ್ಮ ಸ್ವಂತ ಕಾರನ್ನು ಚಾಲನೆ ಮಾಡುವ ರೀತಿಯಲ್ಲಿಯೇ ಇದು ಕಾರ್ಯನಿರ್ವಹಿಸುತ್ತದೆ, ಪ್ರಯಾಣಿಸಿದ ದೂರಕ್ಕೆ ಸಂಬಂಧಿಸಿದ ಸ್ಥಿರ ಮೊತ್ತವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ಆದರೆ ಮುಖ್ಯ ವಿಷಯವೆಂದರೆ ಸೈಕಲ್ ಸವಾರರು ಕೆಲಸಕ್ಕೆ ಮತ್ತು ಹೊರಗೆ ಸವಾರಿ ಮಾಡುವ ಮೂಲಕ ಹಣವನ್ನು ಗಳಿಸಬಹುದು. ಸೈಕಲ್ಲಿನಲ್ಲಿ ಆಫೀಸಿಗೆ ಬರುವ ಉದ್ಯೋಗಿಗಳಿಗೆ ಕಂಪನಿಯೇ ಸೈಕಲ್ ನೀಡುತ್ತದೆ. 10 ಸಾವಿರ ರುಪಾಯಿಯಿಂದ 3 ಲಕ್ಷ ರುಪಾಯಿ ಬೆಲೆ ಬಾಳುವ ಸೈಕಲ್ಲುಗಳಲ್ಲಿ ಜನ ಓಡಾಡುತ್ತಾರೆ. ಬಹುತೇಕ ಎಲ್ಲ ಕಂಪನಿಗಳೂ ಸೈಕಲ್ ಖರೀದಿಗೆ ಸಾಲ ಕೊಡುವುದು ಸಾಮಾನ್ಯ. ನೆದರ್‌ಲ್ಯಾಂಡ್ಸ್ ಪ್ರಧಾನಿಯೇ ಸೈಕಲ್ಲಿನಲ್ಲಿ ಮನೆಯಿಂದ ಆಫೀಸಿಗೆ ಪ್ರಯಾಣ ಮಾಡುತ್ತಾರೆ. ಹವಾಮಾನ ವೈಪರೀತ್ಯಗಳಿಲ್ಲದ ದಿನಗಳಲ್ಲಿ ಅವರು ಸೈಕಲ್ಲಿನಲ್ಲೇ ಓಡಾಡುತ್ತಾರೆ. ಅವರ ಸಂಪುಟದ ಸಚಿವರು ಮತ್ತು ಅಧಿಕಾರಿಗಳು ಸೈಕಲ್‌ನಲ್ಲಿ ಪಯಣಿಸುವುದು ಸಾಮಾನ್ಯ ದೃಶ್ಯ. ಒಂದು ಮನೆಯಲ್ಲಿ ನಾಲ್ವರಿದ್ದರೆ, ಸೈಕಲ್ಲುಗಳು ಮಾತ್ರ ಆರೋ-ಏಳೋ. ಕಾರು ಅಲ್ಲಿನ ಪ್ರತಿಷ್ಠೆಯ ಮಾನದಂಡವಲ್ಲ. ಅಲ್ಲಿನ ಜನ ತಮ್ಮ ಸೈಕಲ್ಲುಗಳನ್ನೇ ಶ್ರೀಮಂತಿಕೆಯ ದ್ಯೋತಕವಾಗಿ ತೋರ್ಪಡಿಸಿಕೊಳ್ಳಲು ಇಷ್ಟಪಡುತ್ತಾರೆ. 2 ವರ್ಷಗಳ ಹಿಂದೆ, ಡಚ್ ಪ್ರಧಾನಿ, 'ನಾನೇಕೆ ಸೈಕಲ್ ಬಳಸುತ್ತೇನೆ?' ಎಂದು ವರ್ಲ್ಡ್ ಇಕನಾಮಿಕ್ ಫೋರಂನಲ್ಲಿ ಭಾಷಣ ಮಾಡಿದ್ದು ವೈರಲ್ ಆಗಿತ್ತು. ನೆದರ್‌ಲ್ಯಾಂಡ್ಸ್ ಒಂದೇ ಅಲ್ಲ, ಯುರೋಪಿನಲ್ಲಿ ಇನ್ನೂ ಹತ್ತಾರು ದೇಶಗಳು ಸೈಕಲ್‌ಗಳನ್ನು ಇಷ್ಟಪಡುತ್ತವೆ. ಡೆನ್ಮಾರ್ಕ್ ಕೂಡ ಸೈಕಲ್ ಬಳಕೆಯಲ್ಲಿ ಸಾಕಷ್ಟು ಸಾಧನೆ ಮಾಡಿದೆ.

ವಿಶ್ವಶಾಂತಿ ಕದಡಲು ಅಮೆರಿಕ ಅಧ್ಯಕ್ಷರ ಒಂದು ಮಾತು ಸಾಕು!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೆಲ ವಾರಗಳ ಹಿಂದೆ ಘೋಷಿಸಿದ ಆಮದು ತೆರಿಗೆ ಇಡೀ ವಿಶ್ವವನ್ನೇ ತಲ್ಲಣಗೊಳಿಸಿದೆ. ಜಗತ್ತಿನ ಷೇರುಪೇಟೆಗಳು ನೆಲಕಚ್ಚಿದವು. ಚೀನಾ-ಅಮೆರಿಕ ನಡುವಿನ ತೆರಿಗೆ ಯುದ್ಧ ಎಲ್ಲಿಗೆ ಹೋಗಲಿದೆ ಎನ್ನುವ ಆತಂಕದಲ್ಲಿ ಬಹುತೇಕ ರಾಷ್ಟ್ರಗಳಿವೆ. ಆಮದು ಶುಲ್ಕವನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದಾಗಿ ಹಾಗೂ ಚೀನಾದಿಂದ ಆಮದಾಗುವ ಸ್ಟೀಲ್ ಹಾಗೂ ಯಂತ್ರೋಪಕರಣದ ಮೇಲೆ ಹಾಕಿರುವ ಶೇ.245 ಸುಂಕವನ್ನು ತಗ್ಗಿಸುವ ಮಾತನ್ನು ಟ್ರಂಪ್ ಘೋಷಿಸಿದ್ದರೂ, ಪ್ರಪಂಚದ ಆರ್ಥಿಕ ವಲಯದಲ್ಲಿರುವ ಆತಂಕ ಪೂರ್ಣ ಪ್ರಮಾಣದಲ್ಲಿ ಹೋಗಿಲ್ಲ.

ಇಂತಹ ಸಮಯದಲ್ಲಿ ಅಮೆರಿಕ ಅಧ್ಯಕ್ಷರ ಕುರಿತಾಗಿ ಯೋಗಿ ದುರ್ಲಭಜೀ ಅವರು ಕೆಲ ವರ್ಷಗಳ ಹಿಂದೆ ನನ್ನೊಂದಿಗೆ ಹಂಚಿಕೊಂಡಿದ್ದ ಒಂದು ವಿಷಯ ಪ್ರಸ್ತಾಪಿಸಬೇಕಿದೆ. ಹಾಗೇ ನೋಡಿದರೆ, ಯೋಗಿ ದುರ್ಲಭಜೀ ಅವರೊಂದಿಗಿನ ಅನೇಕ ಮಾತುಕತೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಅವರು ಹೇಳಿದ್ದ ಎಷ್ಟೋ ಸಂಗತಿಗಳನ್ನು ನಾನು ನಿಮಗೆ ಹೇಳಲಿಲ್ಲವೆನಿಸುತ್ತದೆ. ಇನ್ನು ಅವರು ಮೌನ ವ್ರತಕ್ಕೆ ಕುಳಿತರೆ ಮಾತಾಡುವುದು ಎಂದೋ? 'ಯೋಚನೆಗಳು, ಕಲ್ಪನೆಗಳು ಸುಂದರ. ಆದರೆ ಮಾತುಗಳು ಅಸಹ್ಯ. ನಮಗೆ ಮಾತು ಅನಿವಾರ್ಯವಲ್ಲ, ಮನುಷ್ಯನಿಗೂ ದೇವರು ಮಾತುಗಳನ್ನು ಕೊಡಬಾರದಿತ್ತು' ಎಂದು ಯೋಗಿಜೀ ಆಗಾಗ ಹೇಳುತ್ತಿರುತ್ತಾರೆಂದು ಅವರ ಶಿಷ್ಯರಾದ ಯೋಗಿ ನಿಶ್ಚಿಂತಜೀ ಹೇಳಿದ್ದು ತಮಾಷೆಯಾಗಿ ಕಂಡಿತು.

'ನಾನೇನಾದರೂ ಮುಖ್ಯಮಂತ್ರಿಯೋ, ಪ್ರಧಾನಿಯೋ ಆದರೆ ಜನರೆಲ್ಲ ವರ್ಷದಲ್ಲಿ ಕನಿಷ್ಠ ಒಂದು ತಿಂಗಳಾದರೂ ಕಡ್ಡಾಯವಾಗಿ ಮೌನವ್ರತ ಆಚರಿಸಲೇಬೇಕೆಂಬ ನಿಯಮವನ್ನು ರೂಪಿಸುತ್ತೇನೆ. ನನ್ನನ್ನು ವಾಕ್ ಸ್ವಾತಂತ್ರ್ಯದ ವಿರೋಧಿ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಸರ್ವಾಧಿಕಾರಿ ಎಂದು ಜರೆದರೂ ಪರವಾಗಿಲ್ಲ. ಆದರೆ ಮೌನವ್ರತ ಆಚರಿಸಿದ ನಂತರ, ಅದರ ಪರಿಣಾಮವನ್ನು ಅರಿತ ಬಳಿಕ ನನ್ನನ್ನು ಜರೆದವರೆಲ್ಲ ತಮ್ಮ ಅಭಿಪ್ರಾಯ ಬದಲಿಸಿಕೊಳ್ಳುತ್ತಾರೆಂಬ ವಿಶ್ವಾಸವಿದೆ. ಈ ವ್ರತವನ್ನು ಸಾಮಾನ್ಯ ಪ್ರಜೆಗಳಿಗಿಂತ ಮೊದಲು ಅಧಿಕಾರದಲ್ಲಿರುವವರು ಅಂದರೆ, ಪ್ರಧಾನಿ, ರಾಷ್ಟ್ರಪತಿ, ಕೇಂದ್ರ ಸಚಿವರು, ಮುಖ್ಯಮಂತ್ರಿಗಳು, ಶಾಸಕರು, ಸಂಸದರು ಪಾಲಿಸಬೇಕು. ಆಗಲೇ ಅದರ ಪರಿಣಾಮ ಶೀಘ್ರ ತಿಳಿಯುತ್ತದೆ. ಅಮೆರಿಕ ಅಧ್ಯಕ್ಷನೇನಾದರೂ ಒಂದು ತಿಂಗಳ ಮೌನವ್ರತ ಆಚರಿಸಿದರೆ ಜಗತ್ತು ಎಷ್ಟು ಶಾಂತವಾಗಿರುತ್ತದೆ ಎಂಬುದು ಇಡೀ ವಿಶ್ವಕ್ಕೇ ತಿಳಿಯುತ್ತದೆ' ಎಂದರು ಯೋಗಿ ದುರ್ಲಭಜೀ.

'ರಾಮಾಯಣದಲ್ಲಿ ಒಂದು ಪ್ರಸಂಗ ಬರುತ್ತದೆ. ಪ್ರತಿವರ್ಷ ರಾವಣ ನಲವತ್ತೈದು ದಿವಸ ಮೌನವ್ರತಕ್ಕೆ ಕುಳಿತುಕೊಳ್ಳುತ್ತಿದ್ದನಂತೆ. ಇಡೀ ಲಂಕೆಯಲ್ಲಿ ಶಾಂತಿ ನೆಲೆಸಿರುತ್ತಿತ್ತಂತೆ. ಇದರ ಪರಿಣಾಮ ಮೂರು ತಿಂಗಳುಗಳ ಕಾಲ ಇರುತ್ತಿತ್ತಂತೆ. ಮೌನವ್ರತದ ಬಳಿಕ ರಾವಣ ಮತ್ತಷ್ಟು ಬಲಶಾಲಿ ಹಾಗೂ ವಿವೇಕಶಾಲಿಯಾಗುತ್ತಾನೆಂದು ಜನ ಮಾತಾಡಿಕೊಳ್ಳುತ್ತಿದ್ದರಂತೆ. ರಾವಣ ಮೌನವ್ರತಕ್ಕೆ ಕುಳಿತ ಸುದ್ದಿ ಹರಡುತ್ತಿದ್ದಂತೆ ಲಂಕೆಯ ಪ್ರಜೆಗಳೂ ಮೌನವ್ರತಕ್ಕೆ ಶರಣಾಗುತ್ತಿದ್ದರಂತೆ. ಎಲ್ಲೆಡೆ ಶಾಂತಿ. ಹಾಗೆಂದು ಆಗಬೇಕಾದ ಕೆಲಸಗಳೆಲ್ಲ ನಡೆಯುತ್ತಿದ್ದವು. ಇನ್ನೂ ತೀವ್ರಗತಿಯಲ್ಲಿ, ವ್ಯವಸ್ಥಿತವಾಗಿ ನಡೆಯುತ್ತಿದ್ದವು' ಎಂದು ಯೋಗಿಜೀ ವಿವರಿಸಿದರು.

'ಅಲ್ಲ ಯೋಗೀಜಿ, ನಿಮ್ಮ ಸಲಹೆಯನ್ನೇನಾದರೂ ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಗಂಭೀರವಾಗಿ ಸ್ವೀಕರಿಸಿ ಅದನ್ನು ಜಾರಿಗೆ ತಂದರೆ ನಮ್ಮ ಕತೆ ಏನು? ನಾವು ಪತ್ರಿಕೆಯಲ್ಲಿ ಏನು ಬರೆಯೋದು? ಟಿವಿಯಲ್ಲಿ ಏನು ತೋರಿಸೋದು? ನಮ್ಮ ಪರಿಸ್ಥಿತಿಯನ್ನು ಸ್ವಲ್ಪ ಯೋಚಿಸಿದ್ದೀರಾ?' ಎಂದೆ. ಅದಕ್ಕೆ ಯೋಗೀಜೀ ಹೇಳಿದರು, 'ಈ ಪತ್ರಿಕೆಗಳು, ಟಿವಿಗಳೇ ಅಶಾಂತಿಗೆ ಕಾರಣ. ಜನ ಹೇಳಿದ್ದನ್ನೇ ಬರೆದು, ತೋರಿಸಿ ಅವರವರಲ್ಲಿ ಜಗಳ ಹಚ್ಚಿ ಹಾಕಿ ನಿಮ್ಮ ವ್ಯಾಪಾರ ಮುಗಿಸಿಕೊಂಡು ಅಶಾಂತಿ ಕದಡುವವರೇ ನೀವು. ನಿಮ್ಮ ಬೇಳೆ ಬೇಯಿಸಿಕೊಳ್ಳಲು ಜನರ ಮಧ್ಯೆ ಜಗಳ ತಂದಿಡುತ್ತೀರಿ. ಟಿವಿಯವರಂತೂ ಬಾಯಿಗೇ ಮೈಕ್ ತುರುಕಿ ಮಾತಾಡಿಸುತ್ತಾರೆ. ಅವರಿಗೆ ಮತ್ತೇನೂ ಬೇಡ. ಬೈಟ್ಸ್ ಬೇಕು. ಅದಕ್ಕಾಗಿ ದಿನಗಟ್ಟಲೆ ಕಾದು ಕುಳಿತಿರುತ್ತಾರೆ. ಟಿವಿ ಪತ್ರಕರ್ತರಿಗೆ ಚೆನ್ನಾಗಿ ಗೊತ್ತು ಬಾಯಿಬಿಟ್ಟರೆ ಬಣ್ಣಗೇಡು ಅಂತ. ಹೀಗಾಗಿ ಅವರು ಬೈಟ್ಸ್‌ಗೆ ಕಾಯೋದು. ಇಬ್ಬರು ರಾಜಕೀಯ ನಾಯಕರು ಮಾತುಕತೆ ನಡೆಸಿ ಹೊರಬಂದರೆ ಸಾಕು, ಮೈಕ್ ಹಿಡಿಯುತ್ತೀರಿ. ಅವರು ಏನೇ ಹೇಳಲಿ ಅದನ್ನೇ ದೊಡ್ಡ ಸುದ್ದಿಯನ್ನಾಗಿ ತೋರಿಸುತ್ತೀರಿ.

ಆ ದಿನವಿಡೀ ಅದೇ ದೊಡ್ಡ ಸುದ್ದಿ. ಉದಾಹರಣೆಗೆ, ಇಬ್ಬರು ಹಿರಿಯ ರಾಜಕಾರಣಿಗಳು ತಮ್ಮಿಬ್ಬರ ಮಧ್ಯದ ಭಿನ್ನಾಭಿಪ್ರಾಯವನ್ನು ನಿವಾರಿಸಿಕೊಳ್ಳಲು ಭೇಟಿ ಮಾಡಿದರೆನ್ನಿ. ಆ ಮಾತುಕತೆ ಮೂರು-ನಾಲ್ಕು ತಾಸು ನಡೆದರೆ ಭೇಟಿಯಾದ ಸ್ಥಳದಲ್ಲಿಯೇ ಕುಳಿತಿರುತ್ತೀರಿ. ನಾಯಕರು ಹೊರ ಬರುವಾಗ ರಾತ್ರಿ ಒಂದು ಗಂಟೆಯಾದರೂ ನಿಮಗೆ ಹಸಿವು, ನಿದ್ದೆ ಯಾವವೂ ಬಾಧಿಸುವುದಿಲ್ಲ. ಅಲ್ಲಿಯೇ ಕುಳಿತಿರುತ್ತೀರಿ. ಅವರು ಹೊರಬರುತ್ತಿದ್ದಂತೆ ಅವರ ಹತ್ತಿರ ಓಡಿ ಅವರ ಬಾಯಿಗೆ ಮೈಕನ್ನು ತುರುಕುತ್ತೀರಿ. 'ನಮ್ಮಿಬ್ಬರ ಮಧ್ಯೆ ಇದ್ದ ಎಲ್ಲ ಭಿನ್ನಾಭಿಪ್ರಾಯಗಳು ನಿವಾರಣೆಯಾಗಿದೆ' ಎಂದು ಹೇಳಿದರೆ, ಭಿನ್ನಾಭಿಪ್ರಾಯ ಇತ್ತೆಂಬುದನ್ನು ಒಪ್ಪಿಕೊಂಡಿದ್ದಾರೆ ಎಂದು ಬರೆಯುತ್ತೀರಿ. 'ಬಹುತೇಕ ಎಲ್ಲ ವಿಷಯಗಳ ಬಗ್ಗೆ ಒಮ್ಮತ ಮೂಡಿದೆ ಎಂದರೆ ಇನ್ನೂ ಕೆಲ ವಿಷಯಗಳ ಬಗ್ಗೆ ಒಮ್ಮತ ಮೂಡಬೇಕಿದೆ' ಎಂದು ಹೇಳುತ್ತೀರಿ. ಇದೊಂದು ಸೌಜನ್ಯಯುತ ಭೇಟಿ ಎಂದು ಹೇಳಿದರೆ, ಮುಸುಕಿನ ಗುದ್ದಾಟ ಮುಂದುವರಿದಿದೆ ಎಂದು ವ್ಯಾಖ್ಯಾನಿಸುತ್ತೀರಿ. ಸರಿ, ಇವ್ಯಾವುದರ ಉಸಾಬರಿಯೇ ಬೇಡ ಎಂದು ಪತ್ರಕರ್ತರಿಗೆ ಸಿಗದೇ ಸುಮ್ಮನೆ ಹೊರಟು ಹೋದರೆ, ಮುರಿದು ಬಿದ್ದ ಮಾತುಕತೆ ಅಂತೀರಿ. ಹಾಗಾದರೆ ಏನು ಮಾಡಬೇಕು? ಏನು ಮಾಡಿದರೂ ಅದೊಂದು ವಿವಾದವಾಗಿಯೇ ಪರಿಣಮಿಸುತ್ತದೆ. ಹಾಗೆ ನೋಡಿದರೆ ಪತ್ರಿಕೆ, ಟಿವಿ, survive ಆಗುತ್ತಿರುವುದೇ ಈ ಬೈಟ್ಸ್‌ಗಳಿಂದ. ಇದು bite journalism. ಇಲ್ಲಿ bites ಅಂದ್ರೆ ಹೇಳಿಕೆ ಅಂತಾನೂ ಅರ್ಥ. ಕಚ್ಚುವುದು ಅಂತಾನೂ ಅರ್ಥ. ಕಚ್ಚುವುದು, ಕಚ್ಚಿಸುವುದು, ಕಚ್ಚಾಡುವುದೇ ಸುದ್ದಿ. ಮಾತಾಡಿದರೆ ವಿವಾದ, ಜಗಳ, ಹೊಡೆದಾಟ ಗ್ಯಾರಂಟಿ.'

ಒಂದು ಕ್ಷಣ ಸಾವರಿಸಿಕೊಂಡ ಯೋಗೀಜೀ ಪುನಃ ಮುಂದುವರಿಸಿದರು-'ಉನ್ನತ ಸ್ಥಾನದಲ್ಲಿರುವವರು ವರ್ಷದಲ್ಲಿ ಒಂದು ತಿಂಗಳಾದರೂ ಮೌನವ್ರತ ಪಾಲಿಸಬೇಕು ಅಂತ ಹೇಳಿದ್ದು ಈ ಕಾರಣಕ್ಕೆ. ಈ ಹಿಂದೆ ಪ್ರಧಾನಿಯಾಗಿದ್ದ ಡಾ. ಮನಮೋಹನಸಿಂಗ್ ಅವರಿಗೆ ಮೌನದ ಮಹತ್ವ ಚೆನ್ನಾಗಿ ಗೊತ್ತು. ಅದಕ್ಕಾಗಿ ಅವರು ವರ್ಷದಲ್ಲಿ ಒಂದು ತಿಂಗಳ ಬದಲು, ಅಧಿಕಾರದಲ್ಲಿದ್ದ ಹತ್ತು ವರ್ಷವೂ ಮೌನವ್ರತಕ್ಕೆ ಶರಣಾಗಿದ್ದರು. Thats a great strategy. ಒಂದು ವೇಳೆ ಡಾ. ಸಿಂಗ್ ಅವರು ವಾಚಾಳಿಯಾಗಿದ್ದರೆ, ಮೊದಲನೆಯದಾಗಿ ಕಾಂಗ್ರೆಸ್ ಅವರನ್ನು ಪ್ರಧಾನಿ ಹುದ್ದೆಯಲ್ಲಿ ಕುಳ್ಳಿರಿಸುತ್ತಿರಲಿಲ್ಲ. ಒಂದು ವೇಳೆ ಕುಳ್ಳಿರಿಸಿದರೂ, ಅವರು ಹೆಚ್ಚೆಂದರೆ ಎರಡು-ಮೂರು ವರ್ಷಗಳ ಕಾಲ ಆ ಹುದ್ದೆಯಲ್ಲಿರುತ್ತಿದ್ದರು. ಏನೋ ಮಾತಾಡಿ, ತಾಪತ್ರಯ ತಂದುಕೊಳ್ಳುತ್ತಿದ್ದರು. ಸೋನಿಯಾಗಾಂಧಿಯವರು ಅಷ್ಟು ವರ್ಷ ಕಾಂಗ್ರೆಸ್ ಅಧ್ಯಕ್ಷೆಯಾಗಿರುವುದೂ ಅದೇ ಕಾರಣ. ಬೇರೆ ಯಾರಿಂದ ಸಹ ಇದು ಅಸಾಧ್ಯ. ಅಧಿಕಾರದಲ್ಲಿದ್ದಾಗ ಮಾತಾಡದೇ ಇರುವುದು, ಮೌನಕ್ಕೆ ಶರಣಾಗುವುದು ದೊಡ್ಡ ತಪಸ್ಸು, ಅದು ದೊಡ್ಡ ಸಾಧನೆ. ಡಾ. ಸಿಂಗ್ ವಿರುದ್ಧ ಬರೆಯಲು ಏನೂ ಇಲ್ಲ. ಅವರ ಮೌನವೇ ನಿಮಗೆ ಅಣಕವಾಗಿ ಕಾಣುತ್ತದೆ. ಅದಕ್ಕಾಗಿ ನೀವು ಅವರನ್ನು 'ಸೈಲಂಟ್ ಮೋಡ್'ನಲ್ಲಿದ್ದ maaji ಪ್ರಧಾನಿ ಎಂದು ಗೇಲಿ ಮಾಡುತ್ತೀರಾ. ಅದು ಅವರ ಶಕ್ತಿ ಹಾಗೂ ನಿಮ್ಮ ದೌರ್ಬಲ್ಯ. ಅದಕ್ಕಾಗಿ ಅವರು ವರ್ಷ ಹತ್ತಾದರೂ ಆ ಪದವಿಯಲ್ಲಿದ್ದರು. ಮೌನ ದೌರ್ಬಲ್ಯವಲ್ಲ. ಅದು ತಾಕತ್ತು. ಮೌನಕ್ಕಿರುವ ಶಕ್ತಿ ಮಾತಿಗಿಲ್ಲ. ಈ ಕಾರಣಕ್ಕಾಗಿಯೇ ನಾನು ಮೌನವ್ರತವನ್ನು ಪ್ರತಿಪಾದಿಸುವುದು.'

ಅಮೆರಿಕ ಅಧ್ಯಕ್ಷರೂ ಒಂದು ತಿಂಗಳ ಮೌನ ಧರಿಸಿದರೆ ಇಡೀ ವಿಶ್ವವೇ ಶಾಂತವಾಗಿರುತ್ತದೆ. ಒಂದು ದೇಶಕ್ಕೆ ಹೋದಾಗ, ಅನುಕೂಲಕ್ಕೆ ತಕ್ಕ ಹಾಗೆ ಮಾತಾಡುವುದರಿಂದ ಸಮಸ್ಯೆಯನ್ನು ಆಹ್ವಾನಿಸಿಕೊಳ್ಳುತ್ತಾರೆ. ಸಿರಿಯಾ ಮೇಲೆ ಯುದ್ಧ ಸಾರುತ್ತೇನೆ ಎಂಬ ಅಮೆರಿಕ ಅಧ್ಯಕ್ಷರ ಒಂದು ಹೇಳಿಕೆ World order ಅನ್ನು ಬುಡಮೇಲು ಮಾಡುತ್ತದೆ. ಆ ಮಾತು ಹೇಳಿದ ಒಂದು ವರ್ಷದ ನಂತರವೂ ಪರಿಣಾಮ ಬುದುಗುಡುತ್ತಿರುತ್ತದೆ. ಇಡೀ ಜಗತ್ತು ಮೌನವ್ರತದಲ್ಲಿರುವುದೂ ಒಂದೇ, ಅಮೆರಿಕ ಅಧ್ಯಕ್ಷ ಮಾತಾಡುವುದೂ ಒಂದೇ. ಆತನ ಒಂದು ಮಾತಿಗೆ ವಿಶ್ವದ ಶಾಂತಿಯನ್ನು ಕಲ್ಲವಿಲ್ಲಗೊಳಿಸುವ ಶಕ್ತಿಯಿದೆ. ಹೀಗಾಗಿ ಉನ್ನತ ಸ್ಥಾನದಲ್ಲಿರುವವರು ಹೆಚ್ಚು ಹೆಚ್ಚು ಮೌನ ಧರಿಸಬೇಕು, ಕಡಿಮೆ ಅಂದ್ರೆ ಕಡಿಮೆ ಮಾತಾಡಬೇಕು. ಹೆಚ್ಚು ಯೋಚಿಸಬೇಕು. ಈ ಸರಳ ಸಂಗತಿ ಅರಿಯದವರೆಲ್ಲ ಸಮಸ್ಯೆಯನ್ನು ಆಹ್ವಾನಿಸಿಕೊಂಡು ಕಷ್ಟ ಅನುಭವಿಸಿದ್ದಾರೆ' ಎಂದರು ಯೋಗಿಜೀ.

ಯೋಗಿಜೀ ಅವರ ಮಾತುಗಳನ್ನೆಲ್ಲ ಕೇಳಿಸಿಕೊಂಡ ಬಳಿಕ, 'ಯೋಗಿಜೀ, ನೀವು ಹೇಳುವುದರಲ್ಲಿ ತಪ್ಪೇನೂ ಇಲ್ಲ, ಆದರೆ ನಮ್ಮ ಕತೆ ಏನು? ಪತ್ರಿಕೆ, ಟಿವಿಗಳು ಏನು ಮಾಡಬೇಕು ಎಂಬುದನ್ನು ಹೇಳಲಿಲ್ಲವಲ್ಲ?' ಎಂದೆ.

'ನಾನು ಹೇಳುವುದು ಕಠೋರವೆನಿಸಬಹುದು. ಆದರೆ ನನ್ನ ಮಾತು ಇನ್ನು ಇಪ್ಪತ್ತು ವರ್ಷಗಳ ಬಳಿಕ ನಿಜವೆಂದು ಅನಿಸಬಹುದು. ಅಷ್ಟೊತ್ತಿಗೆ ಪರಿಸ್ಥಿತಿ ಕೈ ಮೀರಿರುತ್ತದೆ. ಅದೇನೆಂದರೆ, ಸಾಂಸ್ಕೃತಿಕ ಭಾರತವನ್ನು ದಿವಾಳಿಯೆಬ್ಬಿಸಿದ್ದೇ ಟಿವಿ. ನಮ್ಮ ಸಂಸ್ಕೃತಿ, ಪರಂಪರೆ, ಆಚರಣೆ, ಸಂಪ್ರದಾಯ, ರೀತಿ-ರಿವಾಜುಗಳನ್ನು ಹಾಳುಗೆಡವಿದ್ದೇ ಟಿವಿ. ಹಳ್ಳಿಗಳು ಸಹ ನಗರಗಳನ್ನು ಅನುಕರಿಸುತ್ತಿವೆ. ಬೆನ್ನು ನೋವು ಬಂದಾಗ ಯಾರೂ 'ಅಯ್ಯೋ' ಅನ್ನುವುದಿಲ್ಲ. ಎಲ್ಲರೂ 'ಔಚ್' ಅಂತಾರೆ. ಎಲ್ಲರೂ ಟಿವಿ ಭಾಷೆಯನ್ನು ಅನುಕರಿಸುತ್ತಿದ್ದಾರೆ. ಟಿವಿ ನಮಗೆ ಗೊತ್ತಿಲ್ಲದೇ ನಮ್ಮನ್ನು ನಿಯಂತ್ರಿಸುತ್ತಿದೆ.

ಕಾಂಪ್ಲಾನ್ ಕುಡಿದರೆ ನಮ್ಮ ಮಗನೂ ಸಚಿನ್ ತೆಂಡುಲ್ಕರ್ ಆಗಬಹುದೆಂಬ ಭ್ರಮೆ ತಾಯಂದಿರನ್ನು ಆವರಿಸಿಕೊಂಡಿದೆ. ಸಾಯಂಕಾಲ ಬಿಡುವಿನ ಸಮಯದಲ್ಲಿ ಹಳ್ಳಿಗಳಲ್ಲಿ ಜನ ಒಂದು ನಿರ್ದಿಷ್ಟ ಸ್ಥಳದಲ್ಲಿ ಸೇರುತ್ತಿದ್ದರು. ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಈಗ ಎಲ್ಲರೂ ನಿರ್ದಿಷ್ಟ ಸ್ಥಳ ಅಂದ್ರೆ, ಟಿವಿ ಮುಂದೆ ಎನ್ನುವಂತಾಗಿದೆ. ಹಳ್ಳಿಗಳಲ್ಲಿ ಊರಿಗೆ ಊರೇ ಟಿವಿ ಮುಂದೆ ಕುಳಿತಿರುತ್ತದೆ. ನಗರಗಳಲ್ಲೂ ಇದೇ ವಾತಾವರಣ. ನಮ್ಮ ಎಲ್ಲ ಚಟುವಟಿಕೆಗಳೂ ಟಿವಿ ಕೇಂದ್ರಿತ. ಅಲ್ಲಿನ ಟಿವಿ ಕಾರ್ಯಕ್ರಮಕ್ಕೆ ಅನುಗುಣವಾಗಿ ನಮ್ಮ ದಿನಚರಿಯನ್ನು ರೂಪಿಸಿಕೊಳ್ಳುವಂತಾಗಿದೆ. ಮಕ್ಕಳಿಗೆ ತಂದೆ-ತಾಯಿ, ಗುರು, ಹಿರಿಯರಿಗಿಂತ ಟಿವಿಯೇ ಗುರು. ಅದೇ ಆದರ್ಶ. ಇದರಿಂದ ಗ್ರಾಮೀಣ ಕಲೆ, ನಾಟ್ಯ, ಸಂಪ್ರದಾಯಗಳೆಲ್ಲ ಮಾಯವಾಗುತ್ತಿವೆ. ಇಡೀ ದೇಶವನ್ನು ಇಂದು ಟಿವಿ ನಿರ್ದೇಶಿಸುತ್ತಿದೆ. ಪೆರುವಂಥ ದೇಶ ಮೂರು ತಿಂಗಳುಗಳ ಕಾಲ ಟಿವಿಯ ಮೇಲೆ ಕೆಲವು ಪ್ರದೇಶಗಳಲ್ಲಿ ಪ್ರಯೋಗಾರ್ಥವಾಗಿ ದಿಗ್ಬಂಧನ ಹೇರಿತು. ಪರಿಣಾಮ ಸಕಾರಾತ್ಮಕವಾಗಿತ್ತು. ಇದನ್ನು ಕ್ರಮೇಣ ಬೇರೆ ಪ್ರದೇಶಗಳಿಗೆ ವಿಸ್ತರಿಸುವ ಆಶಯವನ್ನು ಅಲ್ಲಿನ ಸರಕಾರ ಹೊಂದಿದೆ. ಇಡೀ ಪೀಳಿಗೆ, ತಲೆಮಾರು ಟಿವಿ ಮುಂದೆ ಕುಳಿತು ಕಳೆದುಬಿಟ್ಟರೆ ಏನಾಗಬೇಡ?'

ಯೋಗೀಜಿ ಮಾತು ಬದಲಿಸಿದರು. 'ಯಾವುದೇ ಕ್ಷೇತ್ರ ಇರಬಹುದು. ಅಲ್ಲಿ ಅಪರಿಮಿತ ಸಾಧನೆ ಮಾಡಿದ ಜನರನ್ನು ಭೇಟಿ ಮಾಡಿ ಅವರೊಂದಿಗೆ ಕೆಲ ಸಮಯವನ್ನಾದರೂ ಕಳೆಯುವುದು, ನನಗೆ ಇಷ್ಟವಾದ ಸಂಗತಿ. ಕೆಲ ವರ್ಷದ ಹಿಂದೆ ಮೂರು ಸೇತುವೆ ಸಹಿತ ಹದಿನಾಲ್ಕು ಕಿಮೀ ರಸ್ತೆಯನ್ನು ಮಾಡಿದ ಗ್ರಾಮಸ್ಥರನ್ನು ಭೇಟಿ ಮಾಡಿದ್ದೆ. ಸರಕಾರದಿಂದ ಒಂದು ರುಪಾಯಿ ಸಹಾಯವಿಲ್ಲದೇ ನಲವತ್ತೊಂದು ಮಂದಿ ರೈತರು ಸೇರಿ ರಸ್ತೆ, ಸೇತುವೆ ನಿರ್ಮಿಸಿದ್ದರು. ಅವರೆಲ್ಲರ ಜತೆ ಕಳೆದಾಗ ಗೊತ್ತಾದ ಒಂದು ಅಂಶವೇನೆಂದರೆ, ಅವರ್‍ಯಾರೂ ನಕಾರಾತ್ಮಕವಾಗಿ ಯೋಚಿಸುವವರಲ್ಲ. ಮಾಡೋಣ, ಯಾಕಾಗೊಲ್ಲ, ಮಾಡಿಯೇ ಸಿದ್ಧ, ನಾವು ಮಾಡದಿದ್ದರೆ ಮತ್ಯಾರು ಮಾಡಬೇಕು, ಸುಮ್ಮನೆ ಕುಳಿತರೆ ಮುದುಕರಾಗಿ ಬಿಡುತ್ತೇವೆ, ಒಂದು ದಿನವನ್ನೂ ವ್ಯರ್ಥಗೊಳಿಸಬಾರದು ಎಂದು ಯೋಚಿಸುವ, ಅದನ್ನೇ ಮಂತ್ರವನ್ನಾಗಿಸಿಕೊಂಡ highly charged ತಂಡವದು. ಈಗ ಅವರು ದೊಡ್ಡ ಗುಡ್ಡಕ್ಕೆ ಸುರಂಗ ಕೊರೆದು ಊರಿಗೆ ನೀರು ತರಲು ಹೊರಟಿದ್ದಾರೆ. ಸರಕಾರ ನಮ್ಮ ತಂಟೆಗೆ ಬರದಿದ್ದರೆ ಸಾಕು ಎನ್ನುವವರು.'

'ನಮ್ಮ ಸರಕಾರ, ಮುಖ್ಯಮಂತ್ರಿಗಳ ಸುತ್ತಮುತ್ತ ನೆಗೆಟಿವ್ ಯೋಚನೆ ತುಂಬಿದ ಅಧಿಕಾರಿಗಳು, ಚೇಲಾಗಳು, ಹಿಂಬಾಲಕರೇ ತುಂಬಿರುತ್ತಾರೆ. ಅವರಿಗೆ ಯಾವುದೇ ಕೆಲಸ, ಯೋಜನೆ ಹೇಳಿ. ಅದನ್ನು ಮಾಡುವುದು ಎಷ್ಟು ಕಷ್ಟ, ಯಾಕೆ ಫೀಸಿಬಲ್ ಅಲ್ಲ ಎಂದು ಮನಮುಟ್ಟುವಂತೆ ವಿವರಿಸುತ್ತಾರೆ. ಅಪ್ಪಿತಪ್ಪಿಯೂ ಈ ಕೆಲಸ ಮಾಡೋಣ, ಯಾಕಾಗೊಲ್ಲ ಎಂದು ಹೇಳುವುದಿಲ್ಲ. ವಿನಾಕಾರಣ ಕಾಲಹರಣ ಮಾಡುತ್ತಾರೆ. ಒಂದು ಯೋಜನೆಯನ್ನು ಹಳ್ಳ ಹಿಡಿಸುವುದು ಹೇಗೆ ಎಂದೇ ಅಕಲು ಹಾಕುತ್ತಿರುತ್ತಾರೆ. ಮುಖ್ಯಮಂತ್ರಿಗಳು ಖಡಕ್ಕಾಗಿ ಇದನ್ನು ಮಾಡಿ ಎಂದರೂ ಹಲವು ಅಡೆತಡೆಗಳ ನೆಪ ಹೇಳುತ್ತಾರೆ. ಕೊಕ್ಕೆ ಹಾಕುತ್ತಾರೆ. ಅದೆಂಥ ನೆಗೆಟಿವ್ ಎನರ್ಜಿ ಅವರಲ್ಲಿ ತುಂಬಿಕೊಂಡಿರಬಹುದು? ಸರಕಾರದಿಂದ ಯಾವ ಕೆಲಸವೂ ಸಾಧ್ಯವಿಲ್ಲ ಅಥವಾ ವಿಳಂಬ ಎಂಬುದಕ್ಕೆ ಇದೇ ಕಾರಣ. ನಮ್ಮ ಸುತ್ತಮುತ್ತ ಗೊಣಗುವವರು, ಚಾಡಿ ಹೇಳುವವರು, ಸದಾ ನೆಗೆಟಿವ್ ಸಂಗತಿಗಳನ್ನು ಹೇಳುವವರೇ ತುಂಬಿದ್ದರೆ ಹೀಗೇ ಆಗುತ್ತದೆ. ಅಲ್ಲಿ ಸಕಾರಾತ್ಮಕ ಚಿಂತನೆಯಿರುವವರು ವಿರಳ. ಬರೀ ಅಪನಂಬಿಕೆ, ಸಂದೇಹ ಪ್ರವೃತ್ತಿಯವರೇ ತುಂಬಿರುತ್ತಾರೆ. ತಮ್ಮನ್ನು ಭೇಟಿ ಮಾಡಲು ಬರುವವರನ್ನು ಅನುಮಾನದಿಂದಲೇ ನೋಡುವ ಗುಣ ಬೆಳೆಸಿಕೊಂಡಿರುತ್ತಾರೆ. ಸರಕಾರದಲ್ಲಿ ಯಾಕೆ ಕೆಲಸ ಆಗುವುದಿಲ್ಲ ಎಂಬುದಕ್ಕೆ ಇದೇ ಕಾರಣ. ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ಅವರ ಜತೆ ಅರ್ಧ ಗಂಟೆ ಕಳೆಯಿರಿ. ಅವರು ನಿಮ್ಮನ್ನು ಪ್ರೇರೇಪಿಸುವುದಿಲ್ಲ. ನಿಮ್ಮಲ್ಲಿ ಉತ್ಸಾಹ ತುಂಬುವುದಿಲ್ಲ. ನಾವು ಮುಖ್ಯಮಂತ್ರಿಯನ್ನು ಭೇಟಿ ಮಾಡಿದ್ದೇವೆಂದು ನೀವು ಜಂಬ ಪಡಬಹುದೇ ಹೊರತು, ಅವರ ವಿಚಾರ, ಸ್ಫೂರ್ತಿದಾಯಕ ಮಾತುಗಳಿಂದಲ್ಲ. ನೆಗೆಟಿವ್ ವಾತಾವರಣ ತುಂಬಿರುವ ಕಡೆ ಯಾವ ಘನ ಕಾರ್ಯವನ್ನೂ ನಿರೀಕ್ಷಿಸುವುದು ಅಸಾಧ್ಯ. ನಿಮ್ಮ ಮನೆ, ಆಫೀಸು, ಅಕ್ಕಪಕ್ಕ ಇಂಥ ಒಂದಿಬ್ಬರು ವ್ಯಕ್ತಿಗಳಿದ್ದರೂ ಸಾಕು, ಅವರು ನಿಮ್ಮಲ್ಲಿ ನಕಾರಾತ್ಮಕತೆಯನ್ನು ಬಿತ್ತುತ್ತಿರುತ್ತಾರೆ. ಅದೇ ನೀವು ಸಾಧಕರ ಜತೆಗೆ ಇದ್ದರೆ, ಅವರೇ ನಿಮ್ಮನ್ನು ಮುನ್ನಡೆಸುತ್ತಾರೆ. ಲೇಹ್ ಹಿಮಪರ್ವತಗಳಲ್ಲಿ ಮೂರು ವರ್ಷ ಬರಿ ಮೈಯಲ್ಲಿದ್ದ ಸಾಧುವೊಬ್ಬರನ್ನು ಭೇಟಿ ಮಾಡಿದ್ದೆ. ಚಳಿಗಾಲದಲ್ಲಿ ಮೈನಸ್ ಹತ್ತು-ಹನ್ನೆರಡು ಡಿಗ್ರಿ ಸೆಂಟಿಗ್ರೇಡ್ ಕೊರೆಯುವ ಚಳಿಯಲ್ಲಿ ಬರಿ ಮೈಯಲ್ಲಿ ಎರಡು ನಿಮಿಷ ಇದ್ದರೆ, ಮೂಳೆ ಕೊರೆದು ಹೋಗಬಹುದು. ಆದರೆ ಆ ತಪಸ್ವಿ ಮೂರು ವರ್ಷದಿಂದ ಬರಿಮೈಯಲ್ಲಿದ್ದಾರೆ! ಇದು ಹೇಗೆ ಸಾಧ್ಯವಾಯಿತು ಎಂದು ನಾನು ಅವರನ್ನು ಕೇಳಿದೆ. ಅದಕ್ಕೆ ಅವರು ಹೇಳಿದರು-'ಮನಸು!'

'ತಾನು ಮೈ ತುಂಬಾ ಬಟ್ಟೆ ಹೊದ್ದುಕೊಂಡಿದ್ದೇನೆ, ಬೆಚ್ಚಗಿದ್ದೇನೆ ಎಂದು ಅವರು ಮೂರು ವರ್ಷಗಳಿಂದಲೂ ತಮ್ಮನ್ನು ನಂಬಿಸಿಕೊಂಡು ಮನಸ್ಸನ್ನು ಕಲ್ಲು ಮಾಡಿಕೊಂಡಿದ್ದಾರೆ. ಅವರನ್ನು ಕಂಡರೆ ಚಳಿಯೇ ಓಡಿ ಹೊರಟು ಹೋಗುತ್ತದೆ. ಈ ಆಸಾಮಿ ನನ್ನ ಜತೆ ಎರಡು ವಾರವಿದ್ದರು. ಅವರು ಒಂದು ಸಲವೂ ನೆಗೆಟಿವ್ ಮಾತು ಹೇಳಿದ್ದನ್ನು ಕೇಳಲಿಲ್ಲ. ಕಲ್ಲನ್ನು ಕೊಟ್ಟರೂ ಚೆನ್ನಾಗಿ ಅಗೆಯಬಹುದು ಎಂಬ ಉತ್ಸಾಹ ಅವರಲ್ಲಿತ್ತು. ಇಂಥ ಜನ ನನಗೆ ಅರಿವಿಲ್ಲದಂತೆ ನನ್ನಲ್ಲಿ ಹೊಸ ಶಕ್ತಿ, ಆಸೆ, ಭರವಸೆ, ವಿಶ್ವಾಸ, ನಂಬಿಕೆ ತುಂಬುತ್ತಾರೆ. ಮನಸ್ಸು ಎಂಥಾ ಸಾಹಸಕ್ಕಾದರೂ ಎದ್ದು ನಿಲ್ಲುತ್ತದೆ' ಎಂದರು ಯೋಗಿ ದುರ್ಲಭಜೀ.

ಈ ಮಾತನ್ನು ಕೇಳಿದ ನನ್ನಲ್ಲಿಯೂ ಯೋಗೀಜಿ ಅದೇ ಭಾವವನ್ನು ಬಿತ್ತಿದ್ದರು. ಇನ್ನು ನಿಮ್ಮ ಸರದಿ!

ಶಿಕ್ಷಣ ವ್ಯವಸ್ಥೆಯಲ್ಲಿ ಕಳ್ಳಾಟ ದೇಶಕ್ಕೇ ಮೋಸ

ದುರದೃಷ್ಟವಶಾತ್ ಮಹಾರಾಷ್ಟ್ರ ಕೂಡ ಈಗ ಶೈಕ್ಷಣಿಕ ಹಗರಣಗಳಲ್ಲಿ ಪಾಲ್ಗೊಂಡ ರಾಜ್ಯಗಳ ಪಟ್ಟಿಗೆ ಸೇರ್ಪಡೆಯಾಗಿದೆ. ನಕಲಿ ಶಿಕ್ಷಕರನ್ನು ಶಾಲೆಗಳಿಗೆ ನೇಮಕಾತಿ ಮಾಡಿದರೆ ಅವರು ಎಂತಹ ಪ್ರಜೆಗಳನ್ನು ಸೃಷ್ಟಿ ಮಾಡಬಲ್ಲರು? ವಿದ್ಯಾರ್ಥಿಗಳಿಗೆ ಏನು ಪಾಠ ಮಾಡುತ್ತಾರೆ? ಅವರು ಭವ್ಯ ಭಾರತದಲ್ಲಿ ಎಂತಹ ಪ್ರಜೆಗಳನ್ನು ಸೃಷ್ಟಿಸಬಲ್ಲರು? ಇಷ್ಟಕ್ಕೂ, ಶಿಕ್ಷಣಕ್ಕಿಂತ ಪವಿತ್ರವಾದುದು ನಮ್ಮ ಜೀವನದಲ್ಲಿ ಏನಿದೆ? ಆದರೆ ಈ ವಂಚಕರು ಅದನ್ನೂ ಕುಲಗೆಡಿಸುತ್ತಿದ್ದಾರೆ!

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಮಧ್ಯಪ್ರದೇಶ, ಛತ್ತೀಸ್‌ಗಢ, ಒಡಿಶಾ, ಉತ್ತರ ಪ್ರದೇಶ, ಬಿಹಾರ, ಕರ್ನಾಟಕ, ತ್ರಿಪುರಾ, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳಲ್ಲಿ ದೊಡ್ಡ ದೊಡ್ಡ ಶೈಕ್ಷಣಿಕ ಹಗರಣಗಳು ನಡೆದಿದ್ದು ಕೆಲ ಸಮಯದ ಹಿಂದೆ ಪತ್ರಿಕೆಗಳಲ್ಲಿ ಪ್ರಮುಖ ಹೆಡ್‌ಲೈನ್ ಆಗಿತ್ತು. ಇದೀಗ ಮಹಾರಾಷ್ಟ್ರ ಕೂಡ ಆ ಸಾಲಿಗೆ ಸೇರ್ಪಡೆಯಾಗಿದೆ. ಎಂತಹ ದುರದೃಷ್ಟ ನೋಡಿ. ನನಗೆ ಬಹಳ ಆಘಾತವಾಗಿದೆ. ಮಹಾರಾಷ್ಟ್ರದಲ್ಲಿ ನಿಜಕ್ಕೂ ಏನಾಗುತ್ತಿದೆ? ಈ ಹಗರಣಕ್ಕೆ ಯಾರು ಹೊಣೆ? ಒಂದು ಕಡೆ ನಾವೆಲ್ಲರೂ ನಮ್ಮ ನಮ್ಮ ರಾಜ್ಯ ಮತ್ತು ದೇಶದಲ್ಲಿ ಶಿಕ್ಷಣ ವ್ಯವಸ್ಥೆ ಸುಧಾರಿಸಬೇಕು ಎಂದು ಮಾತನಾಡುತ್ತೇವೆ. ಇನ್ನೊಂದು ಕಡೆ ಶಿಕ್ಷಕರ ನೇಮಕಾತಿಯಲ್ಲೇ ಬಹುಕೋಟಿ ಮೊತ್ತದ ವಂಚನೆಗಳು ನಡೆಯುತ್ತಿವೆ. ಶೈಕ್ಷಣಿಕ ಅರ್ಹತೆಯೇ ಇಲ್ಲದ ನಕಲಿ ಶಿಕ್ಷಕರು ನಮ್ಮ ಶಾಲೆ, ಕಾಲೇಜುಗಳಿಗೆ ನೇಮಕಗೊಳ್ಳುತ್ತಿದ್ದಾರೆ.

ಮೊದಲಿಗೆ ನಾಗ್ಪುರ ವಲಯದಲ್ಲಿ ಈ ಹಗರಣ ಆರಂಭವಾಯಿತು. ಅದರ ತನಿಖೆ ನಡೆಸಿದಾಗ ಛತ್ರಪತಿ ಸಂಭಾಜಿನಗರದಲ್ಲೂ ಇಂತಹ ಹಲವು ಪ್ರಕರಣಗಳು ನಡೆದಿರುವುದು ಬೆಳಕಿಗೆ ಬಂತು. ಅಲ್ಲಿ ಸಾಕಷ್ಟು ಜನರು ನಕಲಿ ಸರ್ಟಿಫಿಕೆಟ್‌ಗಳನ್ನು ಬಳಸಿಕೊಂಡು ಪಿಎಚ್‌ಡಿ ಕೂಡ ಪಡೆದಿದ್ದರು. ಹಿಂದೆ ನಾನು ರಾಜ್ಯಸಭೆ ಸದಸ್ಯನಾಗಿದ್ದಾಗ ನಕಲಿ ಪಿಎಚ್‌ಡಿ ಪದವಿಗಳ ಬಗ್ಗೆ ಶಾಸನಸಭೆಯಲ್ಲಿ ಹಲವು ಬಾರಿ ಪ್ರಸ್ತಾಪ ಮಾಡಿದ್ದೆ. ದೇಶಾದ್ಯಂತ ನೂರಾರು ಜನರು ನಕಲಿ ಅಂಕಪಟ್ಟಿ ಹಾಗೂ ಸರ್ಟಿಫಿಕೆಟ್‌ಗಳನ್ನು ಬಳಸಿ ಪಿಎಚ್‌ಡಿ ಪಡೆಯುತ್ತಿದ್ದಾರೆ, ಇದೊಂದು ಹಗರಣದ ರೀತಿಯಲ್ಲಿ ನಡೆಯುತ್ತಿದೆ ಎಂದು ಗಮನ ಸೆಳೆದಿದ್ದೆ. ಈಗ ಈ ನಕಲಿ ಸರ್ಟಿಫಿಕೆಟ್‌ಗಳ ಹಾವಳಿ ಎಲ್ಲಿಗೆ ಹೋಗಿ ತಲುಪಿದೆಯೆಂದರೆ, ನಾಮಪತ್ರ ಸಲ್ಲಿಸಲು ಕೂಡ ನಕಲಿ ಸರ್ಟಿಫಿಕೆಟ್‌ಗಳನ್ನು ಬಳಸುತ್ತಿದ್ದಾರೆ. ನನಗೊಂದು ವಿಷಯ ಅರ್ಥವಾಗುತ್ತಿಲ್ಲ. ನಕಲಿ ದಾಖಲೆಗಳನ್ನು ಬಳಸಿಕೊಂಡು ಶಿಕ್ಷಕರಾಗಿ ನೇಮಕಗೊಳ್ಳುವವರು ವಿದ್ಯಾರ್ಥಿಗಳಿಗೆ ಏನು ಪಾಠ ಮಾಡುತ್ತಾರೆ? ಅವರು ಭವ್ಯ ಭಾರತದಲ್ಲಿ ಎಂತಹ ಪ್ರಜೆಗಳನ್ನು ಸೃಷ್ಟಿಸಬಲ್ಲರು?

ನಾಗ್ಪುರ ವಲಯವೊಂದರಲ್ಲೇ 12 ಶಾಲೆಗಳಿಗೆ 580 ನಕಲಿ ಶಿಕ್ಷಕರು ನೇಮಕಗೊಂಡಿದ್ದಾರೆ ಎಂಬುದು ಆಘಾತಕಾರಿ ಹಾಗೂ ನಂಬಲು ಸಾಧ್ಯವಿಲ್ಲದ ಸಂಗತಿ. ಇದರ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಶಿಕ್ಷಣ ಸಚಿವಾಲಯಕ್ಕೆ ಗೊತ್ತೇ ಇರಲಿಲ್ಲ ಅಂದರೆ ನಮ್ಮ ವ್ಯವಸ್ಥೆ ಎಲ್ಲಿಗೆ ಹೋಗಿ ತಲುಪಿದೆ ಎಂದು ಅಚ್ಚರಿಯಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಕೆಲ ಶಾಲಾ ಆಡಳಿತ ಮಂಡಳಿಗಳು ಶಿಕ್ಷಣ ಇಲಾಖೆಯ ಭ್ರಷ್ಟ ಅಧಿಕಾರಿಗಳ ಜೊತೆಗೆ ಶಾಮೀಲಾಗಿ ನಕಲಿ ಲಾಗಿನ್ ಐಡಿಗಳನ್ನು ಬಳಸಿಕೊಂಡು ನಕಲಿ ಶಿಕ್ಷಕರು ಹಾಗೂ ಸಿಬ್ಬಂದಿಯ ಹೆಸರುಗಳನ್ನು ಸರಕಾರದ ವೆಬ್‌ಸೈಟಿನಲ್ಲಿ ಸೇರ್ಪಡೆ ಮಾಡಿದ್ದಾರೆ. ಹಳೆಯ ದಿನಾಂಕವನ್ನು ತೋರಿಸಿ ನೇಮಕಾತಿ ಮಾಡಿಕೊಂಡು, ಅಲ್ಲಿಂದ ಇಲ್ಲಿಯವರೆಗೂ ಇವರಿಗೆ ವೇತನ ಸಂದಾಯವಾದಂತೆ ನಮೂದಿಸಿ, ಹಿಂಬಾಕಿಯನ್ನೂ ಪಾವತಿಸಿ, ಕೋಟ್ಯಂತರ ರೂಪಾಯಿ ಹಣ ನುಂಗಿಹಾಕಿದ್ದಾರೆ. ಇಲ್ಲೇನೋ ಅಕ್ರಮ ನಡೆಯುತ್ತಿದೆ ಎಂದು ಕೆಲ ದಕ್ಷ ಅಧಿಕಾರಿಗಳು ದಾಖಲೆಗಳನ್ನು ಪರಾಮರ್ಶೆ ನಡೆಸದೆ ಇದ್ದಿದ್ದರೆ ಈ ಅವ್ಯವಹಾರ ಹೀಗೇ ಮುಂದುವರೆಯುತ್ತಿತ್ತು. ಈ ಪ್ರಾಮಾಣಿಕ ಅಧಿಕಾರಿಗಳು ತಾವೂ ಕೂಡ ಅಕ್ರಮದಲ್ಲಿ ಪಾಲ್ಗೊಳ್ಳಲು ನಿರಾಕರಿಸಿದ್ದರಿಂದ ಹಗರಣ ಬೆಳಕಿಗೆ ಬಂದಿತು. ಈ ಅವ್ಯವಹಾರದಲ್ಲಿ ಕೆಲ ದೊಡ್ಡ ದೊಡ್ಡ ರಾಜಕಾರಣಿಗಳು ಕೂಡ ಭಾಗಿಯಾಗಿದ್ದಾರೆ ಎಂಬ ಸುದ್ದಿಯಿದೆ. ಸರಿಯಾಗಿ ತನಿಖೆ ನಡೆದರೆ ಎಲ್ಲಾ ಹೆಸರುಗಳು ಹೊರಗೆ ಬರುತ್ತವೆ.

ಪುಣೆಯ ಶಿಕ್ಷಣ ನಿರ್ದೇಶನಾಲಯಕ್ಕೆ ಹಗರಣದ ಸುಳಿವು ಸಿಕ್ಕಾಗ ಅದು 304 ಶಾಲೆಗಳ ಬಳಿ ನಿಮ್ಮಲ್ಲಿ ನಡೆದ ನೇಮಕಾತಿಯ ದಾಖಲೆಗಳನ್ನು ನೀಡಿ ಎಂದು ಕೇಳಿತು. 2019ರಿಂದ 2025ರ ನಡುವೆ ನೇಮಕಗೊಂಡ ಎಲ್ಲಾ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಯ ಬಗ್ಗೆ ಅದು ವರದಿ ಕೇಳಿತು. ಆ ನೇಮಕಾತಿಗೆ ಸರಕಾರದಿಂದ ದೊರೆತ ಒಪ್ಪಿಗೆ, ನೇಮಕಾತಿಯ ದಿನಾಂಕ, ವೇತನದ ಬಿಲ್‌ಗಳನ್ನು ನೀಡುವಂತೆಯೂ ಸೂಚಿಸಿತು. ಶಾಲೆಗಳು 1056 ಶಿಕ್ಷಕರ ನೇಮಕಾತಿಯ ಪಟ್ಟಿಯನ್ನು ಮಾತ್ರ ನೀಡಿದವು. ಆದರೆ, ಸರಕಾರ ಕೇಳಿದ ವಿವರಗಳನ್ನು ನೀಡಲು ಅವುಗಳಿಗೆ ಸಾಧ್ಯವಾಗಲಿಲ್ಲ, ಏಕೆಂದರೆ ಅನೇಕ ಶಿಕ್ಷಕರು ಅಸ್ತಿತ್ವದಲ್ಲೇ ಇರಲಿಲ್ಲ ಮತ್ತು ನೇಮಕಾತಿ ನಡೆಯುವುದಕ್ಕೂ ಮೊದಲೇ ನಕಲಿ ಶಿಕ್ಷಕರಿಗೆ ಹಿಂದಿನ ದಿನಾಂಕಗಳಿಂದ ವೇತನ ಪಾವತಿಸಲಾಗಿತ್ತು! ಹಗರಣದಲ್ಲಿ ಭಾಗಿಯಾಗಿದ್ದ ನಾಗ್ಪುರದ ಶಿಕ್ಷಣ ಇಲಾಖೆ ಅಧಿಕಾರಿ ನಿಲೇಶ್ ವಾಘ್ಮರೆಯನ್ನು ಅಮಾನತು ಮಾಡಲಾಯಿತು. ಆತ ಶಿಕ್ಷಣ ಇಲಾಖೆಯಲ್ಲಿ ಬಹಳ ಪ್ರಭಾವಿಯಾಗಿದ್ದ. ತನ್ನ ಅಂಕಲ್ ಮಹಾರಾಷ್ಟ್ರದ ಸರಕಾರದಲ್ಲಿ ಮಂತ್ರಿ ಎಂದು ಹೇಳಿಕೊಂಡು ಈತ ಓಡಾಡುತ್ತಿದ್ದ. ತನಿಖೆ ಮುಂದುವರೆದಾಗ ಹಗರಣದ ಹಲವು ಮಜಲುಗಳು ತೆರೆದುಕೊಂಡವು. ಇನ್ನೂ ಏನೇನು ಹೊರಗೆ ಬರುವುದೋ ಕಾದು ನೋಡೋಣ!

ಹಿಂದೆ ಪೃಥ್ವಿರಾಜ್ ಚವಾಣ್ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಾಗ ನನ್ನ ತಮ್ಮ ರಾಜೇಂದ್ರ ದರಡಾ ಶಿಕ್ಷಣ ಮಂತ್ರಿಯಾಗಿದ್ದರು. ಅವರು ಆ ಸಮಯದಲ್ಲಿ ಶಾಲೆಗಳು ನಕಲಿ ವಿದ್ಯಾರ್ಥಿಗಳ ಹೆಸರು ನೋಂದಣಿ ಮಾಡಿಕೊಂಡು ಸರ್ಕಾರದಿಂದ ಹಣ ಲಪಟಾಯಿಸುತ್ತಿದ್ದ ಹಗರಣವನ್ನು ಪತ್ತೆ ಮಾಡಿದ್ದರು. ಆಗ ಮುಖ್ಯಮಂತ್ರಿಗಳಿಗೆ ದೇವೇಂದ್ರ ಫಡ್ನವೀಸ್ ಕಾರ್ಯದರ್ಶಿಯಾಗಿದ್ದರು. ಶ್ರೀಕರ ಪರದೇಶಿಯವರು ನಾಂದೇಡ್‌ನ ಜಿಲ್ಲಾಧಿಕಾರಿಯಾಗಿದ್ದರು. ಅವರು ಅಂದಿನ ಶಿಕ್ಷಣ ಮಂತ್ರಿ ರಾಜೇಂದ್ರ ದರಡಾಗೆ ವರದಿ ನೀಡಿ, ನಾಂದೇಡ್‌ನ ಕೆಲ ಶಾಲೆಗಳಲ್ಲಿ ನಿಜವಾಗಿಯೂ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೂ, ಸರಕಾರದ ದಾಖಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗೂ ದೊಡ್ಡ ವ್ಯತ್ಯಾಸವಿದೆ ಎಂದು ತಿಳಿಸಿದ್ದರು. ಅದನ್ನು ರಾಜೇಂದ್ರ ದರಡಾ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಿ, ತಾನು ರಾಜ್ಯಾದ್ಯಂತ ಶಾಲೆಗಳಲ್ಲಿ ನಕಲಿ ವಿದ್ಯಾರ್ಥಿಗಳನ್ನು ಪತ್ತೆಹಚ್ಚುವ ಆಂದೋಲನ ಕೈಗೊಳ್ಳುವುದಾಗಿ ತಿಳಿಸಿದರು. ಅಂದಿನ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹಾಗೂ ಇತರ ಸಚಿವರು ಅದಕ್ಕೆ ಬೆಂಬಲ ನೀಡಿದ್ದರು. ಇದು ಗಮನಾರ್ಹ ಸಂಗತಿ ಏಕೆಂದರೆ, ಸಾಕಷ್ಟು ಶಾಲೆಗಳು ಪ್ರಭಾವಿ ವ್ಯಕ್ತಿಗಳು, ರಾಜಕಾರಣಿಗಳು ಮತ್ತು ಅವರ ಆಪ್ತರ ಒಡೆತನದಲ್ಲಿದ್ದವು. ಅದಕ್ಕೆ ತಲೆಕೆಡಿಸಿಕೊಳ್ಳದೆ ಮೂರು ದಿನಗಳ ತನಿಖಾ ಆಂದೋಲನ ನಡೆಯಿತು. ಅದು ನಕಲಿ ವಿದ್ಯಾರ್ಥಿಗಳ ಪತ್ತೆಗೆ ದೇಶದಲ್ಲಿ ನಡೆದ ಅತಿದೊಡ್ಡ ಆಂದೋಲನವಾಗಿತ್ತು. ಫಲಿತಾಂಶ ಬಂದಾಗ ಎಲ್ಲರಿಗೂ ಆಘಾತವಾಗಿತ್ತು. ರಾಜ್ಯ ಸರಕಾರದ ದಾಖಲೆಗಳಲ್ಲಿ 2.18 ಕೋಟಿ ವಿದ್ಯಾರ್ಥಿಗಳಿದ್ದರು. ಅವುಗಳ ಪೈಕಿ 12 ಲಕ್ಷ

ವಿದ್ಯಾರ್ಥಿಗಳು ಅಸ್ತಿತ್ವದಲ್ಲೇ ಇಲ್ಲ ಎಂಬುದು ತನಿಖೆಯಲ್ಲಿ ತಿಳಿದುಬಂತು. ಈ 12 ಲಕ್ಷ ವಿದ್ಯಾರ್ಥಿಗಳ ಹೆಸರೇ ಸಂಪೂರ್ಣ ನಕಲಿಯಾಗಿದ್ದವು. ಆದರೆ ಅವರ ಹೆಸರಿನಲ್ಲಿ ಶಾಲೆಗಳಿಗೆ ಅನುದಾನ, ಶಿಕ್ಷಕರ ವೇತನ, ಪಠ್ಯಪುಸ್ತಕಕ್ಕೆ ಹಣ, ನೋಟ್‌ಪುಸ್ತಕ, ಮಧ್ಯಾಹ್ನದ ಬಿಸಿಯೂಟ ಹೀಗೆ ಕೋಟ್ಯಂತರ ರೂಪಾಯಿಗಳನ್ನು ಸರಕಾರ ಪಾವತಿಸುತ್ತಿತ್ತು. ರಾಜೇಂದ್ರ ದರಡಾ ನಡೆಸಿದ ಆ ಆಂದೋಲನದಿಂದ ಸರಕಾರಕ್ಕೆ 100 ಕೋಟಿ ರೂಪಾಯಿ ಪ್ರತಿ ವರ್ಷ ಉಳಿತಾಯವಾಗತೊಡಗಿತು. ಒಂದಂತೂ ಸ್ಪಷ್ಟ, ಸರಕಾರವು ಶಿಕ್ಷಕರಿಗೆ ವೇತನ ಶ್ರೇಣಿ ಜಾರಿಗೊಳಿಸಿದ ಬಳಿಕ ಸರಕಾರಿ ಶಾಲಾ ಶಿಕ್ಷಕರು ಮತ್ತು ಅನುದಾನಿತ ಶಾಲೆಗಳ ಶಿಕ್ಷಕರಿಗೆ ದೊಡ್ಡ ಮೊತ್ತದ ವೇತನ ಲಭಿಸತೊಡಗಿದ್ದರಿಂದ ಹಗಣರಗಳು ಹೆಚ್ಚುತ್ತಲೇ ಹೋಗಿವೆ. ತಳಮಟ್ಟದಿಂದ ಉನ್ನತ ಹಂತದವರೆಗೂ ಇದರಲ್ಲಿ ನಾನಾ ವ್ಯಕ್ತಿಗಳು ಭಾಗಿಯಾಗಿದ್ದಾರೆ. ಇದು ತೆರಿಗೆದಾರರ ಹಣದ ಲೂಟಿಯಲ್ಲದೆ ಬೇರೇನೂ ಅಲ್ಲ.

ಶಿಕ್ಷಣ ನೀಡುವುದು ಪವಿತ್ರ ಕಾರ್ಯ ಎಂದು ನಂಬಿರುವ ನಮ್ಮ ದೇಶದಲ್ಲೇ ಶಿಕ್ಷಣದ ಹೆಸರಿನಲ್ಲಿ ಇಂತಹ ಹಗರಣಗಳು ನಡೆಯುತ್ತಿವೆ ಎಂಬುದು ನನಗಂತೂ ಆಘಾತಕಾರಿ ಸಂಗತಿ. ಆದರೆ ಇಂದು ಶಾಲೆ ಮತ್ತು ಕಾಲೇಜುಗಳನ್ನು 'ಸಂಸ್ಥೆಗಳು' ಎಂದು ಕರೆಯತೊಡಗಿದ ಮೇಲೆ ಶಿಕ್ಷಣ ಕೂಡ ಬಿಸಿನೆಸ್ ಆಗಿ ಪರಿವರ್ತಿತವಾಗಿದೆ. ನಿಮಗೆ ಆಶ್ಚರ್ಯವಾಗಬಹುದು. ಇಂದು ಶಾಲೆ, ಕಾಲೇಜುಗಳನ್ನು ಉದ್ಯಮದಂತೆ ನಡೆಸುವವರು ಎಷ್ಟು ಶ್ರೀಮಂತರಾಗಿದ್ದಾರೆ ಅಂದರೆ, ಅವರು ದೊಡ್ಡ ದೊಡ್ಡ ನಗರಗಳಲ್ಲಿ ನೂರಾರು ಕೋಟಿ ರೂಪಾಯಿ ಮೌಲ್ಯದ ಬಂಗಲೆ, ವಿಲ್ಲಾ, ಮನೆ, ಫ್ಲ್ಯಾಟ್‌ಗಳನ್ನು ಹೊಂದಿದ್ದಾರೆ.

ನೆನಪಿಡಿ, ಯಾವುದೇ ಸಮಾಜಕ್ಕೆ ಶಿಕ್ಷಣಕ್ಕಿಂತ ದೊಡ್ಡ ವರದಾನ ಬೇರೆ ಇಲ್ಲ. ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿದಾಗ ಮಾತ್ರ ನಾವು ಗುಣಮಟ್ಟದ ಶಿಕ್ಷಕರನ್ನೂ, ಸುಶಿಕ್ಷಿತ ಪ್ರಜೆಗಳನ್ನೂ ಸೃಷ್ಟಿಸಲು ಸಾಧ್ಯ. ಆಗ ಮಾತ್ರ ನಾವು ಜಗತ್ತಿನೆದುರು ಎದೆ ತಟ್ಟಿಕೊಂಡು ರಾಮಾಯಣ ನಮ್ಮದು, ಭಗವದ್ಗೀತೆ ನಮ್ಮದು ಎಂದು ಹೇಳಿಕೊಳ್ಳಬಹುದು. ಇಂದು ಜಗತ್ತಿನಾದ್ಯಂತ ವಿಶ್ವವಿದ್ಯಾಲಯಗಳು ತಮ್ಮಲ್ಲಿರುವ ವಿದ್ಯಾರ್ಥಿಗಳಿಗೆ ರಾಮಾಯಣ, ಮಹಾಭಾರತ, ಭಗವದ್ಗೀತೆಯನ್ನು ಕಲಿಸುತ್ತಿವೆ. ಆದರೆ ನಾವು ನಮ್ಮ ಮನೆಗಳಲ್ಲೂ ಮಕ್ಕಳಿಗೆ ಇದನ್ನು ಕಲಿಸುತ್ತಿಲ್ಲ. ಮಕ್ಕಳಿಗೆ ನಾವು ಬೇರೇನನ್ನೂ ನೀಡುವುದು ಬೇಕಿಲ್ಲ- ಕೇವಲ ಶಿಕ್ಷಣ ನೀಡಿದರೆ ಸಾಕು! ಒಂದು ಬಡ ಕುಟುಂಬದ ಮಗು ಶಿಕ್ಷಣ ಪಡೆದರೆ ಅದು ದೊಡ್ಡವನಾದ ಮೇಲೆ ಇಡೀ ಕುಟುಂಬವನ್ನೇ ಮೇಲೆತ್ತುತ್ತದೆ. ಸಮಾಜದಲ್ಲಿ ನಿಜವಾದ ಬದಲಾವಣೆ ತರುವ ಶಕ್ತಿ ಶಿಕ್ಷಣಕ್ಕೆ ಮಾತ್ರ ಇದೆ. ಕೋಟ್ಯಧಿಪತಿಗಳು ದಿವಾಳಿಯಾಗುವುದನ್ನು ನಾನು ನೋಡಿದ್ದೇನೆ. ಅದೇ ವೇಳೆ, ಉತ್ತಮ ಶಿಕ್ಷಣ ಪಡೆದವರು ದಿವಾಳಿಯಾಗದೆ ಇನ್ನೂ ಎತ್ತರೆತ್ತರಕ್ಕೆ ಏರುವುದನ್ನೂ ನೋಡಿದ್ದೇನೆ. ನನ್ನ ಪ್ರಕಾರ, ಶಿಕ್ಷಣ ವ್ಯವಸ್ಥೆಯ ಜೊತೆಗೆ ಕಳ್ಳಾಟ ಆಡುವುದು ನಮಗೆ ನಾವು ಮಾಡಿಕೊಳ್ಳುವ ಮೋಸವಲ್ಲ, ಬದಲಿಗೆ ದೇಶಕ್ಕೇ ಮಾಡುವ ಮೋಸ. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಮಹಾರಾಷ್ಟ್ರದ ಶಿಕ್ಷಣ ಕ್ಷೇತ್ರದಲ್ಲಿ ಅಪರಾತಪರಾ ಮಾಡಿದ ವಂಚಕರನ್ನು ಪತ್ತೆಹಚ್ಚಿ ಶಿಕ್ಷಿಸುತ್ತಾರೆ ಎಂಬ ನಂಬಿಕೆ ನನಗಿದೆ. ಅವರ ಜೊತೆಗೆ ಕಾರ್ಯದರ್ಶಿಯಾಗಿ ಪ್ರವೀಣ್ ಪರದೇಶಿ ಇದ್ದಾರೆ. ಅವರಿಗೆ ವಂಚಕರನ್ನು ಹಿಡಿಯುವುದು ಹೇಗೆಂಬುದು ಚೆನ್ನಾಗಿ ಗೊತ್ತಿದೆ!

ಭಟ್ಟರ್ ಸ್ಕಾಚ್

- **ಎಸ್. ರಾಘಣ್ಣ, (ಇಮೇಲ್ ಮೂಲಕ)**
  ಭಟ್ರೇ, ಯಾರನ್ನ ಬೆಪ್ಪುತಕ್ಕಡಿಗಳು ಅಂತ ಕರೆಯಬೇಕು?
- **ತಕ್ಕಡಿ ಬೀಳುತ್ತಿರುವಾಗಲೂ ಅಸಹಾಯಕರಾಗಿ ಬೆಪ್ಪನೆ ನೋಡುತ್ತಾ ನಿಲ್ಲುವವರನ್ನು!**

- **ಅಮಾಸೆ ಸುಬ್ಬು, ಮೈಸೂರು**
  ರವಿಚಂದ್ರನ್ ಫ್ಯಾನ್ ಆದ ನನ್ನ ವುಡ್‌ಬಿ ಮೊದಲರಾತ್ರಿ, ಮಂಚಕ್ಕೆ ದ್ರಾಕ್ಷಿಬಳ್ಳಿ ಕಟ್ಟಿಸು ಅಂತ ಚಂಡಿ ಹಿಡಿದಿದ್ದಾಳಲ್ಲ?
- **ನೀನು ಹಲಸು, ಗಡ್ಡೆಗೆಣಸು, ನುಗ್ಗೆಕಾಯಿ ಸೊಪ್ಪು ಕಟ್ಟಿಸದಿರಲಿ ಎಂಬ ಮುನ್ನೆಚ್ಚರಿಕೆ!**

- **ಸಂದೀಪ ನಾಯಕ, ಬೆಂಗಳೂರು**
  ಭಟ್ರೇ, ಮನೆಯಲ್ಲಿ ಕೈದೋಟ, ಅಂಗಳ ಇರಲೇಬೇಕಂತೆ?
- **ಅದೇನೇ ಇರಲಿ, ಪಕ್ಕದಮನೆಯಲ್ಲಿ ಆಂಟಿಯಂತೂ ಇರಲೇಬೇಕು!**

- **ಶಾಲಿನಿ ಎಂ., ಬನ್ನೂರು**
  ಪ್ರೀತಿ ಬರುವಾಗ ಹೇಗೆ ಬರುತ್ತದೆ?
- **ಉಕ್ಕಿ ಬರೋದಷ್ಟೇ ಅದಕ್ಕೆ ಗೊತ್ತು!**

- **ಕೆ.ಪಿ. ಸದಾನಂದ, ತುಮಕೂರು**
  ಭಟ್ರೇ, ಇತಿಹಾಸದಂತೆ, ಗಾದೆಗಳೂ ಮರುಕಳಿಸುವುದಂತೆ, ಹೌದಾ?
- **ಹೂಂ.. ಗಂಡ ಕುಳಿತು ಕೆಟ್ಟ, ಹೆಂಡತಿ ತಿರುಗಿ ಕೆಟ್ಟಳು ಗಾದೆ ಕೇಳಿದರೆ ಹಾಗೆ ಅನಿಸುತ್ತದೆ!**

- **ಕಮಲಾ ಎಂ.ಕೆ.,(ಇಮೇಲ್ ಮೂಲಕ)**
  ಭಟ್ರೇ, ಇಲ್ಲೊಬ್ಬ ಹೆಂಡತಿ ಜತೆ ಬಾರ್‌ಗೆ ಹೋಗುತ್ತಾನಲ್ಲ?
- **ಯಾರ ಹೆಂಡತಿ ಜತೆಗೆ ಎನ್ನುವುದಷ್ಟೇ ಕುತೂಹಲ!**

- **ನೇತ್ರಾ ಕೆ.ಗೌಡ, ಬೆಂಗಳೂರು**
  ಭಟ್ರೇ, ಹೆಣ್ಣಿನ ಸೌಂದರ್ಯ ಕಣ್ಣಿನಲ್ಲಿ ಅಂತಾರಲ್ಲ?
- **ಅದು ಕಣ್ಣನ್ನಷ್ಟೇ ನೋಡುವ ಅರಸಿಕರ ಅಭಿಪ್ರಾಯ!**

- **ವಿ.ಹೇಮಂತಕುಮಾರ, ಬೆಂಗಳೂರು**
  ಸರ್, ಲೇಡಿಸ್ ಫಿಂಗರ್ ಬೆಂಡೇಕಾಯಿ, ಜೆಂಟ್ಸ್ ಫಿಂಗರ್?
- **ನುಗ್ಗೇಕಾಯಿ!**

- **ಚಿದಾನಂದ ಎನ್.ವಿ., (ಇಮೇಲ್ ಮೂಲಕ)**
  ಭಟ್ರೇ, ಹುಡುಗಿಯರು ಚೇಂಜ್ ಕೊಡದಿದ್ದರೂ ಹುಡುಗರು ಏನೂ ಹೇಳುವುದಿಲ್ಲವಲ್ಲ?
- **ಚೇಂಜ್ ಅಲ್ಲ, ಹಣ ಕೊಡದಿದ್ದರೂ ಏನೂ ಹೇಳೊಲ್ಲ!**

- **ಗುರುನಾರಾಯಣ ಪಟಪಲ್ಲಿ, (ಇಮೇಲ್ ಮೂಲಕ)**
  ಭಟ್ರೇ, ನಿಜವಾಗಲೂ ಅಲ್ಪಸಂಖ್ಯಾತರು ಅಂದ್ರೆ ಯಾರು?
- **ಗಂಡಂದಿರು!**

ಹಿಂಸೆ, ರಕ್ತ, ಭಯ ಮತ್ತು ಉತ್ತರ



ಕಾಡುದಾರಿ
ಹರೀಶ್ ಕೇರ
vveditoped@gmail.com

ಜಮ್ಮು ಕಾಶ್ಮೀರದ ಪಹಲ್ಗಾಮ್ ಕಣಿವೆಯಲ್ಲಿ ಭಯೋತ್ಪಾದಕರ ಬಂದೂಕುಗಳು ಮತ್ತೊಮ್ಮೆ ಗರ್ಜಿಸಿವೆ. ಹಲವು ಕಾಲದಿಂದ ಮೌನವಾಗಿದ್ದ ಕಾಶ್ಮೀರ ಕಣಿವೆ ರಕ್ತಸಿಕ್ತವಾಗಿದೆ. ಇದೊಂದು ಪೈಶಾಚಿಕ ಕೃತ್ಯ. ಹಮಾಸ್ ಉಗ್ರರು ಇಸ್ರೇಲ್‌ನೊಳಗೆ ನುಗ್ಗಿ ಇಸ್ರೇಲಿಗರನ್ನು ಸಾಯಿಸಿದಂತೆ ಇಲ್ಲೂ ಮಾಡಲಾಗಿದೆ. ಆದರೆ ಯಾರನ್ನೂ ಒತ್ತೆಯಾಗಿ ಒಯ್ದಿಲ್ಲ ಅಷ್ಟೆ. ಟ್ರಂಪ್ ಸೇರಿದಂತೆ ಜಾಗತಿಕ ನಾಯಕರೆಲ್ಲ ಈ ಹೀನ ಕೃತ್ಯವನ್ನು ಖಂಡಿಸಿದ್ದಾರೆ. ಜಾಗತಿಕ ಚಿಂತಕರೆಲ್ಲ ಈ ಭಯೋತ್ಪಾದನೆಯ ಸ್ವರೂಪ, ಇದನ್ನು ತಡೆಗಟ್ಟುವುದು ಹೇಗೆ ಎಂಬೆಲ್ಲದರ ಕುರಿತು ದಶಕಗಳಿಂದ ತಲೆ ಕೆಡಿಸಿಕೊಂಡಿದ್ದಾರೆ. ಇಸ್ಲಾಮಿಕ್ ಭಯೋತ್ಪಾದನೆ ಜಗತ್ತಿಗೆ ತಂದೊಡ್ಡಿರುವ ಆತಂಕ ದೊಡ್ಡದು. ಇತರ ಯಾವುದೇ ಉಗ್ರ ಸಂಘಟನೆಗಳು ಜಾಗತಿಕ ಮಟ್ಟದ ಸಂಘಟನೆ- ದುಷ್ಪರಿಣಾಮ ಹೊಂದಿಲ್ಲ ಎಂಬುದನ್ನು ಗಮನಿಸಬೇಕು. ಈ ಭಯೋತ್ಪಾದನೆಯ ಸಂತ್ರಸ್ತರು ಮತ್ತು ಅದರೆದುರು ಶತಾಯಗತಾಯ ಹೋರಾಡುತ್ತಿರುವವರು ಇಸ್ರೇಲಿಗರು. ಇದೇ ಇಸ್ರೇಲ್‌ನ ಯಹೂದಿ ಸಮುದಾಯದ ದೊಡ್ಡ ಬರಹಗಾರ ಯುವಾಲ್ ನೋವಾ ಹರಾರಿ, ಮಾನವಕುಲದ ಕುರಿತ ತನ್ನ ವಿಸ್ತೃತ ಚಿಂತನೆಯಿಂದ ಇಂದು ಮುಖ್ಯನೆನಿಸಿದ್ದಾನೆ. ಈತ ಸುಮಾರು ಹತ್ತು ವರ್ಷಗಳ ಹಿಂದೆಯೇ ಭಯೋತ್ಪಾದನೆಯ ಬಗ್ಗೆ ನಾವೆಲ್ಲ ಚಿಂತಿಸಬೇಕಾದ ಮಹತ್ವದ ವಿಷಯಗಳ ಬಗ್ಗೆ ಬರೆದಿದ್ದಾನೆ. ಆತನ ಬರಹ ಸಕಾಲಿಕವಾದುದರಿಂದ, ಅದರ ಸಾರವನ್ನು ಇಲ್ಲಿ ಕೊಡುವ ಪ್ರಯತ್ನ ಮಾಡಿದ್ದೇನೆ.

ಭಯೋತ್ಪಾದನೆ ಎಂಬ ಪದವೇ ಹೇಳುವಂತೆ, ಅದೊಂದು ಮಿಲಿಟರಿ ತಂತ್ರ. ನೇರವಾಗಿ ಎದುರಿಸಿ ಭೌತಿಕ ಹಾನಿ ಉಂಟುಮಾಡುವ ಬದಲು ಭಯವನ್ನು ಹರಡುವ ಮೂಲಕ ರಾಜಕೀಯ ಪರಿಸ್ಥಿತಿಯನ್ನು ಬದಲಾಯಿಸುವ ಉದ್ದೇಶ ಅದರದ್ದು. ಈ ತಂತ್ರವನ್ನು ಅಳವಡಿಸಿಕೊಳ್ಳುವವರು ದುರ್ಬಲರು, ಕೀಳರಿಮೆ ಇರುವವರು. ಮಿಲಿಟರಿ ದಾಳಿಯೂ ಭಯವನ್ನು ಹರಡುತ್ತದೆ ನಿಜ. ಆದರೆ ಅಲ್ಲಿ ನೇರ ಹಾನಿ ಹಾಗೂ ವಶಪಡಿಸಿಕೊಳ್ಳುವಿಕೆಯೇ ಹಾನಿಯೇ ಮುಖ್ಯ. ಭಯೋತ್ಪಾದನೆಯಲ್ಲಿ, ಭಯವೇ ಅದರ ಜೀವಾಳ. ಹಾಗಂತ ಹಿಂಸಾಚಾರದ ಮೂಲಕ ರಾಜಕೀಯ ಪರಿಸ್ಥಿತಿಯನ್ನು ಬದಲಾಯಿಸುವುದು ಸುಲಭವಲ್ಲ.

ಹೆಚ್ಚಿನ ಭಯೋತ್ಪಾದಕ ದಾಳಿಗಳು ಬೆರಳೆಣಿಕೆಯಷ್ಟು ಜನರನ್ನು ಮಾತ್ರ ಕೊಲ್ಲುತ್ತವೆ. 2002ರಲ್ಲಿ ಪ್ಯಾಲೆಸ್ತೀನಿ ಭಯೋತ್ಪಾದಕರಿಂದ ಇಸ್ರೇಲ್‌ನಲ್ಲಿ ಆದ ಸಾವುನೋವು 451. ಅದೇ ವರ್ಷ ಕಾರು ಅಪಘಾತಗಳಲ್ಲಿ 542 ಇಸ್ರೇಲಿಗಳು ಸಾವನ್ನಪ್ಪಿದ್ದರು. ಅಮೆರಿಕದ ಮೇಲೆ ಆದ 9/11 ದಾಳಿಯಲ್ಲಿ ಸುಮಾರು 3,000 ಜನ ಸತ್ತರು. ಆದರೂ ಇದು ಸಾಂಪ್ರದಾಯಿಕ ಯುದ್ಧಕ್ಕೆ ಸಮವಲ್ಲ. ಉದಾಹರಣೆಗೆ ಮೂರನೇ ಐಸ್ನೆ ಯುದ್ಧದಲ್ಲಿ 2.50 ಲಕ್ಷ ಜನ, ಅಥವಾ 10ನೇ ಐಸೊಂಜೊ ಯುದ್ಧದಲ್ಲಿ 2.25 ಲಕ್ಷ ಜನ ಸತ್ತರು. ಉಗ್ರರು ಎಷ್ಟೇ ದಾಳಿ ಮಾಡಿದರೂ ದೊಡ್ಡ ದೇಶಗಳ ಸೇನಾ ನೆಲೆಗಳನ್ನು, ರಸ್ತೆಗಳು, ರೈಲುಗಳು, ಕಾರ್ಖಾನೆಗಳು, ಬಂದರುಗಳನ್ನು ಅಸ್ತವ್ಯಸ್ತಗೊಳಿಸಲು ಆಗುವುದಿಲ್ಲ. ಹಾಗಾದರೂ ಭಯೋತ್ಪಾದಕರು ತಾವು ಏನನ್ನೋ ಕಡಿದು ಕಟ್ಟೆ ಹಾಕುತ್ತೇವೆ ಎಂದು ಭಾವಿಸುವುದು ಹೇಗೆ? ಅವರ ಲೆಕ್ಕಾಚಾರವೇ ಬೇರೆ.

ಉಗ್ರರು, ಶತ್ರುದೇಶ ತನ್ನ ಬೃಹತ್ ಶಕ್ತಿಯನ್ನು ತಮ್ಮ ವಿರುದ್ಧ ಬಳಸಿದಾಗ ಉಂಟಾಗುವ ಹಿಂಸಾತ್ಮಕ ಮಿಲಿಟರಿ ಮತ್ತು ರಾಜಕೀಯ ಬಿರುಗಾಳಿಯನ್ನು ನಿರೀಕ್ಷಿಸುತ್ತಾರೆ. ಇದಕ್ಕಾಗಿಯೇ ಪ್ರಭುತ್ವವನ್ನು ಅವರು ರೊಚ್ಚಿಗೆಬ್ಬಿಸಲು ಯತ್ನಿಸುತ್ತಾರೆ. ಒಂದು ಚಂಡಮಾರುತ ಎದ್ದಾಗ ಅಲ್ಲಿ ಅನೇಕ ಅನಿರೀಕ್ಷಿತ ವಿಷಯಗಳು ಸಂಭವಿಸುತ್ತವೆ. ತಪ್ಪುಗಳು ನಡೆಯುತ್ತವೆ, ದೌರ್ಜನ್ಯಗಳು ಆಗುತ್ತವೆ. ಸಾರ್ವಜನಿಕ ಅಭಿಪ್ರಾಯ ಚಂಚಲವಾಗುತ್ತದೆ. ಪ್ರಶ್ನೆಗಳು ಏಳುತ್ತವೆ. ತಟಸ್ಥರು ತಮ್ಮ ನಿಲುವನ್ನು ಬದಲಾಯಿಸುತ್ತಾರೆ. ಅಧಿಕಾರದ ಸಮತೋಲನ ಅಲುಗಾಡುತ್ತದೆ. ಪರಿಣಾಮ ಏನಾಗುತ್ತದೆ ಎಂದು ಭಯೋತ್ಪಾದಕರೂ ಊಹಿಸಲು ಸಾಧ್ಯವಿಲ್ಲ. ಆದರೆ ನೀರು ಅಶಾಂತವಾಗಿರುವಾಗ ಅದರಲ್ಲಿ ಗಾಳ ಹಾಕಲು ಉಗ್ರರಿಗೆ ಹೆಚ್ಚಿನ ಅವಕಾಶವಿರುತ್ತದೆ. ಹೀಗಾಗಿಯೇ ಅವರು ಶಾಂತ ವಾತಾವರಣವನ್ನು ದ್ವೇಷಿಸುತ್ತಾರೆ.

ತಾವು ಇವರ ವಿರುದ್ಧ ಯುದ್ಧ ಮಾಡಲು ಸಾಧ್ಯವಿಲ್ಲ ಎಂದು ತಿಳಿದಿರುವ ಕಾರಣವೇ ಗುಂಪುಗಳು ಭಯೋತ್ಪಾದನೆಯತ್ತ ತಿರುಗುತ್ತವೆ. ಅವು ಸೃಷ್ಟಿಸುವ ಸನ್ನಿವೇಶ ಒಂದು ನಾಟಕೀಯ ಪ್ರದರ್ಶನ ಅಥವಾ ಥಿಯಟ್ರಿಕಲ್ ಆಗಿರುತ್ತದೆ. ಭಯೋತ್ಪಾದಕರು ಸೇನಾ ಜನರಲ್‌ಗಳಂತೆ ಯೋಚಿಸುವುದಿಲ್ಲ, ಬದಲಾಗಿ ರಂಗಭೂಮಿ ನಿರ್ಮಾಪಕರಂತೆ ಯೋಚಿಸುತ್ತಾರೆ. 9/11 ದಾಳಿಯ ಸಾರ್ವಜನಿಕ ನೆನಪು ಅದಕ್ಕೆ ಸಾಕ್ಷಿ. ಅಂದು ಏನಾಯಿತು ಎಂದು ನೀವು ಜನರನ್ನು ಕೇಳಿದರೆ, ಅಲ್-ಖೈದಾ ವಿಶ್ವ ವ್ಯಾಪಾರ ಕೇಂದ್ರದ ಅವಳಿ ಗೋಪುರಗಳನ್ನು ನಾಶಮಾಡಿತು ಎನ್ನುತ್ತಾರೆ. ಆದರೂ ದಾಳಿ ನಡೆದದ್ದು ಕೇವಲ ಗೋಪುರಗಳ ಮೇಲಲ್ಲ. ಪೆಂಟಗನ್ ಮೇಲೂ ದಾಳಿಯಾಗಿತ್ತು. ಈ ದಾಳಿಯಲ್ಲಿ ಅಲ್-ಖೈದಾ ಶತ್ರುಗಳ ಪ್ರಧಾನ ಕಚೇರಿಯ ಒಂದು ಭಾಗವನ್ನೇ ನಾಶ ಮಾಡುವಲ್ಲಿ ಯಶಸ್ವಿಯಾಯಿತು. ಕೆಲವು ಹಿರಿಯ ಕಮಾಂಡರ್‌ಗಳನ್ನೂ ಕೊಂದಿತು. ಆದರೆ ಕೆಲವೇ ಜನರು ಮಾತ್ರ ಇದನ್ನು ಗಮನಿಸುತ್ತಾರೆ. ಏಕೆ?

ಏಕೆಂದರೆ ಅವಳಿ ಗೋಪುರಗಳಿಗೆ ಹೋಲಿಸಿದರೆ ಪೆಂಟಗನ್ ಸಮತಟ್ಟಾದ ಮತ್ತು ಸರಳವಾದ ಕಟ್ಟಡ. ಆದರೆ ವಿಶ್ವ ವಾಣಿಜ್ಯ ಕೇಂದ್ರ ಎತ್ತರದ, ಗಮನ ಸೆಳೆಯುವ ರಚನೆ. ಅದರ ಕುಸಿತ ಅಪಾರವಾದ ಆಡಿಯೋ ವಿಶುವಲ್ ಪರಿಣಾಮವನ್ನು ಸೃಷ್ಟಿಸಿತು. ಅದರ ಕುಸಿತದ ಚಿತ್ರ- ವಿಡಿಯೊಗಳನ್ನು ನೋಡಿದವರು ಅದನ್ನು ಎಂದಿಗೂ ಮರೆಯುವುದಿಲ್ಲ. ಇದು ಭಯೋತ್ಪಾದನೆಯ ರಂಗಭೂಮಿ. ನಾವು ಅದನ್ನು ಭೌತಿಕ ಪ್ರಭಾವಕ್ಕಿಂತಲೂ ಅದರ ಭಾವನಾತ್ಮಕತೆಯಿಂದ ಹೆಚ್ಚು ನಿರ್ಣಯಿಸುತ್ತೇವೆ. ಬಹುಶಃ ಒಸಾಮಾ ಬಿನ್ ಲಾಡೆನ್ ಪೆಂಟಗನ್ ಬದಲು ಲಿಬರ್ಟಿ ಸ್ಟ್ಯಾಚ್ಯೂಗೆ ವಿಮಾನ ಗುದ್ದಿಸಿದ್ದರೆ ಇನ್ನಷ್ಟು ಪ್ರಬಲವಾದ, ನಾಟಕೀಯ ಸಂಕೇತವಾಗಿರುತ್ತಿತ್ತು. ಅಂದರೇನು? ಉಗ್ರಗಾಮಿಗಳಂತೆ, ಭಯೋತ್ಪಾದನೆಯನ್ನು ಎದುರಿಸುವವರೂ ನಾಟಕೀಯವಾಗಿ ಯೋಚಿಸುವ ಅನಿವಾರ್ಯತೆಯನ್ನು ಅವರು ಸೃಷ್ಟಿಸುತ್ತಾರೆ. ಭಯೋತ್ಪಾದನೆಯೆದುರು ಪರಿಣಾಮಕಾರಿಯಾಗಿ ಹೋರಾಡಲು ನಾವು ಬಯಸಿದರೆ, ಭಯೋತ್ಪಾದಕರು ಮಾಡುವ ಯಾವುದೂ ನಮ್ಮನ್ನು ಸೋಲಿಸಲು ಸಾಧ್ಯವಿಲ್ಲ ಎಂದು ನಾವು ಅರಿತುಕೊಳ್ಳಬೇಕು. ಉಗ್ರ ಪ್ರಚೋದನೆಗಳಿಗೆ ನಾವು ದಾರಿ ತಪ್ಪಿದ ರೀತಿಯಲ್ಲಿ ಅತಿಯಾಗಿ ಪ್ರತಿಕ್ರಿಯಿಸಿದರೆ, ನಮ್ಮನ್ನೇ ನಾವು ಸೋಲಿಸಿಕೊಂಡಂತೆ.

ಭಯೋತ್ಪಾದಕರದು ಅಸಾಧ್ಯವಾದ ಧ್ಯೇಯ- ಅವರಿಗೆ ಯಾವುದೇ ಮಿಲಿಟರಿ ಸಾಮರ್ಥ್ಯವಿಲ್ಲದಿದ್ದರೂ ರಾಜಕೀಯ ಅಧಿಕಾರದ ಸಮತೋಲನವನ್ನು ಬದಲಾಯಿಸುವುದು. ತಮ್ಮ ಗುರಿಯನ್ನು ಸಾಧಿಸಲು ಅವರು ಪ್ರಭುತ್ವಕ್ಕೆ ಒಂದು ಅಸಾಧ್ಯವಾದ ಸವಾಲು ಹಾಕುತ್ತಾರೆ. ಅದು ತನ್ನ ಎಲ್ಲಾ ನಾಗರಿಕರಿಗೂ ಎಲ್ಲಾ ಸಮಯದಲ್ಲಿಯೂ ರಾಜಕೀಯ ಹಿಂಸಾಚಾರದಿಂದ ರಕ್ಷಣೆ ಕೊಡುವುದು. ಆದರೆ ಇದು ಯಾವುದೇ ಆಡಳಿತದಿಂದಲೂ ಅಸಾಧ್ಯ. ಪ್ರಭುತ್ವವು ಈ ಅಸಾಧ್ಯವಾದ ಧ್ಯೇಯವನ್ನು ಪೂರೈಸಲು ಪ್ರಯತ್ನಿಸಿ ವಿಫಲಗೊಂಡಾಗ ಪ್ರಜೆಗಳಲ್ಲಿ ಅಸ್ಥಿರತೆ ಉಂಟಾಗುತ್ತದೆ. ಇದನ್ನೇ ಭಯೋತ್ಪಾದಕರು ಆಶಿಸುತ್ತಾರೆ.

ಕೆಲವೊಮ್ಮೆ ಪ್ರಭುತ್ವವು ತನ್ನ ನಾಗರಿಕರನ್ನು ರಾಜಕೀಯ ಹಿಂಸಾಚಾರದಿಂದ ರಕ್ಷಿಸುವ ಸವಾಲನ್ನು ಪಟ್ಟು ಹಿಡಿದು ಸಾಧಿಸಿದಾಗ ಅದು ಭಯೋತ್ಪಾದಕರನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾದದ್ದು ಉಂಟು. ಕಳೆದ ಹಲವು ದಶಕಗಳಲ್ಲಿ ವಿವಿಧ ಕಡೆ ನೂರಾರು ಭಯೋತ್ಪಾದಕ ಸಂಘಟನೆಗಳು ನಾಶವಾಗಿವೆ. ಇಸ್ರೇಲ್ ಕಠಿಣ ಬಲಪ್ರಯೋಗದಿಂದ ಹಾಗೆ ಮಾಡಿದೆ. ಅಂತಹ ಮುಖಾಮುಖಿಯಲ್ಲಿ ತಾವು ಉಳಿಯುವುದಿಲ್ಲ ಎಂದು ಭಯೋತ್ಪಾದಕರಿಗೆ ಚೆನ್ನಾಗಿ ತಿಳಿದಿದೆ. ಆದರೆ ಅದರಿಂದ ಅವರು ಕಳೆದುಕೊಳ್ಳಲು ಏನೂ ಇಲ್ಲ.

ಪ್ರಭುತ್ವಗಳು ಕೋಪ ಉಕ್ಕೇರಿ ತುಂಬಾ ಬಲವಾಗಿ ಮತ್ತು ಸಾರ್ವಜನಿಕವಾಗಿ ಪ್ರತಿಕ್ರಿಯಿಸುತ್ತವೆ. ಭಯೋತ್ಪಾದಕರಿಗೆ ಇದೇ ಬೇಕು. ಉಗ್ರ ಪ್ರಚೋದನೆಗಳಿಗೆ ಆಡಳಿತಗಳು ತುಂಬಾ ಸಂವೇದನಶೀಲವಾಗಿ ಪ್ರತಿಕ್ರಿಯಿಸುವುದು ತಾವು ಜನರಿಗೆ ನೀಡಿರುವ ಸುರಕ್ಷತೆಯ ಭರವಸೆ ಹುಸಿ ಹೋದುದರಿಂದ. ಪ್ರಭುತ್ವ ಭಯಾನಕ ವಿಪತ್ತುಗಳನ್ನು ತಡೆದುಕೊಳ್ಳಬಹುದು ಮತ್ತು ಅವುಗಳನ್ನು ನಿರ್ಲಕ್ಷಿಸಬಹುದು. 14ನೇ ಶತಮಾನದಲ್ಲಿ ಪ್ಲೇಗ್ ಯುರೋಪಿಯನ್ ಜನಸಂಖ್ಯೆಯ ಕಾಲು ಮತ್ತು ಅರ್ಧದಷ್ಟನ್ನು ನಾಶ ಮಾಡಿತು. ಆದರೆ ಯಾವುದೇ ರಾಜ ತನ್ನ ಸಿಂಹಾಸನವನ್ನು ಕಳೆದುಕೊಳ್ಳಲಿಲ್ಲ. ಪ್ಲೇಗ್ ತಡೆಗಟ್ಟುವುದು ರಾಜನ ಕೆಲಸದ ಭಾಗ ಎಂದು ಆಗ ಯಾರೂ ಭಾವಿಸಿರಲಿಲ್ಲ. ಆದರೆ, ತಮ್ಮ ಆಳ್ವಿಕೆಯಲ್ಲಿ ಧರ್ಮದ್ರೋಹ ಹರಡಲು ಅವಕಾಶ ನೀಡಿದ ಆಡಳಿತಗಾರರು ತಮ್ಮ ಕಿರೀಟವನ್ನು ಮತ್ತು ತಲೆಯನ್ನು ಸಹ ಕಳೆದುಕೊಂಡದ್ದುಂಟು. ಆದರೆ ಬರಬರುತ್ತಾ ಹೆಚ್ಚಿನ ಎಲ್ಲ ಆಧುನಿಕ ದೇಶಗಳಲ್ಲಿ ರಾಜಕೀಯ ಹಿಂಸೆ ಎಂಬುದು ಇಲ್ಲವಾಗಿದೆ. ಆಧುನಿಕ ಪ್ರಜಾಪ್ರಭುತ್ವವನ್ನು ಅನುಭವಿಸುತ್ತಿರುವ ಜನತೆಗೆ ರಾಜಕೀಯ ಹಿಂಸೆಯ ಅನುಭವವೇ ಇಲ್ಲ. ಮಧ್ಯಯುಗದಲ್ಲಿ ಇದು ಸಾಮಾನ್ಯವಾಗಿತ್ತು. ಹೀಗಾಗಿ ಅದಕ್ಕೆ ಆಗ ಯಾರೂ ಗಮನ ಕೊಡುತ್ತಿರಲಿಲ್ಲ. ಈಗ ಇಂಥ ಹಿಂಸೆ ಕಂಡುಬಂದ ಕೂಡಲೇ ಪ್ರಭುತ್ವ ಹಾಗೂ ಜನತೆ ಪ್ರತಿಕ್ರಿಯಿಸುತ್ತದೆ.

ಈ ಭಯವನ್ನು ಶಮನಗೊಳಿಸಲು ಆಡಳಿತ ತನ್ನದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ. ಭಯೋತ್ಪಾದನೆಗೆ ಅತ್ಯಂತ ಪರಿಣಾಮಕಾರಿ ಉತ್ತರವೆಂದರೆ ಉತ್ತಮ ಗುಪ್ತಚರ ಜಾಲ, ಭಯೋತ್ಪಾದನೆಯನ್ನು ಪೋಷಿಸುವ ಹಣದ ಜಾಲಗಳ ವಿರುದ್ಧ ಕ್ರಮ. ಆದರೆ ಇದು ಜನರಿಗೆ ಮೀಡಿಯಾದಲ್ಲಿ ತೋರಿಸಿ ರಂಜಿಸಬಹುದಾದ ವಿಷಯವಲ್ಲ. ಅವಳಿ ಗೋಪುರಗಳು ಕುಸಿಯುವುದನ್ನು ನೋಡಿದ ನಾಗರಿಕರು, ಪ್ರಭುತ್ವ ಅದಕ್ಕೆ ಉತ್ತರವಾಗಿ ಇನ್ನೂ ಹೆಚ್ಚಿನ ಬೆಂಕಿ ಮತ್ತು ಹೊಗೆ ಸೃಷ್ಟಿಸಲಿ, ಅಷ್ಟೇ ಅದ್ಭುತವಾದ ಪ್ರತಿನಾಟಕವನ್ನು ಪ್ರದರ್ಶಿಸಲಿ ಎಂದು ಒತ್ತಾಯಿಸುವುದು ಸಹಜ. ಆದ್ದರಿಂದ, ಸದ್ದಿಲ್ಲದೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಬದಲು, ಸರಕಾರ ಬಿರುಗಾಳಿಯಂತೆ ಪ್ರತಿಕ್ರಿಯಿಸಬೇಕಾಗುತ್ತದೆ. ಇದೇ ಭಯೋತ್ಪಾದಕರ ಕನಸು ಕೂಡ.

ಇನ್ನು ಅಣ್ವಸ್ತ್ರ ಭಯೋತ್ಪಾದನೆ ಅಥವಾ ಜೈವಿಕ ಭಯೋತ್ಪಾದನೆಯ ಕತೆ ಏನು? ಭಯೋತ್ಪಾದಕ ಸಂಘಟನೆಗಳು ಸಾಮೂಹಿಕ ವಿನಾಶದ ವಶ ಮಾಡಿಕೊಂಡರೆ ಅದು ಸಾಂಪ್ರದಾಯಿಕ ಯುದ್ಧದಂತೆಯೇ ವ್ಯಾಪಕವಾದ ಹಾನಿಯನ್ನು ಉಂಟುಮಾಡಬಹುದು. ಆದರೆ ಇದು ಸಂಭವಿಸುವ ಹೊತ್ತಿಗೆ ಪ್ರಭುತ್ವ ಎಂಬುದರ ಅರ್ಥವೇ ಬದಲಾಗಿರುತ್ತದೆ. ಈಗಿರುವ ಭಯೋತ್ಪಾದನೆಯ ಸ್ವರೂಪವೇ ಆಗಲೂ ಇರುವುದಿಲ್ಲ, ಬೆರಳೆಣಿಕೆಯಷ್ಟು ಮತಾಂಧರ ಗುಂಪು, ಇಡೀ ನಗರಗಳನ್ನು ನಾಶ ಮಾಡಲು ಮತ್ತು ಲಕ್ಷಾಂತರ ಜನರನ್ನು ಕೊಲ್ಲಲು ಸಾಧ್ಯವಾದರೆ, ರಾಜಕೀಯ ಹಿಂಸಾಚಾರದಿಂದ ಮುಕ್ತವಾದ ಸಾರ್ವಜನಿಕ ವಲಯವೇ ಆಗ ಇರುವುದಿಲ್ಲ, ಆಗ ರಾಜಕೀಯ ಮತ್ತು ಸಮಾಜ ಆಮೂಲಾಗ್ರ ರೂಪಾಂತರಗಳಿಗೆ ಒಳಗಾಗಿರುತ್ತದೆ. ಆಗ ರಾಜಕೀಯ ಹೋರಾಟಗಳು ಹೇಗೆ ನಡೆಯುತ್ತವೆ ಊಹಿಸುವುದು ಈಗ ಕಷ್ಟ. ಆದರೆ ಅದು ಖಂಡಿತವಾಗಿಯೂ 21ನೇ ಶತಮಾನದ ಆರಂಭದ ಭಯೋತ್ಪಾದನೆ ಮತ್ತು ಭಯೋತ್ಪಾದನಾ ನಿಗ್ರಹ ಅಭಿಯಾನಗಳಿಗಿಂತ ಬಹಳ ಭಿನ್ನವಾಗಿರುತ್ತದೆ. 2050ರಲ್ಲಿ ಜಗತ್ತು ಪರಮಾಣು ಮತ್ತು ಜೈವಿಕ ಭಯೋತ್ಪಾದಕರಿಂದ ತುಂಬಿದ್ದರೆ, ಅವರ ಬಲಿಪಶುಗಳು ಇಂದಿನ ಜಗತ್ತನ್ನು ವಿಸ್ಮಯ, ಅಪನಂಬಿಕೆಯಿಂದ ನೋಡಬಹುದು.

ಅಭಿಮತ

ಶಂಕರನಾರಾಯಣ ಭಟ್

ಹೇಯ ಕೃತ್ಯದ ಹಿಂದಿನ ಶಕ್ತಿಗಳನ್ನು ಶಿಕ್ಷಿಸಬೇಕು

ಜಮ್ಮು -ಕಾಶ್ಮೀರದಲ್ಲಿ ಉಗ್ರರ ಅಟ್ಟಹಾಸದಲ್ಲಿ ಪತಿಯನ್ನು ಕಳೆದುಕೊಂಡ ಶಿವಮೊಗ್ಗದ ಪಲ್ಲವಿ ರಾವ್ ಅವರ ಮಾತನ್ನು ಕೇಳಿಸಿಕೊಂಡರೆ ನಾಡಿಮಿಡಿತವೇ ನಿಂತಂತಾಯಿತು !

ಕಾಶ್ಮೀರದ ಪಹಲ್ಗಾಮ್‌ನ ಅತಿ ರಮಣೀಯ ಸ್ಥಳ ಬೈಸಾರನ್ ಕಣಿವೆಗೆ ಭೇಟಿ ನೀಡಿದಾಗ, ತಮ್ಮ ಬಳಿ ಬಂದ ಉಗ್ರರು 'ನಿಮ್ಮದು ಯಾವ ಧರ್ಮ?' ಎಂದು ಕೇಳುತ್ತ, ಏಕಾಏಕಿ ತನ್ನ ಪತಿಯ ತಲೆಗೇ ಗುರಿ ಇಟ್ಟು ಗುಂಡಿನ ದಾಳಿ ನಡೆಸಿಯೇ ಬಿಟ್ಟರು' ಎಂಬುದನ್ನು ನೋಡುತ್ತ ತಮ್ಮನ್ನೂ ಕೊಂದು ಬಿಡಿ ಎಂದಾಗ ಅವರಾಡಿದ ಮಾತು ಇನ್ನೂ ಆಘಾತಕಾರಿ. 'ನಿಮ್ಮನ್ನು ಕೊಲ್ಲಲ್ಲ, ಹೋಗಿ ನಿಮ್ಮ ಮೋದಿಗೆ ಹೇಳಿ' ಎಂದಿರುವುದು ಅವರ ಉದ್ದೇಶವೂ ಸ್ಪಷ್ಟವಾದಂತಿದೆ. ಇದೇ ರೀತಿ ಇನ್ನೊಬ್ಬ ಹಾವೇರಿ ಮೂಲದ ಭರತ್ ಭೂಷಣ್. ಅಷ್ಟೇ ಅಲ್ಲ,ಕೊಚ್ಚಿಯಲ್ಲಿ ನೌಕಾಪಡೆ ಅಧಿಕಾರಿಯಾಗಿದ್ದ ವಿನಯ್ ಮತ್ತು ದಂಪತಿ , ಏಪ್ರಿಲ್ 16 ರಂದು ವಿವಾಹವಾಗಿದ್ದು, ಹನಿಮೂನಿಗೆ ಹೋಗಿದ್ದವರಲ್ಲಿ ಪತಿಯನ್ನೇ ಕೊಂದು ಪತ್ನಿಯನ್ನು ಹಾಗೇ ಬಿಟ್ಟಿರುವುದು ಏನನ್ನು ಸೂಚಿಸುತ್ತದೆ ?

ಇಷ್ಟರ ಮಧ್ಯೆ, ವಿದೇಶಿ ಪ್ರವಾಸದಲ್ಲಿದ್ದ ಪ್ರಧಾನಿ ಮೋದಿ, ತಮ್ಮ ಪ್ರವಾಸ ಮೊಟಕುಗೊಳಿಸಿ ವಾಪಸ್ಸಾಗಿ 'ಯಾರನ್ನೂ ಬಿಡುವ ಪ್ರಶ್ನೆಯೇ ಇಲ್ಲ' ಅಂದಿದ್ದಾರೆ. ಇಷ್ಟು ಹೇಳಿ ಸುಮ್ಮನಾಗದ ಪ್ರಧಾನಿ ' ಉಗ್ರರನ್ನು ಸಂಹರಿಸುವ ಶಪಥ' ಮಾಡಿರುವುದು, ಸಮಸ್ಯೆಯ ಅತಿರೇಕದ ಸಾಕ್ಷಿ. ಇದು ಈ ರೀತಿ ಆಗುತ್ತಿರಲು ಮುಖ್ಯ ಕಾರಣ ನಮ್ಮ ದೇಶದ ಕೆಲ ಬೇಜವಾಬ್ದಾರಿಗಳಿಂದ ಎಂಬುದೂ ನಿಜ. ತಮ್ಮನ್ನು ರಕ್ಷಿಸುವವರೂ ಭಾರತದಲ್ಲೇ ಇದ್ದಾರೆ ಎಂಬ ಸ್ಪಷ್ಟ ಕಲ್ಪನೆ ಈ ಉಗ್ರವಾದಿಗಳಲ್ಲೂ ಇದ್ದಿರಲೇ ಬೇಕು. ಇಂದು ನಮ್ಮ ದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗ್ರಹಿಸಿದರೆ ಇದು ಅರ್ಥವಾಗುವಂತಿದೆ. ದೇಶದಲ್ಲಿ ಶಾಂತಿ, ನೆಮ್ಮದಿ, ಪ್ರಗತಿ, ಇದ್ದರೆ ಕೆಲವರಿಗೆ ಆತಂಕ ಅಥವಾ ಭಯ. ಹೀಗಾಗಿ ಭಯೋತ್ಪಾದಕರಿಗೇ ಕುಮ್ಮಕ್ಕು ಕೊಡುತ್ತಿರುವುದು. ಇಲ್ಲವೆಂದರೆ, ಕಳೆದೆರಡು ವರ್ಷಗಳಿಗಿಂತ ಹೆಚ್ಚು ಕಾಲ, ಅತ್ಯಂತ ಶಾಂತವಾಗಿದ್ದು, ಕಾಶ್ಮೀರಿಗಳು ನೆಮ್ಮದಿಯ ಉಸಿರಾಡುತ್ತಿರುವಾಗ, ಒಮ್ಮಿಂದೊಮ್ಮೆಲೇ ದಾಳಿಗೆ ಮುಂದಾ ಗುತ್ತಿರುವ ಉಗ್ರರು ತಮ್ಮ ಇರುವಿಕೆಯ ಗುರುತು ಹಚ್ಚಿಸುತ್ತಿರುವುದರ ಹಿಂದಿನ ಉದ್ದೇಶವೂ ಸ್ಪಷ್ಟ. ನಮ್ಮ ದೇಶದಲ್ಲಿ ಒಂದಲ್ಲ ಒಂದು ರೀತಿಯ ಗಲಭೆ, ದಂಗೆ, ಹತ್ಯೆ, ದರೋಡೆ, ಕಳುವು ನಡೆಯುತ್ತಿದ್ದರೇನೇ ಕೆಲವರಿಗೆ ಶಾಂತಿ -ನೆಮ್ಮದಿ !? ಕಾಶ್ಮೀರದಲ್ಲಿ ನಡೆದ ಹೇಯ ಕೃತ್ಯದ ಹಿಂದಿರುವವರನ್ನು ಕೇವಲ ನ್ಯಾಯಾಲಯದ ಕಟಕಟೆಗೆ ತಂದರೆ ಸಾಲದು. ಅವರಿಗೆಲ್ಲ ಅವರು ಮಾಡಿದ ಕೃತ್ಯದ ಪರಿಚಯ ಮಾಡಿಸಿದಾಗಲೇ ಇಂತಹ ಹೀನ ಕೃತ್ಯಕ್ಕೆ ಕಡಿವಾಣ ಬಿದ್ದೀತು. ಒಮ್ಮೆ ನ್ಯಾಯಾಲಯ ತಲುಪುವ ಪ್ರಕರಣಗಳ ಇತ್ಯರ್ಥ ಎಂದಾದೀತು ಎಂಬುದೂ ತಿಳಿಯದೇ ಇರುವಾಗ, ಅಲ್ಲಿಯ ತನಕ ಕಾಯುವುದರಲ್ಲಿ ಏನಾದರೂ ಅರ್ಥವಿದೆಯೇ ? ಪಲ್ಲವಿ ರಾವ್ ಮತ್ತು ವಿನಯ ಅವರ ಪತ್ನಿಯರೇ ಜೀವಂತವಾಗಿದ್ದು, ಅವರೇ ಜೀವಂತ ಸಾಕ್ಷಿ ಎಂಬಲ್ಲಿ ಇನ್ನೂ ಬೇರೆ ಸಾಕ್ಷಿ ಬೇಕೆ ? ಇಂತಹ ಪ್ರಕರಣಗಳಲ್ಲಿ, ಸಾಕ್ಷಿ, ಪುರಾವೆಗಳ ನೆಪ ಹೇಳುವ ಅವಶ್ಯಕತೆಯೂ ಇರದು. ಎಸಗಿದ ಕೃತ್ಯ ಅತ್ಯಂತ ಅಮಾನವೀಯ ಎಂಬಲ್ಲಿ, ಉಗ್ರರಿಗೂ ಅದೇ ರೀತಿ ಟ್ರೀಟ್‌ಮೆಂಟ್ ಸಿಗಬೇಕಲ್ಲವೇ ? ಪೈಶಾಚಿಕ ಕೃತ್ಯಕ್ಕೆ ಇನ್ನೂ ಬೇರೆ ದಾರಿ ಹುಡುಕುತ್ತ ಸಮಯ ವ್ಯರ್ಥವಾಗಲೇಬಾರದು. ಎಲ್ಲಿಯ ತನಕ ಉಗ್ರರನ್ನು ಮಟ್ಟಹಾ ಕಲು ಸಾಧ್ಯವಿಲ್ಲವೋ, ಅಲ್ಲಿಯ ತನಕ ಭಾರತೀಯರಿಗೆ ನೆಮ್ಮದಿ ಸಿಗದು. ಅಷ್ಟೇ ಅಲ್ಲ, ಭಾರತವು ಭಾರತವಾಗಿ ಅಥವಾ ಹಿಂದುಸ್ಥಾನವಾಗಿ ಉಳಿಯಲಾಗದು.

ಇನ್ನು ಕೆಲ ದಿನ ಇದೇ ಉಗ್ರರು, ತಮ್ಮಷ್ಟಕ್ಕೇ ತಾವು ಇದ್ದು, ಪ್ರಕರಣವನ್ನೇ ಮರೆಸುವ ಪ್ರಯತ್ನ ಮಾಡಲೂ ಬಹುದು. ಅದಕ್ಕೂ ಅವಕಾಶ ಸಿಗದಂತೆ ಆಗಬೇಕು. ಕಬ್ಬಿಣ ಸಾಕಷ್ಟು ಕಾದು ಕೆಂಪಾಗಿದೆ, ಈಗ ಬಡಿಯದಿದ್ದರೆ ಮುಂದೆ ತಂಪಾದ ಮೇಲೆ ಬಡಿಯಲೂ ಬಾರದು, ನಮಗೆ ಹೇಗೆ ಬೇಕೋ ಹಾಗೆ ರೂಪಿಸಿಕೊಳ್ಳಲೂ ಆಗದು. ಸಮಯ ವ್ಯರ್ಥಮಾಡದೇ, ನಮ್ಮ ಆಳುಗರು ಇಚ್ಛಾಶಕ್ತಿಯೊಂದಿಗೆ, ಒಂದು ಅಂತಿಮ ನಿರ್ಧಾರ ಕೈಗೊಳ್ಳಲೂ ಸಮಯ ಪಕ್ವವಾದಂತಿದೆ. ಉಗ್ರರನ್ನು ಸದೆಬಡಿದು, ಅವರ ನಾಮಾವಾಶೇಷ ಮಾಡಬೇಕಿದೆ.

ನ್ಯಾಯಾಂಗ v/s ಶಾಸಕಾಂಗ: ಅರ್ಥವಾಗದ ಹಿರಿಯರ ಹಿರಿ ಚರ್ಚೆಗಳು!

ಭಾರತೀಯ ಸಂವಿಧಾನದಲ್ಲಿ 'ಚೆಕ್ ಆಂಡ್ ಬ್ಯಾಲೆನ್ಸ್' ಎಂಬ ವಿಧಾನವಿದ್ದು, ಇದು ಸಂವಿಧಾನದ ಯಾವುದೇ ಅಂಗವು ತನ್ನದೇ ಆದ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದ ವ್ಯವಸ್ಥೆಯಾಗಿದೆ. ಪರಿಶೀಲನೆಗಳು ಮತ್ತು ಸಮತೋಲನಗಳು ಒಂದು ಅಂಗವು ತುಂಬಾ ಶಕ್ತಿಶಾಲಿಯಾಗದಂತೆ ನೋಡಿಕೊಳ್ಳುತ್ತದೆ. ನಮ್ಮ ಸಂವಿಧಾನ ನಿರ್ಮಾತೃಗಳು ಅತ್ಯಂತ ಸ್ಪಷ್ಟವಾಗಿ ಮೂರೂ ಅಂಗಗಳ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಪ್ರತ್ಯೇಕಿಸಿ ನೀಡಿದ್ದಾರೆ.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತದಲ್ಲಿ ಸುಪ್ರೀಂ ಕೋರ್ಟ್ ಬಗ್ಗೆ ಗೌರವ ಮತ್ತು ಘನತೆಯನ್ನು ಯಾವ ಮಟ್ಟದಲ್ಲಿ ಕಾಪಾಡಿಕೊಂಡು ಬರುತ್ತಿದ್ದೇವೆಂದರೆ. ಪ್ರಜಾಪ್ರಭುತ್ವದಲ್ಲಿ ಆಧುನಿಕ ಜಗತ್ತಿನ ಯಾವ ದೇಶದಲ್ಲೂ ಇಂಥಾದ್ದೊಂದು ಸಂಸ್ಥೆ ನಮಗೆ ಉದಾಹರಣೆಯಾಗಿಯೂ ಸಿಗಲಾರದು ಎಂದೆನಿಸುತ್ತದೆ.

2023ರಲ್ಲಿ ಜಾರ್ಖಂಡ್ ಹೈಕೋರ್ಟ್‌ನ ಹೊಸ ಕಟ್ಟಡ ಉದ್ಘಾಟನೆಯ ಸಂದರ್ಭದಲ್ಲಿ ರಾಷ್ಟ್ರಪತಿಗಳು ಮಾತನಾಡುತ್ತ, ಹಲವು ಸುಧಾರಣೆಗಳನ್ನು ತರುತ್ತಿರುವ ಮತ್ತು ಸ್ಥಳೀಯ ಭಾಷೆಗಳಲ್ಲಿ ತೀರ್ಪುಗಳು ಬರುತ್ತಿರುವುದರ ಬಗ್ಗೆ ನನಗೆ ಬಹಳ ಸಂತಸವಿದೆ. ಆದರೆ, ವಿಚಾರಣಾಧೀನ ಕೈದಿಗಳಾಗಿ, ಲಕ್ಷಾಂತರ ಜನ ಸಕಾಲದಲ್ಲಿ ನ್ಯಾಯ ನಿರೀಕ್ಷಣೆಯಲ್ಲಿದ್ದಾರೆ. ಅವರಿಗೆ, ಅವರ ಕುಟುಂಬದವರಿಗೆ ನ್ಯಾಯಾಲಯದ ಮೇಲಿನ ನಂಬಿಕೆಯೇ ಹೊರಟುಹೋಗಿದೆ. ಎಷ್ಟೋ ನಿರಪರಾಧಿಗಳು ವಿನಾಕಾರಣ ಬಂಧನದಲ್ಲಿದ್ದು, ನ್ಯಾಯ ನಿರೀಕ್ಷೆಯಲ್ಲಿಯೇ ತೀರಿಹೋಗಿದ್ದಾರೆ. ಇದು ನನಗೆ ಹೆಚ್ಚು ನೋವು ಮಾಡಿದೆ. ಇದನ್ನು ನೀವು ಹೇಗೆ ತೆಗೆದುಕೊಳ್ಳುತ್ತೀರೋ ಗೊತ್ತಿಲ್ಲ. ದೇಶದ ಬಡವರು, ನಿರಪರಾಧಿಗಳು ನ್ಯಾಯದಾನದಿಂದ ಮತ್ತು ಸಕಾಲದಲ್ಲಿ ನ್ಯಾಯಯುತ ತೀರ್ಪುಗಳಿಂದ ವಂಚಿತರಾಗಬಾರದೆಂಬ ಚಿಂತೆ ನನಗಿದೆ ಎಂದು ಅತ್ಯಂತ ಸೂಕ್ಷ್ಮವಾಗಿ, ಮುಖ್ಯ ನ್ಯಾಯಾಧೀಶರಿಗೆ ಸ್ವತಃ ಪ್ರಮಾಣವಚನ ಬೋಧಿಸುವ ರಾಷ್ಟ್ರಪತಿಯವರೇ ಅಳೆದು ತೂಗಿ ಮಾತನಾಡಿದ್ದರು.

ನ್ಯಾಯಾಲಯ, ನ್ಯಾಯಾಧೀಶರ ಬಗ್ಗೆ ಮಾತನಾಡಲೂ ಹೆದರುತ್ತಿರುವ ಸಂದರ್ಭದಲ್ಲಿ, ಬಿಜೆಪಿಯ ಸಂಸದ ನಿಶಿಕಾಂತ್ ದುಬೆ, 2025ರ ಏಪ್ರಿಲ್ 19ರಂದು, ಈ ದೇಶದಲ್ಲಿ ಕಾನೂನುಗಳನ್ನು ಸುಪ್ರೀಂಕೋರ್ಟ್ ಮಾಡುವುದೇ ಆದರೆ, ನಾವೆಲ್ಲ ಜನರಿಂದ ಚುನಾಯಿತರಾಗಿ ಬರುವುದಾದರೂ ಏಕೆ. ಕೂಡಲೇ ಸಂಸತ್ತನ್ನು, ವಿಧಾನಸೌಧಗಳನ್ನು ಮುಚ್ಚುವುದು ಒಳಿತು ಮತ್ತು ದೇಶದಲ್ಲಿ ಆಂತರಿಕ ಯುದ್ಧಗಳೇನಾದರೂ (Civil War) ನಡೆದಲ್ಲಿ ಅದಕ್ಕೆ ಸರ್ವೋಚ್ಚ ನ್ಯಾಯಾಲಯ ನೇರವಾಗಿ ಮತ್ತು ಮುಖ್ಯ ನ್ಯಾಯಾದೀಶ ಸಂಜೀವ್ ಖನ್ನಾ ಕಾರಣರಾಗುತ್ತಾರೆ ಎಂದು ಮಾಧ್ಯಮಕ್ಕೆ ಹೇಳಿಕೆ ನೀಡಿದ್ದರು.

ವಕ್ಫ್ ತಿದ್ದುಪಡಿ ಮಸೂದೆ ವಿರೋಧಿಸಿ ಮುಸ್ಲಿಂ ಗುಂಪುಗಳು ದೇಶದ ವಿವಿದೆಡೆ ಕರೆಕೊಟ್ಟಿದ್ದ ಪ್ರತಿಭಟನೆಗಳು ಹಿಂಸಾಚಾರಕ್ಕೆ ತಿರುಗಿದ್ದವು ಪಶ್ಚಿಮ ಬಂಗಾಳದಲ್ಲಂತೂ ಹಾಡುಹಗಲೇ, ಅಸಹಾಯಕ ಹಿಂದೂ ಕುಟುಂಬಗಳನ್ನು ಭೀಕರವಾಗಿ, ಬರ್ಬರವಾಗಿ ಕೊಲೆ ಮಾಡಲಾಗಿತ್ತು. ಇವತ್ತಿಗೂ ಬಂಗಾಳ ಹೊತ್ತಿ ಉರಿಯುತ್ತಿದೆ. ಇದರ ಪ್ರತಿಕ್ರಿಯೆಯಾಗಿ, ದುಬೆ ಮಾತಾಡಿದ್ದರು. ಇದನ್ನೇ ಅಸ್ತ್ರಮಾಡಿಕೊಂಡ ಕಾಂಗ್ರೆಸ್ ಮತ್ತು ಇಂಡಿ ಕೂಟಗಳು, 'ಬಿಜೆಪಿ ಹಾಗೂ ಅದರ ಸಂಸದರು ಇಡೀ ನ್ಯಾಯಾಂಗ ವ್ಯವಸ್ಥೆಯನ್ನೇ ಅವಮಾನಿಸಿದ್ದಾರೆ, ನಾವು 40ದಿನಗಳ ಕಾಲ ದೇಶಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ, ನ್ಯಾಯಾಂಗ ನಿಂದನೆ ದಾಖಲಿಸುತ್ತೇವೆ' ಎಂದೆಲ್ಲ ಮಾಧ್ಯಮಗಳ ಮುಂದೆ ಆರ್ಭಟಿಸಿದರು ಕೂಡ.

ಭಾರತೀಯ ಸಂವಿಧಾನದಲ್ಲಿ 'ಚೆಕ್ ಆಂಡ್ ಬ್ಯಾಲೆನ್ಸ್' ಎಂಬ ವಿಧಾನವಿದ್ದು, ಇದು ಸಂವಿಧಾನದ ಯಾವುದೇ ಅಂಗವು ತನ್ನದೇ ಆದ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದ ವ್ಯವಸ್ಥೆಯಾಗಿದೆ. ಪರಿಶೀಲನೆಗಳು ಮತ್ತು ಸಮತೋಲನಗಳು ಒಂದು ಅಂಗವು ತುಂಬಾ ಶಕ್ತಿಶಾಲಿಯಾಗದಂತೆ ನೋಡಿಕೊಳ್ಳುತ್ತದೆ. ನಮ್ಮ ಸಂವಿಧಾನ ನಿರ್ಮಾತೃಗಳು ಅತ್ಯಂತ ಸ್ಪಷ್ಟವಾಗಿ ಮೂರೂ ಅಂಗಗಳ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಪ್ರತ್ಯೇಕಿಸಿ ನೀಡಿದ್ದಾರೆ.

ಭಾರತದ ಸಂವಿಧಾನದಲ್ಲಿ ಸರ್ವೋಚ್ಚ ನ್ಯಾಯಾಲಯ ದೇಶದ ನ್ಯಾಯಾಂಗ ವ್ಯವಸ್ಥೆಯ ಶ್ರೇಷ್ಠ ಪೀಠವಾಗಿದೆ. ದೇಶ ಸ್ವತಂತ್ರಗೊಂಡ ಬಳಿಕ, ಸ್ವಂತ ನ್ಯಾಯಾಂಗ ವ್ಯವಸ್ಥೆ ಹೊಂದಲು, ಲಂಡನ್ ನಲ್ಲಿದ್ದ Privy Council ಬದಲಿಗೆ 1950, ಜನವರಿ 28ರಂದು ಭಾರತದಲ್ಲಿ ನ್ಯಾಯಪೀಠವನ್ನು ಸ್ಥಾಪಿಸಲಾಯಿತು. ಇದಕ್ಕೆ 124 ರಿಂದ 147 ತನಕ ಸಂವಿಧಾನದ ವಿಧಿಗಳು ಮಾರ್ಗದರ್ಶಿಗಳಾಗಿವೆ.

ಅದರಂತೆ, (ಅ) ಮೂಲ ನ್ಯಾಯಾಧಿಕಾರ (Original Jurisdiction)& ವಿಧಿ 131: ಕೇಂದ್ರ ಹಾಗೂ ರಾಜ್ಯಗಳ ನಡುವೆ ಅಥವಾ ರಾಜ್ಯಗಳ ಪರಸ್ಪರ ವಿವಾದಗಳನ್ನು ನೇರವಾಗಿ ವಿಚಾರಣೆ ಮಾಡಲು ಹಕ್ಕು.

(ಆ) ಮೇಲ್ಮನವಿ ನ್ಯಾಯಾಧಿಕಾರ (Appellate Jurisdiction)- ವಿಧಿಗಳು 132, 133, 134: ಹೈಕೋರ್ಟ್‌ಗಳಿಂದ ಬಂದ ಅಪೀಲ್‌ಗಳ ವಿಚಾರಣೆ. (ಸಿವಿಲ್, ಕ್ರಿಮಿನಲ್ ಮತ್ತು ಸಂವಿಧಾನ ಸಂಬಂಧಿತ ಪ್ರಕರಣಗಳು).

(ಇ) ಐಚ್ಛಿಕ ಮನವಿ ಅಥವಾ ವಿಶೇಷ ಅನುವಾದ (Special Leave Petition&SLP)-ವಿಧಿ 136: ದೇಶದ ಯಾವುದೇ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ, ಸುಪ್ರೀಂಕೋರ್ಟ್ ಗೆ ಅರ್ಜಿ ಹಾಕಬಹುದು.

(ಈ) ಸಂವಿಧಾನ ವ್ಯಾಖ್ಯಾನ (Interpretation of Constitution): ಸಂವಿಧಾನದಲ್ಲಿ ಉಲ್ಲೇಖಿತ ಹಕ್ಕುಗಳು ಮತ್ತು ನಿಯಮಗಳ ಅರ್ಥವನ್ನು ಕೊಡುವ ಕಾರ್ಯ.

(ಉ) ಲೋಕೋಪಯೋಗಿ ಅರ್ಜಿ (Public Interest Litigation&PIL): ಸಾರ್ವಜನಿಕ ಹಿತಾಸಕ್ತಿ ವಿಷಯಗಳಲ್ಲಿ ನ್ಯಾಯವನ್ನು ಒದಗಿಸಲು, ಸೇರಿದಂತೆ ಇದರ ಕಾರ್ಯ ಮತ್ತು ವ್ಯಾಪ್ತಿಯನ್ನು ಅತ್ಯಂತ ಸ್ಪಷ್ಟವಾಗಿ ನಮ್ಮ ಸಂವಿಧಾನದಲ್ಲಿ ತಿಳಿಸಲಾಗಿದೆ.

ಒಮ್ಮೊಮ್ಮೆ, ಅಪೆಕ್ಸ್ ಕೋರ್ಟ್ ನಡೆಗಳು ಕಾರ್ಯಾಂಗ ಮತ್ತು ಶಾಸಕಾಂಗದ ಮೇಲೆ ಅತಿಕ್ರಮಣ, ಸೀಮಾ ಉಲ್ಲಂಘಿಸಿ ತೀರ್ಪು ಕೊಡುತ್ತಿದೆ ಎಂಬ ಅಪವಾದಗಳೂ ಕೇಳಿಬರುತ್ತವೆ. ಆದರೂ, ಇಲ್ಲಿಯವರೆಗೆ ನ್ಯಾಯಾಂಗವನ್ನು, ಅದರ ಕಾರ್ಯಶೈಲಿಯನ್ನು ಪ್ರಶ್ನೆ ಮಾಡದೆ ಅತ್ಯಂತ ಗೌರವದಿಂದ ಪಾಲಿಸಿಕೊಂಡು ಬರುತ್ತಿದ್ದೇವೆ. ನ್ಯಾಯಾಂಗವನ್ನು, ತೀರ್ಪುಗಳನ್ನು ಸಾರ್ವಜನಿಕವಾಗಿ ನಿಂದಿಸುವ, ಕಟು ವಿಮರ್ಶೆ ಮಾಡುವ ಹಾಗಿಲ್ಲ, ಹಾಗೇನಾದರೂ ಮಾಡಿದ್ದೇ ಆದಲ್ಲಿ, ನ್ಯಾಯಾಂಗ ನಿಂದನೆ ವ್ಯಾಪ್ತಿಗೆ (Contempt of Court Act,1971) ಒಳಪಡುತ್ತಾರೆ.

ಇಷ್ಟಾಗಿಯೂ, ಸಂಸದ ದುಬೆ, ಅಷ್ಟೊಂದು ವ್ಯಗ್ರರಾಗಿ, ಸರ್ವೋಚ್ಚ ನ್ಯಾಯಾಧೀಶರನ್ನೇ ಗುರಿಯಾಗಿಸಿಕೊಂಡು ಮಾತನಾಡಿರುವುದು, ದೇಶದ ಮೂಲೆಮೂಲೆಯಲ್ಲೂ ಈ ಕುರಿತು ಬಿಸಿ ಚರ್ಚೆ ಏರುವಂತೆ ಮಾಡಿದೆ. ಇದರ ಮಧ್ಯೆ, ತಮಿಳುನಾಡು ರಾಜ್ಯಪಾಲರು ಮತ್ತು ರಾಜ್ಯ ಸರಕಾರದ ನಡುವಿನ ವಿವಾದವು ಸಂವಿಧಾನಿಕ ಗೊಂದಲ ಉಂಟುಮಾಡಿದೆ.

ರಾಜ್ಯಪಾಲ ಎನ್.ರವಿ, ಹಲವು ಮಹತ್ವಪೂರ್ಣ ಬಿಲ್‌ಗಳಿಗೆ ಅನುಮೋದನೆ ನೀಡಲು ವಿಳಂಬ ಮಾಡಿದ್ದರಿಂದ ರಾಜ್ಯ ಸರಕಾರ ಸುಪ್ರೀಂ ಬಳಿ ಹೋಗಿತ್ತು. ಬಿಲ್‌ಗಳಿಗೆ ಅನುಮೋದನೆ ನೀಡಲು ತಕ್ಷಣ ಕ್ರಮಕ್ಕೆಗೊಳ್ಳಬೇಕು ಎಂದು ಸುಪ್ರೀಂಕೋರ್ಟ್ ರಾಜ್ಯಪಾಲರಿಗೆ ಸೂಚಿಸಿದ್ದು, ರಾಜ್ಯಪಾಲರು ಬಿಲ್‌ಗಳನ್ನು ರಾಷ್ಟ್ರಪತಿಗೆ ಕಳುಹಿಸುವುದು ಸಂವಿಧಾನ ವಿರೋಧಿಯಾಗಿದ್ದು, ಅವರು ಬಿಲ್‌ಗಳನ್ನು ತಕ್ಷಣ ಅನುಮೋದಿಸಬೇಕಾಗಿತ್ತು ಎಂದಿತಲ್ಲದೆ, ರಾಷ್ಟ್ರಪತಿಗಳಿಗೂ ಸಹ ನ್ಯಾಯಾಲಯ 90 ದಿನಗಳೊಳಗೆ ಮಸೂದೆಗಳಿಗೆ ಸಹಿ ಮಾಡಿ ಕಳುಹಿಸಿಕೊಡಬೇಕು ಎಂದು ಆಜ್ಞೆ ಹೊರಡಿಸಿದೆ ಕೂಡ!

ಇದಕ್ಕೆ ತುಪ್ಪ ಸುರಿದಂತೆ, ವಕ್ಫ್ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಸಲ್ಲಿಸಿದ ಅರ್ಜಿಯನ್ನು ತಕ್ಷಣವೇ ಕೈಗೆತ್ತಿಕೊಂಡ ನ್ಯಾಯಪೀಠ, ಉಮೀದ್(ವಕ್ಫ್ ಬಿಲ್) ಮಸೂದೆಯನ್ನು ಬಹುತೇಕ ತಡೆಹಿಡಿದು, ಏಕಪಕ್ಷೀಯ ನಿರ್ಧಾರದಂತೆ ಇದು ಕಾಣಿಸುತ್ತಿದ್ದು, ಮೊಘಲರ ಕಾಲದಲ್ಲಿ ಅಥವಾ ನೂರಾರು ವರ್ಷಗಳ ಮಸೀದಿ, ಜಮೀನುಗಳ ದಾಖಲೆ ಕೇಳಿದರೆ ಎಲ್ಲಿಂದ ತರಬೇಕು ಅವರು ಎಂದು ಅಭಿಪ್ರಾಯ ವ್ಯಕ್ತಪಡಿಸಿ, ಮೇ 5ಕ್ಕೆ ವಿಚಾರಣೆಗೆ ಮುಂದೂಡಿದೆ. ದೇಶದ ಸರ್ವೋಚ್ಚ ನ್ಯಾಯಾಲಯವು ತನ್ನ ವ್ಯಾಪ್ತಿಮೀರಿ ನಡೆದುಕೊಳ್ಳುತ್ತಿದ್ದು, ದೇಶದಲ್ಲಿ Anarchy (ಅರಾಜಕತೆ) ಸೃಷ್ಟಿಸಲು ಪಿತೂರಿ ನಡೆಸುತ್ತಿದೆ ಎಂದು ಬಹುಸ್ತರದಲ್ಲಿ ವ್ಯಾಪಕ ಚರ್ಚೆಗಳನ್ನು ಹುಟ್ಟುಹಾಕಿತು. ಮೋದಿ ಸರಕಾರವು ಜಗದಂಬಿಕಾ ಪಾಲ್ ಅಧ್ಯಕ್ಷತೆಯಲ್ಲಿ 30 ಸಂಸದರ ಒಂದು ಜಂಟಿ ಸಂಸದರ ಸಮಿತಿ 2024ರ ವಕ್ಫ್ (ತಿದ್ದುಪಡಿ) ಬಿಲ್ ಕುರಿತು ಪರಿಶೀಲನೆ ನಡೆಸಲು ಆಗಸ್ಟ್ 8, 2024ರಂದು ಸ್ಥಾಪಿಸಿತು.

ಜಂಟಿ ಸಂಸದೀಯ ಸಮಿತಿ 2024ರ ವಕ್ಫ್ (ತಿದ್ದುಪಡಿ) ಬಿಲ್ ಪರಿಶೀಲನೆಗಾಗಿ ಸಾರ್ವಜನಿಕರಿಂದ ಮಹತ್ವಪೂರ್ಣ ಪ್ರತಿಕ್ರಿಯೆಗಳನ್ನು ಪಡೆದಿದ್ದು, ದೇಶಾದ್ಯಾಂತ ಸುಮಾರು 84 ಲಕ್ಷ ಇಮೇಲ್ ಪ್ರತಿಕ್ರಿಯೆಗಳು ಬಂದಿವೆ. ಸುಮಾರು 70 ಬಾಕ್ಸ್‌ಗಳಷ್ಟು ಲಿಖಿತ ಪ್ರತಿಕ್ರಿಯೆಗಳು ಸಮಿತಿಗೆ ಸಲ್ಲಿಸಲ್ಪಟ್ಟಿವೆ. ಈ ಸಮಿತಿ 2025ರ ಬಜೆಟ್ ಅಧಿವೇಶನದ ಕೊನೆಯ ದಿನಾಂಕದವರೆಗೆ ತನ್ನ ವರದಿಯನ್ನು ಸಲ್ಲಿಸಲು ಸಮಯ ವಿಸ್ತರಣೆ ಪಡೆದಿತು. ಅಂತೆಯೇ, ಸಮಿತಿಯ ವರದಿ ಫೆಬ್ರವರಿ 13, 2025ರಂದು ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮಂಡಿಸಲಾಯಿತು.

ದೇಶದಲ್ಲಿ ಅತಿಹೆಚ್ಚು ಪರಿಶೀಲಿಸಲ್ಪಟ್ಟ, ಜನರ ಅವಗಾಹನೆಗೆ ಇಡಲ್ಪಟ್ಟ, ಜನಭಾಗಿದಾರಿಯಾದಂತಹ ಮೊದಲ ಮಸೂದೆ ಇದಾಗಿದೆ ಎನ್ನಬಹುದು ಮತ್ತು ಅತ್ಯಂತ ವಿಸ್ತೃತವಾಗಿ ಚರ್ಚೆ ನಡೆದು, ಲೋಕಸಭೆಯಲ್ಲಿ ಮಸೂದೆಯ ಮೇಲೆ 12 ಗಂಟೆಗಳಿಗೂ ಹೆಚ್ಚು ಕಾಲ ಚರ್ಚೆ ನಡೆದ ಬಳಿಕ, ಪರವಾಗಿ 288 ಮತ್ತು ವಿರುದ್ಧವಾಗಿ 232 ಮತಗಳೊಂದಿಗೆ ಹಾಗೂ ರಾಜ್ಯಸಭೆಯಲ್ಲಿ ಮಸೂದೆಯ ಮೇಲೆ 17ಗಂಟೆ ಕಾಲ ದಾಖಲೆಯ ಚರ್ಚೆ ನಡೆಯಿತು. ಈ ಅಧಿವೇಶನವು 1981 ರಲ್ಲಿ ರಾಜ್ಯಸಭೆಯಲ್ಲಿ ಅತಿ ಉದ್ದದ ಚರ್ಚೆಗಾಗಿ ಸ್ಥಾಪಿಸಲಾದ ಹಿಂದಿನ ದಾಖಲೆಯನ್ನೂ ಸಹ ಮೀರಿಸಿದೆ. ಹೀಗೆ, ಎರಡೂ ಸದನದಲ್ಲಿ ಮತಗಳೊಂದಿಗೆ ಮಸೂದೆ ಸ್ವೀಕೃತವಾಯಿತು.

ಬಳಿಕ, ಘನವೆತ್ತ ರಾಷ್ಟ್ರಪತಿಗಳ ಅನುಮೋದನೆಯೊಂದಿಗೆ ಜಾರಿಯಾಗುವ ಮೊದಲೇ, ವಿರೋಧ ಪಕ್ಷಗಳು ಸುಪ್ರೀಂಕೋರ್ಟ್ ನಲ್ಲಿ ಪ್ರಶ್ನಿಸಿದ ತಕ್ಷಣ, ಕೂಡಲೇ ವಿಚಾರಣೆಗೆ ಕೈಗೆತ್ತಿಕೊಂಡಿದ್ದೇ ಬಹುತೇಕರ ಕಣ್ಣು ಕೆಂಪಗಾಗಿಸಿದೆ. ಖ್ಯಾತ ವಕೀಲರಾದ ವಿಷ್ಣು ಶಂಕರ್ ಜೈನ್ ಎಂಬುವರಂತೂ, ನಾವು 2013ರಲ್ಲಿ ಮನಮೋಹನ ಸಿಂಗ್ ಸರಕಾರ, ಲಂಗುಲಗಾಮಿಲ್ಲದ ಅಪರಿಮಿತ ಶಕ್ತಿ ಕೊಟ್ಟು, ಯಾರ ಜಮೀನನ್ನು ಬೇಕಾದರೂ ವಕ್ಫ್‌ಗೆ ಸೇರಿದ್ದು ಎನ್ನುವಂತಹ ಪೂರ್ಣ ಸ್ವತಂತ್ರ ನೀಡಿದ್ದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದಾಗ, ಆದ್ಯತೆ ಮೇರೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿ, ದಶಕ ಕಳೆದರೂ ಇವತ್ತಿಗೂ ಈ ಕೇಸ್ ಧೂಳು ಹಿಡಿದು ಕುಳಿತಿದೆ. ವಕ್ಫ್ ಕಾಂಗ್ರೆಸ್ ತಿದ್ದುಪಡಿ ಮಾಡಿದ್ದನ್ನು ತಲೆಯೆತ್ತಿ ನೋಡದ ನ್ಯಾಯಾಲಯ, ಮೋದಿ ಸರಕಾರ ಮಾಡಿದ ವಕ್ಫ್ ತಿದ್ದುಪಡಿ ಮಸೂದೆ, ಕಾನೂನು ಆಗಿ ಜಾರಿಗೆ ಬರುವ ಮೊದಲೇ ವಿಚಾರಣೆಗೆ ಕೈಗೆತ್ತಿಕೊಂಡಿದೆ ಎಂದು ಬಹಿರಂಗವಾಗಿಯೇ ಪ್ರಶ್ನಿಸುತ್ತಿದ್ದಾರೆ.

ಸಂಸದ ದುಬೆ, ನೀವು ನಿಮ್ಮ ಮುಖ ತೋರಿಸಿ, ನಾವು ನಿಮಗೆ ಹೊಂದುವ ಕಾನೂನು ತೋರಿಸುತ್ತೇವೆ ಎಂಬಂತೆ ಘನ ನ್ಯಾಯಾಲಯ ನಡೆದುಕೊಳ್ಳುತ್ತಿದೆ. ಸಾವಿರಾರು ವರ್ಷಗಳ ಹಳೆಯಾದಾದ ನಮ್ಮ ಹಿಂದೂ ಧರ್ಮದ ಅಸ್ಮಿತೆಯನ್ನ ಪ್ರಶ್ನಿಸಿ, ಅದಕ್ಕೆ ಸಾಕ್ಷ್ಯ ಕೇಳಲಾಗುತ್ತಿದೆ. ಅನ್ಯ ಧರ್ಮದವರ ಕೇಸುಗಳ ವಿಚಾರ ಬಂದಾಗ, ಮೊಘಲರ ಕಾಲದ ಜಾಗ, ಮಸೀದಿಗಳಿಗೆ ಅವರು ಎಲ್ಲಿಂದ ದಾಖಲೆ ತರಬೇಕು ಎಂದು ಕೇಳುತ್ತ, ನ್ಯಾಯಲಯ ದ್ವಿಮುಖ ನೀತಿ ಅನುಸರಿಸುತ್ತಿದೆ ಎಂದು ಮಾದ್ಯಮಗಳಲ್ಲಿ ಪ್ರಶ್ನಿಸಿದ್ದಾರೆ.

ಇನ್ನು, ಘನವೆತ್ತ ಉಪರಾಷ್ಟ್ರಪತಿಗಳು ಮಾತ್ರ ಭಾರತದ ಇತಿಹಾಸದಲ್ಲೇ ಮೊದಲು ಎಂಬಂತೆ ಸಾರ್ವಜನಿಕವಾಗಿ ಸರ್ವೋಚ್ಚ ನ್ಯಾಯಾಲಯದ ಕಾರ್ಯವೈಖರಿಯನ್ನು ಪ್ರಶ್ನಿಸಿದ್ದಾರೆ. ಸಂಸತ್ತಿನ, ರಾಜ್ಯಪಾಲರ ಮತ್ತು ರಾಷ್ಟ್ರಪತಿಗಳ ಕರ್ತವ್ಯಗಳನ್ನು ಅತ್ಯಂತ ಸ್ಪಷ್ಟವಾಗಿ ಸಂವಿಧಾನದಲ್ಲಿ ಹೇಳಲಾಗಿದ್ದು, ಶಾಸನವು ಮಾಡಿದ ಕಾನೂನುಗಳನ್ನು ಜಾರಿಗೆ ತರುವಲ್ಲಿ ಕರ್ತವ್ಯನಿಷ್ಠೆ ತೋರಬೇಕಾದ ನ್ಯಾಯಾಂಗವು ತನ್ನ ಸೀಮಾರೇಖೆಯನ್ನು ಉಲ್ಲಂಘಿಸುತ್ತಿದೆ. ಅತ್ಯಂತ ಕಠಿಣ ಸಂದರ್ಭದಲ್ಲಿ ಬಳಸಬೇಕಾದ ಸಂವಿಧಾನ ನೀಡಿರುವ ಕಲಂ-142 (Plenary power) ಅನ್ನು ಮನಬಂದಂತೆ Nuclear Missile ನಂತೆ ಬಳಸುತ್ತ, ವ್ಯಾಪ್ತಿ ಮೀರುವುದು ತರವಲ್ಲ. ರಾಷ್ಟ್ರಪತಿಗೇ ಆಜ್ಞೆ ಜಾರಿಗೊಳಿಸುವ ಯಾವೊಂದು ಅಧಿಕಾರವೂ ನ್ಯಾಯಾಂಗಕ್ಕೆ ಇಲ್ಲವೆಂದು ಗುಡುಗಿದ್ದಾರೆ.

ಶಾಸನ ಸಭೆಗೆ ಆಯ್ಕೆಯಾಗುವ ಎಲ್ಲ ಸದಸ್ಯರು ಸೇರಿದಂತೆ, ಎಲ್ಲ ನ್ಯಾಯಾದೀಶರು, ಹೈಕೋರ್ಟ್ - ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಸಹ, .ಭಾರತದ ಸಂವಿಧಾನಕ್ಕೆ ನಿಷ್ಠೆ ಮತ್ತು ಭಕ್ತಿಯನ್ನು ಹೊಂದುತ್ತೇನೆ., ಎಂಬರ್ಥದಲ್ಲಿದ್ದರೆ, ರಾಷ್ಟ್ರಪತಿ ಮತ್ತು ರಾಜ್ಯಪಾಲರ ಪ್ರಮಾಣ ವಚನದಲ್ಲಿ, ...ಭಾರತದ ಸಂವಿಧಾನವನ್ನು ರಕ್ಷಿಸಿ, ಕಾಪಾಡುತ್ತೇನೆ, ಅದರ ಪರವಾಗಿ ನಿಲ್ಲುತ್ತೇನೆ. ಎಂದಾಗಿರುತ್ತದೆ. ರಾಜ್ಯಪಾಲರಿಗೆ, ರಾಷ್ಟ್ರಪತಿಗಳಿಗೆ ನ್ಯಾಯಾಂಗವು ಆಜ್ಞೆ ಮಾಡಲು ಬರುವುದಿಲ್ಲ ಎಂದು ಸಹ ಉಪರಾಷ್ಟ್ರಪತಿಗಳಾದ ಜಗದೀಪ್ ಧನ್ಕರ್ ಹೇಳಿದ್ದಾರೆ.

ಅಂದು ಇಂದಿರಾಗಾಂಧಿ ಸಹ ಸುಪ್ರೀಂ ಅನ್ನು ಕಟುವಾಗಿ ತರಾಟೆಗೆ ತೆಗೆದುಕೊಂಡಿದ್ದರು. ಹಾಗೆಯೇ, ಅಟಾರ್ನಿಯಾಗಿದ್ದ ಅರುಣ್ ಜೇಟ್ಲಿಯವರು ಸಂಸತ್ತಿನಲ್ಲಿ ನ್ಯಾಯಾಧೀಶರ, ನಿವೃತ್ತ ನ್ಯಾಯಾಧೀಶರ ನಡಾವಳಿಗಳ ಬಗ್ಗೆ ತುಸು ಖಾರವಾಗಿಯೇ ಮಾತನಾಡಿದ್ದರು. ನಮ್ಮ ಸಂವಿಧಾನವು ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳ ಕಾರ್ಯ, ಕರ್ತವ್ಯ ಮತ್ತು ವ್ಯಾಪ್ತಿಯನ್ನು ಅತ್ಯಂತ ಸ್ಪಷ್ಟವಾಗಿಯೇ ತಿಳಿಸಿಹೇಳಿದೆ. ಇಲ್ಲಿ, ಯಾರೂ ಯಾವುದನ್ನೂ ವಯಕ್ತಿಕ ಪ್ರತಿಷ್ಠೆಯಾಗಿ ತೆಗೆದುಕೊಳ್ಳದೇ ಸಮತೋಲನ ಕಾಯ್ದುಕೊಂಡು ಹೋಗುವುದರಲ್ಲಿಯೇ ಪ್ರಜಾಪ್ರಭುತ್ವದ ಯಶಸ್ಸು ಅಡಗಿದೆ ಎಂಬುದನ್ನು ಮರೆಯಬಾರದು.

ಅಂತಿಮವಾಗಿ, ಜನರೇ ಪ್ರಭುಗಳು. ಜನತೆಯ ಆಯ್ಕೆಯ ಮೇರೆಗೆ ಚುನಾಯಿತರಾದ ಸದಸ್ಯರೆಲ್ಲ ಸೇರಿ ರಚಿಸಿದ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ ಎಂಬುದನ್ನು ಯಾರೂ ಮರೆಯಬಾರದು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:100

ಸಮಾಚಾರ ಸಣ್ಣದಲ್ಲ

ಪೊಲೀಸರಿಗೆ ಹಲ್ಲೆ: ಆರು ಮಂದಿಗೆ ಗಾಯ

ಕಾಸರಗೋಡು: ಜಿಲ್ಲೆಯಲ್ಲಿ ಪೊಲೀಸರಿಗೆ ಹಲ್ಲೆ ನಡೆದಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ರಾಜಪುರಂನಲ್ಲಿ ಸಂಭವಿಸಿದ ಘಟನೆಯಲ್ಲಿ ಎಸ್ಐ, ಎಎಸ್ಐ ಸಹಿತ ನಾಲ್ಕು ಮಂದಿ ಗಾಯಗೊಂಡಿ ದ್ದಾರೆ. ಹೊಸದುರ್ಗ ಪೊಲೀಸ್ ಠಾಣೆಯ ಪ್ರೊಬೇಷನಲ್ ಎಸ್ಐ ಕೆ.ವಿ. ಜಿತಿನ್ (29), ಸಿವಿಲ್ ಪೊಲೀಸ್ ಆಫೀಸರ್ ಅಜೇಶ್ ಕುಮಾರ್(40) ಅವರಿಗೆ ಅಲಾಮಿಪಳ್ಳಿ ಜಂಕ್ಷನ್‌ನಲ್ಲಿ ಹಲ್ಲೆ ಮಾಡಲಾಗಿದೆ. ಘಟನೆಗೆ ಸಂಬಂಧಿಸಿ ಬಲ್ಲಾ ಅಲಾಯಿ, ಶಾರದಾಸ್‌ನ ಸಿ.ಕೆ.ಮೋಹನ್ ಕುಮಾರ್ (52) ನನ್ನು ಬಂಧಿಸಲಾಗಿದೆ. ಈತ ಮಂಗಲ್ಪಾಡಿ ವೆಟರ್ನರಿ ಆಸ್ಪತ್ರೆಯ ನೌಕರನಾಗಿದ್ದಾನೆ. ರಾಜಪುರಂ ಪೊಲೀಸ್ ಠಾಣೆ ವ್ಯಾಪ್ತಿಯ ಚಾಮುಂಡಿಕುನ್ನು ಶಿವಪುರದಲ್ಲಿ ಪೊಲೀಸ್ ಠಾಣೆಯ ಅಸಿಸ್ಟೆಂಟ್ ಎಸ್ಐ ಮೋನ್ಸಿ ವರ್ಗೀಸ್(54), ಪೊಲೀಸ್ ಸಜಿತ್ ಜೋಸೆಫ್ (24), ಕೆ.ಪಿ. ನಿಧಿನ್(32), ಹೋಂಗಾರ್ಡ್ ಶಶಿ ಕುಮಾರ್ (58) ಗಾಯಗೊಂಡಿದ್ದಾರೆ. ಈ ಘಟನೆಗೆ ಸಂಬಂಧಿಸಿ ಶಿವಪುರಂ ನಿವಾಸಿಗಳಾದ ಪ್ರಮೋದ್, ಪ್ರದೀಪ್ ವಿರುದ್ಧ ರಾಜಪುರಂ ಪೊಲೀಸರು ಕೇಸು ದಾಖಲಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಆಲಿಕಲ್ಲು ಮಳೆ

ಹುಬ್ಬಳ್ಳಿ: ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲಿಂದು ಗುಡುಗು ಮಿಂಚು ಸಹಿತ ಆಲಿಕಲ್ಲು ಮಳೆ ಸುರಿದಿದೆ. ಮಧ್ಯಾಹ್ನದ ಬಳಿಕ ಮೋಡ ಕವಿದ ವಾತಾವರಣದಿಂದ ಕೂಡಿದ್ದ ನಗರದಲ್ಲಿ ಸಂಜೆ ಇದ್ದಕ್ಕಿದ್ದಂತೆ ಮಳೆ ಸುರಿಯಲು ಆರಂಭವಾಯಿತು. ಒಂದು ಗಂಟೆಗೂ ಹೆಚ್ಚು ಕಾಲ ಮಳೆ ಸುರಿದಿದ್ದರಿಂದ ವಾತಾವರಣ ತಂಪಾಗಿತ್ತು. ಮಳೆಗೂ ಮುನ್ನ ಗುಡುಗು ಮಿಂಚು ಹೆಚ್ಚಾಗಿತ್ತು. ಮಳೆ ರಪರಪ ಸುರಿಯುತ್ತಿದ್ದಂತೆ ಹನಿಗಳ ಜೊತೆ ಜೊತೆಗೆ ಆಲಿಕಲ್ಲು ಸಹ ಸುರಿದವು. ಅದರಲ್ಲೂ ನಗರದ ಲ್ಯಾಮಿಂಗ್ಟನ್ ರಸ್ತೆ, ದಾಜೀಬಾನಪೇಟೆ, ಸಂಗೊಳ್ಳಿ ರಾಯಣ್ಣ ಸರ್ಕಲ್ ಹಾಗೂ ಚೆನ್ನಮ್ಮ ವೃತ್ತದ ಸುತ್ತಮುತ್ತ ಆಲಿಕಲ್ಲು ಹೆಚ್ಚು ಸುರಿಯಿತು. ಮಳೆ ಸುರಿದ ಪರಿಣಾಮ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ವಾಹನ ಸವಾರರು ಪರದಾಡಿವ ದೃಶ್ಯ ಸಾಮಾನ್ಯವಾಗಿತ್ತು. ಈ ವರ್ಷದ ಅವಧಿಯಲ್ಲಿ ಇದು ಮೊದಲ ಮಳೆಯಾಗಿದ್ದು, ಹಲವು ಕಡೆ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು. ಆಲಿಕಲ್ಲು ಸಹಿತ ಮಳೆಯಿಂದಾಗಿ ಮಕ್ಕಳು ಮಳೆಯಲ್ಲಿ ಕುಣಿದು ಆಲಿಕಲ್ಲು ಆರಿಸಿಕೊಳ್ಳುತ್ತಿರುವ ದೃಶ್ಯಗಳು ಸಹ ಅಲ್ಲಲ್ಲಿ ಕಂಡು ಬಂದವು.

ಸ್ವಪ್ರಯತ್ನದಲ್ಲಿಯೇ ಯುಪಿಎಸ್‌ಸಿ ಕ್ಲಿಯರ್

ಯಾವುದೇ ಕೋಚಿಂಗ್ ಕೇಂದ್ರದಲ್ಲಿ ತರಬೇತಿ ಪಡೆದಿಲ್ಲ | ಯುಪಿಎಸ್‌ಸಿಯಲ್ಲಿ ರಾಜ್ಯಕ್ಕೆ ಮೊದಲ ರ‍್ಯಾಂಕ್ ಪಡೆದ ರಂಗಮಂಜು ಅಭಿಪ್ರಾಯ

ಅಪರ್ಣಾ ಎ.ಎಸ್ ಬೆಂಗಳೂರು

ಮೂರು ಬಾರಿಯ ವಿಫಲತೆಯ ಬಳಿಕ, ಅಂತಿಮ ಪ್ರಯತ್ನದಲ್ಲಿ ಗೆಲುವು ಸಿಕ್ಕಿದೆ. ಸತತ ಪ್ರಯತ್ನದ ಬಳಿಕ ಸಿಕ್ಕಿರುವ ಈ ಯಶಸ್ಸು ನೆಮ್ಮದಿ ಎನಿಸುತ್ತಿದೆ. ಯಾವುದೇ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆಯದೇ ಸ್ವಪ್ರಯತ್ನದಿಂದಲೇ ಯುಪಿಎಸ್‌ಸಿಯ ಟಾಪ್ 25ರೊಳಗೆ ಬಂದಿರುವುದಕ್ಕೆ ಖುಷಿಯಿದೆ ಎಂದು ಯುಪಿಎಸ್‌ಸಿ ರ‍್ಯಾಂಕ್‌ನಲ್ಲಿ ಕರ್ನಾಟಕಕ್ಕೆ ಮೊದಲ ಹಾಗೂ ದೇಶದಲ್ಲಿ 24ನೇ ರ‍್ಯಾಂಕ್ ಪಡೆದಿರುವ ರಂಗಮಂಜು ಹೇಳಿದ್ದಾರೆ.

ಬೆಂಗಳೂರಿನ ದಿವಂಗತ ಐಪಿಎಸ್ ಅಧಿಕಾರಿ ಆರ್. ರಮೇಶ್ ಅವರ ಪುತ್ರರಾಗಿರುವ ರಂಗಮಂಜು ಅವರು ಎಂಬಿಬಿಎಸ್ ಮುಗಿಸಿದ್ದಾರೆ. ಮೂರು ಬಾರಿ ಯುಪಿಎಸ್‌ಸಿ ಕ್ಲಿಯರ್ ಮಾಡುವಲ್ಲಿ ವಿಫಲವಾದರೂ ಛಲ ಬಿಡದೇ ಅಂತಿಮ ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದ್ದಾರೆ. 'ವಿಶ್ವವಾಣಿ'ಗೆ ನೀಡಿರುವ ವಿಶೇಷ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

- **ರಾಜ್ಯಕ್ಕೆ ಮೊದಲ ರ‍್ಯಾಂಕ್ ಪಡೆದಿರುವುದಕ್ಕೆ ಹೇಗನಿಸುತ್ತಿದೆ?**

– ಈ ಹಿಂದೆ ಮೂರು ಬಾರಿ ಪರೀಕ್ಷೆ ಬರೆದಿದ್ದರೂ ಕ್ಲಿಯರ್ ಆಗಿರಲಿಲ್ಲ. ಆದರೆ ಅಂತಿಮ ಪ್ರಯತ್ನದಲ್ಲಿ ಯಶಸ್ಸು ಸಿಕ್ಕಿದೆ. ಅದರಲ್ಲಿಯೂ ಕರ್ನಾಟಕಕ್ಕೆ ಮೊದಲ ರ‍್ಯಾಂಕ್ ಪಡೆದಿರುವುದು ಖುಷಿಯಾಗುತ್ತಿದೆ. ತಂದೆಯ ನೆನಪಿನಲ್ಲಿ ತಾಯಿಯ ಪ್ರೋತ್ಸಾಹದಿಂದ ಈ ಸಾಧನೆ ಪೂರ್ಣಗೊಳಿಸಿದಕ್ಕೆ ನೆಮ್ಮದಿ ಎನಿಸುತ್ತಿದೆ.

- **ಹೇಗಿತ್ತು ಪರೀಕ್ಷಾ ತಯಾರಿ?**

– ಯಾವುದೇ ಕೋಚಿಂಗ್ ಕೇಂದ್ರಗಳಲ್ಲಿ ತರಬೇತಿ ಪಡೆದಿರಲಿಲ್ಲ. ಆದರೆ ಸರಣಿ ಪರೀಕ್ಷಾ ಟೆಸ್ಟ್‌ಗಳನ್ನು ಬರೆಯುತ್ತಿದೆ. ಪೇಪರ್ ಆಧಾರದಲ್ಲಿ ಉತ್ತರ ಬರೆಯುವಿಕೆ ನನ್ನ ತಯಾರಿಯ ಪ್ರಮುಖ ಭಾಗವಾಗಿತ್ತು. ತರಬೇತಿ ಕೇಂದ್ರಗಳಿಗೆ ಹೋಗದೇ, ಸಾಮಾಜಿಕ ಜಾಲತಾಣದಿಂದ ದೂರವಿದ್ದು ಪರೀಕ್ಷೆಗೆ ತಯಾರಿ ನಡೆಸಿದ್ದೆ.

ಆಕಾಂಕ್ಷಿಗಳಿಗೆ ನಿಮ್ಮ ಸಲಹೆ ಏನು?

ಪ್ರಿಲಿಮ್ಸ್ ಪರೀಕ್ಷೆಗಳಲ್ಲಿ ಅನೇಕ ಬಾರಿ ನಮ್ಮ ಅದೃಷ್ಟವೂ ಕೈಹಿಡಿಯಬೇಕಾಗುತ್ತದೆ. ನಾನೂ ಸಹ ಮೂರು ಬಾರಿ ಸೋಲನುಭವಿಸಿದ್ದೇನೆ. ಆದರೆ ಒಂದು ಬಾರಿ ಪ್ರಿಲಿಮ್ಸ್ ಮುಗಿಸಿದರೆ, ಮೈನ್ಸ್ ನಿಮ್ಮ ಕೈಯಲ್ಲೇ ಇರುತ್ತದೆ. ಸರಣಿ ಪರೀಕ್ಷಾ ಟೆಸ್ಟ್‌ಗಳನ್ನು ತೆಗೆದುಕೊಳ್ಳುವುದರಿಂದ ಉತ್ತಮ ರೀತಿಯಲ್ಲಿ ತಯಾರಿ ಮಾಡಬಹುದು. ಈ ಹಂತದಲ್ಲಿ ಜನರು ತುಂಬಾ ಚೆನ್ನಾಗಿ ಪರೀಕ್ಷೆ ಬರೆಯಬಹುದು. ಆದರೆ ಅಗತ್ಯವಾದಷ್ಟು ಪರಿಶ್ರಮ, ಪ್ರಯತ್ನ ತಯಾರಿ ಪರೀಕ್ಷೆಯಲ್ಲಿ ಮಾಡಬೇಕು. ನಾನು ದಿನದಲ್ಲಿ 6-8 ಗಂಟೆ ಓದುತ್ತಿದೆ. ನಿತ್ಯ ಒಂದು ಗಂಟೆ ದಿನಪತ್ರಿಕೆ ಗಳನ್ನು ಓದುವುದಕ್ಕೆ ಮೀಸಲಿರಿಸುತ್ತಿದೆ. ಬಳಿಕ ಉತ್ತರ ಬರೆಯುವ ತಯಾರಿ ಮಾಡುತ್ತಿದೆ. ಬಳಿಕ ಇತಿಹಾಸ, ಭೂಗೋಳ ವಿಷಯಗಳ ಓದಿನ ಕಡೆಗೆ ಗಮನಹರಿಸುತ್ತಿದ್ದೆ. ಯಾವುದೇ ರೀತಿಯಾದ ಟೈಮ್ ಟೇಬಲ್ ಮಾಡಿಕೊಂಡು ನಾನು ಓದಿರಲಿಲ್ಲ.

ನನ್ನ ಸಾಧನೆಗೆ ತಂದೆಯೇ ಸ್ಫೂರ್ತಿ. ಅವರ ನಿಧನದ ನಂತರ ತಾಯಿ ಎನ್. ಸುನೀತಾ ಅವರು ಪ್ರೋತ್ಸಾಹ ನೀಡಿದರು. ಯಾವ ಅಕಾಡೆಮಿಯಲ್ಲೂ ತರಬೇತಿ ಪಡೆಯದೇ, ಮನೆಯಲ್ಲೇ ಕುಳಿತು ಸತತ ಅಧ್ಯಯನ ನಡೆಸಿದೆ. ಕೋವಿಡ್ ಸಮಯದಲ್ಲಿ ಯಶಸ್ಸು ಸಿಗಲಿಲ್ಲ. ಕೊನೆಯ ಪ್ರಯತ್ನದಲ್ಲಿ ಸಂದರ್ಶನಕ್ಕೆ ಅವಕಾಶ ಸಿಕ್ಕಿತ್ತು. ಯಶಸ್ವಿಯೂ ಆದೆ. ಕರ್ನಾಟಕದಲ್ಲಿ ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುವ ಇಚ್ಛೆ ಇಟ್ಟುಕೊಂಡಿದ್ದೇನೆ.

– ರಂಗಮಂಜು, ಯುಪಿಎಸ್‌ಸಿ 24ನೇ ರ‍್ಯಾಂಕ್ ಪಡೆದ ಅಭ್ಯರ್ಥಿ



- **ಮುಂದಿನ ಯೋಜನೆ ಏನು?**

– ಯುಪಿಎಸ್‌ಸಿಯಲ್ಲಿ ಒಮ್ಮೆ ಆಯ್ಕೆಯಾದರೆ ಎಲ್ಲವೂ ಹಿರಿತನದ ಆಧಾರದಲ್ಲಿಯೇ ನಡೆಯುತ್ತದೆ. ಆದ್ದರಿಂದ ಮುಂದಿನ ಯೋಜನೆಗಳಿಗಿಂತ, ಸಿಗುವ ಅವಕಾಶದಲ್ಲಿ ಸೇವೆ ಮಾಡಬೇಕು ಎನ್ನುವ ಇಚ್ಛೆಯಿದೆ. ಸಾರ್ವಜನಿಕರಿಗೆ ಒಳಿತು ಮಾಡುವ ಹಾಗೂ ಸರಕಾರದ ತೀರ್ಮಾನದಲ್ಲಿ ಭಾಗವಾಗಿ ರಬೇಕು ಎನ್ನುವ ಬಯಕೆಯಿದೆ. ಆಡಳಿತದಲ್ಲಿದ್ದುಕೊಂಡು ದೇಶ ಸೇವೆ ಮಾಡುವುದಷ್ಟೇ ನನ್ನ ಬಯಕೆಯಾಗಿದೆ.

- **ಮೂರು ಭಾರಿ ಸೋತಾಗ ಕೈಬಿಡುವ ಯೋಚನೆ ಬಂದಿತ್ತಾ?**

– ಹೌದು, ಮೂರು ಬಾರಿ ಸತತ ಸೋಲಾದಾಗ ಯುಪಿಎಸ್‌ಸಿ ಬಿಡಬೇಕು ಎನಿಸಿತ್ತು. ಆದರೆ ಆ ಸಮಯದಲ್ಲಿ ನನಗೆ ಮಾನಸಿಕವಾಗಿ ಧೈರ್ಯ ತುಂಬಿದ್ದು ನನ್ನ ತಾಯಿ ಸುನೀತಾ. ತಂದೆ ದಿ.ಆರ್. ರಮೇಶ್ ಅವರ ಕನಸನ್ನು ಈಡೇರಿಸಲು ಶ್ರಮ ಪಟ್ಟೆ ಅದಕ್ಕೆ ಪ್ರತಿಫಲ ಸಿಕ್ಕಿದೆ. ವೈಫಲ್ಯದ ದಿನಗಳಲ್ಲಿ ಗುರುಗಳು ಮಾರ್ಗದರ್ಶನ ಮಾಡುತ್ತಿದ್ದರು. ನಿನಗೆ ಪಾಸ್ ಮಾಡಲು ಸಾಧ್ಯವಿದೆ ಎಂದು ಮತ್ತಷ್ಟು ಪ್ರೋತ್ಸಾಹ, ಉತ್ತೇಜನ ನೀಡುತ್ತಿದ್ದರು. ನನಗೆ ನನ್ನ ಮೇಲೆ ನಂಬಿಕೆ ಇರಲಿಲ್ಲ. ಆದರೆ ಅವರ ಮಾತುಗಳು ನನ್ನಲ್ಲಿ ಭರವಸೆ ಮೂಡಿಸಿತ್ತು.

ಹಾಡಹಗಲೇ ರೈತರ ಮೇಲೆ ಗುಂಡು!

ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡದ ಕಾರಣಕ್ಕೆ ಹಲ್ಲೆ, ಕೊಲೆ ಯತ್ನ

ಚಿಕ್ಕಬಳ್ಳಾಪುರ : ಹಲವು ರೈತರ ಮೇಲೆ ಶೂಟೌಟ್ ಮಾಡಿದ ಘಟನೆ ಜಿಲ್ಲೆಯ ಮಂಚೇನಹಳ್ಳಿ ತಾಲೂಕು ಕನಗಾನಗೊಪ್ಪ ಗ್ರಾಮದ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ. ಘಟನೆಯಲ್ಲಿ ರೈತ ಎಂ.ಆರ್.ರವಿಕುಮಾರ್(36)ಗೆ ಎಡಗಾಲಿನ ಮೂಳೆ ಮುರಿದಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿದೆ. ಮಾಜಿ ಎಂಎಲ್‌ಸಿ ವೈ.ಎ.ನಾರಾಯಣಸ್ವಾಮಿ ಅವರ ಸಹೋದರ ಸಂಬಂಧಿ ಎನ್ನಲಾದ ಸಕಲೇಶಕುಮಾರ್ ಎಂಬಾತ ತನ್ನ ರೌಡಿ ಪಟಾಲಂ ಈ ದುಷ್ಕೃತ್ಯ ಎಸಗಿದೆ.

ಶೂಟೌಟ್ ಮಾಹಿತಿ ತಿಳಿಯುತ್ತಿದ್ದಂತೆ ಮಂಚೇನಹಳ್ಳಿ ಪೊಲೀಸ್‌ಠಾಣೆ ಎದುರು ರೈತಸಂಘದ ಲಕ್ಷ್ಮೀನಾರಾಯಣ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗಿದೆ.

ಅಕ್ರಮ ಗಣಿಗಾರಿಕೆ: ರೈತರ ಅನುಮತಿಯಿಲ್ಲದೆ ಕ್ವಾರಿ ಮಾಲಿಕನೊಬ್ಬ ದೌರ್ಜನ್ಯದಿಂದ ರಸ್ತೆ ನಿರ್ಮಾಣ ಮಾಡುತ್ತಿರುವಾಗ ಇದನ್ನು ತಡೆಯಲು ರವಿಕುಮಾರ್ ಮತ್ತು ರೈತಸಂಘದ ಮುಖಂಡರು ಮುಂದಾಗಿದ್ದರು.ಈ ವೇಳೆ ಅಲ್ಲಿಗೆ ಬಂದ ಕ್ವಾರಿಯ ಉಸ್ತುವಾರಿ ನಡೆಸುತ್ತಿರುವ ಸಕಲೇಶ್ ಕುಮಾರ್ ಯುವ ರೈತ ಎಂ.ಆರ್.ರವಿಕುಮಾರ್ ಮೇಲೆ ಏಕಾಏಕಿ ದಾಳಿ ನಡೆಸಿ ಬೂಟುಗಾಲಿನಿಂದ ಒದ್ದಿದ್ದಲ್ಲದೆ ನಿನ್ನ ಸಾಯಿಸಿಯೇ ತೀರುತ್ತೇನೆ. ಎಷ್ಟು ಮಂದಿ ಬರುತ್ತೀರೋ ಬನ್ರೋ ಎಂದು ಗನ್ ತೆಗೆದು ನೇರವಾಗಿ ರೈತನ ಮೇಲೆ ಗುಂಡು ಹಾರಿಸಿದ್ದಾನೆ.



ಏ.28ಕ್ಕೆ ಪ್ರತಿಭಟನೆ

ಈ ಘಟನೆ ಜಿಲ್ಲೆಯಲ್ಲಿ ಭಾರೀ ಸಂಚಲನ ಸೃಷ್ಟಿಸಿದೆ. ಘಟನೆ ಖಂಡಿಸಿ ಮಂಚೇನಹಳ್ಳಿ ಪೊಲೀಸ್ ಠಾಣೆ ಎದುರು ಪ್ರತಿಭಟನೆ ಮಾಡುತ್ತಿದ್ದ ರೈತರ ಬಳಿ ತೆರಳಿ ಅವರಿಗೆ ಸಾಂತ್ವನ ಹೇಳಿದ್ದಲ್ಲದೆ, ಆರೋಪಿಗಳನ್ನು ಬಂಧಿಸಿರುವ ಬಗ್ಗೆ ಮಾಹಿತಿ ನೀಡಿ ಸಮಾಧಾನ ಮಾಡಿದ್ದಾರೆ.ಎಸ್ಪಿ ಮಾತಿಗೆ ಆಕ್ರೋಶಗೊಂಡ ರೈತರು ಏ.28ಕ್ಕೆ ಪ್ರತಿಭಟನೆಗೆ ಕರೆ ನೀಡಿದ್ದಾರೆ.

40 ಪ್ರವಾಸಿಗರ ಕರೆತರಲು ವಿಶೇಷ ವಿಮಾನ

← ಮೊದಲಪುಟದಿಂದ

ಕಾಶ್ಮೀರಕ್ಕೆ ಪ್ರವಾಸಕ್ಕೆ ಹೋಗಿದ್ದ 40 ಕ್ಕೂ ಹೆಚ್ಚು ಕನ್ನಡಿಗರು ಭಯೋತ್ಪಾದಕ ದಾಳಿಯಲ್ಲಿ ಸಿಲುಕಿಕೊಂಡಿದ್ದಾರೆ, ಮತ್ತು ಅವರೆಲ್ಲರನ್ನೂ ಸುರಕ್ಷಿತವಾಗಿ ತಮ್ಮ ರಾಜ್ಯಕ್ಕೆ ಮರಳಿ ಕರೆತರಲು ವಿಶೇಷ ವಿಮಾನ ವ್ಯವಸ್ಥೆ ಮಾಡುವಂತೆ ನಾನು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಪ್ರತಿಯೊಬ್ಬ ಕನ್ನಡಿಗನನ್ನು ಸುರಕ್ಷಿತವಾಗಿ ರಾಜ್ಯಕ್ಕೆ ಮರಳಿ ಕರೆತರುವ ಸಂಕಲ್ಪದೊಂದಿಗೆ ನಮ್ಮ ಸರಕಾರ ಕ್ರಮ ಕೈಗೊಂಡಿದೆ. ಯಾರೂ ಚಿಂತಿಸಬೇಕಾಗಿಲ್ಲ ಎಂದು ಸಿದ್ದರಾಮಯ್ಯ 'ಎಕ್ಸ್' ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಸಚಿವ ಸಂತೋಷ್ ಲಾಡ್ ಅವರು ಕಾಶ್ಮೀರದಲ್ಲಿಯೇ ಇದ್ದು ಅಗತ್ಯ ಸಹಾಯ ಮಾಡುತ್ತಿದ್ದಾರೆ. ಸಹಾಯಕ್ಕಾಗಿ, ದಯವಿಟ್ಟು 112 ಗೆ ಕರೆ ಮಾಡಿ ಎಂದು ಸಿಎಂ ಈ ಸಂದೇಶದಲ್ಲಿ ತಿಳಿಸಿದ್ದಾರೆ.

ರಾಜ್‌ನಾಥ್ ಸಭೆ

ಇನ್ನೊಂದೆಡೆ ರಕ್ಷಣಾ ಸಚಿವ ರಾಜ್‌ನಾಥ್‌ಸಿಂಗ್ ನೌಕಾಪಡೆ, ವಾಯುಪಡೆ ಮತ್ತು ಸೇನಾ ಪಡೆಯ ಮುಖ್ಯಸ್ಥರೊಂದಿಗೆ ಸಭೆ ನಡೆಸಿ ಚರ್ಚೆ ನಡೆಸಿದರು. ದೇಶದ ಆಯಕಟ್ಟಿನ ಪ್ರದೇಶಗಳಲ್ಲಿ ತೀವ್ರ ಕಟ್ಟೆಚ್ಚರ ವಹಿಸಬೇಕು. ಸಮುದ್ರದ ತೀರಗಳಲ್ಲಿ ಭದ್ರತೆ ಬಿಗಿಗೊಳಿಸಬೇಕು ಎಂದು ಅಧಿಕಾರಿಗಳಿಗೆ ರಾಜ್‌ನಾಥ್ ಸೂಚನೆ ನೀಡಿದರು.

ಉಗ್ರರಿಬ್ಬರ ಹತ್ಯೆ

ಪಹಲ್ಗಾಮ್ ಉಗ್ರರ ಪತ್ತೆ ಕಾರ್ಯಾಚರಣೆ ನಡೆಯುತ್ತಿರುವಂತೆಯೇ, ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ನಿಯಂತ್ರಣ ರೇಖೆಯ ಬಳಿ ಭಾರತದೊಳಗೆ ನುಸುಳಲು ಯತ್ನಿಸಿದ ಇಬ್ಬರು ಉಗ್ರರನ್ನು ಹೊಡೆದುರುಳಿಸಲಾಗಿದೆ. ಇವರಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು, ಗುಂಡುಗಳು ಮತ್ತು ಇತರ ವಸ್ತುಗಳನ್ನು ವಶಪಡಿಸಿ ಕೊಳ್ಳಲಾಗಿದೆ ಎಂದು ಭಾರತೀಯ ಸೇನೆಯ ಚಿನಾರ್ ಕಾರ್ಪ್ಸ್ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

ಸುಳಿವಿತ್ತವರಿಗೆ 20 ಲಕ್ಷ ₹ ಬಹುಮಾನ

ಉಗ್ರರ ದಾಳಿಯ ಬೆನ್ನಲ್ಲೇ ಪಹಲ್ಗಾಮ್‌ನಲ್ಲಿ ಹಂತಕರ ಪತ್ತೆಗೆ ವ್ಯಾಪಕ ಕಾರ್ಯಾಚರಣೆ ಆರಂಭಿಸಲಾಗಿದ್ದು, ಉಗ್ರರ ಸುಳಿವಿತ್ತವರಿಗೆ 20 ಲಕ್ಷ ರು. ಬಹುಮಾನ ಘೋಷಿಸಲಾಗಿದೆ. ರಾಷ್ಟ್ರೀಯ ತನಿಖಾ ಸಂಸ್ಥೆಯ ಅಧಿಕಾರಿಗಳು ಪಹಲ್ಗಾಮ್‌ಗೆ ಭೇಟಿ ನೀಡಿ ತನಿಖೆ ಚುರುಕುಗೊಳಿಸಿದ್ದಾರೆ. ಈ ನಡುವೆ ಎ.ಕೆ 47 ಬಂದೂಕಿನಿಂದ ಉಗ್ರಗಾಮಿ ಮನಬಂದಂತೆ ದಾಳಿ ನಡೆಸುತ್ತಿರುವ ಛಾಯಾಚಿತ್ರ ಬಹಿರಂಗವಾಗಿದೆ. ಈತ ಕುರ್ತಾ ಮತ್ತು ಪೈಜಾಮ ಧರಿಸಿದ್ದಾನೆ. ಉಗ್ರರ ಛಾಯಾ ಚಿತ್ರಗಳನ್ನು ಅಧಿಕಾರಿಗಳು ಬಿಡುಗಡೆ ಮಾಡಿದ್ದಾರೆ.

ಕುವೆಂಪು ವಿಶ್ವವಿದ್ಯಾಲಯ
ಎಸ್ಟೇಟ್ ವಿಭಾಗ, ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ–577 451, ಶಿವಮೊಗ್ಗ ಜಿಲ್ಲೆ.

No. KU/EST/CANTEEN/18/2025-26 Date:21-04-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುವೆಂಪು ವಿಶ್ವವಿದ್ಯಾನಿಲಯವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ 1999 ರ ಪ್ರಕಾರ ಬಾಡಿಗೆ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕ್ಯಾಂಟೀನ್ ನಡೆಸಲು ಪ್ರತಿಷ್ಠಿತ ಸೇವಾ ಪೂರೈಕೆದಾರರಿಂದ ಇ–ಟೆಂಡರ್ ಆಹ್ವಾನಿಸಿದೆ. ಅರ್ಹ ಬಿಡ್ಡರ್‌ಗಳು ಇ–ಪೋರ್ಟಲ್‌ನಲ್ಲಿ ನಿಗದಿಪಡಿಸಿದಂತೆ ಇ–ಪ್ರೊಕ್ಯೂರ್ಮೆಂಟ್ ವೇದಿಕೆ http://kppp.karnataka.gov.in ಮೂಲಕ ಭಾಗವಹಿಸಬಹುದು ಮತ್ತು ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಸಹಾಯಕ ಕುಲಸಚಿವರು, ಎಸ್ಟೇಟ್ ವಿಭಾಗ, ದೂರವಾಣಿ : 08282–256301/256307, 9448416885 ಇವರನ್ನು ಸಂಪರ್ಕಿಸಬಹುದು.

ವಾ.ಸಾ.ಸಂ.ಇ./ಶಿ/ನಂ.99–04/ಝೇಂಕಾರ್/2025–26 ಸಹಿ/– ಕುಲಸಚಿವರು

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91–8431186388, ಇ–ಮೇಲ್: sabvmcri@gmail.com

ಸಂಖ್ಯೆ: SABVMCRI/E-TENDER/NET/04/2025-26 ದಿನಾಂಕ: 23–04–2025
TENDER No: DME/2025-26/IND1383

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ, ಘೋಷಾ ಆಸ್ಪತ್ರೆಯ ಎಲ್ಲಾ ವಾರ್ಡ್‌ಗಳಿಗೆ ಅಗತ್ಯವಿರುವ Mosquito Net ಗಳನ್ನು ಖರೀದಿಸಿ ಅಳವಡಿಸಲು ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ: 23–04–2025 ರಿಂದ. 2) ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: 28–04–2025 ರ ಸಂಜೆ 5.30 ಗಂಟೆವರೆಗೆ. 3) ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 03–05–2025 ರ ಸಂಜೆ 5.30 ಗಂಟೆವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 05–05–2025 ರಂದು ಬೆಳಿಗ್ಗೆ 10.30 ಗಂಟೆಗೆ. ವಿವರವಾದ ಮಾಹಿತಿಗಾಗಿ ವೆಬ್‌ಸೈಟ್: https://kppp.karnataka.gov.in ಗೆ ಭೇಟಿನೀಡಿ. ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ವಾಸಾಸಂಇ/ವಾ.ಪ್ರ/322/ಅಡ್ವಟೋರ್/2025–26

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಲೋಕೋಪಯೋಗಿ ಇಲಾಖೆ,
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ,
ಕೆ.ಆರ್.ವೃತ್ತ, ಬೆಂಗಳೂರು–01. ದೂರವಾಣಿ ಸಂಖ್ಯೆ: 080–22133370
ವೆಬ್‌ಸೈಟ್:www.kpwd.gov.in ಇ–ಮೇಲ್:eepwdbngdn@yahoo.com

ಸಂಖ್ಯೆ:ಕಾನಿಇಂ/ಲೋಇ/ಬೆಂವಿ/2025–26/223 ದಿನಾಂಕ:21.04.2025

ಟೆಂಡರ್ ಪ್ರಕಟಣೆ–03

E-Portal:https://kppp.karnataka.gov.in/#/portal/portal-home

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರುರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನಂ.2 ಉತ್ತರ ಆನೇಕಲ್ & ದೊಡ್ಡಬಳ್ಳಾಪುರ** ಉಪವಿಭಾಗಕ್ಕೆ ಸಂಬಂಧಿಸಿದಂತೆ 03 ಸಂಖ್ಯೆಯ (**ರೂ. 100.00 ರಿಂದ 500.00 ಲಕ್ಷಗಳ**) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಚೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆ.ಪಿ.ಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 06.05.2025 ಸಂಜೆ 4.00 ಗಂಟೆಗೆ.**
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 07.05.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಚೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋ.ಇ.ಬೆಂಗಳೂರು ವಿಭಾಗ, ಬೆಂಗಳೂರು.
ವಾಸಸಂಇ/ಸಿಪಿ/ಎಎವಿ/325/2025–26

ಅಪ್ರಾಪ್ತನಿಂದ ಅಪಘಾತ: ಮಾಲೀಕನಿಗೆ ದಂಡ

ಕೊಪ್ಪಳ: ಅಪ್ರಾಪ್ತನಿಗೆ ಆಟೋ ಚಲಾಯಿಸಲು ಕೊಟ್ಟ ಪರಿಣಾಮ ಅಪಘಾತ ಮಾಡಿ, ವ್ಯಕ್ತಿ ಸಾವನ್ನಪ್ಪಿದ್ದಾನೆ. ಹೀಗಾಗಿ ಆಟೋ ಮಾಲೀಕನಿಗೆ 1,41,61,580 ರೂ. ದಂಡ ವಿಧಿಸಿ ಗಂಗಾವತಿ ಹಿರಿಯ ಸಿವಿಲ್ ನ್ಯಾಯಾಲಯ ಆದೇಶಿಸಿದೆ.

2021ರ ಮಾ.10ರಂದು ಯಲಬುರ್ಗಾ ಪಟ್ಟಣದಲ್ಲಿ ಆಟೋ ಮಾಲೀಕನೊಬ್ಬ 12 ವರ್ಷದ ಅಪ್ರಾಪ್ತನ ಕೈಗೆ ಆಟೋ ಚಲಾಯಿಸಲು ಕೊಟ್ಟಿದ್ದರ ಪರಿಣಾಮ ಅಪಘಾತ ನಡೆದಿತ್ತು. ಅಂಗಡಿಯೊಂದರ ಬಳಿ ಮೊಬೈಲ್ನಲ್ಲಿ ಮಾತನಾಡುತ್ತಾ ನಿಂತಿದ್ದ ವ್ಯಕ್ತಿಗೆ ಅಪ್ತಾಪ್ರ ಆಟೋದಿಂದ ಡಿಕ್ಕಿ ಹೊಡೆದಿದ್ದ. ಅಪಘಾತದಲ್ಲಿ ಕೊಪ್ಪಳದ ಯಲಬುರ್ಗಾ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಗಂಗಾವತಿ ನಿವಾಸಿ ರಾಜಶೇಖರ ಪಾಟೀಲ್ ಸಾವನ್ನಪ್ಪಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಹಿರಿಯ ಸಿವಿಲ್ ನ್ಯಾಯಾಧೀಶ ರಮೇಶ ಎಸ್.ಗಾಣಿಗೇರ ಅಪ್ರಾಪ್ತನಿಗೆ ಆಟೋ ಚಲಾಯಿಸಲು ನೀಡಿದ್ದ ಮಾಲೀಕನಿಗೆ 1,41,61,580 ರು. ದಂಡ ವಿಧಿಸಿದ್ದಾರೆ. ದಂಡ ಮೊತ್ತವನ್ನು ರಾಜಶೇಖರ ಕುಟುಂಬಕ್ಕೆ ಪರಿಹಾರವಾಗಿ ನೀಡುವಂತೆ ಸೂಚಿಸಿದ್ದಾರೆ. ಅಪ್ರಾಪ್ತರ ಕೈಗೆ ವಾಹನ ನೀಡುವ ಮುನ್ನ ಎಚ್ಚರ ವಹಿಸಬೇಕೆಂದು ಪ್ರಕರಣದ ಮೂಲಕ ಎಚ್ಚರಿಕೆ ಸಂದೇಶ ನೀಡಿದ್ದಾರೆ

ಪುರಸಭೆ ಕಾರ್ಯಾಲಯ ಕುರೇಕುಪ್ಪ
ಸಂಡೂರು (ತಾಲೂಕು) ಬಳ್ಳಾರಿ (ಜಿಲ್ಲೆ), 583123. ☎ : 08395–250970
E-mail : itstaffkurekuppa@gmail.com Web Site: www.kurekuppatown.mrc.gov.in

ಸಂಖ್ಯೆ:ಪುಸಕು/ಅರೋಗ್ಯ ಶಾಖೆ/2025–26 ದಿನಾಂಕ: 21.04.2025

ಅಲ್ಪಾವದಿ ಟೆಂಡರ್ ಪ್ರಕಟಣೆ

ಪುರಸಭೆ ಕಾರ್ಯಾಲಯ ಕುರೇಕುಪ್ಪ, ಬಳ್ಳಾರಿ (ಜಿ) ಕೆಳಗೆ ವಿವರಿಸಿದ ಲೆಕ್ಕ ಶೀರ್ಷಿಕೆಗಳಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 1999 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಅರ್ಹ ಗುತ್ತೇದಾರರು / ಸರಬರಾಜುದಾರರಿಂದ ಕೆಪಿಪಿಪಿ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು **website: http://kppp.karnataka.gov.in** ಹಾಗು ಪುರಸಭೆ ಕಛೇರಿಯ ವೆಬ್‌ಸೈಟ್ **http://www.kurekuppatown.mrc.gov.in** ನಲ್ಲಿ ಮತ್ತು ಪುರಸಭೆ ಕಾರ್ಯಾಲಯದ ಸೂಚನಾ ಫಲಕದಲ್ಲಿ ನೋಡಬಹುದು ಹಾಗು ಸಂಬಂಧಿಸಿದ ಶಾಖೆಯ ಸಿಬ್ಬಂಧಿಯಿಂದ ಮಾಹಿತಿ ಪಡೆಯಬಹುದು.

15th Finance, TMC Fund and SBM 2.0 Grants

1 Prebid meeting : **28.04.2025 11.00 AM**
2 Last date and time for tender queries/clarification **: 28.04.2025 11:30 PM**
3 Last date and time for Receipt of tender : **08.05.2025 11.30 PM**
4 Last date and time for Opening of tender Technical bid **: 09.05.2025 11.00AM**
5 Last date and time for Opening of tender Financial bid : **13.05.2025 11.00 AM**

ಒಂದು ವೇಳೆ ನಿಗಧಿಪಡಿಸದ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.

ಲೆಕ್ಕಶೀರ್ಷಿಕೆ: 01.SBM 2.0 Grant **ಕಾಮಗಾರಿಯ ಇಂಡೆಂಟ್ ವಿವರ:** DMA/2024-25/OW/WORK_INDENT38636 **ಅಂದಾಜು ಮೊತ್ತ** (ರೂ. ಲಕ್ಷಗಳಲ್ಲಿ): 396.09

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ ಕುರೇಕುಪ್ಪ
ಡಿಐಪಿಆರ್/ಬಳ್ಳಾರಿ/51/ಕೆಎಸ್‌ಎಂಸಿಎ/2025–26
ಸಹಿ/– ಅಧ್ಯಕ್ಷರು, ಪುರಸಭೆ ಕುರೇಕುಪ್ಪ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂ: ಬೆಂಅಪ್ರಾ/ನಯೋಸ/CLU–156/242/2025–26 ದಿನಾಂಕ: 23.04.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ.ತನೂಜ್ ಕುಮಾರ್.ಎಂ	ಬೆಂಗಳೂರು ದಕ್ಷಿಣ	ತಾವರೆಕೆರೆ	ಚಿಕ್ಕಲ್ಲೂರು	15/2	0–29 (ಖರಾಬು ಹೊರತುಪಡಿಸಿ)	ವ್ಯವಸಾಯ ವಲಯ	ವಸತಿ
					16/1	1–09		
					16/2	1–23 (ಖರಾಬು ಹೊರತುಪಡಿಸಿ)		
ಒಟ್ಟು						3–21		

ಷರಾ:– ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ/ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ರಾಜ್ಯದಲ್ಲಿ 2028ಕ್ಕೆ ನಮ್ಮದೇ ಸರಕಾರ

ಹೊಸ ಪಕ್ಷದ ಸುಳಿವು ಕೊಟ್ಟ ಬಸನಗೌಡ ಪಾಟೀಲ ಯತ್ನಾಳ

ಹಾವೇರಿ: ಜನರು ಹಣ ಪಡೆದು ಮತ ಹಾಕುವುದನ್ನು ನಿಲ್ಲಿಸಬೇಕು. ಹಿಂದೂಗಳ ಪರ ಹೋರಾಡುವ ವ್ಯಕ್ತಿಗೆ ಪಕ್ಷ-ಜಾತಿ ಭೇದ ಮರೆತು ಮತ ಹಾಕಬೇಕು. ಈ ರೀತಿ ಜನರು ಮತ ಹಾಕಿದರೆ, 2028ರಲ್ಲಿ ನಮ್ಮದು ಹಾಗೂ ಕೆ.ಇ. ಕಾಂತೇಶ ಅವರ ಸರಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ' ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಕ್ರಾಂತಿವೀರ ಯುವ ಬ್ರಿಗೇಡ್ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಸ್ವಾತಿ ಬ್ಯಾಡಗಿ ಹತ್ಯೆ ಪ್ರಕರಣದ ಅನ್ಯಾಯದ ವಿರುದ್ಧ ನ್ಯಾಯ ಜಾಥಾ'ದಲ್ಲಿ ಪಾಲ್ಗೊಂಡಿದ್ದ ಅವರು, ಹೊಸ ಪಕ್ಷ ಆರಂಭದ ಸುಳಿವು ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಗುಣಗಳನ್ನು ಹೊಂದಿರುವ ವ್ಯಕ್ತಿಯೇ ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗಲಿದ್ದಾರೆ. ಪ್ರತಿಯೊಂದು ಹಳ್ಳಿಗೂ ಹೋಗಿ, ಹಿಂದೂಗಳು ಹಾಗೂ ಪರಿಶಿಷ್ಟ ಜಾತಿ- ಪರಿಶಿಷ್ಟ ಪಂಗಡಗಳ ಜನರನ್ನು ಭೇಟಿಯಾಗುತ್ತಿದ್ದೇನೆ. ಹಿಂದೂ ಧರ್ಮದ ಸಲುವಾಗಿ ಪ್ರಾಣವನ್ನೂ ಕೊಡುವುದಾಗಿ ಎಲ್ಲರೂ ಹೇಳುತ್ತಿದ್ದಾರೆ' ಎಂದ ಪಾಟೀಲ, ನಿಮ್ಮ ಬೆಂಬಲ ನಮಗೆ ಇರುತ್ತದೆಯಾ' ಎಂದು ನೆರೆದಿದ್ದವರನ್ನು ಕೇಳಿದರು.

ಕೆಪಿಎಸ್ಸಿಯಲ್ಲಿ ಲಂಚ

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಕನ್ನಡ ಕಲಿತವರಿಗೆ ಅನ್ಯಾಯವಾಗುತ್ತಿದೆ. ಕೆಪಿಎಸ್ಸಿ ಸದಸ್ಯರಾಗಲು 5 ಕೋಟಿಯಿಂದ 10 ಕೋಟಿ, ಚೇರ್ಮನ್ ಆಗಲು 50 ಕೋಟಿ, ಉಪ ವಿಭಾಗಾಧಿಕಾರಿ ಹುದ್ದೆಗೆ 2 ಕೋಟಿ, ಡಿವೈಎಸ್ಪಿ ಹುದ್ದೆಗೆ 2 ಕೋಟಿ ಹಾಗೂ ಪಿಎಸ್‌ಐಗೆ 1 ಕೋಟಿ ಲಂಚ ನೀಡಬೇಕಾದ ಪರಿಸ್ಥಿತಿಯಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಪಾಕಿಸ್ತಾನ ಅವನತಿ ಆರಂಭವಾಗಿದೆ

ಹುಬ್ಬಳ್ಳಿ: ಪಾಕಿಸ್ತಾನ ಪ್ರೋತ್ಸಾಹಿತ ಉಗ್ರಗಾಮಿಗಳು ಕಾಶ್ಮೀರದಲ್ಲಿನ ಪ್ರವಾಸಿಗರ ಮೇಲೆ ದಾಳಿ ಮಾಡಿದ್ದಾರೆ. ಈ ಮೂಲಕ ದೇಶದಲ್ಲಿ ಭಯದ ವಾತಾವರಣ ನಿರ್ಮಾಣ ಮಾಡುತ್ತಿದ್ದಾರೆ ಎಂದು ಮಾಜಿ ಸಿಎಂ, ಸಂಸದ ಜಗದೀಶ್ ಶೆಟ್ಟರ್ ಆಕ್ರೋಶ ಹೊರಹಾಕಿದ್ದಾರೆ.

ಪಹಲ್ಗಾಮ್ ದಾಳಿಯ ಕುರಿತು ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಜಮ್ಮು ಮತ್ತು ಕಾಶ್ಮೀರದಲ್ಲಿ ಇತ್ತೀಚಿನ ದಿನದಲ್ಲಿ ಶಾಂತಿ ನೆಲೆಸಿತ್ತು. ಪ್ರಧಾನಿ ಮೋದಿ, ಅಮಿತ್ ಶಾ ಅವರು ಕೈಗೊಂಡ ಕ್ರಮಗಳಿಂದ ಶಾಂತಿ ನೆಲೆಸಿತ್ತು. ಹೀಗಾಗಿ ಹೆಚ್ಚಿನ ಪ್ರವಾಸಿಗರು ಜಮ್ಮು ಮತ್ತು ಕಾಶ್ಮೀರಕ್ಕೆ ಹೋಗಲು ಆರಂಭ ಮಾಡಿದ್ದರು ಎಂದಿದ್ದಾರೆ.

ದೇಶದ ಜನತೆ ಕಾಶ್ಮೀರದಲ್ಲಿ ಶಾಂತಿ ನೆಲೆಸಬೇಕು ಅನ್ನೋ ಇಚ್ಛೆ ಹೊಂದಿದ್ದಾರೆ. ಮೃತ ಕುಟುಂಬದ ಜತೆಗೆ ದೇಶ, ಭಾರತ ಸರ್ಕಾರವಿದೆ. ಉಗ್ರಗಾಮಿಗಳ ಹತ್ಯೆಯಾಗುತ್ತದೆ. ಭಾರತ ದೇಶ ಜಗತ್ತಿನಲ್ಲಿ ಪ್ರಬಲವಾಗಿ ಬೆಳೆಯುತ್ತಿದೆ. ಅದನ್ನು ಸಹಿಸಲು ಪಾಕಿಸ್ತಾನಕ್ಕೆ ಆಗುತ್ತಿಲ್ಲ. ಪಾಕಿಸ್ತಾನ ಅವನತಿ ಆರಂಭವಾಗಿದೆ. ಹಿಂದೂಗಳನ್ನೇ ಟಾರ್ಗೆಟ್ ಮಾಡಿ ದಾಳಿ ಮಾಡಿದ್ದಾರೆ. ಮೋದಿ ಅವರು ಬಲಾಢ್ಯ ರಾಷ್ಟ್ರ ಕಟ್ಟುತ್ತಿದ್ದಾರೆ. ಮೋದಿ ಅವರು ಆದಷ್ಟು ಬೇಗ ಇದಕ್ಕೆ ತಕ್ಕ ಉತ್ತರ ಕೊಡುತ್ತಾರೆ ಎಂದು ಹೇಳಿದ್ದಾರೆ.

...13 ಕನ್ನಡಿಗರು ಬಚಾವ್

← ಮೊದಲಪುಟದಿಂದ

ಇದನ್ನು ತಿಳಿದು ತಕ್ಷಣ ಪಹಲ್ಗಾಮ್‌ಗೆ ಹೋಗುವುದನ್ನು ನಿಲ್ಲಿಸಿ ಶ್ರೀನಗರದ ರಜೌರಿ ಪ್ರದೇಶವನ್ನು ತಲುಪಿದ್ದಾರೆ. ನಂತರ ಅಲ್ಲಿಂದ ಜಮ್ಮು ತಲುಪಿ, ಬಳಿಕ ಬಾಗಲಕೋಟೆಗೆ ವಾಪಸ್ ಮರಳಲಿದ್ದಾರೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಹಾವೇರಿ ಮೂಲದ ದಂಪತಿ ಬಗ್ಗೆ ಸಿಗದ ಸುಳಿವು: ಕಾಶ್ಮೀರಕ್ಕೆ ಪ್ರವಾಸ ಕೈಗೊಂಡಿದ್ದ ಹಾವೇರಿ ಮೂಲದ ಇಬ್ಬರು ದಂಪತಿ ಸಂಪರ್ಕಕ್ಕೆ ಸಿಗದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಆತಂಕಗೊಂಡಿದ್ದಾರೆ. ಹಾವೇರಿಯ ವೀರೇಶ್ ದಂಪತಿ ಹಾಗೂ ಶಿಗ್ಗಾವಿಯ ನಾಗರಾಜ್ ದಂಪತಿ ಮುಂಬೈ ಮೂಲಕ ಕಾಶ್ಮೀರಕ್ಕೆ ತೆರಳಿದ್ದು, ಪ್ರಸ್ತುತ ಅವರ ಮೊಬೈಲ್‌ಗಳು ಸ್ವಿಚ್ಡ್ ಆಫ್ ಆಗಿದ್ದು, ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಕುಟುಂಬ ಸದಸ್ಯರು ಆತಂಕ ವ್ಯಕ್ತಪಡಿಸಿದ್ದಾರೆ.

ವೀರೇಶ್ ಅವರು ಗುತ್ತಿಗೆದಾರರಾಗಿದ್ದು, ನಾಗರಾಜ್ ಹಾನಗಲ್ ಪುರಸಭೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾವೇರಿ ಜಿಲ್ಲಾಡಳಿತ ಕಾಶ್ಮೀರ ಸರಕಾರದೊಂದಿಗೆ ಸಂಪರ್ಕ ಸಾಧಿಸಲು ಪ್ರಯತ್ನಿಸಿದೆ.

ಉಗ್ರರ ದಾಳಿಗೆ ಸಚಿವ ಜಾರಕಿಹೊಳಿ ಖಂಡನೆ

ಮೈಸೂರು: ಜಮ್ಮು ಕಾಶ್ಮೀರದಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿರುವ ದಾಳಿಯನ್ನು ಖಂಡಿಸಿದ ಸಚಿವ ಸತೀಶ್ ಜಾರಕಿಹೊಳಿ, ಕೇಂದ್ರ ಸರಕಾರದ ಜತೆ ರಾಜ್ಯ ಸರಕಾರ ಇದೆ. ಇದನ್ನು ಹತ್ತಿಕ್ಕುವ ಕೆಲಸ ಮಾಡಬೇಕು ಎಂದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹಿಂದುಗಳನ್ನೇ ಟಾರ್ಗೆಟ್ ಮಾಡಿ ಹತ್ಯೆ ಮಾಡಿದ ವಿಚಾರ ಅವರ ಮನಸ್ಥಿತಿ ಯಾವ ರೀತಿ ಇರುತ್ತೆ ಎಂಬುದನ್ನು ತೋರಿಸಿದೆ. ಇದರ ಬಗ್ಗೆ ಸೂಕ್ತ ತನಿಖೆಯಾಗಬೇಕು. ತನಿಖೆಯ ನಂತರವಷ್ಟೇ ದಾಳಿಗೆ ನಿಖರ ಕಾರಣ ತಿಳಿಯಲಿದೆ ಎಂದರು. ಸಚಿವ ಡಾ. ಮಹದೇವಪ್ಪ ಟ್ವೀಟ್ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಇದು ಅವರ ವೈಯುಕ್ತಿಕ ಅಭಿಪ್ರಾಯ. ಇದಕ್ಕೆ ಯಾರು ಹೊಣೆ ಎಂಬುದನ್ನು ಮಾಧ್ಯಮದವರು ಹೇಳಬೇಕು ಎಂದು ಹೇಳಿದರು.

ಕೆಎಂಎಫ್ ಮುಂದಿನ ತಿಂಗಳಿಂದ 5000 ಕೆಜಿ ಮಾರಾಟದ ಗುರಿ

ದಾಖಲೆ ಮಟ್ಟದಲ್ಲಿ ನಂದಿನಿ ದೋಸೆ, ಇಡ್ಲಿ ಹಿಟ್ಟು ಮಾರಾಟ

ಬೆಂಗಳೂರು: ನಗರಾದ್ಯಂತ ಪ್ರೋಟೀನ್ ಆಧಾರಿತ ಉತ್ಕೃಷ್ಟ ಗುಣಮಟ್ಟದ ನಂದಿನಿ ಇಡ್ಲಿ ಹಾಗೂ ದೋಸೆ ಹಿಟ್ಟಿನ ಬೇಡಿಕೆ ಹೆಚ್ಚಾಗಿದ್ದು, ಗ್ರಾಹಕರು ಮುಗಿಬಿದ್ದು ಖರೀದಿ ಮಾಡುತ್ತಿದ್ದಾರೆ.

ಆದರೆ ಗ್ರಾಹಕರ ಬೇಡಿಕೆಗೆ ತಕ್ಕಂತೆ ನಂದಿನಿ ದೋಸೆ ಹಾಗೂ ಇಡ್ಲಿ ಹಿಟ್ಟಿನ ಲಭ್ಯತೆಯಿಲ್ಲ. ಆದ್ದರಿಂದ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ಹಿಟ್ಟಿನ ಪೂರೈಕೆಯನ್ನು ಹೆಚ್ಚಿಸಲು ಮುಂದಾಗಿದ್ದು, ವೃತ್ತಿಪರರು, ಹೆಚ್ಚಾಗಿ ರೆಡಿ ಟು ಕುಕ್ ಊಟದ ಆಯ್ಕೆಯನ್ನು ಮಾಡುವವರಿಗಾಗಿ ಪೂರೈಕೆಯನ್ನು ಹೆಚ್ಚಿಸಲು ಕೆಎಂಎಫ್ ಮುಂದಾಗಿದೆ. ಗ್ರಾಹಕರ ಬೇಡಿಕೆ ಹೆಚ್ಚಾಗುತ್ತಿದ್ದಂತೆಯೇ ಹಿಟ್ಟು ಪೂರೈಕೆ ಕಡಿಮೆಯಾಗುತ್ತಿದೆ ಎಂದು ಹಲವರು ದೂರಿದ್ದು, ಈ ಹಿನ್ನೆಲೆ ಇಡ್ಲಿ ಮತ್ತು ದೋಸೆ ಹಿಟ್ಟಿನ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಪ್ಲ್ಯಾನ್ ಮಾಡಿರುವ ಕೆಎಂಎಫ್, ಮುಂದಿನ ತಿಂಗಳಿಂದ 5000 ಕೆಜಿ ನಂದಿನಿ ದೋಸೆ, ಇಡ್ಲಿ ಹಿಟ್ಟು ಮಾರಾಟದ ಗುರಿಯನ್ನು ಹೊಂದಿದೆ.

ಕಳೆದ ಡಿಸೆಂಬರ್ ತಿಂಗಳಲ್ಲಿ ಮಾರುಕಟ್ಟೆಗೆ ಇಡ್ಲಿ, ದೋಸೆ ಹಿಟ್ಟು ಪರಿಚಯಿಸಿದ ಕೆಎಂಎಫ್ ಆರಂಭದ ದಿನಗಳಲ್ಲಿ ಕೇವಲ 500 ಕೆಜಿ ನಂದಿನಿ ಇಡ್ಲಿ, ದೋಸೆ ಹಿಟ್ಟು ಮಾರಾಟಕ್ಕೆ ಮುಂದಾಗಿತ್ತು. ಬೇಡಿಕೆ ಹೆಚ್ಚಾಗುತ್ತಾ 3500 ಕೆಜಿ ಮಾರಾಟಕ್ಕೆ ಮುಂದಾಯಿತು. ಸದ್ಯ ನಂದಿನಿ ಹಿಟ್ಟಿನ ಸ್ಟಾಕ್ ನಿರಂತರವಾಗಿ ಕಡಿಮೆ ಪೂರೈಕೆಯಾಗುತ್ತಿದೆ ಎಂಬ ಆರೋಪ ಕೇಳಿ ಬಂದ ಬಳಿಕ ಕೆಎಂಎಫ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಮುಂದಾಗಿದೆ.

ಆನ್‌ಲೈನ್‌ನಲ್ಲಿಯೂ ಹಿಟ್ಟು ಲಭ್ಯ

ನಂದಿನಿ ಹಿಟ್ಟು ಮಾರಾಟ ಯಶಸ್ಸು ಕಂಡ ಹಿನ್ನೆಲೆ, ಕೆಎಂಎಫ್ ಮುಂದಿನ ಎರಡು ತಿಂಗಳಲ್ಲಿ ಮೈಸೂರು, ಮಂಗಳೂರು, ತುಮಕೂರು ಮತ್ತು ಹುಬ್ಬಳ್ಳಿಯಂತಹ ಪ್ರಮುಖ ನಗರಗಳಿಗೂ ನಂದಿನಿ ದೋಸೆ-ಇಡ್ಲಿ ಹಿಟ್ಟಿನ ಮಾರಾಟವನ್ನು ವಿಸ್ತರಿಸಲು ಯೋಜಿಸುತ್ತಿದೆ. ಜತೆಗೆ ಇನ್ನು ಮುಂದೆ ಇ ಕಾಮರ್ಸ್ ಕಂಪನಿಗಳಾದ ಸ್ವಿಗ್ಗಿ ಇನ್ ಸ್ಟಾ ಮಾರ್ಟ್, ಬ್ಲಿಂಕಿಟ್ ,ಬಿಗ್ ಬಾಸ್ಕೆಟ್ ಮತ್ತು ಜೆಪ್ಟೊದಂತಹ ಕ್ವಿಕ್ ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳಲ್ಲಿ ಮತ್ತು ಪ್ರಮುಖ ಸೂಪರ್ ಮಾರ್ಕೆಟ್‌ಗಳಲ್ಲಿ ಹಿಟ್ಟು ಲಭ್ಯವಾಗಲಿದೆ.

ಬೆಂಗಳೂರಿನ ಇಸ್ಕಾನ್ ಮಂದಿರದಲ್ಲಿ ನಡೆದ ಬ್ರಹ್ಮ ರಥೋತ್ಸವದಲ್ಲಿ ಭಕ್ತರು ರಾಧಾ ಕೃಷ್ಣಚಂದ್ರ ರಥ ಎಳೆದರು.

ವಿಜೃಂಭಣೆಯಿಂದ ನಡೆದ ಇಸ್ಕಾನ್ ಬ್ರಹ್ಮ ರಥೋತ್ಸವ

ಬೆಂಗಳೂರು: ರಾಧಾ ಕೃಷ್ಣಚಂದ್ರ ಬ್ರಹ್ಮೋತ್ಸವ ಕಾರ್ಯಕ್ರಮ ಸೋಮವಾರ ಇಸ್ಕಾನ್ ದೇವಾಲಯದ ಹರೇ ಕೃಷ್ಣ ಗುಡಿಯಲ್ಲಿ ಅದ್ದೂರಿಯಾಗಿ ನಡೆಯಿತು.

ಇಸ್ಕಾನ್ ಬೆಂಗಳೂರಿನ ಅಧ್ಯಕ್ಷ ಮಧು ಪಂಡಿತ ದಾಸ್ ಮಾತನಾಡಿ, ಕಳೆದ 28 ವರ್ಷಗಳಿಂದ ದೇವತೆಗಳು ನಮ್ಮ ಸೇವೆ ಸ್ವೀಕರಿಸುತ್ತಿರುವುದು ಅದೃಷ್ಟದ ಸಂಗತಿ. ದೇವಾಲಯ ಸಂಪೂರ್ಣವಾಗಿ ಮಕ್ಕಳು ಮತ್ತು ಯುವಕರಿಂದ ತುಂಬಿ, ಶ್ರದ್ಧೆ ಮತ್ತು ಭಕ್ತಿಯಿಂದ ರಥೋತ್ಸವ ನಡೆದಿದೆ. ಇಂತಹ ಹಬ್ಬಗಳು ಜನರನ್ನು ಒಟ್ಟಿಗೆ ಸೇರಿಸಿ, ಕೃಷ್ಣನ ಸೇವೆಯ ಮೂಲಕ ಶ್ರದ್ಧೆಯ ಸಂಬಂಧವನ್ನು ಗಟ್ಟಿಗೊಳಿಸುತ್ತವೆ. ರಾಧಾ ಕೃಷ್ಣಚಂದ್ರರ ಕೃಪಾ ಕಟಾಕ್ಷದಿಂದ ಎಲ್ಲರಿಗೂ ಉತ್ತಮ ಆರೋಗ್ಯ, ಶಾಂತಿ ಮತ್ತು ಭಕ್ತಿ ನೀಡಲಿ ಎಂದರು.

ಆಧ್ಯಾತ್ಮಿಕ ದಿಗ್ಗಜರ ಸಾನ್ನಿಧ್ಯ

ಕಾರ್ಯಕ್ರಮದಲ್ಲಿ ಉಡುಪಿಯ ಶೀರೂರು ಮಠದ ಪರಮಪೂಜ್ಯ ವೇದವರ್ಧನ ತೀರ್ಥ ಸ್ವಾಮೀಜಿ, ಕೂಡ್ಲಿ ಆರ್ಯ ಅಕ್ಷೋಭ್ಯ ತೀರ್ಥಮಠದ ರಘುವಿಜಯ ತೀರ್ಥ ಸ್ವಾಮೀಜಿ, ವೇದತಜ್ಞರು ದುಷ್ಯಂತ ಶ್ರೀಧರ್, ಡಾ.ನಾಗಸಂಪಿಗೆ ಆಚಾರ್ ಮತ್ತು ವಿದ್ವಾನ್ ಸತ್ಯಧ್ಯಾನಾಚಾರ್ಯ ಕತ್ತಿ ಮೊದಲಾದವರು ಆಧ್ಯಾತ್ಮಿಕ ಪ್ರವಚನಗಳ ಮೂಲಕ ಭಕ್ತರಿಗೆ ಮಾರ್ಗದರ್ಶನ ನೀಡಿದರು. ಬ್ರಹ್ಮೋತ್ಸವದ ಮುಖ್ಯ ಅಂಗವಾದ ರಥೋತ್ಸವದಂದು ರಾಧಾ ಕೃಷ್ಣಚಂದ್ರ, ಕೃಷ್ಣ ಬಲರಾಮ ಹಾಗೂ ನಿತ್ಯೆ ಗೌರಂಗ ದೇವರುಗಳು ವಿಶಿಷ್ಟ ಮರದಿಂದ ತಯಾರಿಸಲಾದ ರಥದ ಮೇಲೆ ಮೆರವಣಿಗೆ ಮೂಲಕ ದೇವಾಲಯದ ಸುತ್ತಲೂ ಕರೆದೊಯ್ಯಲಾಯಿತು.

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜಿನ ಪದವಿ ಪ್ರದಾನ ಸಮಾರಂಭ

ವೈದ್ಯಕೀಯ ಸೀಟುಗಳ ಹೆಚ್ಚಳಕ್ಕೆ ಎನ್‌ಎಂಸಿಗೆ ಸಚಿವರ ಆಗ್ರಹ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ನೀಟ್ ಆಕಾಂಕ್ಷಿಗಳ ಸಂಖ್ಯೆ ಮತ್ತು ಲಭ್ಯವಿರುವ ವೈದ್ಯಕೀಯ ಸೀಟುಗಳ ನಡುವಿನ ಅಂತರ ಹೆಚ್ಚುತ್ತಿರುವುದು ಆತಂಕ ಮೂಡಿಸಿದ್ದು, ಸರಕಾರವು ದೇಶಾದ್ಯಂತ ಪದವಿಪೂರ್ವ ವೈದ್ಯಕೀಯ ಸೀಟುಗಳನ್ನು ಗಣನೀಯವಾಗಿ ಹೆಚ್ಚಿಸುವಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗವನ್ನು ಒತ್ತಾಯಿಸಿದೆ ಎಂದು ಸಚಿವ ಡಾ. ಶರಣ ಪ್ರಕಾಶ ಪಾಟೀಲ ತಿಳಿಸಿದ್ದಾರೆ.

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ 2019 ರ ಬ್ಯಾಚ್‌ನ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಪ್ರತಿ ವರ್ಷ ಐದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗುತ್ತಾರೆ, ಆದರೆ ಇದಕ್ಕೆ ಪ್ರತಿಯಾಗಿ ಒಂದು ಲಕ್ಷ ವೈದ್ಯಕೀಯ ಸೀಟುಗಳು ಮಾತ್ರ ಲಭ್ಯವಿದೆ. ಇದರಿಂದ ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರ ಹೆಚ್ಚಾಗುತ್ತಿದೆ. ಈ ಅಸಮಾನತೆಯನ್ನು ತಕ್ಷಣ ನಿವಾರಿಸಬೇಕು. ಭಾರತದಲ್ಲಿ ತರಬೇತಿ ಪಡೆಯಲಿರುವ ವೈದ್ಯರು ವಿದೇಶದಲ್ಲಿಯೂ ಹೆಚ್ಚು ಮನ್ನಣೆ ಗಳಿಸುತ್ತಿದ್ದಾರೆ. ನಮ್ಮ ವೈದ್ಯರು ಜಗತ್ತಿನ ಎಲ್ಲೆಡೆ ಚಿಕಿತ್ಸೆ ಒದಗಿಸುತ್ತಿದ್ದಾರೆ. ಭಾರತೀಯ ವೈದ್ಯರಿಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಜಾಗತಿಕವಾಗಿ ಭಾರತೀಯ ವೈದ್ಯಕೀಯ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆ ಇದೆ. ಬೇಡಿಕೆ ಮತ್ತು ಲಭ್ಯತೆಯ ಅಂತರ ಕಡಿಮೆ ಮಾಡಲು ಎನ್‌ಎಂಸಿ ಮಧ್ಯಪ್ರವೇಶಿಸಬೇಕು ಎಂದು ಹೇಳಿ ವೇದಿಕೆಯ ಮೇಲೆ ಹಾಜರಿದ್ದ ಎನ್‌ಎಂಸಿ ಅಧ್ಯಕ್ಷ ಡಾ. ಬಿ.ಎನ್. ಗಂಗಾಧರ ರಿಗೆ ಈ ಕುರಿತು ಸಚಿವರು ಮನವರಿಕೆ ಮಾಡಿಕೊಟ್ಟರು.

ಜಾಗತಿಕ ಮಟ್ಟದಲ್ಲಿ ಸುಮಾರು 3 ಕೋಟಿ ವೈದ್ಯರ ಕೊರತೆ ಇದೆ. ಯುವ ಪೀಳಿಗೆಯು ವೈದ್ಯಕೀಯ ವೃತ್ತಿಯನ್ನು ಕೈಗೆತ್ತಿಕೊಳ್ಳಬೇಕು. ಭಾರತೀಯ ವೈದ್ಯರಿಗೆ ವಿಶ್ವಾದ್ಯಂತ ಹೆಚ್ಚಿನ ಬೇಡಿಕೆಯಿದೆ, ಗಟ್ಟಿಯಾದ ಶೈಕ್ಷಣಿಕ ಅಡಿಪಾಯ ಮತ್ತು ಇಂಗ್ಲಿಷ್ ಪ್ರಾವೀಣ್ಯತೆ ಹೊಂದಿರುವ ಭಾರತೀಯರು ವಿಶ್ವಮಟ್ಟದಲ್ಲಿ ಮನ್ನಣೆ ಗಳಿಸಿದ್ದಾರೆ. ವೈದ್ಯಕೀಯ ವೃತ್ತಿಪರರ ಸಂಖ್ಯೆ ಹೆಚ್ಚಳ ಮಾಡಲು ಎನ್‌ಎಂಸಿಯ ಪ್ರಮುಖ ಗುರಿಗಳಲ್ಲಿ ಒಂದಾಗಿದೆ.

– ಡಾ. ಗಂಗಾಧರ, ಎನ್‌ಎಂಸಿ ಅಧ್ಯಕ್ಷ

ಈ ಶೈಕ್ಷಣಿಕ ವರ್ಷದಿಂದ ಕರ್ನಾಟಕದಲ್ಲಿ ಹೆಚ್ಚುವರಿಯಾಗಿ 800 ಪದವಿಪೂರ್ವ ಮತ್ತು 600 ಸ್ನಾತಕೋತ್ತರ ವೈದ್ಯಕೀಯ ಸೀಟುಗಳಿಗೆ ಅನುಮೋದನೆ ಕೋರಿ ಎನ್‌ಎಂಸಿ ಗೆ ಈಗಾಗಲೇ ಔಪಚಾರಿಕ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ ಎಂದು ಪಾಟೀಲ ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಹಲವು ಯೋಜನೆ ಗಳಿಗೆ ಹಸಿರು ನಿಶಾನೆ ತೋರಿದ್ದಾರೆ. ಶೀಘ್ರದಲ್ಲೇ, ವೈದ್ಯಕೀಯ ಕಾಲೇಜುಗಳಿಲ್ಲದ ಜಿಲ್ಲೆಗಳಲ್ಲಿ ಸಂಪೂರ್ಣ ಸುಸಜ್ಜಿತ ಸಂಸ್ಥೆಗಳನ್ನು ಆರಂಭಿಸಲಾಗುತ್ತದೆ. ಇದು ಆರ್ಥಿಕವಾಗಿ ದುರ್ಬಲ ವರ್ಗಗಳ ಅರ್ಹ ವಿದ್ಯಾರ್ಥಿಗಳು ಸರಕಾರಿ ವೆಚ್ಚದಲ್ಲಿ ವೈದ್ಯಕೀಯ ಶಿಕ್ಷಣವನ್ನು ಪಡೆಯಲು ಅನುವು ಮಾಡಿಕೊಡುತ್ತದೆ ಆಶಯ ವ್ಯಕ್ತಪಡಿಸಿದರು.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್, ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ವೈದ್ಯಕೀಯ ಶಿಕ್ಷಣ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ಬಿ.ಎಲ್ ಮತ್ತು ಎಸ್‌ಎಬಿವಿಎಂಸಿ ನಿರ್ದೇಶಕ ಡಾ. ಮನೋಜ್ ಕುಮಾರ್ ಎಚ್.ವಿ ಇದ್ದರು.

ಶೀಘ್ರದಲ್ಲಿಯೇ ಜಿಲ್ಲೆಗೊಂದು ವೈದ್ಯಕೀಯ ಕಾಲೇಜು

ಆರೋಗ್ಯ ಮೂಲಸೌಕರ್ಯವನ್ನು ವಿಸ್ತರಿಸಲು ನಮ್ಮ ಕಾಂಗ್ರೆಸ್ ಸರಕಾರ ಸದಾ ಬದ್ಧವಾಗಿದ್ದು, ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಮುಂದಾಗಿದೆ. ಪ್ರತಿಯೊಂದು ಕಾಲೇಜುಗಳು ಆಸ್ಪತ್ರೆಯನ್ನು ಹೊಂದಿರುತ್ತವೆ ಮತ್ತು ಪ್ರತಿ ಜಿಲ್ಲೆಯಲ್ಲಿ ಕ್ಯಾನ್ಸರ್ ಆರೈಕೆ ಘಟಕಗಳು, ಆಘಾತ ಕೇಂದ್ರಗಳು ಮತ್ತು ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸುವ ಗುರಿಯನ್ನು ನಾವು ಹೊಂದಿದ್ದೇವೆ ಎಂದು ಸಚಿವ ಡಾ. ಶರಣ ಪ್ರಕಾಶ ಪಾಟೀಲ ವಿವರಿಸಿದರು.

ತಿಂಗಳ ಹಿಂದೆ 25 ರು. ಇದ್ದ ತೆಂಗಿನಕಾಯಿ ಬೆಲೆ ಸದ್ಯ 65-80 ರು.

ಇಳುವರಿ ಕುಸಿತ ಹೆಚ್ಚಿದ ತೆಂಗಿನಕಾಯಿ ಬೆಲೆ

ಬೆಂಗಳೂರು: ನಗರದಲ್ಲಿ ಬಿಸಿಲಿನ ಹೆಚ್ಚಳದಿಂದ ಎಳ ನೀರಿಗೆ ಬೇಡಿಕೆ ಹೆಚ್ಚಾದ ಬೆನ್ನಲ್ಲೇ ತೆಂಗಿನ ಕಾಯಿಯ ಕೊರತೆ ಕಂಡು ಬಂದಿದ್ದು, ಪೂರೈಕೆಯ ಕೊರತೆ ಹಾಗೂ ವಿವಿಧ ಕಾರಣಗಳಿಂದಾಗಿ ತೆಂಗಿನ ಕಾಯಿ ಬೆಲೆ ಗಗನಕ್ಕೇರಿದೆ.

ಕಳೆದ ವರ್ಷ ಮಳೆ ಕಡಿಮೆಯಾಗಿ ಬರಗಾಲ ಆವರಿಸಿದ್ದರಿಂದ ಇಳುವರಿ ಕುಸಿತವಾಗಿದೆ. ಇದೇ ಕಾರಣಕ್ಕೆ ಉತ್ತಮ ಗುಣಮಟ್ಟದ ತೆಂಗಿನಕಾಯಿ ಬೆಲೆ ಗಗನಮುಖಿಯಾಗಿದೆ. ಎಳನೀರಿಗೆ ಉತ್ತಮ ಬೆಲೆ ಲಭ್ಯವಾಗುತ್ತಿದ್ದು, ರೈತರು ತೋಟಗಳಲ್ಲಿ ಎಳನೀರನ್ನೇ ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ ತೆಂಗಿನಕಾಯಿಗೆ ಕೊರತೆ ಉಂಟಾಗಿದೆ.

ನಗರದಲ್ಲಿ ತಿಂಗಳ ಹಿಂದೆ 25 ರು. ಇದ್ದ ತೆಂಗಿನಕಾಯಿ ಬೆಲೆ ಸದ್ಯ 65-80 ರು. ಆಗಿದ್ದು, ಆಹಾರ ಪದಾರ್ಥಗಳಲ್ಲಿ ತೆಂಗಿನ ಕಾಯಿ ಬಳಕೆ ಮಾಡಲು, ಪೂಜೆ ಪುನಸ್ಕಾರಗಳಿಗೆ ತೆಂಗಿನಕಾಯಿಯ ಖರೀದಿಯದ್ದೇ ಜನರಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಬೆಲೆ ಏರಿಕೆಯಿಂದಾಗಿ ನಗರದಲ್ಲಿ ಹೋಟೆಲ್, ಸಭೆ ಸಮಾರಂಭದಲ್ಲಿಯೂ ತೆಂಗಿನಕಾಯಿಗಳ ಬಳಕೆ ಕಡಿಮೆಯಾಗುತ್ತಿದೆ. ಹೋಟೆಲ್ ತಿಂಡಿಗಳಲ್ಲಿ ಚಟ್ನಿಗಳಿಗೆ ತೆಂಗಿನಕಾಯಿಯ ಕೊರತೆ ಕಂಡು ಬರುತ್ತಿದ್ದು ಸದ್ಯ ತೆಂಗಿನ ಕಾಯಿಯ ಕೊರತೆ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ಬೆಂಗಳೂರಿಗೆ ತುಮಕೂರು, ಹಾಸನ ಮಂಡ್ಯದಿಂದ ತೆಂಗಿನಕಾಯಿ ಸರಬರಾಜಾಗುತ್ತದೆ. ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಂದಲೂ ತೆಂಗಿನಕಾಯಿ ಪೂರೈಕೆಯಾಗುತ್ತದೆ. ಎರಡು ಮೂರು ತಿಂಗಳ ಹಿಂದೆ 20-25 ರು.ಗೆ ಉತ್ತಮ ತೆಂಗಿನ ಕಾಯಿ ಸಿಗುತ್ತಿತ್ತು. ಈಗ ಅದೇ ತೆಂಗಿನಕಾಯಿ ಬೆಲೆ 80 ರು. ಗಡಿ ದಾಟಿದೆ. ತೆಂಗಿನಕಾಯಿ ಬೆಲೆ ಇಳಿಯಲು ಬಹುಶಃ ಇನ್ನೂ ಒಂದು ತಿಂಗಳು ಕಾಯಬೇಕಾಗುತ್ತದೆ ಎಂದು ತೆಂಗಿನಕಾಯಿ ವ್ಯಾಪಾರಿಗಳು ಹೇಳುತ್ತಾರೆ.

ದರ ಏರಿಕೆಯಿಂದ ತೆಂಗಿನಕಾಯಿ ಬಳಕೆ ಕಡಿಮೆ

ವಿವಾಹ ಸಮಾರಂಭಗಳ ಕ್ಯಾಟರರ್ ಮಾತನಾಡಿ, 1000 ಜನರಿಗೆ ಅಡುಗೆ ಮಾಡುವ ಕಡೆ ಚಟ್ನಿಗೆ 150-200 ಮತ್ತು ಅಡುಗೆಗೆ 150-200 ತೆಂಗಿನಕಾಯಿ ಬಳಸುತ್ತಿದ್ದೆವು. ದರ ಹೆಚ್ಚಿರುವುದರಿಂದ ತೆಂಗಿನಕಾಯಿ ಬಳಕೆಯನ್ನು 80-100ರಷ್ಟು ಕಡಿಮೆ ಮಾಡಿದ್ದೇವೆ. ಕೇವಲ ತೆಂಗಿನಕಾಯಿ ಮಾತ್ರವಲ್ಲ, ಹಾಲು, ಗ್ಯಾಸ್, ಸಂಬಳ, ಡೀಸೆಲ್, ಬಾಡಿಗೆ, ತೆರಿಗೆ ಸೇರಿದಂತೆ ಎಲ್ಲದರ ಬೆಲೆ ಏರಿಕೆಯಾಗಿದೆ. ತೆಂಗಿನಕಾಯಿ ಬಳಕೆಯನ್ನು ಶೇ.50 ರಷ್ಟು ಕಡಿಮೆ ಮಾಡಿದ್ದೇವೆ. ಸಹಜವಾಗಿಯೇ ನಾವು ಗ್ರಾಹಕರನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ ಎಂದರು.

ನ್ಯಾಯಮೂರ್ತಿಗಳ ವರ್ಗಾವಣೆ; ಕಲಾಪ ಬಹಿಷ್ಕಾರ

ಬೆಂಗಳೂರು: ಹೈಕೋರ್ಟ್‌ನ ನಾಲ್ವರು ನ್ಯಾಯಮೂರ್ತಿಗಳನ್ನು ವಿವಿಧ ರಾಜ್ಯಗಳ ನ್ಯಾಯಾಲಯಗಳಿಗೆ ವರ್ಗಾವಣೆ ಮಾಡಿರುವ ಸುಪ್ರೀಂಕೋರ್ಟ್ ಕೊಲಿಜಿಯಂ ನಿರ್ಧಾರವನ್ನು ಖಂಡಿಸಿ ವಕೀಲರು ನ್ಯಾಯಾಲಯಗಳ ಕಲಾಪ ಬಹಿಷ್ಕರಿಸಿದ್ದ ಪರಿಣಾಮ ಬುಧವಾರ ಹೈಕೋರ್ಟ್ ಸೇರಿದಂತೆ ಬಹುತೇಕ ನ್ಯಾಯಾಲಯಗಳ ಕಲಾಪಗಳಲ್ಲಿ ಏರುಪೇರು ಕಂಡು ಬಂದಿದೆ.

ಹೈಕೋರ್ಟ್‌ನ ಮೂರು ಪೀಠಗಳಲ್ಲಿ ಕಲಾಪದಿಂದ ಹೊರಗುಳಿದಿದ್ದರು. ಹಾಗಾಗಿ, ಕೋರ್ಟ್ ಹಾಲ್‌ಗಳು ಖಾಲಿ ಇದ್ದವು. ಕೆಲವು ವಕೀಲರು ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿ ಸಮಯಾವಕಾಶ ಕೋರುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿತ್ತು. ಜತೆಗೆ, ನ್ಯಾಯಮೂರ್ತಿಗಳು ಕೋರ್ಟ್‌ಗಳಲ್ಲಿದ್ದ ಸರಕಾರ ವಕೀಲರು ಹಾಗೂ ಸಿಬ್ಬಂದಿಯಿಂದ ಕಲಾಪ ನಡೆಸಿದರು.

ಬಹುತೇಕ ಕೋರ್ಟ್‌ಗಳಲ್ಲಿ ಪ್ರಕರಣಗಳ ವಿಚಾರಣೆಯನ್ನು ಮುಂದೂಡಲಾಯಿತು. ಸುಪ್ರಿಂ ಕೋರ್ಟ್‌ನ ಕೊಲಿಜಿಯಂ ಮಾಡಿರುವ ಶಿಫಾರಸು ವಿರೋಧಿಸಿ ಬುಧವಾರ ಹೈಕೋರ್ಟ್ ಕಲಾಪವನ್ನು ಬಹಿಷ್ಕರಿಸಲು ಬೆಂಗಳೂರು ವಕೀಲರ ಸಂಘದ ವತಿಯಿಂದ ನಡೆದ ಸರ್ವ ಸದಸ್ಯರ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಕಲಾಪ ಬಹಿಷ್ಕಾರದ ಹಿನ್ನೆಲೆಯಲ್ಲಿ ಬುಧವಾರ ಪಟ್ಟಿ ಮಾಡಿರುವ ಪ್ರಕರಣಗಳನ್ನು ಗುರುವಾರ ನಡೆಸುವಂತೆ ಬೆಂಗಳೂರು ವಕೀಲರ ಸಂಘ ಮುಖ್ಯ ನ್ಯಾಯಮೂರ್ತಿ ಮತ್ತು ಇತರ ನ್ಯಾಯಮೂರ್ತಿಗಳನ್ನು ಒತ್ತಾಯಿಸಿತ್ತು.

ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರ ನೇತೃತ್ವದ ವಿಭಾಗೀಯಪೀಠ ಬೆಳಗ್ಗೆ ಕಲಾಪ ಆರಂಭಿಸಿತು. ಸುಮಾರು 20 ನಿಮಿಷಗಳ ಕಾಲ ಮುಖ್ಯನ್ಯಾಯಮೂರ್ತಿಗಳ ಪೀಠ ಕಲಾಪ ನಡೆಸಿತು. ಈ ವೇಳೆ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಹಾಗೂ ಸಂಘದ ಪದಾಧಿಕಾರಿಗಳು ಕೋರ್ಟ್‌ಗೆ ಪ್ರವೇಶಿಸಿ, ಕೋರ್ಟ್ ಹಾಲ್‌ನಲ್ಲಿದ್ದ ವಕೀಲರಲ್ಲಿ ಕಲಾಪದಿಂದ ಹೊರಗುಳಿಯುವಂತೆ ಮನವಿ ಮಾಡಿದರು.

ಬಳಿಕ ಸಂಘದ ಪದಾಧಿಕಾರಿಗಳು ಬಲವಂತವಾಗಿ ವಕೀಲರನ್ನು ಕೋರ್ಟ್ ಹಾಲ್‌ನಿಂದ ಹೊರ ಕಳುಹಿಸಿದರು. ಬಳಿಕ ನ್ಯಾಯಪೀಠವು ಸುಮಾರು ಒಂದೂವರೆ ಗಂಟೆ ಕಾಲ ಕಲಾಪ ನಡೆಸಿತು.

ಈ ವೇಳೆ ಆನ್‌ಲೈನ್ ಮೂಲಕ ಕೆಲ ವಕೀಲರು ಹಾಜರಾಗಿ ವಾದ ಮಂಡಿಸಿದರು ಹಾಗೂ ವಿಚಾರಣೆ ಮುಂದೂಡಲು ಕೋರಿದರು. ವಕೀಲರ ಗೈರು ಹಾಜರಾತಿಯಿಂದ ಮಧ್ಯಾಹ್ನದ ಕಲಾಪ ನಡೆಯಲಿಲ್ಲ.

ನ್ಯಾಯಮೂರ್ತಿಗಳು ನಮ್ಮಲ್ಲೇ ಉಳಿಯಲಿ

ಅಧ್ಯಕ್ಷ ಸುಬ್ಬಾರೆಡ್ಡಿ ಅವರು ಮಾತನಾಡಿ, ಪೀಠದ ಮುಂದೆ ಹಾಜರಾಗಿ ಮುಖ್ಯ ನ್ಯಾಯಮೂರ್ತಿಗಳು ನಮ್ಮನ್ನು ಕ್ಷಮಿಸಬೇಕು. ನಮ್ಮ ಹೈಕೋರ್ಟ್‌ನ ನ್ಯಾಯಮೂರ್ತಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡುವ ವಿಚಾರ ನಮ್ಮ ವಕೀಲರ ಭಾವನಾತ್ಮಕ ವಿಚಾರವಾಗಿದೆ. ಒಂದು ದಿನ ವಕೀಲರು ಕಲಾಪದಿಂದ ಹೊರಗುಳಿಯಲು ಕೋರುತ್ತಿದ್ದೇವೆ. ಈ ವಿಚಾರದಲ್ಲಿ ನಮ್ಮ ಯಾವುದೇ ವೈಯಕ್ತಿಕ ಹಿತಾಸಕ್ತಿ ಇಲ್ಲ. ನಮ್ಮ ಹೈಕೋರ್ಟ್ ನ್ಯಾಯಮೂರ್ತಿಗಳು ನಮ್ಮಲ್ಲೇ ಉಳಿಯಬೇಕಿದೆ. ಹಾಗಾಗಿ, ವಕೀಲರು ಹಾಜರಾಗದ್ದಕ್ಕೆ ಯಾವುದೇ ಪ್ರಕರಣಕ್ಕೆ ಹಾನಿ ಮಾಡಬಾರದು. ಇದು ನಮ್ಮ ಕಳಕಳಿಯ ಮನವಿಯಾಗಿದೆ ಎಂದರು.

ಸಮಾಚಾರ ಸಣ್ಣದಲ್ಲ

ಸರ್ವೋತ್ತಮ ಸೇವಾ ಪ್ರಶಸ್ತಿಗೆ ಹನುಮೇಗೌಡ ಆಯ್ಕೆ

ಬೆಂಗಳೂರು: ಉತ್ತಮ ಸೇವೆ ಸಲ್ಲಿಸುತ್ತಿರುವ ಸರಕಾರಿ ನೌಕರರಿಗೆ ಕೊಡುವ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಜಿಲ್ಲಾಧಿಕಾರಿ ತಾಂತ್ರಿಕ ಸಹಾಯಕ ಮತ್ತು ಭೂ ದಾಖಲೆಗಳ ಉಪ ನಿರ್ದೇಶಕ ಬಿ.ಆರ್. ಹನುಮೇಗೌಡ ಭಾಜನರಾಗಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಸೇವೆಯನ್ನು ಗುರುತಿಸಿ 2023ನೇ ಸಾಲಿನ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಸ್ತುತ ಇವರು ರಾಮನಗರ ಡಿಡಿಎಲ್‌ಆರ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ರಾಜ್ಯದಲ್ಲಿಯೇ ಪ್ರಾಯೋಗಿಕವಾಗಿ ನಡೆದ ಮರು ಸರ್ವೆ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಕೆರೆಗಳ ಸರ್ವೆ, ಉಪ ಗ್ರಾಮಗಳ ನಿರ್ಮಾಣದಂತ ಕಾರ್ಯಗಳಿಗೆ ವೇಗ ನೀಡುವ ಮೂಲಕ ಸರ್ವೆ ಮತ್ತು ಭೂದಾಖಲೆಗಳ ಇಲಾಖೆಗೆ ವೇಗ ನೀಡಿದ್ದಾರೆ.

{ ಶ್ರೀರಾಮುಲು } ಮಾಜಿ ಸಚಿವ

370 ಆರ್ಟಿಕಲ್ ಮೂಲಕ ಕಾನೂನು ಬೇರೆಯಾಗಿತ್ತು. ವ್ಯವಸ್ಥೆಯೂ ಸಹ ಹದಗೆಟ್ಟಿತ್ತು. ಆದರೇ ಮೋದಿ ಅವರು 370 ಆರ್ಟಿಕಲ್ ತೆಗೆದು ಜನರಿಗೆ ಬಿಡುಗಡೆಗೊಳಿಸಿದ್ದಾರೆ. ಪ್ರಧಾನಿ ಮೋದಿ ಅವರು ಮತ್ತೆ ಶಪಥ ಮಾಡಿದ್ದಾರೆ. ರಕ್ತದ ಕಲೆಗಳನ್ನು ರಕ್ತದಿಂದಲೇ ತೊಳೆಯಬೇಕು. ಭಾರತ ಉಳಿಯಬೇಕಾದರೆ ಮನೆಗೆ ಒಬ್ಬ ಸೈನಿಕ ಬೇಕಾಗಿದೆ. ಮನೆಗೆ ಒಬ್ಬ ಸೈನಿಕನ್ನು ತಯಾರಿಸುವ, ಅವಕಾಶ ನೀಡುವ ಕಾನೂನು ಜಾರಿಗೆ ಆಗಬೇಕು.

ಡಾ. ರಾಜಕುಮಾರ ಜನ್ಮ ದಿನಾಚರಣೆ ಸಮಾರಂಭ ಇಂದು

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಡಾ.ರಾಜಕುಮಾರ ಪ್ರತಿಷ್ಠಾನದ ಸಹಕಾರದೊಂದಿಗೆ ಏಪ್ರಿಲ್ 24 ರಂದು ಮಧ್ಯಾಹ್ನ 3.00 ಗಂಟೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುಲೋಚನಾ ಸಭಾಂಗಣದಲ್ಲಿ ವರನಟ ಡಾ. ರಾಜಕುಮಾರ ಅವರ 97ನೇ ಜನ್ಮ ದಿನಾಚಾರಣೆ ಸಮಾರಂಭವನ್ನು ಆಯೋಜಿಸಿದೆ. ಸಮಾರಂಭದ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಲಿದ್ದು, ಮಾನ್ಯ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಘನ ಉಪಸ್ಥಿತರಿರುವರು. ಶಾಸಕ ರಿಜ್ವಾನ್ ಅರ್ಷದ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿರುವರು. ಸಮಾರಂಭದಲ್ಲಿ ಸಂಸದ ಪಿ.ಸಿ.ಮೋಹನ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ. ಪ್ರಭಾಕರ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ಸಾಧು ಕೋಕಿಲ, ಶ್ರೀಕಂಠೀರವ ಸ್ಟುಡಿಯೋಸ್ ನಿಯಮಿತದ ಅಧ್ಯಕ್ಷರಾದ ಮಹಬೂಬ್ ಪಾಷ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಆಯೇಷಾ ಖಾನಂ, ಸರಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳಾದ ಎಲ್.ಕೆ.ಅತೀಕ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಮಾಜಿ ಸಚಿವ ಆರ್. ಶಂಕರ್ ಅವರ ಪುತ್ರಿ ಹರ್ಷಿಣಿ ಪೂರ್ಣ ಸಿಂಧು ಮತ್ತು ಅಖಿಲೇಶ್ ವಿವಾಹ ಸಮಾರಂಭದಲ್ಲಿ ಬುಧವಾರ ಪಾಲ್ಗೊಂಡು, ನೂತನ ದಂಪತಿಗೆ ಶುಭ ಹಾರೈಸಿದರು.

ಉಗ್ರರ ವಿರುದ್ಧ ಹೋರಾಟಕ್ಕೆ ಕೇಂದ್ರಕ್ಕೆ ನೆರವು: ಖರ್ಗೆ

ಬೆಂಗಳೂರು: ಉಗ್ರರ ದಾಳಿ ವಿಷಯದಲ್ಲಿ ಕಾಂಗ್ರೆಸ್ ರಾಜಕೀಯ ಮಾಡುವುದಿಲ್ಲ. ಆದರೆ ಕೇಂದ್ರ ಸರಕಾರ ಕೂಡಲೇ ಸರ್ವ ಪಕ್ಷ ಸಭೆ ಕರೆದು ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿನ ಹೋರಾಟದ ಬಗ್ಗೆ ಚರ್ಚಿಸಿ ಮುನ್ನಡೆಯಲಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದರು.

ಬೆಂಗಳೂರಿನಲ್ಲಿನ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಬೆಳಗ್ಗೆ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ಕಾಶ್ಮೀರದಲ್ಲಿ ನಡೆದ ಉಗ್ರರ ಕೃತ್ಯವನ್ನು ಖಂಡಿಸಿದರು. ಈ ವೇಳೆ ಪಕ್ಷಪಾತದ ರಾಜಕೀಯಕ್ಕೆ ಇದು ಸಮಯವಲ್ಲ ಎಂದು ಹೇಳಿದ ಖರ್ಗೆ, ಈ ಭಯೋತ್ಪಾದಕ ದಾಳಿಯ ಅಪರಾಧಿಗಳನ್ನು ನ್ಯಾಯದ ಕಟಕಟೆಗೆ ತರುವ ಮೂಲಕ ಜೀವ ಕಳೆದುಕೊಂಡವರಿಗೆ ಮತ್ತು ಅವರ ದುಃಖಿತ ಕುಟುಂಬಗಳಿಗೆ ನ್ಯಾಯ ಖಚಿತಪಡಿಸಬೇಕು ಎಂದು ಆಗ್ರಹಿಸಿದರು.

ಭಯೋತ್ಪಾದನೆಯ ವಿರುದ್ಧ ಹೋರಾಡುವ ಸಂಬಂಧ ಕೇಂದ್ರ ಸರಕಾರ ಕೂಡಲೇ ಸರ್ವಪಕ್ಷ ಸಭೆ ಕರೆದು ಚರ್ಚಿಸಬೇಕು. ಎಲ್ಲರ ಸಲಹೆಯನ್ನೂ ಪಡೆಯಲಿ. ಭಯೋತ್ಪಾದನೆಯನ್ನು ದಮನ ಮಾಡಬೇಕಿದೆ. ಕಾಂಗ್ರೆಸ್ ಈ ಘಟನೆಯನ್ನು ಖಂಡಿಸಿದೆ. ಇದು ಅತ್ಯಂತ ವಿಷಾದಕರ ಘಟನೆ. ಜೀವಗಳನ್ನು ಉಗ್ರರು ಬಲಿ ಪಡೆದಿದ್ದಾರೆ. ಇದು ಆಘಾತದ ವಿಚಾರ. ದೇಶದ ಐಕ್ಯತೆಗೆ ಧಕ್ಕೆ ತರಲಾಗಿದೆ ಎಂದರು.

ಉಗ್ರರ ದಾಳಿ ಘಟನೆ ವೈಯುಕ್ತಿಕವಾಗಿ ನೋವು ತಂದಿದೆ. ಕುಟುಂಬಗಳಿಗೆ ತಡೆಯಲಾರದಷ್ಟು ದುಃಖ ಅವರ ಕುಟುಂಬಕ್ಕೆ ಆಗಿದೆ. ಅವರ ಕುಟುಂಬದ ಹಿಂದೆ ನಾವು ನಿಲ್ಲುತ್ತೇವೆ. ನಮ್ಮ ದೇಶದಲ್ಲಿ ದೊಡ್ಡ ಆತಂಕ ಇದೆ. ಜಮ್ಮು-ಕಾಶ್ಮೀರ ಸಿಎಂ ಹಾಗೂ ಪಕ್ಷದ ಅಧ್ಯಕ್ಷರೊಂದಿಗೆ ಮಾತನಾಡಿದ್ದೇನೆ. ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಗೃಹ ಸಚಿವ ಅಮಿತ್ ಶಾ ಜತೆಯೂ ನಾನು ಮಾತನಾಡಿದ್ದೇನೆ. ಅಮಿತ್ ಶಾ ಅವರು ಕಠಿಣ ಕ್ರಮದ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಇಂದು ತುರ್ತು ಸಭೆ

ಜಮ್ಮು-ಕಾಶ್ಮೀರದಲ್ಲಿ ನಡೆದಿರುವ ಉಗ್ರರ ದಾಳಿ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಶುಕ್ರವಾರ ದೆಹಲಿಯ ಎಐಸಿಸಿ ಕಚೇರಿಯಲ್ಲಿ ಕಾರ್ಯಕಾರಿಣಿ ಸಮಿತಿ ಸಭೆ ಕರೆದಿದೆ. ಬೆಳಗ್ಗೆ 11ಕ್ಕೆ ಎಐಸಿಸಿ ಕಚೇರಿಯಲ್ಲಿ ಸಭೆ ನಡೆಯಲಿದ್ದು, ಅಲ್ಲಿ ನಾವು ಎಲ್ಲ ವಿಚಾರಗಳ ಬಗ್ಗೆ ಚರ್ಚೆ ನಡೆಸುತ್ತೇವೆ. ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಜಲ ಮಂಡಳಿಯಿಂದ ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ಜಲ ಮಂಡಳಿಯ ವಿವಿಧ ಉಪ ವಿಭಾಗಗಳಾದ ಆಗ್ನೇಯ -3, ಆಗ್ನೇಯ 6, ಪಶ್ಚಿಮ 1-3, ವಾಯುವ್ಯ -5, ಉತ್ತರ 2-3, ದಕ್ಷಿಣ 1-3, ನೈರುತ್ಯ - 3, ನೈರುತ್ಯ -6, ಮತ್ತು ಪೂರ್ವ 2-4, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಏಪ್ರಿಲ್ 24 ರಂದು ಬೆಳಿಗ್ಗೆ 9.30 ಗಂಟೆಯಿಂದ 11 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಹಮ್ಮಿಕೊಳ್ಳಲಾಗಿದೆ.

ಅದಾಲತ್ ಸೇವಾ ಠಾಣೆಗಳಾದ ಅರಳೂರು, ದೊಡ್ಡಕಣ್ಣನಹಳ್ಳಿ, ಕಸವನಹಳ್ಳಿ, ಬಿ.ಟಿ.ಎಂ ಲೇಔಟ್, 1,2 ಮತ್ತು 3, ವೆಸ್ಟ್ ಆಫ್ ಕಾರ್ಡ್ ರಸ್ತೆ, 1 ಮತ್ತು 2, ಕಾಮಾಕ್ಷಿಪಾಳ್ಯ, ಕಮಲಾನಗರ, ಮಹಾಲಕ್ಷ್ಮೀ ಲೇಔಟ್, ಅಗ್ರಹಾರ ದಾಸರಹಳ್ಳಿ, ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ, ದೊಡ್ಡಬಿದರಕಲ್ಲು, ಗಿರಿನಗರ, ಅಂಗಧೀರನಹಳ್ಳಿ, ಹೆಮ್ಮಿಗೆಪುರ, ಬನಶಂಕರಿ 6ನೇ ಹಂತ, ಕೆ.ಆರ್. ಪುರಂ, ಬಸವನಪುರ, ದೇವಸಂದ್ರ, ರಾಮಮೂರ್ತಿ ನಗರ, ವಿಜಿನಾಪುರ, ದೂರವಾಣಿನಗರ ಇಲ್ಲಿ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು. ಹಾಗೂ ವಾಟ್ಸ್‌ಆಫ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ.

ಸಮಾಚಾರ ಸಣ್ಣದಲ್ಲ

458 ಸ್ಥಳಗಳಲ್ಲಿ 3,570 ಟನ್ ತ್ಯಾಜ್ಯ ತೆರವು

ಬೆಂಗಳೂರು: ಬಿಬಿಎಂಪಿ ವತಿಯಿಂದ ಆಯೋಜಿಸ ಲಾದ ಬೃಹತ್ ಸ್ವಚ್ಛತಾ ಅಭಿಯಾನದಲ್ಲಿ ಎರಡು ದಿನಗಳಲ್ಲಿ 458 ಸ್ಥಳಗಳಲ್ಲಿ ಅಂದಾಜು 3,570 ಟನ್ ತ್ಯಾಜ್ಯ/ಕಟ್ಟಡ ಭಗ್ನಾವಶೇಷಗಳನ್ನು ತೆರವುಗೊಳಿಸ ಲಾಗಿದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿ ಸ್ವಚ್ಛತಾ ಕಾರ್ಯ ನಡೆಯುತ್ತಿರುವ ಸ್ಥಳಗಳಲ್ಲಿ ಖುದ್ದಾಗಿದ್ದು, ತೆರವು ಕಾರ್ಯಾಚರಣೆ ಅಭಿಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಸಲುವಾಗಿ ಕಾರ್ಯಪ್ರವೃತ್ತರಾಗಿದ್ದಾರೆ. ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಬದಿ, ಖಾಲಿ ಜಾಗದಲ್ಲಿ ಬಿದ್ದಿರುವ ತ್ಯಾಜ್ಯ, ಕಟ್ಟಡ ಭಗ್ನಾವಶೇಷಗಳು, ಮರದ ದಿಮ್ಮಿ/ಕೊಂಬೆಗಳನ್ನು ತೆವುಗೊಳಿಸಲಾಗುತ್ತಿದೆ. ನಗರದ 8 ವಲಯಗಳಲ್ಲಿ 1,533 ಸ್ಥಳಗಳಲ್ಲಿ ತ್ಯಾಜ್ಯ/ಕಟ್ಟಡ ಭಗ್ನಾವಶೇಷಗಳಿರುವ ಸ್ಥಳಗಳನ್ನು ಗುರುತಿಸಿದ್ದು, ಅವುಗಳ ಪೈಕಿ ಈಗಾಗಲೇ 458 ಸ್ಥಳಗಳಲ್ಲಿ ಶೇ. 30 ರಷ್ಟು ಅಂದಾಜು 3,570 ಟನ್ ತ್ಯಾಜ್ಯವನ್ನು ತೆರವುಗೊಳಿದಲಾಗಿದೆ. ಬಾಕಿ 1075 ಸ್ಥಳಗಳಲ್ಲಿ ಶೀಘ್ರಗತಿಯಲ್ಲಿ ತೆರವುಗೊಳಿಸಲಾಗುವುದು. ನಗರದ ಎಂಟೂ ವಲಯಗಳಲ್ಲಿ 13 ಕ್ಕೂ ಹೆಚ್ಚು ಜೆಸಿಬಿ, 10 ಕ್ಕೂ ಹೆಚ್ಚು ಟಿಪ್ಪರ್‌ಗಳು, 60ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳು,170 ಕ್ಕೂ ಹೆಚ್ಚು ಸಿಬ್ಬಂದಿಯನ್ನು ಬಳಸಿಕೊಂಡು ಸ್ವಚ್ಛತಾ ಕಾರ್ಯವನ್ನು ನಡೆಸಲಾಗುತ್ತಿದೆ.

ವಾಹನ ಕಳ್ಳತನ : ಇಬ್ಬರ ಬಂಧನ

ಬೆಂಗಳೂರು: ಕಾರು ಮತ್ತು ದ್ವಿ ಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಇಬ್ಬರು ಖದೀಮರನ್ನು ಕಾಡುಗೋಡಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರ್.ಕೆ. ನಗರದ ಸದ್ದಾಂ ಹುಸೇನ್ ಅಲಿಯಾಸ್ ಸದ್ದಾಂ ವಾಜೀದ್ (25) ಹಾಗೂ ಸುಲೇಮಾನ್ ಖಾನ್ ಅಲಿಯಾಸ್ ಸುಲೇಮಾನ್(35) ಬಂಧಿತ ಆರೋಪಿಗಳು. ಬಂಧಿತರಿಂದ 10.40 ಲಕ್ಷ ಮೌಲ್ಯದ 3 ಕಾರುಗಳು, 2 ದ್ವಿಚಕ್ರ ವಾಹನಗಳನ್ನು ವಶಪಡಿಸಿ ಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕಾಡುಗೋಡಿಯ ಎ.ಕೆ.ಜಿ ಕಾಲೋನಿ, ಚನ್ನಸಂದ್ರದ ಬಳಿ ನಿಲ್ಲಿಸಿದ್ದ ಬೈಕ್ ಕಳವು ಪ್ರಕರಣ ದಾಖಲಿಸಿ ವಿವಿಧ ಆಯಾಮಗಳಲ್ಲಿ ತನಿಖೆಯನ್ನು ಕೈಗೊಂಡು ಕಾಡುಗೋಡಿ ಪೊಲೀಸರು ಚನ್ನಸಂದ್ರ ವೃತ್ತದ ಬಳಿ ಪ್ರಕರಣದಲ್ಲಿ ಕಳುವಾಗಿದ್ದ ದ್ವಿ ಚಕ್ರ ವಾಹನ ಸಮೇತ ಇಬ್ಬರನ್ನು ಬಂಧಿಸಿದ್ದಾರೆ. ಆರೋಪಿ ಗಳಿಂದ ಕಾಡುಗೋಡಿ, ವರ್ತೂರು ಮತ್ತು ಯಲಹಂಕ ಪೊಲೀಸ್ ಠಾಣಾ ವ್ಯಾಪ್ತಿಯ 3 ಕಾರು ಕಳವು ಸೇರಿ ಐದು ಪ್ರಕರಣಗಳು ಪತ್ತೆಯಾಗಿವೆ. ಕಾಡುಗೋಡಿ ಪೊಲೀಸ್ ಇನ್ಸ್‌ಪೆಕ್ಟರ್ ರಂಗಸ್ವಾಮಿ ಎಚ್.ಎಂ ಮತ್ತವರ ಸಿಬ್ಬಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಸರ್ಜಾಪುರ-ಹೆಬ್ಬಾಳ ಸಂಪರ್ಕಿಸುವ ಕೆಂಪು ಮಾರ್ಗ ನಿರ್ಮಾಣಕ್ಕೆ ಮೆಟ್ರೋ ಚಿಂತನೆ

ಯಾವೆಲ್ಲಾ ನಿಲ್ದಾಣದ ಜತೆ ಇಂಟರ್‌ಲಿಂಕ್

ನಿಲ್ದಾಣ	ಮಾರ್ಗ	ಎಲ್ಲಿಂದ - ಎಲ್ಲಿಗೆ
ಇಬ್ಬಲೂರು	ನೀಲಿ	ರೇಷ್ಮೆ ಮಂಡಳಿ - ಕೆಆರ್ ಪುರ
ಅಗರ	ನೀಲಿ	ರೇಷ್ಮೆ ಮಂಡಳಿ - ಕೆಆರ್‌ಪುರ
ಡೈರಿ ಸರ್ಕಲ್	ಗುಲಾಬಿ	ಕಾಳೇನ ಅಗ್ರಹಾರ - ನಾಗವಾರ
ಹೆಬ್ಬಾಳ	ಕಿತ್ತಳೆ - ನೀಲಿ	ಕೆಂಪಾಪುರ - ಜೆಪಿ ನಗರ, ಕೆಆರ್ ಪುರ - ಬೆಂಗಳೂರು ಏರ್‌ಪೋರ್ಟ್

ಬೆಂಗಳೂರು: ನಗರದ ಮತ್ತಷ್ಟು ಭಾಗಗಳಿಗೆ ಮೆಟ್ರೋ ಸಂಪರ್ಕವನ್ನು ಕಲ್ಪಿಸುವ ಸಲುವಾಗಿ ಮೆಟ್ರೋದ ಕೆಂಪು ಮಾರ್ಗ ವನ್ನು ನಿರ್ಮಾಣ ಮಾಡಲಾಗುತ್ತಿದ್ದು, ಈ ಮಾರ್ಗವು ಸರ್ಜಾಪುರ - ಹೆಬ್ಬಾಳ ನಡುವೆ ಸಂಪರ್ಕ ಕಲ್ಪಿಸುತ್ತದೆ.

ನಮ್ಮ ಮೆಟ್ರೋದಲ್ಲಿ ಬೆಂಗಳೂರು ಉತ್ತರ - ದಕ್ಷಿಣ, ಪೂರ್ವ - ಪಶ್ಚಿಮ ಸಂಪರ್ಕ ಕಲ್ಪಿಸುವ ಹಸಿರು, ನೇರಳೆ ಮಾರ್ಗ ಕಾರ್ಯಾಚರಣೆಯಲ್ಲಿದ್ದು, ಹಳದಿ ಮಾರ್ಗ 2025 ರಲ್ಲಿ, ಗುಲಾಬಿ ಮಾರ್ಗ 2026 ರಲ್ಲಿ, ನೀಲಿ ಮಾರ್ಗ 2027 ಕ್ಕೆ ಕಾರ್ಯಾಚರಣೆ ನಡೆಸುವ ಸಾಧ್ಯತೆ ಇದೆ. ಆದರೆ, ಸಾಕಷ್ಟು ವಾಹನ ದಟ್ಟಣೆಯಿಂದ ಕೂಡಿರುವ ಹೊಸೂರು ರಸ್ತೆ, ಸೆಂಟ್ ಜಾನ್ಸ್ , ಮಡಿವಾಳ, ಸರ್ಜಾಪುರ ಭಾಗಕ್ಕೂ ಮೆಟ್ರೋ ಸೇವೆ ಆರಂಭಿಸುವ ಕುರಿತು ಬೇಡಿಕೆಯಿದ್ದು, ನಮ್ಮ ಮೆಟ್ರೋ ಮೂರನೇ ಹಂತದಲ್ಲಿ ಕೆಂಪು ಮಾರ್ಗ ನಿರ್ಮಿಸುವ ಯೋಜನೆಗೆ ಮುಂದಾಗಿದೆ. ಮೆಟ್ರೋ ಮೂರನೇ ಹಂತ ಎ ಯೋಜನೆಯ ಸಮೀಕ್ಷೆ ಪೂರ್ಣ ಗೊಂಡಿದೆ. ಭೂ ಸ್ವಾಧೀನ ಪ್ರಕ್ರಿಯೆ ನಡೆಯುತ್ತಿದ್ದು, ವರ್ಷದೊಳಗೆ ಕಾಮ ಗಾರಿ ಆರಂಭವಾಗುವ ನಿರೀಕ್ಷೆಯಿದೆ. ಈ ಮಾರ್ಗವು ಸರ್ಜಾಪುರದಿಂದ ಹೆಬ್ಬಾಳದ ವರೆಗೂ 36.59 ಕಿ.ಮೀ ವಿಸ್ತರಿಸಿದೆ. 14.45 ಕಿ.ಮೀ ಸುರಂಗವಿದೆ. 22.14 ಕಿ.ಮೀ ಎತ್ತರಿಸಿದ ಮಾರ್ಗ ವಿರಲಿದೆ. ಈ ಮಾರ್ಗದ ನಿರ್ಮಾಣಕ್ಕೆ ಅಂದಾಜು 28,405 ಕೋಟಿ ರು. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಸ್ವಾಧೀನ ವೆಚ್ಚ ಸುಮಾರು 8,080 ಕೋಟಿ ರು ಖಾಸಗಿ ಭೂಮಿ ಸ್ವಾಧೀನಪಡಿಸಿ ಕೊಳ್ಳಲು ಸುಮಾರು 1,224 ಕೋಟಿ ರು.ಎಂದು ನಿರೀಕ್ಷಿಸಲಾಗಿದೆ.

ಕೆಂಪು ಮಾರ್ಗದ ನಿಲ್ದಾಣಗಳು

ಸರ್ಜಾಪುರ, ಸೋಮಾಪುರ, ದೊಮ್ಮಸಂದ್ರ, ಮುತ್ತನಲ್ಲೂರು ಕ್ರಾಸ್, ಸೋಲಿಕುಂಟೆ, ಕೊಡತಿ ಗೇಟ್, ಅಂಬೇಡ್ಕರ್ ನಗರ, ಕೊರ್ಮೆಲರಂ, ದೊಡ್ಡಕನ್ನಳ್ಳಿ, ಕೈಕೊಂಡ್ರಹಳ್ಳಿ, ಬೆಳ್ಳಂದೂರು ಗೇಟ್, ಇಬ್ಬಲೂರು,ಅಗರ, ಜಕ್ಕಸಂದ್ರ, ಸಿಪಿಡಬ್ಲ್ಯುಡಿ ಕ್ವಾಟ್ರಸ್, ಸೆಂಟ್‌ಜಾನ್ಸ್ ಆಸ್ಪತ್ರೆ, ಸುದ್ದುಗುಂಟನಪಾಳ್ಯ, ಡೈರಿ ಸರ್ಕಲ್, ನಿಮ್ಹಾನ್ಸ್, ವಿಲ್ಸನ್ ಗಾರ್ಡನ್, ಟೌನ್ ಹಾಲ್, ಕೆಆರ್ ಸರ್ಕಲ್, ಚಾಲುಕ್ಯ ಸರ್ಕಲ್, ಪ್ಯಾಲೇಸ್ ಗುಟ್ಟಹಳ್ಳಿ, ಮೇಖ್ರಿ ಸರ್ಕಲ್, ವೆಟರ್ನರಿ ಕಾಲೇಜ್, ಗಂಗಾನಗರ,ಹೆಬ್ಬಾಳ.

ಗಡಿನಾಡ ಉತ್ಸವ ಕಾರ್ಯಕ್ರಮದಲ್ಲಿ ಬಸವರಾಜ ಹೊರಟ್ಟಿ ಅಭಿಮತ

ಮಸ್ಕತ್‌ನಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ನೆರವು

ಬೆಂಗಳೂರು: ಓಮಾನ್ ದೇಶದಲ್ಲಿನ ಕನ್ನಡಿಗರೆಲ್ಲರೂ ಸೇರಿ ರಾಜಧಾನಿ ಮಸ್ಕತ್‌ನಲ್ಲಿ ಕನ್ನಡ ಭವನ ನಿರ್ಮಾಣ ಮಾಡುವುದಾದರೆ, ರಾಜ್ಯ ಸರಕಾರದಿಂದ ಆರ್ಥಿಕ ನೆರವು ಕೊಡಿಸುವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಗಡಿನಾಡ ಸಾಂಸ್ಕೃತಿಕ ಅಕಾಡೆಮಿ ಕಾಸರಗೋಡು ಹಾಗೂ ಓಮಾನ್ ಕನ್ನಡ ಪರ ಸಂಘಟನೆಗಳ ಘಟಕಗಳು ಮಸ್ಕತ್ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ನಡೆದ ಗಡಿನಾಡ ಉತ್ಸವದಲ್ಲಿ ಮಾತನಾಡಿದ ಅವರು, ಮಸ್ಕತ್ ನಿವೇಶನ ಲಭ್ಯವಾದರೆ ಅನುದಾನ ಪಡೆಯಲು ಸುಲುಭವಾಗುತ್ತದೆ. ಈ ಬಗ್ಗೆ ನಾನೇ ಖುದ್ದಾಗಿ ಮುಖ್ಯಮಂತ್ರಿಗಳ ಜತೆಗೆ ಮಾತನಾಡಿ ನೆರವು ಕೊಡಿಸುತ್ತೇನೆ. ಮರಳುಗಾಡಿನ ಈ ಓಮಾನ್ ದೇಶದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿರುವ ಕನ್ನಡಿಗರ ನಾಡು ನುಡಿ ಮೇಲಿನ ಅಭಿಮಾನ, ಪ್ರೀತಿಗೆ ನಿಜಕ್ಕೂ ಹೃದಯ ತುಂಬಿ ಬಂದಿದೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಕಲಿಸುವ ಮಹಿಳಾ ಶಿಕ್ಷಕಿಯರನ್ನು ಸನ್ಮಾನ ಮಾಡಲಾಯಿತು. ತೀರ್ಥ ಕಟೀಲ್ ಮತ್ತು ತಂಡ ಹಾಗೂ ರೇಷ್ಮಾ ಹಿತೇಶ್ ಮತ್ತು ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಓಮಾನ್ ವಿದೇಶಿ ವ್ಯವಹಾರಗಳ ಸಚಿವಾಲಯ ಅಧ್ಯಕ್ಷ ಖಾಲಿದ್ ಸಯ್ಯದ್ ಮೊಹಮ್ಮದ್, ಮಂಜೇಶ್ವರ ಶಾಸಕ ಎ.ಕೆ.ಎಂ.ಆಶ್ರಫ್, ನಾಡೋಜ ಡಾ.ಮನು ಬಳಿಗಾರ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ, ಸದಸ್ಯರಾದ ಎ.ಆರ್. ಸುಬ್ಬಯ್ಯಕಟ್ಟೆ, ಶಿವರೆಡ್ಡಿ, ಡಾ.ಸಂಜೀವ್ ಕುಮಾರ್ ಅತಿವಾಳೆ, ಕನ್ನಡ ಸಂಘದ ಶಿವಾನಂದ ಕೋಟ್ಯಾನ್, ಆಶ್ರ್ಯ ಮಂತುರ್, ಅಬೂಬಕ್ಕರ್ ರಾಯಲ್ ಬೋಳಾರ್, ಹ್ಯಾರಿಸ್ ಬೀರನ್, ಅಬ್ದುಲ್ ಲತೀ ಉಪ್ಪಳ, ಅಮರೇಶ ಗಿರಡ್ಡಿ, ಮಲ್ಲಿಕಾರ್ಜುನ್ ಸಂಗೆಟ್ಟಿ ಉಪಸ್ಥಿತರಿದ್ದರು.

ಒಮಾನ್ ದೇಶದಲ್ಲಿ ನಡೆದ ಗಡಿನಾಡ ಉತ್ಸವ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಿದರು. ಕರ್ನಾಟಕ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಾಧಿಕಾರ ಅಧ್ಯಕ್ಷ ಸೋಮಣ್ಣ ಬೇವಿನಮರದ ಉಪಸ್ಥಿತರಿದ್ದರು.

> ಕನ್ನಡ ಮಕ್ಕಳಿಗೆ ಇಲ್ಲಿ ಕನ್ನಡ ಭಾಷೆಯನ್ನು ಉಚಿತವಾಗಿ ಪಾಠ ಮಾಡುತ್ತಿರುವ ಮಹಿಳಾ ಶಿಕ್ಷಕರನ್ನು ಗಡಿ ಪ್ರಾಧಿಕಾರದಿಂದ ಗುರುತಿಸಿ, ಸೂಕ್ತ ಗೌರವ ನೀಡಿ, ಉಚಿತವಾಗಿ ಪಠ್ಯ ಪುಸ್ತಕ ಒದಗಿಸಲಾಗುವುದು.
> **ಸೋಮಣ್ಣ ಬೇವಿನಮರದ,** ಪ್ರಾಧಿಕಾರ ಅಧ್ಯಕ್ಷ

ಭಾರತೀಯ ಜನತಾ ಪಾರ್ಟಿ ಬೆಂಗಳೂರು ದಕ್ಷಿಣ ಜಿಲ್ಲೆ ವತಿಯಿಂದ ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮೌನಾಚರಣೆ ನಡೆಯಿತು. ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸಹ ಕಾರ್ಯನಿರ್ವಾಹಕ ನಾ. ತಿಪ್ಪೇಸ್ವಾಮಿ, ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷರು ಹಾಗೂ ಜಯನಗರ ಶಾಸಕರಾದ ಸಿ. ಕೆ. ರಾಮಮೂರ್ತಿ, ರವಿಸುಬ್ರಮಣ್ಯ, ರಾಜ್ಯ ವಕ್ತಾರರಾದ ಅಶ್ವಥ್ ನಾರಾಯಣ್ ಹಾಗೂ ಮಂಡಲ ಅಧ್ಯಕ್ಷರಾದ ಧನರಾಜ್, ಬಿಬಿಎಂಪಿಯ ಮಾಜಿ ಸದಸ್ಯರುಗಳು ಸೇರಿದಂತೆ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಉಪಸ್ಥಿತರಿದ್ದರು.

51.25 ಕೋಟಿ ಮೌಲ್ಯದ ಅಕ್ರಮ ಒತ್ತುವರಿ ತೆರವು

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ 51.25ಕೋಟಿ ರು. ಅಂದಾಜು ಮೌಲ್ಯದ ಒಟ್ಟು 13 ಎಕರೆ 0.26 ಗುಂಟೆ ಸರಕಾರಿ ಜಮೀನನ್ನು ಜಿಲ್ಲಾಧಿಕಾರಿ ಜಿ.ಜಗದೀಶ ನೇತೃತ್ವದಲ್ಲಿ ವಶಕ್ಕೆ ಪಡೆಯಲಾಯಿತು.

ಬೆಂಗಳೂರು ನಗರ ಜಿಲ್ಲೆಯಾದ್ಯಂತ ವಿವಿಧ ತಾಲೂಕುಗಳ ತಹಸೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಗೋಮಾಳ, ಹದ್ದುಗಿಡದಹಳ್ಳ, ಮುಫತ್ ಕಾವಲ್, ಸರಕಾರಿ ಕುಂಟೆ, ಶ್ರೀಬಸವಣ್ಣ ದೇವರ ಇನಾಂ, ಗುಂಡು ತೋಪು, ಸರಕಾರಿ ಬೀಳು, ಸರಕಾರಿ ಖರಾಬು ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು.

ಬೆಂಗಳೂರು ಪೂರ್ವ ತಾಲೂಕಿನ ಕೆ.ಆರ್.ಪುರ ಹೋಬಳಿಯ ಹಗದೂರು ಗ್ರಾಮದ ಗೋಮಾಳ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 1 ಎಕರೆಯಾಗಿದ್ದು, ಅಂದಾಜು ಮೌಲ್ಯ 10.00 ಕೋಟಿಗಳಾಗಿರುತ್ತದೆ. ಬಿದರಹಳ್ಳಿ ಹೋಬಳಿಯ ಶೀಗೆಹಳ್ಳಿ ಗ್ರಾಮದ ಹದ್ದುಗಿಡದಹಳ್ಳ ಒಟ್ಟು ಒತ್ತುವರಿ ತೆರವುಗೊಳಿ ಸಿರುವ ವಿಸ್ತೀರ್ಣ 0.05 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರು. 0.50 ಕೋಟಿಗಳಾಗಿರುತ್ತದೆ.

ಬಿದರಹಳ್ಳಿ ಹೋಬಳಿಯ ಕಿತ್ತಗನೂರು ಗ್ರಾಮದ ಮುಫತ್ ಕಾವಲ್ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.10 ಗುಂಟೆಗಳಾಗಿದ್ದು ಅಂದಾಜು ಮೌಲ್ಯ 70 ಲಕ್ಷ ಎನ್ನಲಾಗಿದೆ. ವರ್ತೂರು ಹೋಬಳಿಯ ಕೈಕೊಂಡರಹಳ್ಳಿ ಗ್ರಾಮದ ಗುಂಡು ತೋಪು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.01 ಗುಂಟೆಗಳಾಗಿದ್ದು ಅಂದಾಜು ಮೌಲ್ಯ 20 ಲಕ್ಷ ಎನ್ನಲಾಗಿದೆ.

ಬೆಂಗಳೂರು ನಗರ ಜಿಲ್ಲೆಯಾದ್ಯಂತ ವಿವಿಧ ತಾಲೂಕುಗಳ ತಹಸೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಗೋಮಾಳ, ಹದ್ದುಗಿಡದಹಳ್ಳ, ಮುಫತ್ ಕಾವಲ್, ಸರಕಾರಿ ಕುಂಟೆ, ಶ್ರೀಬಸವಣ್ಣ ದೇವರ ಇನಾಂ, ಗುಂಡು ತೋಪು, ಸರಕಾರಿ ಬೀಳು, ಸರಕಾರಿ ಖರಾಬು ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು.

ಆನೇಕಲ್ ತಾಲೂಕಿನಲ್ಲೂ ತೆರವು

ಆನೇಕಲ್ ತಾಲೂಕಿನ ಕಸಬಾ-1 ಹೋಬಳಿ, ಅತ್ತಿಬೆಲೆ-1 ಹೋಬಳಿಯ ಹಳೇಹಳ್ಳಿ ಗ್ರಾಮ, ಸರ್ಜಾಪುರ-2 ಹೋಬಳಿಯ ಮುತ್ತಾನ ಲ್ಲೂರು, ಸರ್ಜಾಪುರ-3 ಹೋಬಳಿಯ ನರಿಗಾ ಗ್ರಾಮದಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆ. ಇದೇ ರೀತಿ ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿಯ, ಯಲಹಂಕ ತಾಲೂಕಿನ ಜಾಲ-3 ಹೋಬಳಿ, ಹೆಸರುಘಟ್ಟ-2 ಹೋಬಳಿಯ ಕಾಮಾಕ್ಷಿಪುರ ಗ್ರಾಮದ ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.15 ಗುಂಟೆಗಳಾಗಿದ್ದು ಅಂದಾಜು ಮೌಲ್ಯ 1.25 ಕೋಟಿಗಳಾಗಿರುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕನ್ನಡಿಗರ ಆರಾಧ್ಯದೈವ ಡಾ.ರಾಜ್ ಕುಮಾರ್



ಮಂಜುನಾಥ ಹಾಲುವಾಗಿಲು

ಡಾ.ರಾಜ್‌ಕುಮಾರ್ ಹೆಸರು ಕೇಳಿದರೆ ಸಾಕು, ಪ್ರತಿಯೊಬ್ಬ ಕನ್ನಡಿಗನ ಮನದಲ್ಲೂ ಒಂದು ಸುಂದರವಾದ ಭಾವನೆ ಮೂಡುತ್ತದೆ. ಡಾ. ರಾಜ್ ಕುಮಾರ್ ಎಂದರೆ ಅದೊಂದು ಹೆಸರು ಮಾತ್ರವಲ್ಲ ಬದಲಾಗಿ ಕನ್ನಡಿಗರ ಪಾಲಿನ ಮೇರುಪರ್ವತ. ನಟನೆಯಲ್ಲಿ ಮಾತ್ರವಲ್ಲ ತೆರೆಯ ಹಿಂದೆಯೂ ದೇವಮಾನವರಂತೆ ಬದುಕಿದ್ದವರು; ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಹೊರಟರೆ ಸಿಗುವ ಉತ್ತರ ರಾಜ್‌ಕುಮಾರ್‌ರವರ ಐದು ದಶಕಗಳ ಸುಧೀರ್ಘ ಸಿನಿಪಯಣ ಹಾಗೂ ಅವರ ಸರಳ ವ್ಯಕ್ತಿತ್ವ. ಬದುಕಿನುದ್ದಕ್ಕೂ ಅವರು ಅಳವಡಿಸಿಕೊಂಡು ಬಂದಿದ್ದ ಆದರ್ಶಗಳ ಮೂಲಕ ಮಾನವೀಯ ಮೌಲ್ಯ, ತಮ್ಮ ಕಲಾಸೇವೆಯ ಮೂಲಕ ಸಾಂಸ್ಕೃತಿಕ ಮೌಲ್ಯ, ತಮ್ಮ ಸಾಮಾಜಿಕ ಜೀವನದ ಮೂಲಕ ಸಾಮಾಜಿಕ ಮೌಲ್ಯಗಳನ್ನು ತುಂಬಿಕೊಂಡು ಒಂದು ಸಮಗ್ರ ಮೌಲ್ಯಯುತ ಬದುಕನ್ನು ಕಂಡವರು. ಕನ್ನಡಿಗರೆಲ್ಲರೂ ತಮ್ಮವರೆಂಬುವ ಭಾವ ಹಾಗೂ ಅಭಿಮಾನಿಗಳನ್ನೇ ದೇವರೆಂದು ಕರೆದದ್ದು ಅವರ ಹೃದಯ ವೈಶಾಲ್ಯತೆಯಲ್ಲದೆ ಮತ್ತೇನೂ ಅಲ್ಲ.

ಅವರು ನಾಯಕನಾಗಿ ಅಭಿನಯಿಸಿದ ಮೊದಲ ಚಿತ್ರ ಬೇಡರಕಣ್ಣಪ್ಪದ ತೆಲುಗು ಅವತರಿಣಿಕೆಯಾದ ಶ್ರೀ ಕಾಳಹಸ್ತಿ ಮಹಾತ್ಯಮ್ ಚಿತ್ರದ ನಂತರ ಕನ್ನಡವನ್ನು ಬಿಟ್ಟು ಬೇರೆಯಾವ ಭಾಷೆಯಲ್ಲೂ ಅಭಿನಯಿಸುವುದಿಲ್ಲ ಎಂದು ಶಪಥವನ್ನು ಕೈಗೊಂಡು ಅದರಂತೆ ನಡೆದುಕೊಂಡವರು; ಕನ್ನಡ ಚಿತ್ರರಂಗಕ್ಕೆ ಅಷ್ಟೇನೂ ಹೆಸರಿಲ್ಲದ ಕಾಲದಲ್ಲಿ ಕನ್ನಡ ಚಿತ್ರರಂಗದ ಅಭ್ಯುದಯಕ್ಕಾಗಿ ತಮ್ಮ ಬದುಕನ್ನು ಮೀಸಲಿಟ್ಟವರು; ಕನ್ನಡ ಚಿತರಂಗವೆಂದರೆ ಮೂಗು ಮುರಿಯುತ್ತಿದ್ದ ಕಾಲದಲ್ಲಿ ಅವರ ಅಭಿನಯ ಹಾಗೂ ಕನ್ನಡದಲ್ಲೇ ಅಭಿನಯಿಸುವ ಅವರ ಬದ್ಧತೆಯ ಫಲವಾಗಿ ಈಶ್ವರಿ ಪ್ರೊಡೊಕ್ಷನ್ಸ್, ಪದ್ಮಿನಿ ಪಿಕ್ಚರ್ಸ್, ಮಹಾತ್ಮ ಪಿಕ್ಚರ್ಸ್ ರಂತಹ ನಿರ್ಮಾಣ ಸಂಸ್ಥೆಗಳು ಕನ್ನಡ ಚಿತ್ರರಂಗದತ್ತ ಒಲವು ತೋರಿಸಲು ಕಾರಣವಾಯಿತು. ಎಲ್ಲಕ್ಕಿಂತ ಮಿಗಿಲಾಗಿ ಕನ್ನಡ ಚಿತರಂಗದ ಸಂಕಷ್ಟದ ಸಮಯದಲ್ಲಿ ನರಸಿಂಹರಾಜು, ಬಾಲಕೃಷ್ಣ ಹಾಗೂ ಜಿ.ವಿ.ಅಯ್ಯರ್ ಅವರೊಂದಿಗೆ ಸೇರಿ ಕನ್ನಡ ಚಲನಚಿತ್ರ ಕಲಾವಿದರ ಸಂಘ ಎನ್ನುವ ಹೆಸರಿನ ಸಂಸ್ಥೆಯಲ್ಲಿ ರಣಧೀರ ಕಂಠೀರವ ಎನ್ನುವ ಚಿತ್ರವನ್ನು ನಿರ್ಮಿಸಿ, ಕಲಾವಿದರ ಸಂಕಷ್ಟಕ್ಕೆ ನೆರವಾದವರು ಡಾ.ರಾಜ್‌ಕುಮಾರ್.

ಅವರ ನಟನೆಯ ವಿಷಯಕ್ಕೆ ಬಂದರೆ ಅವರಿಗೆ ಅವರೇ ಸರಿಸಾಟಿ; ಕನ್ನಡ ಚಿತ್ರರಂಗದ ಆರಂಭದ ದಶಕದಲ್ಲಿ ಸುಬ್ಬಯ್ಯನಾಯ್ಡು, ಹೊನ್ನಪ್ಪ ಭಾಗವತರ್, ಜಿ ವಿ ಅಯ್ಯರ್ ಅನಂತರ ಉದಯ್ ಕುಮಾರ್, ಕಲ್ಯಾಣ್ ಕುಮಾರ್ ಹೀಗೆ ಹಲವಾರು ಕಲಾವಿದರ ಸಮಕಾಲೀನ ನಟರಾಗಿ ಅಭಿನಯಿಸುತ್ತ ಬಂದವರು ಡಾ.ರಾಜ್. ನಂತರದ ದಶಕಗಳಲ್ಲಿ ರಾಜೇಶ್, ರಮೇಶ್, ರಾಜಾಶಂಕರ್, ಗಂಗಾಧರ್ ಮುಂತಾದವರ ಕಾಲಘಟ್ಟದಲ್ಲೂ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು, ಎಂಬತ್ತರ ದಶಕದಲ್ಲಿ ವಿಷ್ಣುವರ್ಧನ್, ಅಂಬರೀಷ್, ಅನಂತನಾಗ್, ಶ್ರೀನಾಥ್ ಅವರಂತಹ ಪ್ರತಿಭಾನ್ವಿತ ನಾಯಕ ನಟರ ಕಾಲಘಟ್ಟದಲ್ಲಿ ಹಾಗೂ ಶಿವರಾಜ್ ಕುಮಾರ್, ರವಿಚಂದ್ರನ್, ರಮೇಶ್ ಅರವಿಂದ್, ಉಪೇಂದ್ರ ಅವರಂತಹ ನಾಯಕರ ಕಾಲಘಟ್ಟದಲ್ಲೂ ತಮ್ಮ ಅಭಿನಯದ ಮೂಲಕ ಹಾಗೂ ಗಾಯನದ ಮೂಲಕ ಅವರೆಲ್ಲರಿಗೂ ಸರಿಸಾಟಿಯಾಗಿ ತಮ್ಮ ವಯಸ್ಸನ್ನೇ ನಾಚಿಸುವಂತೆ ಅಭಿನಯಿಸಿ ಕನ್ನಡ ಸಿನಿರಸಿಕರ ಮನಸ್ಸನ್ನು ಸೂರೆಗೊಂಡವರು ಡಾ. ರಾಜ್‌ಕುಮಾರ್.

ಬಾಲ್ಯದ ದಿನಗಳಿಂದಲೂ ನಟನೆಯೊಂದಿಗೆ ಸಂಗೀತದ ಅಭ್ಯಾಸದಲ್ಲೂ ತೊಡಗಿಸಿಕೊಂಡಿದ್ದ ರಾಜ್ ಅವರು ಜಿ.ಕೆ.ವೆಂಕಟೇಶ್ ಸಂಗೀತ ನಿರ್ದೇಶನದ ಮಹಿಷಾಸುರ ಮರ್ದಿನಿ ಚಿತ್ರದಲ್ಲಿ ತುಂಬಿತು ಮನವ ತಂದಿತು ಸುಖವ ಗೀತೆಯನ್ನು ಹಾಡಿ ಸೈ ಎನಿಸಿಕೊಂಡವರು; ನಂತರದ ದಿನಗಳಲ್ಲಿ ಅಭಿನಯಕ್ಕೆ ಹೆಚ್ಚು ಒಲವು ತೋರಿಸಿದ ರಾಜ್, ನಂತರ ಅದೇ ಜಿ.ಕೆ.ವೆಂಕಟೇಶ್ ಸಂಗೀತ ನಿರ್ದೇಶನದಲ್ಲಿ 1974ರಲ್ಲಿ ತೆರೆಕಂಡ ಸಂಪತ್ತಿಗೆ ಸವಾಲ್ ಚಿತ್ರದ ಯಾರೇ ಕೂಗಾಡಲೀ ಎನ್ನುವ ಗೀತೆಯೊಂದಿಗೆ ಗಾಯನಕ್ಕೂ ಧುಮುಕಿದ ರಾಜ್ ಹಿಂದಿರುಗಿ ನೋಡಲೇ ಇಲ್ಲ. ಒಬ್ಬ ನಟನಾದವನು ಗಾಯನಕ್ಕೆ (ಜೀವನ ಚೈತ್ರ ಚಿತ್ರದ ನಾದಮಯ ಈ ಲೋಕವೆಲ್ಲಾ ಗೀತೆಗೆ) ರಾಷ್ಟ್ರ ಪ್ರಶಸ್ತಿಯನ್ನು ಪಡೆದುದೇ ಅವರ ಸಿರಿಕಂಠದ ಪ್ರತಿಭೆಗೆ ಸಾಕ್ಷಿ. ಭಾರತ್ತೀಯ ಚಿತ್ರರಂಗದ ಅಪ್ರತಿಮ ಗಾಯಕ ಎಸ್.ಪಿ.ಬಾಲಸುಬ್ರಮಣ್ಯಂ ರವರರು ಮುದ್ದಿನ ಮಾವ ಚಿತ್ರದಲ್ಲಿ ನಟಿಸಿದಾಗ ಅವರಿಗೆ ಹಿನ್ನೆಲೆ ಗಾಯಕರಾದವರು ರಾಜ್‌ಕುಮಾರ್ ರವರೇ ಎಂಬುದು ಅವರ ಗಾನಪ್ರತಿಭೆಗೆ ಹಿಡಿದ ಕೈಗನ್ನಡಿ. ಇಂತಹ ಅಪರೂಪದ ದಂತಕಥೆ ವರನಟ, ರಸಿಕರ ರಾಜ, ನಟಸಾರ್ವಭೌಮ, ಗಾನಗಂಧರ್ವ ಹೀಗೆ

ಹತ್ತು ಹಲವಾರು ಬಿರುದಾಂಕಿತರಾದ, ಪದ್ಮಭೂಷಣ, ಕೆಂಟಕಿ ಕರ್ನಲ್, ಕರ್ನಾಟಕ ರತ್ನ, ದಾದಾ ಸಾಹೇಬ್ ಫಾಲ್ಕೆ ಹಾಗೂ ಹಲವಾರು ಪ್ರಶಸಿಗ್ತಳಿಂದ ಪುರಸ್ಕೃತರಾದ ಡಾ.ರಾಜ್ ಕುಮಾರ್ ಅವರ 97 ನೇ ಜನ್ಮದಿನದ ಸಂಧರ್ಭದಲ್ಲಿ ಅವರ ಅಭಿಮಾನಿಗಳಾದ ನಾವು ಅವರು ಹಾಕಿಕೊಟ್ಟ ಮಾರ್ಗದಲ್ಲಿ, ಅವರು ಕೊಟ್ಟ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳೋಣ.

ಅಣ್ಣಾವ್ರ ಹುಟ್ಟುಹಬ್ಬದಂದೇ ಶಿವಣ್ಣನ ಹೊಸ ಸಿನಿಮಾ ಘೋಷಣೆ

ಇಂದು ವರನಟ ಡಾ.ರಾಜಕುಮಾರ್ ಅವರ ಹುಟ್ಟುಹಬ್ಬ. ಈ ಸುಸಂದರ್ಭದಲ್ಲಿ ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್ ನಟಿಸಲಿರುವ ಹೊಸ ಚಿತ್ರದ ಘೋಷಣೆಯಾಗಿದೆ. ಶ್ರೀತಿಕ್ ಮೋಷನ್ ಪಿಕ್ಚರ್ಸ್ ಸಂಸ್ಥೆ ಲಾಂಛನದಲ್ಲಿ ಸಾಗರ್, ಕೃಷ್ಣಕುಮಾರ್ ಹಾಗೂ ಸೂರಜ್ ಶರ್ಮ ಒಟ್ಟಾಗಿ ನಿರ್ಮಾಣ ಮಾಡುತ್ತಿರುವ ಈ ಚಿತ್ರವನ್ನು ಬಾಲಾಜಿ ಮಾಧವನ್ ನಿರ್ದೇಶನ ಮಾಡಲಿದ್ದಾರೆ. ಕನ್ನಡದಲ್ಲಿ ಮೊದಲ ಚಿತ್ರವನ್ನು ನಿರ್ದೇಶಿಸುತ್ತಿರುವ ಬಾಲಾಜಿ ಮಾಧವನ್, ನಿರ್ದೇಶಕ ಪಿ.ವಾಸು ಅವರ ಸಹೋದರಿಯ ಪುತ್ರ. ಇತ್ತೀಚೆಗೆ ಶಿವರಾಜಕುಮಾರ್ ಅವರನ್ನು ಭೇಟಿ ಮಾಡಿದ ನಿರ್ದೇಶಕ ಬಾಲಾಜಿ ಮಾಧವನ್ ಹಾಗೂ ನಿರ್ಮಾಪಕರು ಚಿತ್ರದ ಬಗ್ಗೆ ಶಿವಣ್ಣ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಚಿತ್ರದ ಕಥೆ ಕೇಳಿದ ಶಿವಣ್ಣ ಸಂತಸದಿಂದಲೇ ನಟಿಸಲು ಸಮ್ಮತಿಸಿದ್ದಾರೆ. ಸದ್ಯದಲ್ಲೇ ಚಿತ್ರದ ಶೀರ್ಷಿಕೆ ಕೂಡ ಅನಾವರಣವಾಗಲಿದೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರದ ಶೀರ್ಷಿಕೆ ಏನೆಂದು ಪ್ರೇಕ್ಷಕರೇ ಊಹಿಸಲಿ ಎಂದು ಶಿವರಾಜಕುಮಾರ್ ಚಿತ್ರತಂಡಕ್ಕೆ ಸಲಹೆ ನೀಡಿದ್ದಾರೆ. ಶೀಘ್ರದಲ್ಲೇ ಚಿತ್ರೀಕರಣಕ್ಕೆ ಚಾಲನೆ ಸಿಗಲಿದೆ. ಈ ಚಿತ್ರದಲ್ಲಿ ಶಿವಣ್ಣನ ಗೆಟಪ್ ನೋಡಲು ಸಿಪ್ರಿಯರು ಕಾತರರಾಗಿದ್ದಾರೆ.

ಹಣದ ಹಿಂದೆ ಬಿದ್ದವರಿಗೆ ಪಂಗನಾಮ

ಕಿರುತೆರೆಯಲ್ಲಿ ಪ್ರಸಿದ್ಧಿ ಪಡೆದಿದ್ದ ಎಂ.ಎಸ್.ಮುತ್ತುರಾಜ್. ಮತ್ತು ಬಿ.ಎ.ಶ್ರೀಕಂಠ ಮತ್ತೆ ಒಂದಾಗಿದ್ದಾರೆ. ಹಾಗಂತ ಈ ಬಾರಿ ಧಾರಾವಾಹಿಗಲ್ಲ ಬದಲಾಗಿ ಪ್ರೀತಿ ಪ್ರೇಮ ಪಂಗನಾಮ ಚಿತ್ರದಲ್ಲಿ ಮತ್ತೆ ಒಂದಾಗಿದ್ದಾರೆ. ಹೌದು ಈ ಇಬ್ಬರಿಗೂ ಸಿನಿಮಾ ಮಾಡಬೇಕು ಎಂಬ ಹಿಂದಿನಿಂದಲೂ ಕನಸು ಕಟ್ಟಿಕೊಂಡಿದ್ದರು. ಆ ಕನಸು ಈ ಚಿತ್ರದ ಮೂಲಕ ನನಸಾಗಿದೆ. ಪ್ರೀತಿ ಪ್ರೇಮ ಪಂಗನಾಮ ಚಿತ್ರವನ್ನು ಶ್ರೀಕಂಠ ನಿರ್ದೇಶಿಸಿದ್ದು, ಮುತ್ತುರಾಜ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಸದ್ಯ ಈ ಚಿತ್ರದ ಟೀಸರ್ ಹಾಗೂ ಹಾಡುಗಳು ಬಿಡುಗಡೆಯಾಗಿದ್ದು ನಿರೀಕ್ಷೆ ಹೆಚ್ಚಿಸಿವೆ. ಕಿರುತೆರೆಯಲ್ಲಿ ಪ್ರಸಾರವಾಗುತ್ತಿದ್ದ ನಮ್ಮ ಕಾಮಿಡಿ ನೋಡಿ ಪ್ರೇಕ್ಷಕರು ಹರಸಿದ್ದಾರೆ. ಗೆಳೆಯ ಶ್ರೀಕಂಠ ನಿರ್ದೇಶನದ ಕನಸು ಕಟ್ಟಿಕೊಂಡಿದ್ದರು. ಹಾಗಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುವ ಮೂಲಕ ಅವರ ಕನಸು ನನಸು ಮಾಡಿದ್ದೇನೆ ಎಂದು ಮುತ್ತುರಾಜ್ ಹೇಳಿದರು.

ನಾವು ಬಡತನದಿಂದ ಬಂದಿದ್ದರೂ, ನಮ್ಮ ಮಕ್ಕಳು ಹಾಗಾಗಬಾರದು. ಅವರನ್ನು ಶ್ರೀಮಂತರನ್ನಾಗಿ ಮಾಡಬೇಕು ಎಂದು ಹೋದಾಗ ಹೇಗೆ ಪಂಗನಾಮವಾಯಿತು ಅನ್ನುವುದನ್ನು ಹಾಸ್ಯದ ಜತೆಗೆ ಒಂದಷ್ಟು ಉತ್ತಮ ಸಂದೇಶಗಳನ್ನು ಸಮಾಜಕ್ಕೆ ಹೇಳುವ ಪ್ರಯತ್ನ ಮಾಡಲಾಗಿದೆ ಎಂದು ಶ್ರೀಕಂಠ ಹೇಳಿದರು. ಧೀರಜ್, ಉದಯ್ ನಾಯಕರಾಗಿ ನಟಿಸಿದ್ದು, ಡಯಾನಾ ಮತ್ತು ಚೈತ್ರಾ, ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಭದ್ರಾವತಿ ಶ್ರೀನಿವಾಸ್ ಮುಂತಾದವರು ತಾರಾಗಣದಲ್ಲಿದ್ದಾರೆ. ಕುಮಾರ್ ಈಶ್ವರ್ ಸಂಗೀತ ನಿರ್ದೇಶನ, ಗುರುರಾಜ್ ಛಾಯಾಗ್ರಹಣ, ದೊಡ್ಡಮನೆ ಗಣೇಶ್ ಸಂಕಲನ ಈ ಚಿತ್ರಕ್ಕಿದೆ. ಹಾಸನ, ಚಿಕ್ಕಮಗಳೂರು, ಮಡಿಕೇರಿ, ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಮೇನಲ್ಲಿ ಪ್ರೀತಿ ಪ್ರೇಮ ಪಂಗನಾಮ ತೆರೆಗೆ ಬರಲಿದೆ.

ಚಿತ್ತವಿಹಾರ

ತಿಳಿವಿನಿಂದ ಭಯದ ಅಳಿವು

• ಮಾಯಾ ಬಾಲಚಂದ್ರ

ನಾವು ತೀವ್ರವಾಗಿ ಕಲ್ಪಿಸಿಕೊಳ್ಳುವ ಭಾವನೆಗಳು ಅಂತಹದೇ ಘಟನೆಗಳನ್ನು ನಮ್ಮ ಬಳಿಗೆ ಎಳೆದು ತರುವ ಆಕರ್ಷಣ ಶಕ್ತಿಯನ್ನು ಹೊಂದಿರುತ್ತವೆ. ಅಪಘಾತಗಳಿಗೆ ಭಯಪಡುತ್ತಿದ್ದರೆ ಅಪಘಾತವನ್ನು ಎದುರಿಸುವ ಸಂದರ್ಭ ಏರ್ಪಡುತ್ತದೆ. ಹಾವುಗಳ ಬಗ್ಗೆ ಬಹಳ ಹೆದರುವವರಿಗೇ ಹೆಚ್ಚಿನದಾಗಿ ಹಾವಿನ ದರ್ಶನವಾಗುತ್ತಲಿರುತ್ತದೆ. ಅಪಘಾತಗಳಾಗದಿರಲು, ಹಾವಿನಿಂದ ರಕ್ಷಿಸಿಕೊಳ್ಳಲು ತೆಗೆದು ಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮ ಅತಿ ಅವಶ್ಯ. ಆದರೆ ಜಾಗೃತಿಯ ಬದಲಾಗಿ ದುರ್ಘಟನೆಗಳನ್ನು ಕಲ್ಪಿಸಿಕೊಂಡು ಸದಾ ಭಯದ ಛಾಯೆಯಲ್ಲೇ ಬದುಕುವ ಮನಸ್ಥಿತಿ ಸಂಕಟದಲ್ಲಿ ಸಿಲುಕಿಸಿ ಬಿಡುತ್ತದೆ.

ಒಬ್ಬ ವೈಜ್ಞಾನಿಕ ಮನೋಭಾವದ ಯುವಕನಿಗೆ ಆತನ ಸ್ನೇಹಿತರು, ಅಮಾವಾಸ್ಯೆಯ ಕಗ್ಗತ್ತಲ ರಾತ್ರಿಯಲ್ಲಿ ಸ್ಮಶಾನದ ಮಧ್ಯೆ ನೆಲದಲ್ಲಿ ಒಂದು ದೊಡ್ಡ ಮೊಳೆಯನ್ನು ಹೊಡೆದು ಬರಬೇಕೆಂದು ಪಂಥಾಹ್ವಾನ ನೀಡಿದರು. ಯುವಕ ಧೈರ್ಯ ಮತ್ತು ಉತ್ಸಾಹದಿಂದಲೇ ಸ್ಮಶಾನದ ಒಳಗೆ ಹೋದ. ಸ್ಮಶಾನದ ಹೊರಗೆ ಕಾಯುತ್ತಿದ್ದ ಸ್ನೇಹಿತರಿಗೆ ಮೊಳೆ ಹೊಡೆದ ಸದ್ದು ಕೇಳಿಸಿತು. ನಂತರ ಎಷ್ಟು ಹೊತ್ತಾದರೂ ಆತ ಹೊರಗೆ ಬರಲೇ ಇಲ್ಲ. ಬೆಳಗ್ಗೆ ಸೂರ್ಯೋದಯದ ನಂತರ ಸ್ನೇಹಿತರೆಲ್ಲ ಸ್ಮಶಾನದ ಒಳಗೆ ಹೋಗಿ ನೋಡಿದಾಗ ಆ ಯುವಕ ಶವವಾಗಿ ಮಲಗಿದ್ದ. ಪರಿಶೀಲಿಸಿದ ಅವರಿಗೆಲ್ಲ, ಹೀಗಾಗಲು ಕಾರಣ ಆ ಯುವಕನ ಉದ್ದನೆಯ ನಿಲುವಂಗಿ ಎಂದು ತಿಳಿಯಿತು. ಕತ್ತಲಲ್ಲಿ ನೆಲಕ್ಕೆ ಮೊಳೆ ಹೊಡೆಯುವಾಗ ತನ್ನ ಉದ್ದನೆಯ ಅಂಗಿಯ ತುದಿಯನ್ನು ಸೇರಿಸಿ ಮೊಳೆ ಹೊಡೆದಿದ್ದ ಆತ. ಇದು ಆತನ ಅರಿವಿಗೆ ಬಂದೇ ಇರಲಿಲ್ಲ. ಅಲ್ಲಿಂದ ಮೇಲೆ ಏಳಲು ಹೊರಟಾಗ ಯಾರೋ ತನ್ನ ಅಂಗಿಯನ್ನು ಗಟ್ಟಿಯಾಗಿ ಹಿಡಿದು ಎಳೆದಂತೆ ಭಾಸವಾಗಿ, ಭಯ ಬೀತನಾದ. ಪ್ರಯತ್ನ ಪಟ್ಟರು ಮೇಲೇಳಲಾಗುತ್ತಿಲ್ಲ, ಇದಕ್ಕೆ ಭೂತ ಚೇಷ್ಟೆಯೇ ಕಾರಣ ಎನ್ನುವ ನಂಬಿಕೆ ಅವನಲ್ಲಿ ಬಲವಾಯಿತು. ಭಯದ ತೀವ್ರತೆಯಿಂದ ಆತನ ಹೃದಯ ನಿಂತುಹೋಯಿತು.

ತನ್ನ ಅಂಗಿಯನ್ನು ಎಳೆಯುತ್ತಿರುವವರು ಯಾರು ಎಂದು ಒಮ್ಮೆ ಗಮನಿಸಿ ನೋಡಿದ್ದರೆ, ತನ್ನ ಭಯಕ್ಕೆ ಕಾರಣವನ್ನು ತಿಳಿಯುವ ಪ್ರಯತ್ನ ಮಾಡಿದ್ದರೆ, ಆತ ಬದುಕಿ ಉಳಿಯುತ್ತಿದ್ದ. ಭಯದ ಕಾರಣಗಳ ಮೂಲ ಸ್ವಭಾವವನ್ನು ತಿಳಿದು, ಅದರಿಂದ ಪರಾಗಲು ಯತ್ನಿಸಿದಾಗ ಭಯ ಮುಕ್ತರಾಗುವುದು ಸುಲಭ.

ಪುಸ್ತಕ ಲೋಕ



ನಮ್ಮ ದೇಶವು ಬಹು ಸಂಸ್ಕೃತಿಯ ದೇಶ. ಇಲ್ಲಿ ಎಲ್ಲರೂ ಸಹಬಾಳ್ವೆ ಮಾಡಬೇಕಾದ ಅನಿವಾರ್ಯತೆ ಇದೆ. ಹೀಗಾಗಿ ಸಂಸ್ಕೃತಿಗಳ ತೌಲನಿಕ ಅಧ್ಯಯನವೂ ಅನಿವಾರ್ಯ. ಇದು ಏಕೆ ಅನಿವಾರ್ಯ ಎಂಬುದನ್ನು ಚರ್ಚಿಸಿ, ಅಂತಹ ವ್ಯಾಖ್ಯೆ, ವ್ಯಾಖ್ಯಾನ ನೀಡಲು ಈ ಪುಸ್ತಕದಲ್ಲಿ ಪ್ರಯತ್ನಿಸಲಾಗಿದೆ. ಕ್ಲಿಷ್ಟ ಎನಿಸುವ ವಿಚಾರಗಳು ಹೆಚ್ಚು ಜನರಿಗೆ ಸುಲಭವಾಗಿ ಮತ್ತು ಸ್ಪಷ್ಟವಾಗಿ ಅರ್ಥವಾಗುವಂತೆ ಇಲ್ಲಿನ ಬರಹಗಳಿವೆ ಎಂದು ಬ್ಲರ್ಬ್ ತಿಳಿಸಿದೆ. ಈ ಪುಸ್ತಕವನ್ನು ಡಾ. ಅಜಕ್ಕಳ ಗಿರೀಶ್ ಭಟ್ ರಚಿಸಿದ್ದು, ಅಯೋಧ್ಯ ಪ್ರಕಾಶನ ಪ್ರಕಟಿಸಿದೆ.

ಹನಿ ಮಳೆ

ಯಾರ ಹೊಣೆ?

ಏನಾಗಿದೆ ಇಂದಿನ ಜನರಿಗೆ
ಮಾತೆತ್ತಿದರೆ ಕೊಲೆ ಸುಲಿಗೆ
ಮಾಜಿ ಪೊಲೀಸ್‌ಗೇ ಇಲ್ಲ ರಕ್ಷಣೆ
ಸಮಾಜದ ಸ್ವಾಸ್ಥ್ಯ ಯಾರ ಹೊಣೆ?

• ಕಿರಣ್ ಕೊಕ್ಕರ್ಣೆ

ಕನ್ನಡಕ್ಕಾಗಿ ಕಣ್ಣೀರಿಟ್ಟ ರಾಜ್‌ಕುಮಾರ್!

• ಬಿ.ಎಸ್. ಮನೋಹರ್

ಇಂದಿಗೆ ನಲವತ್ತಮೂರು ವರ್ಷಗಳ ಹಿಂದೆ, 1982ರಲ್ಲಿಡಾ. ರಾಜ್ ಕುಮಾರ್ ರವರ ನೇತೃತ್ವದಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯತೆ ನೀಡಬೇಕೆಂದು ಒತ್ತಾಯಿಸಿ ರಾಜ್ಯದಾದ್ಯಂತ ನಡೆದ ಗೋಕಾಕ್ ಚಳುವಳಿ, ಕರ್ನಾಟಕದ ನಾಡು-ನುಡಿಯ ರಕ್ಷಣೆಗಾಗಿ ನಡೆಸಿದ ಒಂದು ಐತಿಹಾಸಿಕ ಹೋರಾಟ. ಆ ಸಂದರ್ಭದಲ್ಲಿ ನಡೆದ ಪ್ರತಿಭಟನಾ ಸಭೆ ಹಾಗೂ ಮೆರವಣಿಗೆಗಳಲ್ಲಿ ಸಾಹಿತಿಗಳು, ಕಲಾವಿದರೊಂದಿಗೆ ಜನಸಾಮಾನ್ಯರು ಪಾಲ್ಗೊಳ್ಳುತ್ತಿದ್ದರು. ನಮ್ಮ 'ಕನ್ನಡ ಜಾಗೃತಿ' ಎಂಬ ಸಾಕ್ಷ್ಯಚಿತ್ರದಲ್ಲಿ ಆ ಐತಿಹಾಸಿಕ ಚಳುವಳಿಯ ನೇರ ಚಿತ್ರೀಕರಣವಿದೆ. ಇದು ಆ ಚಳುವಳಿಯ ಏಕಮೇವ ಸಾಕ್ಷ್ಯಚಿತ್ರ ಎಂಬ ಹೆಗ್ಗಳಿಕೆಯನ್ನು ಪಡೆದಿದೆ.

ಡಾ. ರಾಜ್‌ಕುಮಾರ್ ಅವರು ಗೋಕಾಕ್ ಚಳವಳಿಯ ಅಂಗವಾಗಿ 18.5.1982ರಂದು ಮೈಸೂರಿನಲ್ಲಿ ಭಾಷಣ ಮಾಡಿದಾಗ, ಅದನ್ನು ವಿಡಿಯೋ ಚಿತ್ರೀಕರಣ ಮಾಡುತ್ತಿದ್ದ ಲೇಖಕರ ಆತ್ಮೀಯ ಅನುಭವ ಇಲ್ಲಿದೆ.

ಮೇ 18, 1982. ಸಮಯ ಬೆಳಗ್ಗೆ 11 ಗಂಟೆ. ಸ್ಥಳ: ಪುರಸಭೆ ಮೈದಾನ, ಮೈಸೂರು. ಶಾಲೆಗಳಲ್ಲಿ ಕನ್ನಡ ಭಾಷೆಗೆ ಪ್ರಮುಖ ಸ್ಥಾನ ದೊರೆಯಲು 'ಗೋಕಾಕ್ ವರದಿ'ಯನ್ನು ಜಾರಿಗೆ ತರಲು ಸರಕಾರವನ್ನು ಒತ್ತಾಯಿಸಿ ಎಲ್ಲೆಡೆ ನಡೆಯುತ್ತಿದ್ದ ಆಂದೋಲನಕ್ಕೆ ಡಾ. ರಾಜ್ ಬಂದು ಸೇರಿದ್ದು ಬಹುದೊಡ್ಡ ಬಲವನ್ನು ಒದಗಿಸಿತು. ಕರ್ನಾಟಕದ ಉದ್ದಗಲಕ್ಕೂ ಸಂಚಾರ ಮಾಡಿ, ಸಭೆಗಳನ್ನು ನಡೆಸಿ, ಡಾ. ರಾಜ್ ಮೇ 18, 1982ರಂದು ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಬಂದರು. ಸಾವಿರಾರು ಜನ ಸೇರಿದ್ದ ಆ ಸಭೆಗೆ, ಬಿಳಿ ಪಂಚೆ ಹಾಗೂ ಶರ್ಟ್ ಧರಿಸಿದ್ದ ರಾಜ್, ನಡೆದು ಬಂದು ಎಲ್ಲರ ಕಡೆಗೂ ಕೈಬೀಸಿದಾಗ, ನೆರೆದಿದ್ದ ಜನರಲ್ಲಿ ರೋಮಾಂಚನ! 'ಗೋಕಾಕ್ ವರದಿ ಜಾರಿಗೆ ಬರಲಿ' ಎಂಬ ಘೋಷಣೆ ಮುಗಿಲು ಮುಟ್ಟಿತು.

ಅಂದಿನ ಆ ಬೃಹತ್ ಸಭೆಯಲ್ಲಿ ಕನ್ನಡ ಚಿತ್ರರಂಗದ ದಿಗ್ಗಜರ ಹಾಗೂ ಕಲಾವಿದರ ದಂಡೇ ರಾಜ್‌ರನ್ನು ಹಿಂಬಾಲಿಸಿತ್ತು. ವಿಷ್ಣುವರ್ಧನ್, ಅನಂತನಾಗ್, ಶಂಕರ್ ನಾಗ್, ಎಂ.ಪಿ. ಶಂಕರ್, ಅಶ್ವತ್, ಲೋಕನಾಥ್, ರಾಜೇಶ್, ಲೋಕೇಶ್, ತೂಗುದೀಪ, ದ್ವಾರಕೀಶ್, ಅಶೋಕ್, ಪ್ರಭಾಕರ್, ಪಾಟೀಲ್ ಪುಟ್ಟಪ್ಪ, ತರಾಸು, ಚಿದಾನಂದ ಮೂರ್ತಿ ಸೇರಿದಂತೆ ಅನೇಕ ಖ್ಯಾತನಾಮರು ಭಾಗವಹಿಸಿದ್ದರು.

ಆಗಮಿಸಿದ್ದ ಗಣ್ಯರೆಲ್ಲಾ ಕೆಲವೇ ಶಬ್ದಗಳಲ್ಲಿ, ಗೋಕಾಕ್ ಚಳುವಳಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಚಳುವಳಿಯ ಪ್ರಮುಖ ಬೇಡಿಕೆಯಾದ ಕನ್ನಡ ಭಾಷೆಗೆ ಪ್ರಾಮುಖ್ಯತೆ ಸಿಗುವವರೆಗೂ ಹೋರಾಟ ಮುಂದುವರಿಸುವುದಾಗಿ ಘೋಷಿಸಿದರು.

ವರನಟನ ಕಣ್ಣಲ್ಲಿ ಕಂಬನಿ

ಕೊನೆಗೆ ಸಭೆಯನ್ನು ಉದ್ದೇಶಿಸಿ ಮಾತನಾಡಲು ಡಾ.ರಾಜ್ ಎದ್ದುನಿಂತರು. ವೇದಿಕೆಯ ಮೇಲಿದ್ದ ನಾನು, ಸೂಪರ್ 8 ಮಿ.ಮಿ. ಕ್ಯಾಮರಾದಲ್ಲಿ ಆ ಕಾರ್ಯಕ್ರಮವನ್ನು ಚಿತ್ರೀಕರಿಸುತ್ತಿದ್ದೆ. ಮಾತನಾಡಲು ಎದ್ದು ನಿಂತ ಡಾ: ರಾಜ್, ಕೆಲ ಕ್ಷಣ ಏನೂ ಮಾತನಾಡದೆ ಹಾಗೇ ನಿಂತುಬಿಟ್ಟರು. ತಮ್ಮ ನಾಡಿನಲ್ಲಿಯೇ ಕನ್ನಡ ತಾಯಿಗೆ ಒದಗಿರುವ ದುರ್ಗತಿಯನ್ನು

ಕೈಯಲ್ಲಿದ್ದ ಕರ್ಚೀಫಿನಿಂದ ಮುಖವನ್ನು ಮುಚ್ಚಿಕೊಂಡು ರಾಜ್, ಕಣ್ಣೀರು ಸುರಿಸತೊಡಗಿದರು. ಅದನ್ನು ನೋಡಿದ ಹತ್ತಿರದಲ್ಲಿದ್ದ ನಾವೆಲ್ಲರೂ ಕ್ಷಣಕಾಲ ದಿಗ್ಭ್ರಾಂತರಾದೆವು. ಎರಡು ನಿಮಿಷಗಳ ತರುವಾಯ ರಾಜ್ ಕುಮಾರ್ ಸುಧಾರಿಸಿಕೊಂಡು, ಮಾತಾಡ ತೊಡಗಿದರು. 'ಕನ್ನಡ ನೆನೆದು ನನಗೆ ಅತೀವ ದುಃಖವಾಗಿದೆ' ಎಂದು ನೋವಿನಿಂದ ಹೇಳಿದ ರಾಜ್, ತಮ್ಮ ದೇಹದಲ್ಲಿ ಉಸಿರಿರುವವರೆಗೂ ತಾಯಿ ಕನ್ನಡಾಂಬೆಗೆ ಅಗ್ರ ಸ್ಥಾನ ದೊರಕಿಸಿಕೊಡಲು ತಾವು ಹೋರಾಡುವುದಾಗಿ ಘೋಷಣೆ ಮಾಡಿದರು. ಆ ಅಮೂಲ್ಯ ಕ್ಷಣಗಳನ್ನು ನಾನು ದಾಖಲಿಸಿದ್ದು, ನನ್ನ ಜೀವನದ ಒಂದು ಅವಿಸ್ಮರಣೀಯ ಅನುಭವ.

ಕರ್ನಾಟಕದ ಉದ್ದಗಲಕ್ಕೂ ತಾವು ಕೈಗೊಂಡ ಜಾಥಾದ ಕೆಲವು ವಿಶಿಷ್ಟ ಅನುಭವಗಳನ್ನು ರಾಜ್ ಹಂಚಿಕೊಂಡರು. ಅವರು ಭಾಗವಹಿಸುತ್ತಿದ್ದ ಎಲ್ಲಾ ಸಭೆಗಳಲ್ಲಿಯೂ ಪ್ರೇಕ್ಷಕರ ಕೋರಿಕೆಯ ಮೇರೆಗೆ ತಮ್ಮ ಜನಪ್ರಿಯ ಗೀತೆ, ನಾನಿರುವುದೆ ನಿಮಗಾಗಿ ..... ಹಾಡನ್ನು ಹಾಡುತ್ತಿದ್ದರು. ಅಂದೂ ಕೂಡ ತಮ್ಮ ಮಾತಿನ ಕೊನೆಯಲ್ಲಿ ಹಾಡಿದ ಆ ಚಿತ್ರಗೀತೆಯನ್ನು ಕೇಳುತ್ತಾ ಅಲ್ಲಿದ್ದ ಸಾವಿರಾರು ಕನ್ನಡಿಗರು ದೀರ್ಘ ಕರತಾಡನದೊಂದಿಗೆ ಸಂಭ್ರಮಿಸಿದರು.

ಈ ಘಟನೆಯಾದ ಕೆಲವು ವಾರಗಳ ನಂತರ ಗೋಕಾಕ್ ಚಳುವಳಿಯ ಕೆಲವು ಪ್ರಮುಖ ಬೇಡಿಕೆಗಳನ್ನು ಅಂದಿನ ಗುಂಡೂರಾವ್ ನೇತೃತ್ವದ ಸರ್ಕಾರ ಅಂಗೀಕರಿಸಿದೆ ಎಂಬ ಅಧಿಕೃತ ಘೋಷಣೆಯಾದದ್ದು ಇತಿಹಾಸ.

ಚಿತ್ರ : ಡಾ. ರಾಜ್‌ಕುಮಾರ್ ಜತೆ ಲೇಖಕರು



ನಿಸ್ವಾರ್ಥ ಸೇವೆಯೇ ಗುರಿಯಾಗಲಿ

ಅಕ್ಕಿಯೊಳಗನ್ನವನು ಮೊದಲಾರು ಕಂಡವನು
ಅಕ್ಕರದ ಬರಹಕ್ಕೆ ಮೊದಲಿಗನದಾರು
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ !
ದಕ್ಕುವುದೆ ನಿನಗೆ ಜಸ

– ಮಂಕುತಿಮ್ಮ॥

ಭತ್ತವನ್ನು ಬೆಳೆದು, ಭತ್ತದಿಂದ ಅಕ್ಕಿಯನ್ನು ತಗೆದು, ಆ ಅಕ್ಕಿಯಿಂದ ಅನ್ನವನು ತಯಾರಿಸುವುದನ್ನು ಕಂಡುಹಿಡಿದವರಾದರೂ ಯಾರು? ನಮ್ಮ ಜೀವನಕ್ಕಾಧಾರವಾದ ಅಕ್ಷರಗಳನ್ನಾದರೂ ಕಂಡು ಹಿಡಿದವರಾದರೂ ಯಾರು? ಈ ಜಗತ್ತಾದರೂ ಈ ಪುಣ್ಯಕಾರ್ಯ ಮಾಡಿದ ಬಂಧುಗಳ ಹೆಸರನ್ನೇನಾದರೂ ಲೆಕ್ಕವಿರಿಸಿಕೊಂಡು ನೆನಸುತ್ತದೆಯೇ ? ಜೀವನಾಧಾರವಾದ ಅನ್ನ ಮತ್ತು ಅಕ್ಷರಗಳನ್ನು ಕಂಡು ಹಿಡಿದವರ ಹೆಸರನ್ನೇ ಈ ಜಗತ್ತು ಲೆಕ್ಕದಲ್ಲಿರಿಸಿಕೊಂಡಿಲ್ಲ ಎಂದ ಮೇಲೆ ನಾವೂ ನೀವು ಮಾಡುವ ಕೆಲಸಗಳನ್ನು ಈ ಜಗತ್ತು ನೆನಸುತ್ತದೆಯೇ ಇಲ್ಲ. ಆದುದರಿಂದ ಜಗತ್ತು ನಿನ್ನನ್ನು ನೆನಸಿಕೊಳ್ಳಲಿ ಅಥವಾ ನೆನಸದೆ ಇರಲಿ ನಿನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನೀನು ಮಾಡುವುದು ಒಳಿತು.

ಮಾನವನ ಬುದ್ಧಿಮತ್ತೆ ಬೆಳೆದಂತೆಲ್ಲಾ, ಹೊಸ ಹೊಸ ಆವಿಷ್ಕಾರಗಳನ್ನೂ, ಹೊಸ ಪ್ರಯತ್ನಗಳಮೂಲಕ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾನೆ. ಈ ಪ್ರಯೋಗಗಳು ಸಫಲತೆಯಾದಾಗ ಹೊಸ ಅವಿಷ್ಕಾರಗಳನ್ನು ತನ್ನ ಹೆಸರಲ್ಲಿ ನೊಂದಾಯಿಸಿಬಿಡುತ್ತಾನೆ. ಆದರೆ, ಈ ಅವಿಷ್ಕಾರಗಳು ನಡೆಯುವ ಮುನ್ನವೂ ಸಹ ಈ ಜಗತ್ತಿನ ಜನರು ಜೀವನ ಮಾಡಿದ್ದಾರೆ ಜೊತೆಗೆ ಅವುಗಳು ಇಲ್ಲದಿದ್ದರೂ ಜೀವನ ಮಾಡುತ್ತಾರೆ. ಆದರೆ ಅನ್ನವಿಲ್ಲದೆ ಜೀವನ ನಡೆಸಲು ಸಾಧ್ಯವೇ ? ಸಾಧ್ಯವೇ ಇಲ್ಲ. ಭತ್ತದಿಂದ ಅಕ್ಕಿಯನ್ನು ತಗೆದು, ಅಕ್ಕಿಯನ್ನು ನೀರಿನೊಂದಿಗೆ ಬೆರೆಯಿಸಿ, ಅದನ್ನು ಬೇಯಿಸಿದಾಗ ದೊರಕುವ ಅನ್ನವು ನಮಗೆ ದೇವರಾಗಿ ಅದನ್ನು ಸೇವಿಸಿದಾಗ ಅದು ಈ ದೇಹದಲ್ಲಿ ಪಚನಕ್ರಿಯೆಯೊಂದಿಗೆ ಪಿಷ್ಟವನ್ನು ನೀಡಿ ಸಲಹುತ್ತದೆ. ಈ ಜೀವನಾಧಾರವಾದ ಅನ್ನವನು ಮೊದಲಿಗೆ ಯಾರು ಕಂಡು ಹಿಡಿದವರು? ಗೊತ್ತಿಲ್ಲ. ನಾವು ಕಲಿತಿರುವ ಅಕ್ಷರಗಳನ್ನಾದರೂ ಯಾರು ಕಂಡು ಹಿಡಿದವರು ಎಂದರೆ ಅದಕ್ಕೂ ಸಹ ನಮ್ಮ ಉತ್ತರ 'ಗೊತ್ತಿಲ್ಲ' ಎಂಬುದೇ ಆಗಿರುತ್ತದೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಈ ಅನ್ನ ಮತ್ತು ರನ್ನಗಳನ್ನು ಕಂಡು ಹಿಡಿದವರು ಹೆಸರೇ ಅರಿಯದ ನಮ್ಮ ಆದಿಬಂಧುಗಳೇ ಆಗಿದ್ದರೂ ಅವರ ಹೆಸರು ನಮಗೆ ಗೊತ್ತಿಲ್ಲ ಏಕೆಂದರೆ ವ್ಯವಸ್ಥೆಯಾದರೂ ಅವರುಗಳ ಹೆಸರನ್ನು ಈ ಜಗತ್ತಿನಲ್ಲಿ ನಮೂದಿಸದ ಕಾರಣ ಅನ್ನ - ರನ್ನ ವನ್ನು ಕಂಡು ಹಿಡಿದವರು ಯಾರು ಎಂದು ನಮಗೆ ತಿಳಿದಿಲ್ಲ. ಇಂತಹ ಮಹಾತ್ಕಾರ್ಯ ಮಾಡಿ ಹೆಸರನ್ನು ನಮೂದಿಸದೆ ಜಗತ್ತಿಗೆ ಕೊಡುಗೆ ಕೊಟ್ಟು ನಮ್ಮ ಜೀವನವನ್ನು ಪಾವನ ಮಾಡಿರುವ ವ್ಯಕ್ತಿಗಳ ಹೆಸರುಗಳೇ ಈ ಜಗತ್ತಿನಲ್ಲಿ ಅಚ್ಚೊತ್ತಿಲ್ಲ, ನೆನಪಿಲ್ಲ, ಗೊತ್ತಿಲ್ಲ ಎನ್ನುವುದಾದರೆ ಇನ್ನು ನಾನೂ ಹಾಗೂ ನೀವು ಮಾಡುವ ಕಾರ್ಯಗಳನ್ನು ಈ ಜಗತ್ತು ನೆನಪಿಸುತ್ತದೆಯೇ? ಖಂಡಿತವಾಗಿಯೂ ಇಲ್ಲ. ಆದುದರಿಂದ ಈ ಜಗತ್ತು ನೆನಸಲಿ, ನೆನಸದೆ ಇರಲಿ ಮಹಾತ್ಕಾರ್ಯಗಳನ್ನು ಉತ್ತಮ ಗುರಿಗಳೊಂದಿಗೆ ನೀನು ಮಾಡುತ್ತಲೇ ಇರು ಎಂಬುದೇ ಈ ಪದ್ಯದ ಹೂರಣವೆನಿಸುತ್ತದೆ.

ಪ್ಯಾರಿಸ್ ಪಾಣಿನಿ?

• ಕೆ.ಎಸ್.ಸೋಮೇಶ್ವರ

ಇದೇನು, ಆ ಮೋಜುಗಾರರ ಸ್ವರ್ಗ ಎನಿಸಿಕೊಂಡಿರುವ ಪ್ಯಾರಿಸ್ ಎಲ್ಲಿ, ನಮ್ಮ ಒಬ್ಬ ಪ್ರಕಾಂಡ ಪಂಡಿತ ಪಾಣಿನಿ ಎಲ್ಲಿ ಎಂದು ಬೆರಗು ಪಡಬೇಡಿ. ನಾನು ಹೇಳ ಹೊರಟಿರುವುದು 'ಪ್ಯಾರಿಸ್ ಪನಿನಿ' ಎಂಬ ಬ್ರೆಡ್ ಟೋಸ್ಟ್ ಕುರಿತು.

ಇದೊಂದು ತಿಂಡಿ ಮನೆ. ವಿವಿಧ ರೀತಿಯ ಬ್ರೆಡ್ ಟೋಸ್ಟ್, ಬರ್ಗರ್ ಇಲ್ಲಿದೆ. ಇದನ್ನು ಮೊದಲಿಗೆ ನಮ್ಮ ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿ ಕಂಡಿದ್ದೆ. ಈಗ ಅದರ ಕೊಂಡಿ ಇಲ್ಲಿ ಜೆ.ಪಿ ನಗರಕ್ಕೂ ಬೆಳೆದಿದೆ; ನಿಮಗೆ ಬೇಕೆನಿಸಿದರೆ, ಆನ್‌ಲೈನ್ ಆರ್ಡರ್ ಸಹ ಮಾಡಬಹುದು! ಇಂದು ಅದೊಂದು ಗಲ್ಲಿಯಲ್ಲಿ ವಸ್ತ್ರಗಳ ಅಂಗಡಿ ಕಂಡೆ. ಅದರ ಹೆಸರು ನ್ಯೂಯರ್ಕ್ ಫ್ಯಾಷನ್. ಎಂತಹ ವಿಪರ್ಯಾಸ. ಪ್ಯಾರಿಸ್, ನ್ಯೂಯಾರ್ಕ್ ಮೊದಲಾದ ಹೆಸರುಗಳು ನಮ್ಮ ಊರಿನ ಬೀದಿಗಳಲ್ಲಿ! ನನ್ನ ಸ್ನೇಹಿತರೊಬ್ಬರು ಸಿಡ್ನಿಯಲ್ಲಿ ರಜಾ ಕಳೆಯಲು ಹೋಗಿದ್ದಾರೆ. ಅಲ್ಲೊಂದೆಡೆ ಅಂಗಡಿಗೆ ಹೋದಾಗ ಅಲ್ಲೊಂದು ಒಳ್ಳೆಯ ಗುಣಮಟ್ಟದ ಅಂಗಿ ಕಂಡರಂತೆ. ಅದನ್ನು ನವಿರಾಗಿ ಸವರಿ ಅದರ ಮೂಲ ಹುಡುಕಿದಾಗ ಮೇಡ್ ಇನ್ ಇಂಡಿಯಾ ಆಗಿತ್ತಂತೆ. ಇಲ್ಲಿ ಡಾಲರ್‌ನಲ್ಲಿ ಎಣಿಸಿ ಕೊಳ್ಳುವ ಬದಲು ನಮ್ಮೂರಿನಲ್ಲೇ ರುಪಾಯಿ ರಾಜಾ ಅಗುವ ಅಂತ ಹೊರ ಬಂದರಂತೆ. ಪ್ಯಾರಿಸ್ ಪನಿನಿ ನಮ್ಮೂರಲ್ಲಿ ಇದ್ದಂತೆ, ಮೇಡ್ ಇನ್ ಇಂಡಿಯಾ ಬೇರೆ ದೇಶಗಳಲ್ಲೂ ಇದೆ!

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ತಿಳಿಯಲು ಕಠಿಣವಾದ (3)
3. ಗಾಳಿ, ಬೆಳಕು ಬರಲು ಮಾಡಿದ ಕಿಟಕಿ (4)
5. ಹೀಯಾಳಿಸು ಅಥವಾ ತಿರಸ್ಕರಿಸು (4)
6. ಒಂದು ಬಗೆಯ ವಾದ್ಯ (3)
7. ಅಸಮಾಧಾನ (4)
9. ಸಲೀಸಾದ ಅಥವಾ ಸರಾಗ (3)
11. ಎರಡಕ್ಷರದ ಸೂರ್ಯ (2)
13. ತಿರುಗಿ ಬಂದಿರುವ ಶರ (2)
15. ನೀರು ತುಂಬಿದ ಕೊಡ (3)
17. ಘಟ್ಟ ಹತ್ತಿದರೂ ಬಿಡದ ಹುಟ್ಟುಗುಣ (4)
19. ಮತ್ತೊಂದು ಸೊಕ್ಕಿನೊಂದಿಗೆ ಬಂದಿರುವ ದೊಡ್ಡ ಕೆರೆ (3)
20. ಕೈಮುಗಿದು ಮಾಡುವ ವಂದನೆ (4)
21. ಸುಂದರವಾದ ಕಣ್ಣು ಆ ಕಡೆಯಿಂದ ಬಂದಿದೆ (4)
22. ಸತ್ತವರಿಗೆ ಕಟ್ಟುವ ಸ್ಮಾರಕ (3)

ಮೇಲಿಂದ ಕೆಳಕ್ಕೆ

2. ದಾಖಲೆ ಮಾಡಿಕೊಳ್ಳು (4)
3. ಅಷ್ಟ ಸರ್ಪಗಳಲ್ಲಿ ಒಂದು (3)
4. ನರಿಯ ನಡುವೆ ಸಿಲುಕಿದ ದೊಡ್ಡ ಭೇರಿ (3)
6. ಸರದ ನಡುವೆ ಸಲುಗೆ (3)
8. ಸೂರ್ಯನ ರಶ್ಮಿ (3)
10. ಪುಸ್ತಕ ಓದಿದ ಶಿರ (3)
12. ಮತ್ತೊಂದು ಗೆಲುವು (3)
14. ಮದುಮಕ್ಕಳ ಹಣೆಗೆ ತೊಡಿಸುವ ಆಭರಣ (3)
16. ಪರಸ್ಪರ ಇರಬೇಕಾದ ಹೊಂದಾಣಿಕೆ (4)
17. ಅಸ್ತವ್ಯಸ್ತವಾಗಿ ಬಂದಿರುವ ಜನಕರಾಜನ ಮಗಳು (3)
18. ಸತ್ಯ ಅಥವಾ ದಿಟ ಎಂದರ್ಥ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಗಹನ 3. ವಾತಾಯನ 5 ಮೂದಲಿಸು 6. ಸನಾದಿ 7. ಕಿರಿಕಿರಿ 9. ಸುಗಮ 11.ರವಿ 13. ಣಬಾ 15. ಕಳಸ 17. ಜಾಯಮಾನ 19. ಮದಗ 20. ನಮಸ್ಕಾರ 21. ನಚಲೋಸು 22. ಸಮಾಧಿ

ಮೇಲಿಂದ ಕೆಳಕ್ಕೆ: 2. ನಮೂದಿಸು 3. ವಾಸುಕಿ 4. ನಗಾರಿ 6. ಸದರ 8. ಕಿರಣ 10. ಮಸ್ತಕ 12. ವಿಜಯ 14. ಬಾಸಿಂಗ 16. ಸಮರಸ 17. ಜಾಕಿನ 18. ನನಸು

ಶತಪದಿ ಹುಳದ ನೂರು ಕಾಲುಗಳ ಲೆಕ್ಕ

ಶತಪದಿ ಹುಳವೊಂದು (ಒನಕೆ ಹುಳ) ತನ್ನ ಪಾಡಿಗೆ ತಾನು ನೆಡೆದು ಹೋಗುತ್ತಿತ್ತು. ಒಂದು ಮೊಲ ಅದನ್ನು ನೋಡಿತು, ಅದಕ್ಕೆ ಆಶ್ಚರ್ಯವಾಯಿತು . ಅಬ್ಬಾ ಇದಕ್ಕೆ ನೂರು ಕಾಲು,ನೆಡೆಯುವಾಗ, ಯಾವ ಕಾಲನ್ನು ಮೊದಲಿಡುವುದು,ನಂತರ ಯಾವುದನ್ನು ಇಡುವುದು, ಹೀಗೆ ನೂರು ಕಾಲನ್ನು ಹೇಗೆ ಸಂಭಾಳಿಸುವುದು ಎಂದು. 'ಏ ಒನಕೆ ಹುಳವೇ ಸ್ವಲ್ಪ ನಿಲ್ಲು , ನಿನಗೆ ನೂರು ಕಾಲು ಇದೆಯಲ್ಲಾ ,ಇದನ್ನು ನೀನು ಹೇಗೆ ಸಂಭಾಳಿಸಿಕೊಂಡು ನೆಡೆಯುತ್ತಿರುವೆ? ಮೊದಲು ಯಾವ ಕಾಲನ್ನು ಇಡುವೆ, ಆಮೇಲೆ ಯಾವ ಕಾಲು ಇಡುವೆ, ನನಗಂತೂ ಇದನ್ನು ಯೋಚನೆ ಮಾಡಿದರೇ ತಲೆ ಕೆಡುತ್ತಿದೆ' ಎಂದು ಮೊಲ ಹೇಳಿತು.

ಪಾಪ, ಒನಕೆ ಹುಳಕ್ಕೆ ಇದುವರೆಗೂ ಈ ಯೋಚನೆಯೇ ಬಂದಿರಲಿಲ್ಲ. ತನ್ನ ಪಾಡಿಗೆ ತಾನು ಓಡಾಡುತ್ತಿತ್ತು,ಒಮ್ಮೆ ಬಾಗಿ ತನ್ನನ್ನೇ ತಾನು ನೋಡಿಕೊಂಡು ಅದಕ್ಕೂ ಗಾಬರಿಯಾಯಿತು. ನೂರು ಕಾಲೇ ನನಗಂತೂ ಅದನ್ನು ಎಣಿಸಲಿಕ್ಕೂ ಬರುವುದಿಲ್ಲ, ಇದು ನನಗೆ ಗೊತ್ತೇ ಇರಲಿಲ್ಲ , ಈಗ ನೀನು ಹೇಳಿದ್ದಕ್ಕೇ ನನಗೆ ಗೊತ್ತಾಗಿದ್ದು, ಇದನ್ನೆಲ್ಲಾ ,ಚೆನ್ನಾಗಿ ಯೋಚಿಸಿ ನಿನಗೆ ಆಮೇಲೆ ತಿಳಿಸುತ್ತೇನೆ ಎಂದು ಹೇಳಿತು.

ಮೊಲ ಹೇಳಿದ ವಿಷಯವನ್ನೇ ಚಿಂತಿಸುತ್ತಾ ಶತಪದಿ ನೆಡೆಯಲು ಹೋಯಿತು, ಕಸಿವಿಸಿಯಾಗಿ ಮುಗ್ಗರಿಸಿ ಬಿದ್ದು ಬಿಟ್ಟಿತು. ನೂರು ಕಾಲನ್ನು ಸಂಬಾಳಿಸಿಕೊಂಡು ನಡೆಯುವುದು ಸುಲಭವೇ? ಅದನ್ನು ಯೋಚಿಸಿ, ಹೆಜ್ಜೆ ಹೆಜ್ಜೆಗೂ ಬೀಳುತ್ತಿದೆ.

ಕಡೆಗೆ ಬಳಲಿ ಬೆಂಡಾಗಿ ಹೇಳಿತು, ಅಯ್ಯೋ ದುಷ್ಟ ಮೊಲವೇ ನನಗೆ ನೀನು ಎಂಥಹ ಕಷ್ಟ ತಂದು ಬಿಟ್ಟೆ, ನನಗಿನ್ನು ನಡೆಯಲು ಆಗದು, ನೂರು ಕಾಲುಗಳ ಪ್ರಶ್ನೆ ಭೂತದಂತೆ ಕಾಡುತ್ತಿದೆ ಎಂದು ಒಂದೆಡೆ ಸುರುಳಿ ಸುತ್ತಿಕೊಂಡು ಕೂತಿತು, ನಂತರ ಹೊಟ್ಟೆ ಹಸಿಯಲು ಸುರುಳಿ ಬಿಚ್ಚಿ ಸೆಟೆದು ಮೊಲ ಹೇಳಿದ ನೂರು ಕಾಲುಗಳ ವಿಷಯವನ್ನು ಮರೆತು ಹಿಂದಿನಂತೆ ನೆಡೆಯತೊಡಗಿತು.

ಇದು ಮನುಷ್ಯನ ಬುದ್ಧಿಗೆ ಸಂಬಂಧ ಪಟ್ಟ ವಿಚಾರ. ಅವರಪಾಡಿಗೆ ಅವರು ಹೇಗೋ ಇದ್ದ ಮನುಷ್ಯರಿಗೆ, ಮೊಲ ಮಾಡಿದ ಹಾಗೆ ಇಲ್ಲ ಸಲ್ಲದ ವಿಚಾರಗಳನ್ನು ಅವರ ತಲೆಯಲ್ಲಿ ತುರುಕಿ, ಚಿಂತೆಯಿಂದ ಒದ್ದಾಡುವ ಹಾಗೆ ಮಾಡುವುದು ಮನುಷ್ಯನ ಗುಣ. ಯಾವ ವಿಚಾರವಾಗಿ ಯಾದರೂ ಚಿಂತೆ ಶುರುವಾಯಿತೆಂದರೆ, ಭೂತದ ರೀತಿಯಲ್ಲಿ ನಮ್ಮನ್ನು ಕಾಡುವುದು. ಒನಕೆ ಹುಳವೇನೋ ಅದರಿಂದ ಬಿಡಿಸಿಕೊಂಡಿತು, ಆದರೆ ಮನುಷ್ಯ ಚಿಂತೆಯಿಂದ ಹೊರಬರುವುದು ಬಹಳ ಕಷ್ಟ.

ಬದುಕಿನಲ್ಲಿ ಎಲ್ಲಾ ಚೆನ್ನಾಗಿಯೇ ನಡೆಯುತ್ತಿರುತ್ತದೆ. ಆದರೂ ಕೆಲವರು ಅನಗತ್ಯವಾಗಿ ಇಲ್ಲ ಸಲ್ಲದ ದೂರುಗಳನ್ನು ಹೇಳಿಕೊಳ್ಳುತ್ತ ಒಡಾಡುವುದು, ಏನು ಇಲ್ಲದೆ ಮುಗ್ಗರಿಸಿ ಬಿದ್ದ ಶತಪದಿ ಹುಳುವಿನ ಕಥೆಯಂತೆ. ಯಾರ ಬದುಕು ಕೂಡ ಸಂಪೂರ್ಣವಾಗಿ ಚಿಂತೆಗಳಿಂದ ಮುಕ್ತವಾಗಿರುವುದಿಲ್ಲ. ಎಲ್ಲಿಯವರೆಗೆ ನಾವು ಚಿಂತೆಗಳ ಬಗ್ಗೆ ಗಮನಹರಿಸುತ್ತೇವೆ ಅಲ್ಲಿ ನೂರಾಒಂದು ಚಿಂತೆಗಳು ಹುಟ್ಟಿಕೊಳ್ಳುತ್ತವೆ. ನಾವು ಅದರ ಬದಲು ನಮ್ಮ ಬದುಕಿನಲ್ಲಿರುವ ಒಳಿತಿನ ಬಗ್ಗೆ ಹೆಚ್ಚು ಮಾತನಾಡುತ್ತಾ ಯೋಚಿಸುತ್ತಾ ಕಾಲ ಕಳೆದರೆ ಒಳ್ಳೆಯ ವಿಚಾರಗಳು ಮತ್ತಷ್ಟು ಹೆಚ್ಚಾಗುತ್ತಾ ಹೋಗುತ್ತದೆ.

ನಮಗೆ ಸಮಸ್ಯೆ ಎನಿಸುವ ಕೆಲವು ವಿಚಾರಗಳು ಬೇರೆಯವರಿಗೆ ವಿಷಯವೇ ಅಲ್ಲ. ಸರಿಯಾಗಿ ಮತ್ತೊಬ್ಬರ ಕಷ್ಟಗಳನ್ನು ನೋಡಿದಾಗ ನಮ್ಮ ಅರ್ಧ ಸಮಸ್ಯೆಗಳು ನಾವೇ ಸೃಷ್ಟಿಸಿಕೊಂಡ ತಲೆನೋವುಗಳು ಎಂದು ಅರ್ಥವಾಗುತ್ತದೆ. ಅವುಗಳ ಬಗ್ಗೆ ಅನಗತ್ಯವಾಗಿ ತಲೆಕೆಡಿಸಿಕೊಳ್ಳುವುದು ಕಡಿಮೆಯಾಗುತ್ತದೆ. ಬದುಕನ್ನು ಬಂದ ಹಾಗೆ ಸ್ವೀಕರಿಸುತ್ತಾ, ಎದುರಾದ ಚಿಕ್ಕಪುಟ್ಟ ಸಮಸ್ಯೆಗಳನ್ನು ಅಲ್ಲೇ ಪರಿಹರಿಸಿಕೊಳ್ಳುತ್ತಾ ಮುಂದೆ ಸಾಗಿದರೆ ಈಗ ಇರುವ ಅರ್ಧ ತಲೆನೋವುಗಳು ಇರುವುದೇ ಇಲ್ಲ.

ಆದ್ದರಿಂದಲೇ ಹೆಚ್ಚು ಯೋಚಿಸದೆ ಒಂದೊಂದೇ ದಿನವನ್ನು ಚಂದವಾಗಿಸಿಕೊಳ್ಳುತ್ತಾ ಬದುಕಿ ಬಿಡೋಣ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV
Special
ಯೂಟ್ಯೂಬ್
ಚಾನೆಲ್‌ನಲ್ಲಿ

ಇವನೇ ಅವನು ಎಂಬ ಮಂತ್ರ

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಭಗವಂತನಾಗಿ ಬಂದ ಕೃಷ್ಣ ಹೇಳುತ್ತಾನೆ : ನನ್ನನ್ನು ಎಲ್ಲೆಡೆ ನೋಡುವ ಹಾಗೂ ಎಲ್ಲವನ್ನೂ ನನ್ನಲ್ಲಿ ನೋಡುವ ವ್ಯಕ್ತಿ ನನ್ನಿಂದ ಬೇರೆಯಾಗಿರುವುದಿಲ್ಲ ಹಾಗೂ ನಾನು ಅವನಿಂದ ಬೇರೆಯಾಗಿರುವುದಿಲ್ಲ. (6.30) ಈ ಶ್ಲೋಕವು ಭಕ್ತಿ ಯೋಗದ ತಳಹದಿಯಾಗಿದೆ. ಇಲ್ಲಿ ಸಾಧಕರು ಎಲ್ಲ ಕಡೆ ಹಾಗೂ ಎಲ್ಲಾ ಸಮಯದಲ್ಲಿ ಪರಮಾತ್ಮನನ್ನು ನೋಡುತ್ತಾರೆ.

ಈ ಇವನೇ ಅವನು ಎಂಬ ಮಂತ್ರದಲ್ಲಿ 'ಇವನೇ' ಎಂಬುದು ಯಾವುದೇ ವ್ಯಕ್ತಿ ಅಥವಾ ಪ್ರಸಂಗ ಅಥವಾ ವಸ್ತುವನ್ನು ಸೂಚಿಸುತ್ತದೆ. ಇದರ ಪುನರಾವರ್ತನೆಯಿಂದ ನಾವು ಆಳಕ್ಕೆ ಹೋದರೆ ಪವಾಡಗಳು ನಡೆಯುತ್ತವೆ. ಒಮ್ಮೆ ಇದನ್ನು ನಾವು ಸರಿಯಾಗಿ ತಿಳಿದುಕೊಂಡರೆ ನಾವು ಪರಮಾತ್ಮನನ್ನು ಕಾಣುತ್ತೇವೆ – ವ್ಯಕ್ತಿಯು ಮಿತ್ರನಾಗಿರಲಿ, ಶತ್ರುವಾಗಿರಲಿ, ಸಹಾಯಕನಾಗಿರಲಿ, ನೋವನ್ನುಂಟು ಮಾಡುವವನಾಗಿರಲಿ, ಹೊಗಳಲಿ, ತೆಗೆಳಲಿ, ವಸ್ತುವು ಬಂಗಾರದ ಹಾಗೆ ಬೆಲೆಯುಳ್ಳದ್ದಿರಲಿ ಅಥವಾ ಕಲ್ಲಿನ ಹಾಗೆ ನಿರುಪಯುಕ್ತವಾಗಿರಲಿ, ಅನುಕೂಲಕರ ಸಂದರ್ಭವಿರಲಿ ಅಥವಾ ಅನಾನುಕೂಲಕರ ಸಂದರ್ಭವಿರಲಿ, ಭಯವನ್ನುಂಟು ಮಾಡಲಿ, ಸಂತೋಷವನ್ನುಂಟು ಮಾಡಲಿ, ಸುಖದ ಕ್ಷಣವಿರಲಿ, ದುಃಖದ ಕ್ಷಣವಿರಲಿ, ಜಯವಿರಲಿ ಅಥವಾ ಅಪಜಯವಿರಲಿ ಹೀಗೆ ಪಟ್ಟಿ ಮುಂದುವರೆಯುತ್ತದೆ. ಎಲ್ಲಾ ಕಡೆ ಪರಮಾತ್ಮ ಗೋಚರಿಸುತ್ತಾನೆ.

ಯಾವುದೇ ರೀತಿಯಲ್ಲಿ ಜನರು ನನ್ನ ಭಕ್ತರಾಗಿರಲಿ ನಾನು ಅದೇ ರೀತಿಯಲ್ಲಿ ಅವರಿಗೆ ಕಾಣಿಸಿಕೊಳ್ಳುತ್ತೇನೆ. (4.11) ನನಗೆ ಮಿತ್ರರು ಯಾರೂ ಇಲ್ಲ, ದ್ವೇಷಿಗಳು ಯಾರೂ ಇಲ್ಲ. (9.29)

ನನ್ನನ್ನು ಎಲ್ಲೆಡೆ ನೋಡುವ ವ್ಯಕ್ತಿಯು ನನ್ನಿಂದ ದೂರವಾಗುವುದಿಲ್ಲ ಎಂಬ ಕುತೂಹಲಕರ ಮಾತನ್ನು ಕೃಷ್ಣ ಹೇಳಿದಾಗ ನಾವು ಅದನ್ನು ಆಳವಾಗಿ ಗಮನಿಸಬೇಕು. ನಮ್ಮಲ್ಲಿರುವ ಭೇದಭಾವವು ನಮ್ಮನ್ನು ಪರಮಾತ್ಮನಿಂದ ದೂರ ಮಾಡುತ್ತದೆ.

ಯಾರು ಏಕತೆಯಲ್ಲಿ ಸ್ಥಿರವಾಗಿದ್ದಾರೋ, ಎಲ್ಲರಲ್ಲಿರುವ ನನ್ನನ್ನು ಆರಾಧಿಸುತ್ತಾರೋ ಅಂತಹ ಯೋಗಿಯು ಅವನ ಜೀವನ ಶೈಲಿ ಹೇಗೆ ಇದ್ದರೂ ನನ್ನಲ್ಲಿ ಇರುತ್ತಾನೆ.(6.31) ಇಲ್ಲಿ ಮಹತ್ವದೆಂದರೆ ನಾವು ಏನು ಮಾಡುತ್ತೇವೆ ಅಥವಾ ನಮ್ಮ ಹತ್ತಿರ ಏನಿದೆ ಎಂಬುದಲ್ಲ. ನಾವು ಹೇಗಿದ್ದೇವೆ ಅನ್ನುವುದು ಮುಖ್ಯ.

ಈ ಭೌತಿಕ ಜಗತ್ತು ನೋವು ನಲಿವುಗಳ ದ್ವಂದ್ವಗಳಿಂದ ಕೂಡಿದೆ. ನಾವು ಎಷ್ಟೇ ಶ್ರೀಮಂತರಿರಲಿ ಅಥವಾ ಪ್ರಭಾವಿಗಳಾಗಿರಲಿ ನಮಗೆ ಸಿಟ್ಟು, ಉದ್ವೇಗ ಮತ್ತು ನಿರಾಶೆ ತಪ್ಪಿದ್ದಲ್ಲ. ಈ ದ್ವಂದ್ವಗಳು ನಮ್ಮಲ್ಲಿ ಇದ್ದೇ ಇರುತ್ತವೆ. ಆದ್ದರಿಂದಲೇ ಕೃಷ್ಣ ಹೇಳುತ್ತಾನೆ ನಾವು ಏಕತೆಯಲ್ಲಿ ಸ್ಥಿರವಾಗಿರಬೇಕು. ಆಗ ನಾವು ದ್ವಂದ್ವ ಹಾಗೂ ಭೇದಭಾವಕ್ಕೆ ಅತೀತರಾಗಿರುತ್ತೇವೆ.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್	08	06	02	12
ಡೆಲ್ಲಿ	08	06	02	12
ಮುಂಬೈ	09	05	04	10
ಬೆಂಗಳೂರು	08	05	03	10
ಪಂಜಾಬ್	08	05	03	10
ಲಖನೌ	09	05	04	10
ಕೋಲ್ಕತ್ತಾ	08	03	05	06
ರಾಜಸ್ಥಾನ್	08	02	06	04
ಹೈದರಾಬಾದ್	08	02	06	04
ಚೆನ್ನೈ	08	02	06	04

ಇಂದಿನ ಪಂದ್ಯ

7.30 PM

ರಾಯಲ್ ಚಾಲೆಂಜರ್ಸ್ ಬೆಂಗಳೂರು VS ರಾಜಸ್ಥಾನ್ ರಾಯಲ್ಸ್

ಚಿನ್ನಸ್ವಾಮಿ ಸ್ಟೇಡಿಯಂ ಬೆಂಗಳೂರು

ಆರ್‌ಸಿಬಿಗೇ ಈ ಸಲ ಕಪ್..

'ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರದರ್ಶನ ಉತ್ತಮವಾಗಿದ್ದು, ಪ್ಲೇಆಫ್ ಗೇರುವ ಸಾಧ್ಯತೆ ಇದೆ. ತವರು ಮೈದಾನ ಹೊರತುಪಡಿಸಿ ಹೊರಗಿನ ಮೈದಾನಗಳಲ್ಲಿ ಆರ್‌ಸಿಬಿ ತಂಡ ಅದ್ಭುತ ಪ್ರದರ್ಶನ ನೀಡುತ್ತಿದ್ದು, ಇದೇ ಪ್ರದರ್ಶನವನ್ನು ಮುಂದುವರಿಸಿದರೆ ಆರ್‌ಸಿಬಿ ಪ್ಲೇ-ಆಫ್ ಪ್ರವೇಶಿಸುವುದು ಖಚಿತ. ತವರಿನಲ್ಲಿಯೂ ಆರ್‌ಸಿಬಿ ಗುರುವಾರದ ಪಂದ್ಯದಲ್ಲಿ ಗೆಲುವು ಸಾಧಿಸಲಿದೆ. ಆರ್‌ಸಿಬಿ ಈ ಬಾರಿ ಕಪ್ ಗೆಲ್ಲಲಿದೆ, ಅದು ಬಿ ಪ್ಲೇ-ಆಫ್ ಹಂತ ದಾಟಿದರೆ ಅವರನ್ನು ತಡೆಯುವುದು ಕಷ್ಟ. ಅಭಿಮಾನಿಗಳ ಬಹು ವರ್ಷದ ಕಪ್ ಕನಸು ಈ ಬಾರಿ ನನಸಾಗುವ ಎಲ್ಲಾ ಸಾಧ್ಯತೆ ಇದೆ.

-ಅಂಬಟಿ ರಾಯಡು ಮಾಜಿ ಕ್ರಿಕೆಟಿಗ

ರೋಹಿತ್ ಬ್ಯಾಟಿಂಗ್ ಅಬ್ಬರ | ಟ್ರೆಂಟ್ ಬೌಲ್ಟ್‌ಗೆ ನಾಲ್ಕು ವಿಕೆಟ್

ಮುಂಬೈ ಗೆಲುವಿನ ಓಟ

ಹೈದರಾಬಾದ್: ಟ್ರೆಂಟ್ ಬೌಲ್ಟ್ (26ಕ್ಕೆ 4) ಅವರ ಘಾತಕ ಬೌಲಿಂಗ್ ದಾಳಿ ಮತ್ತು ರೋಹಿತ್ ಶರ್ಮಾ (70) ಅಬ್ಬರದ ಅರ್ಧಶತಕದ ನೆರವಿನಿಂದ ಬುಧವಾರದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 7 ವಿಕೆಟ್ ಅಂತರದ ಗೆಲುವು ಸಾಧಿಸಿದೆ. ಈ ಗೆಲುವಿನೊಂದಿಗೆ ಹಾರ್ದಿಕ್ ಪಾಂಡ್ಯ ಪಡೆ ಹಾಲಿ ಆವೃತ್ತಿಯಲ್ಲಿ ಪ್ಲೇ-ಆಫ್ ಅವಕಾಶ ಹೆಚ್ಚಿಸಿಕೊಂಡಿತು. ಟೂರ್ನಿಯಲ್ಲಿ 6ನೇ ಸೋಲು ಕಂಡ ಪ್ಯಾಟ್ ಕಮಿನ್ಸ್ ಬಳಗದ ಪ್ಲೇ-ಆಫ್ ಹಾದಿ ದುರ್ಗಮಗೊಂಡಿದೆ.

ಇಲ್ಲಿನ ರಾಜೀವ್ ಗಾಂಧಿ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಸನ್‌ರೈಸರ್ಸ್ ಹೈದರಾಬಾದ್ ತಂಡ ಟ್ರೆಂಟ್ ಬೌಲ್ಟ್ ಘಾತಕ ದಾಳಿಗೆ ನಲುಗಿ 8 ವಿಕೆಟ್‌ಗೆ 143 ರನ್ ಗಳಿಸಲಷ್ಟೇ ಶಕ್ತವಾಯಿತು. ಗುರಿ ಬೆನ್ನತ್ತಿದ ಮುಂಬೈ ಇಂಡಿಯನ್ಸ್ ತಂಡ ಈ ಸಾಧಾರಣ ಮೊತ್ತವನ್ನು 15.4 ಓವರ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 146 ರನ್ ಬಾರಿಸಿ ಗೆಲುವಿನ ನಗೆ ಬೀರಿತು.

ರೋಹಿತ್ ಸತತ ಎರಡನೇ ಅರ್ಧಶತಕ: ಚೇಸಿಂಗ್ ವೇಳೆ ಮುಂಬೈ ಪರ ರೋಹಿತ್ ಶರ್ಮಾ ಅಮೋಘ ಅರ್ಧಶತಕ ಬಾರಿಸಿ ಮಿಂಚಿದರು. ಇದು ಹಾಲಿ ಆವೃತ್ತಿಯಲ್ಲಿ ರೋಹಿತ್ ಸಿಡಿಸಿದ ಸತತ ಎರಡನೇ ಅರ್ಧಶತಕ. ಕಳೆದ ಪಂದ್ಯದಲ್ಲೂ ಚೆನ್ನೈ ವಿರುದ್ಧದ ಪಂದ್ಯದಲ್ಲಿಯೂ ಅಜೇಯ ಅರ್ಧಶಕ ಬಾರಿಸಿದ್ದರು. ಅಬ್ಬರ ಬ್ಯಾಟಿಂಗ್ ನಡೆಸಿದ ರೋಹಿತ್ ಗೆಲುವಿಗೆ 14 ರನ್ ಇದ್ದಾಗ ವಿಕೆಟ್ ಕಳೆದುಕೊಂಡರು.

46 ಎಸೆತ ಎದುರಿಸಿದ ಅವರು 8 ಬೌಂಡರಿ ಮತ್ತು 3 ಸಿಕ್ಸರ್‌ನೊಂದಿಗೆ 70 ರನ್ ಗಳಿಸಿದರು. ಅಂತಿಮವಾಗಿ ಸೂರ್ಯಕುಮಾರ್ ಯಾದವ್ 19 ಎಸೆತಗಳಿಂದ ಅಜೇಯ 40 ರನ್ ಬಾರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಆರಂಭಿಕ ಆಟಗಾರ ರಯಾನ್ ರಿಕೆಲ್ಟನ್ (11) ಗಳಿಸಿದರು.

ಇದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ ಹೈದರಾಬಾದ್ ತಂಡದ ಬ್ಯಾಟಿಂಗ್ ಎಷ್ಟು ಶೋಚನೀಯವಾಗಿತ್ತೆಂದರೆ ಪವರ್ ಪ್ಲೇ ಮುಕ್ತಾಯಕ್ಕೆ ಕೇವಲ 24 ರನ್ ಗಳಿಸಿ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಟ್ರಾವಿಸ್ ಹೆಡ್ ಶೂನ್ಯ ಸುತ್ತಿದರೆ, ಇವರ ಜತೆಗಾರ ಅಭಿಷೇಕ್ ಶರ್ಮಾ 8 ರನ್‌ಗೆ ಆಟ ಮುಗಿಸಿದರು. ಇಶಾನ್ ಕಿಶನ್ (1) ಅಂಪೈರ್ ಔಟ್ ನೀಡದಿದ್ದರೂ ತಾನೇ ಔಟ್ ಎಂದು ದುಡುಕಿನ ನಿರ್ಧಾರದಿಂದ ಅನಗತ್ಯವಾಗಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ನಿತೀಶ್ ಕುಮಾರ್ ರೆಡ್ಡಿ (2) ಒಂದಂಕಿಗೆ ಸೀತರಾದರು.

ಆಸರೆಯಾದ ಕ್ಲಾಸೆನ್-ಮನೋಹರ್: ಇನ್ನೇನು ತಂಡ 50 ರೊಳಗೆ ಗಂಟು ಮೂಟೆ ಕಟ್ಟುತ್ತದೆ ಎನ್ನುವ ಹಂತದಲ್ಲಿ ಜತೆಯಾದ 6ನೇ ವಿಕೆಟ್‌ಗೆ ಜತೆಯಾದ ಹೆನ್ರಿಚ್ ಕ್ಲಾಸೆನ್ ಮತ್ತು ಕನ್ನಡಿಗ ಅಭಿನವ್ ಮನೋಹರ್ ದಿಟ್ಟ ಬ್ಯಾಟಿಂಗ್ ಹೋರಾಟವೊಂದನ್ನು ನಡೆಸಿ ತಂಡವನ್ನು ಅಪಾಯದಿಂದ ಪಾರು ಮಾಡಲು ಶಕ್ತಿಮೀರಿ ಪ್ರಯತ್ನಿಸಿ ದರು. ಈ ಜೋಡಿ 99 ರನ್‌ಗಳ ಜತೆಯಾಟ ನಡೆಸಿದ ಪರಿಣಾಮ ತಂಡ ಸ್ಪರ್ಧಾತ್ಮಕ ಮೊತ್ತವನ್ನು ದಾಖಲಿಸಿತು. 44 ಎಸೆತ ಎದುರಿಸಿದ ಕ್ಲಾಸೆನ್ (9 ಬೌಂಡರಿ, 2 ಸಿಕ್ಸರ್) 71 ರನ್ ಬಾರಿಸಿ ಅರ್ಧಶತಕ ಪೂರ್ತಿಗೊಳಿಸಿದರು. ಅಭಿನವ್ ಮನೋಹರ್ 3 ಸಿಕ್ಸರ್ ಮತ್ತು 2 ಬೌಂಡರಿ ನೆರವಿನಿಂದ 43 ರನ್ ಬಾರಿಸಿದರು. ಉಳಿದಂತೆ ಅನಿಕೇತ್ ವರ್ಮಾ (12) ರನ್ ಗಳಿಸಿದರು. ತಂಡದ ಪರ ಮೂರು ಮಾತ್ರ ಎರಡಂಕಿ ಮೊತ್ತ ಕಲೆಹಾಕುವಲ್ಲಿ ಯಶಸ್ಸು ಕಂಡರು. ಮುಂಬೈ ಪರ ಬೆಂಕಿ ಬೌಲಿಂಗ್ ಪ್ರದರ್ಶನ ತೋರಿದ ಎಡಗೈ ವೇಗಿ ಟ್ರೆಂಟ್ ಬೌಲ್ಟ್ 4 ಓವರ್‌ಗಳಿಂದ ಕೇವಲ 26 ರನ್ ನೀಡಿ 4 ವಿಕೆಟ್ ಉರುಳಿಸಿದರು. ಇವರಿಗೆ ಉತ್ತಮ ಸಾಥ್ ನೀಡಿದ ದೀಪಕ್ ಚಹರ್ 12 ರನ್ ವೆಚ್ಚದಲ್ಲಿ 2 ವಿಕೆಟ್ ಉರುಳಿಸಿದರು. ಉಳಿದಂತೆ ಜಸ್‌ಪ್ರೀತ್ ಬುಮ್ರಾ ಮತ್ತು ನಾಯಕ ಹಾರ್ದಿಕ್ ಪಾಂಡ್ಯ ತಲಾ ಒಂದು ವಿಕೆಟ್ ಪಡೆದರು.



ಇಶಾನ್ ಕಿಶನ್ ಔಟ್ ವಿವಾದ

ಪಂದ್ಯದಲ್ಲಿ ಎದುರಾಳಿ ತಂಡದ ಆಟಗಾರರು ಔಟ್‌ಗೆ ಮನವಿ ಮಾಡದಿದ್ದರೂ ಇಶಾನ್ ಕಿಶನ್‌ಗೆ ಅಂಪೈರ್ ಔಟ್ ನೀಡಿದ ಘಟನೆ ಭಾರೀ ಚರ್ಚೆಗೆ ಕಾರಣವಾಗಿದೆ. ದೀಪಕ್ ಚಹರ್ ಎಸೆದ ದ್ವಿತೀಯ ಓವರ್‌ನ ದ್ವಿತೀಯ ಎಸೆತ ಲೆಗ್‌ಸೈಡ್‌ನತ್ತ ಸಾಗಿ ಕೀಪರ್ ಕೈ ಸೇರಿತು. ದೀಪಕ್ ಚಹರ್ ಮತ್ತು ಮುಂಬೈ ಆಟಗಾರರು ವೈಡ್ ಎಸೆತ ಎಂದು ಸುಮ್ಮನಾದರು. ಆದರೆ ಫೀಲ್ಡ್ ಅಂಪೈರ್ ವಿನೋದ್, ಎದುರಾಳಿ ತಂಡದ ಆಟಗಾರರು ಔಪಚಾರಿಕ ಮೇಲ್ಮನವಿ ಸಲ್ಲಿಸದಿದ್ದರೂ ಬೆರಳು ಮೇಲೆತ್ತಿ ಔಟ್ ನೀಡಿದರು, ಇದನ್ನು ಕಂಡ ಮುಂಬೈ ಆಟಗಾರರು ಆಶ್ಚರ್ಯಚಕಿತರಾದರು. ಕ್ರೀಸ್‌ನಲ್ಲಿದ್ದ ಇಶಾನ್ ಔಟ್ ಎಂದು ಪೆವಿಯನ್ ಸೇರಿದರು. ಆದರೆ ಮೂರನೇ ಅಂಪೈರ್ ಟಿವಿ ರಿಪ್ಲೇಯಲ್ಲಿ ಪರೀಕ್ಷಿಸುವಾಗ ಚೆಂಡು ಬ್ಯಾಟ್‌ಗೆ ತಗುಲಿಯೇ ಇಲ್ಲ ಎಂಬುದು ಕಂಡುಬಂತು. ಇದನ್ನು ಕಂಡ ಇಶಾನ್ ಬೇಸರದಿಂದ ಕಣ್ಣೀರು ಸುರಿದರು. ರಿವ್ಯೂ ಪಡೆಯುವ ಅವಕಾಶವಿದ್ದರೂ ಆತುರದಿಂದ ಮಾಡಿದ ತಮ್ಮ ತಪ್ಪಿನ ಅರಿವಾಗಿ ಪಶ್ಚಾತಾಪ ಪಟ್ಟರು.

ರಜತ್ ಪಾಟೀದಾರ್ ಪಡೆಗೆ ರಾಜಸ್ಥಾನ ಸವಾಲು

ಆರ್‌ಸಿಬಿಗೆ ತವರಿನಲ್ಲಿ ಇಂದು ಸೋಲಿನ ಸರಪಳಿ ಕಳಚುವಾಸೆ

ಬೆಂಗಳೂರು ತಂಡ:
ಪಾಟೀದಾರ್ (ನಾಯಕ)
ವಿರಾಟ್ ಕೊಹ್ಲಿ
ಯಶ್ ದಯಾಳ್
ಹ್ಯಾಝಲ್‌ವುಡ್
ಫಿಲ್ ಸಾಲ್ಟ್
ಜಿತೇಶ್ ಶರ್ಮಾ
ಲಿವಿಂಗ್‌ಸ್ಟೋನ್
ಸುಯಶ್ ಶರ್ಮಾ
ಭುವನೇಶ್ವರ್ ಕುಮಾರ್
ಕೃನಾಲ್ ಪಾಂಡ್ಯ
ಜೇಕಬ್ ಬೆಥೆಲ್
ದೇವದತ್ ಪಡಿಕ್ಕಲ್
ನುವಾನ್ ತುಷಾರ
ಅಭಿನಂದನ್ ಸಿಂಗ್

ರಾಜಸ್ಥಾನ ತಂಡ
ಸಂಜು ಸ್ಯಾಮ್ಸನ್ (ನಾಯಕ)
ಯಶಸ್ವಿ ಜೈಸ್ವಾಲ್
ರಿಯಾನ್ ಪರಾಗ್
ನಿತೀಶ್ ರಾಣಾ
ಧ್ರುವ್ ಜುರೆಲ್
ಎಸ್. ಹೆಟ್ಮೆಯರ್
ಸಂದೀಪ್ ಶರ್ಮಾ
ಜೋಫ್ರಾ ಆರ್ಚರ್
ಎಂ. ತೀಕ್ಷಣ
ವನಿಂದು ಹಸರಂಗ
ಶುಭಂ ದುಬೆ
ವಿ. ಸೂರ್ಯವಂಶಿ
ತುಷಾರ್ ದೇಶಪಾಂಡೆ
ಅಶೋಕ್ ಶರ್ಮಾ

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ರಾಯಲ್ ಚಾಲೆಂಜ್ಸ್ ಬೆಂಗಳೂರು ತಂಡವು ಐಪಿಎಲ್ ಟೂರ್ನಿಯಲ್ಲಿಂದು ರಾಯಲ್ಸ್ ಚಾಲೆಂಜರ್ಸ್ ಅನ್ನು ಎದುರಿಸಲಿದೆ. ಈಗಾಗಲೇ ಈ ಐಪಿಎಲ್ ಟೂರ್ನಿಯಲ್ಲಿ ತವರಿನಲ್ಲಿ ಆಡಿರುವ ಎಲ್ಲಾ ಪಂದ್ಯಗಳನ್ನೂ ಸೋತಿರುವ ಆರ್‌ಸಿಬಿಗೆ ರಾಜಸ್ಥಾನದ ವಿರುದ್ಧದ ಪಂದ್ಯ ಗೆಲ್ಲುವ ಮೂಲಕ, ಸೋಲಿನ ಸರಪಳಿ ಕಳಚುವಾಸೆಯನ್ನು ಹೊಂದಿದೆ.

ಮಾರ್ಚ್-22ರಂದು ಕೋಲ್ಕತ್ತಾದಲ್ಲಿ ನಡೆದ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ ತಂಡವು ಅತಿಥೇಯ ಕೋಲ್ಕತ್ತಾ ತಂಡವನ್ನು ಮಣಿಸಿ ಈ ಸಲ ಶುಭಾರಂಭ ಮಾಡಿತ್ತು. ಆ ಬಳಿಕ ಚೆನ್ನೈನಲ್ಲಿ ನಡೆದ ಪಂದ್ಯದಲ್ಲೂ ಸಿಎಸ್‌ಕೆಯನ್ನು ಸೋಲಿಸಿ ಜಯ ಪಡೆದಿತ್ತು. ಆದರೆ ತವರಿನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಗುಜರಾತ್ ವಿರುದ್ಧ ಆರ್‌ಸಿಬಿ ಸೋಲಿಗೆ ಶರಣಾಯಿತು. ಮತ್ತೆ ಏಪ್ರಿಲ್-7ರಂದು ಮುಂಬೈ ವಿರುದ್ಧ ನಡೆದ ತವರಿನಾಚೆಯ ಪಂದ್ಯದಲ್ಲಿ ಆರ್‌ಸಿಬಿ 12 ರನ್‌ಗಳಿಂದ ಗೆದ್ದಿತ್ತು. ಆದರೆ ಆ ಬಳಿಕ ತನ್ನ ತವರಿನಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು ಆರ್‌ಸಿಬಿಯನ್ನು 6 ವಿಕೆಟ್‌ಗಳಿಂದ ಮಣಿಸಿ ಗೆಲುವಿನ ನಗೆ ಬೀರಿತ್ತು.

ಏಪ್ರಿಲ್-13ರಂದು ರಾಜಸ್ಥಾನದಲ್ಲಿ ನಡೆದ ಪಂದ್ಯದಲ್ಲಿ ಅತಿಥೇಯ ರಾಜಸ್ಥಾನವನ್ನು ಸೋಲಿಸುವ ಮೂಲಕ ಆರ್‌ಸಿಬಿ ಮತ್ತೆ ತನ್ನ ಸಾಮರ್ಥ್ಯವನ್ನು ಮೆರೆಯಿತು. ಆದರೆ ಏಪ್ರಿಲ್-18ರಂದು ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ತಂಡದೆದುರು ಆರ್‌ಸಿಬಿ ಮುಗ್ಗರಿಸಿತ್ತು.

ಪಂಜಾಬ್‌ಗೆ ಸೇಡು ತೀರಿಸಲು ಅವಕಾಶ ದೊರೆತ ಏಪ್ರಿಲ್-20ರಂದು ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡವು ಚಂಡೀಗಢದಲ್ಲಿ ತನ್ನ ಗೆಲುವಿನ ನಗೆ ಬೀರಿತ್ತು. ಆದರೆ ತವರಿನಾಚೆಗಿನ ಎಲ್ಲಾ ಪಂದ್ಯಗಳಲ್ಲೂ ಗೆದ್ದು, ತವರಿನ ಎಲ್ಲಾ ಪಂದ್ಯಗಳಲ್ಲೂ ಸೋತಿರುವ ಆರ್‌ಸಿಬಿ ಪ್ಲೇ ಆಫ್ ಪ್ರವೇಶಿಸ ಬೇಕಾದರೆ ಬೆಂಗಳೂರಿನಲ್ಲಿ ಈ ದ್ವಿತಿ ಯಾರ್ಧದ ಒಂದೆರಡು ಪಂದ್ಯದಲ್ಲಿ ಗೆಲುವು ಸಾಧಿಸಬೇಕಾದುದು ಅನಿವಾರ್ಯ ಎನಿಸಿದೆ.

ಈ ಆವೃತ್ತಿಯ ಮೊದಲ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ 44 ರನ್‌ಗಳಿಂದ ಸೋತಿರುವ ರಾಜಸ್ಥಾನ ತಂಡವು ಈ ವರೆಗೂ ಆಡಿರುವ 8 ಪಂದ್ಯಗಳ ಪೈಕಿ ಗೆದ್ದಿರುವುದು ಬರೀ 2 ಪಂದ್ಯ. ಮಾರ್ಚ್-26ರಂದು ರಾಜಸ್ಥಾನವು ಕೋಲ್ಕತ್ತಾ ವಿರುದ್ಧವೂ ಸೋತು ಮುಖಭಂಗ ಅನುಭವಿಸಿತ್ತು, ಆದರೆ ಮಾರ್ಚ್-30 ರಂದು ನಡೆದಿದ್ದ ಪಂದ್ಯದಲ್ಲಿ ಚೆನ್ನೈ ತಂಡವನ್ನು ರಾಜಸ್ಥಾನ ಬಗ್ಗು ಬಡಿದಿತ್ತು.

ಏಪ್ರಿಲ್-5ರಂದು ಪಂಜಾಬ್ ವಿರುದ್ಧದ ಪಂದ್ಯದಲ್ಲೂ ರಾಜಸ್ಥಾನ ತಂಡ ಗೆಲುವು ಪಡೆದಿತ್ತು. ಆದರೆ ಏಪ್ರಿಲ್-9ರಂದು ಮತ್ತು ಏಪ್ರಿಲ್-13ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ರಾಜಸ್ಥಾನ ತಂಡವು ಕ್ರಮವಾಗಿ ಗುಜರಾತ್ ಮತ್ತು ಆರ್‌ಸಿಬಿಯ ವಿರುದ್ಧ ಗೆಲುವನ್ನು ಪಡೆದು ಅಂಕಪಟ್ಟಿಯಲ್ಲಿ ಮೇಲೇರಿತು.

ಏಪ್ರಿಲ್-16ರಂದು ನಡೆದ ಪಂದ್ಯವನ್ನು ಮುಂಬೈ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯವನ್ನು ಟೈ ಮಾಡಿಕೊಂಡಿತ್ತಾದರೂ, ಸೂಪರ್ ಓವರ್‌ನಲ್ಲಿ ಡೆಲ್ಲಿ ತಂಡವು ಮುಂಬೈಯನ್ನು ಸೋಲಿಸಿತ್ತು. ಏಪ್ರಿಲ್-19ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲೂ ಲಖನೌ ವಿರುದ್ಧ ರಾಜಸ್ಥಾನವು ಸೋತು ಹೋಗಿತ್ತು.

ಇದೀಗ ಬೆಂಗಳೂರಿನಲ್ಲಿ ನಡೆದ ಎಲ್ಲಾ ಪಂದ್ಯಗಳಲ್ಲೂ ಅತಿಥೇಯರು ಸೋತು ಹೋಗಿರುವುದರಿಂದ ತನಗೂ ಆರ್‌ಸಿಬಿ ವಿರುದ್ಧ ಜಯ ಖಚಿತ ಎಂದು ರಾಜಸ್ಥಾನವು ಅಮಿತ ಆತ್ಮವಿಶ್ವಾಸದಿಂದಿದೆ. ಆದರೆ ರಾಜಸ್ಥಾನ ವಿರುದ್ಧ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಪಂದ್ಯವನ್ನು ಗೆಲ್ಲುವ ಮೂಲಕ ತವರಿನ ಸೋಲಿನ ಸರಪಳಿಯನ್ನು ಕಳಚಬೇಕೆಂಬ ತವಕದಿಂದಲೇ ಆರ್‌ಸಿಬಿ ಗುರುವಾರ ಕಣಕ್ಕಿಳಿಯಲಿದೆ.

ಜಹೀರ್ ಖಾನ್-ರಿಷಬ್: ವಾಗ್ವಾದ ವಿಡಿಯೊ ಬಹಿರಂಗ

ಲಖನೌ: ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿ ಒಡಕಿದೆಯೇ ಎಂಬೊಂದು ಪ್ರಶ್ನೆ ಹುಟ್ಟಿಕೊಂಡಿದೆ. ಅದಕ್ಕೆ ಮುಖ್ಯ ಕಾರಣ ಐಪಿಎಲ್‌ನ ಮಂಗಳವಾರದ ಪಂದ್ಯ. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಈ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಕೊನೆಯ ಬ್ಯಾಟರ್ ಆಗಿ ಕಣಕ್ಕಿಳಿದದ್ದು ನಾಯಕ ರಿಷಭ್ ಪಂತ್. ಪಂತ್ 7ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದಿದ್ದು ಅಚ್ಚರಿಗೆ ಕಾರಣವಾಗಿತ್ತು. ಅದರ ಬೆನ್ನಲ್ಲೇ ಪಂತ್ ಅವರು ಲಖನೌ ಸೂಪರ್ ಜೈಂಟ್ಸ್ ತಂಡದ ಮೆಂಟರ್ ಜಹೀರ್ ಖಾನ್ ಜೊತೆ ವಾಗ್ವಾದ ನಡೆಸುತ್ತಿರುವ ವಿಡಿಯೋವೊಂದು ವೈರಲ್ ಆಗಿದೆ. ತನ್ನನ್ನು ಬ್ಯಾಟಿಂಗ್‌ಗೆ ಕಳುಹಿಸದಿರುವ ಬಗ್ಗೆ ರಿಷಭ್ ಪಂತ್, ಜಹೀರ್ ಖಾನ್ ಅವರೊಂದಿಗೆ ಆಕ್ರೋಶ ವ್ಯಕ್ತಪಡಿಸುತ್ತಿರುವ ದೃಶ್ಯವನ್ನುಆ ವಿಡಿಯೋದಲ್ಲಿ ಕಾಣಬಹುದು. ಮಾತಿನ ಚಕಮಕಿಯ ಬಳಿಕ ರಿಷಭ್ ಪಂತ್ 20ನೇ ಓವರ್‌ನಲ್ಲಿ ಬ್ಯಾಟಿಂಗ್‌ಗೆ ಹೋಗಿದ್ದರು. ಹೀಗಾಗಿಯೇ ಇದೀಗ ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿ ಒಡಕಿದೆಯೇ ಎಂಬ ಪ್ರಶ್ನೆಯೊಂದು ಹುಟ್ಟಿಕೊಂಡಿದೆ.

ಸ್ಕೋರ್ ಬೋರ್ಡ್

143/8 (20 ಓವರ್)

ಸನ್‌ರೈಸರ್ಸ್ ಹೈದರಾಬಾದ್

ಹೆಡ್	ಬೌಲರ್ ▸ ಬೌಲ್ಟ್, ಕ್ಯಾಚ್ ▸ ಧೀರ್	0	4
ಅಭಿಷೇಕ್	ಬೌಲರ್ ▸ ಬೌಲ್ಟ್, ಕ್ಯಾಚ್ ▸ ವಿಘ್ನೇಶ್	8	8
ಕಿಶನ್	ಬೌಲರ್ ▸ ಚಾಹರ್, ಕ್ಯಾಚ್: ರಿಕಲ್ಟನ್	1	4
ನಿತೀಶ್	ಬೌಲರ್ ▸ ಚಾಹರ್, ಕ್ಯಾಚ್ ▸ ಸ್ಯಾಂಟ್ನರ್	2	6
ಕ್ಲಾಸೆನ್	ಬೌಲರ್ ▸ ಬುಮ್ರಾ, ಕ್ಯಾಚ್ ▸ ವರ್ಮಾ	71	44
ಅನಿಕೇತ್	ಬೌಲರ್ ▸ ಪಾಂಡ್ಯ, ಕ್ಯಾಚ್ ▸ ರಿಕಲ್ಟನ್	12	14
ಅಭಿನವ್	ಹಿಟ್‌ವಿಕೆಟ್ ಬೌಲರ್ ▸ ಬೌಲ್ಟ್	43	37
ಕಮ್ಮಿನ್ಸ್	ಬೌಲ್ಡ್-ಬೌಲರ್ ▸ ಬೌಲ್ಟ್	1	2
ಹರ್ಷಲ್	ನಾಟೌಟ್	1	1

ಮುಂಬೈ ಇಂಡಿಯನ್ಸ್

	ಓವರ್	ರನ್	ವಿಕೆಟ್
ಚಾಹರ್	4	12	2
ಬೌಲ್ಟ್	4	26	4
ಬುಮ್ರಾ	4	39	1
ಸ್ಯಾಂಟ್ನರ್	4	19	0
ಪಾಂಡ್ಯ	3	31	1
ವಿಘ್ನೇಶ್	1	15	0

ಸನ್‌ರೈಸರ್ಸ್ ಹೈದರಾಬಾದ್

	ಓವರ್	ರನ್	ವಿಕೆಟ್
ಕಮ್ಮಿನ್ಸ್	3	31	0
ಉನದ್ಕತ್	3	25	1
ಹರ್ಷಲ್	3	21	0
ಮಾಲಿಂಗ	3	33	1
ಅನ್ಸಾರಿ	3.4	36	1

146/3 (15.4 ಓವರ್)

ಮುಂಬೈ ಇಂಡಿಯನ್ಸ್

ರಿಕಲ್ಟನ್	ಕ್ಯಾಚ್-ಬೌಲ್ಡ್ ▸ ಉನಾದ್ಕಟ್	11	8
ರೋಹಿತ್	ಬೌಲರ್ ▸ ಮಾಲಿಂಗ, ಕ್ಯಾಚ್ ▸ ಅಭಿಷೇಕ್	70	46
ಜಾಕ್ಸ್	ಬೌಲರ್ ▸ ಅನ್ಸಾರಿ, ಕ್ಯಾಚ್ ▸ ಮನೋಹರ್	22	19
ಸೂರ್ಯಕುಮಾರ್	ನಾಟೌಟ್	40	19
ತಿಲಕ್	ನಾಟೌಟ್	2	2

ಕಾಶ್ಮೀರದಲ್ಲಿ ಉಗ್ರರ ಪೈಶಾಚಿಕ ಕೃತ್ಯ | ಜಾಲತಾಣದ ಮೂಲಕ ಖಂಡನೆ

ಟೀಮ್ ಇಂಡಿಯಾ ಕ್ರಿಕೆಟಿಗರಿಂದ ಖಂಡನೆ

ದೆಹಲಿ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮಂಗಳವಾರ ನಡೆದ ಭಯೋತ್ಪಾದಕ ದಾಳಿಯನ್ನು ಖಂಡಿಸಿ ಟೀಮ್ ಇಂಡಿಯಾ ಕ್ರಿಕೆಟಿಗರಾದ ವಿರಾಟ್ ಕೊಹ್ಲಿ, ಸಚಿನ್ ತೆಂಡೂಲ್ಕರ್, ಗೌತಮ್ ಗಂಭೀರ್, ಕೆಲ್ ರಾಹುಲ್ ಸೇರಿದಂತೆ ಅನೇಕರು ತಮ್ಮ ಸಾಮಾಜಿಕ ಜಾಲತಾಣದ ಮಾಧ್ಯಮದಲ್ಲಿ ಆಕ್ರೋಶವನ್ನು ಹೊರಹಾಕಿದ್ದಾರೆ, ಜತೆಗೆ ಬಲಿಪಶುವಿನ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ.

'ಪಹಲ್ಗಾಮ್‌ನಲ್ಲಿ ಅಮಾಯಕರ ಮೇಲೆ ನಡೆದ ಘೋರ ದಾಳಿಯಿಂದ ತೀವ್ರ ದುಃಖವಾಗಿದೆ. ಬಲಿಪಶುಗಳ ಕುಟುಂಬಗಳಿಗೆ ನನ್ನ ಸಂತಾಪಗಳು. ಪ್ರಾಣ ಕಳೆದುಕೊಂಡ ಎಲ್ಲರ ಕುಟುಂಬಗಳಿಗೆ ಶಾಂತಿ ಮತ್ತು ಶಕ್ತಿ ನೀಡಲಿ ಮತ್ತು ಈ ಕ್ರೂರ ಕೃತ್ಯಕ್ಕೆ ನ್ಯಾಯ ದೊರಕಲೆಂದು ಪ್ರಾರ್ಥಿಸುತ್ತೇನೆ' ಎಂದು ಹಿರಿಯ ಕ್ರಿಕೆಟಿಗ ವಿರಾಟ್ ಕೊಹ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಹಲ್ಗಾಮ್‌ನಲ್ಲಿ ನಡೆದ ದಾಳಿಯ ವಿದ್ರಾವಕವಾಗಿದೆ. ಬಲಿಪಶುಗಳು ಮತ್ತು ಅವರ ಕುಟುಂಬಗಳೊಂದಿಗೆ ನನ್ನ ಪ್ರಾರ್ಥನೆ ಇದೆ. ಈ ರೀತಿಯ ಹಿಂಸಾಚಾರಕ್ಕೆ ನಮ್ಮ ದೇಶದಲ್ಲಿ ಸ್ಥಾನವಿಲ್ಲ' ಎಂದು ಶುಭಮನ್ ಗಿಲ್ ಪೋಸ್ಟ್ ಮಾಡಿದ್ದಾರೆ. ಕಾಶ್ಮೀರದಲ್ಲಿ ನಡೆದ ಭಯೋತ್ಪಾದಕ ದಾಳಿಯ ಬಗ್ಗೆ ಕೇಳಿ ಹೃದಯ ವಿದ್ರಾವಕವಾಯಿತು. ನನ್ನ ಆಲೋಚನೆ ಗಳು ಹತ್ಯೆಯಾದವರ 'ಕುಟುಂಬಗಳೊಂದಿಗೆ ಇವೆ. ಶಾಂತಿ ಮತ್ತು ಮನೋಧೈರ್ಯಕ್ಕಾಗಿ ಪ್ರಾರ್ಥಿಸುತ್ತೇನೆ' ಎಂದು ಕೆಎಲ್ ರಾಹುಲ್ ಸಂತಾಪ ಸೂಚಿಸಿದ್ದಾರೆ.

'ಮೃತರ ಕುಟುಂಬಗಳಿಗಾಗಿ ಪ್ರಾರ್ಥಿಸುತ್ತೇನೆ. ಇದಕ್ಕೆ ಕಾರಣರಾದವರು ತಕ್ಕ ಬೆಲೆ ತೆರಬೇಕಾಗುತ್ತದೆ. ಭಾರತ ತಿರುಗೇಟು ನೀಡಲಿದೆ' ಎಂದು ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ.

'ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲಿನ ದಾಳಿಯಿಂದ ತೀವ್ರ ದುಃಖವಾಗಿದೆ. ಎಲ್ಲರೂ ಭರವಸೆಯೊಂದಿಗೆ ಜತೆಗೆ ನಿಲ್ಲೋಣ' ಎಂದು ಯುವರಾಜ್ ಸಿಂಗ್ ಬರೆದುಕೊಂಡಿದ್ದಾರೆ.

'ಅಮಾಯಕರ ಮೇಲೆ ನಡೆದ ದಾಳಿಯಿಂದ ಆಘಾತ ಮತ್ತು ತೀವ್ರ ದುಃಖವಾಗಿದೆ. ಜೀವಹಾನಿಗೆ ನಾವು ಶೋಕಿಸುತ್ತಿದ್ದೇವೆ ಮತ್ತು ನ್ಯಾಯಕ್ಕಾಗಿ ಪ್ರಾರ್ಥಿಸುತ್ತಿದ್ದೇವೆ' ಎಂದು ಸಚಿನ್ ತೆಂಡೂಲ್ಕರ್ ಟ್ವೀಟ್ ಮಾಡಿದ್ದಾರೆ.

ಪಂದ್ಯದಲ್ಲೂ ಗೌರವ ಸಲ್ಲಿಕೆ

ಕಾಶ್ಮೀರದ ಪಹಲ್ಗಾವ್‌ನಲ್ಲಿ ನಡೆದ ಭಯೋತ್ಪಾದಕರ ಭೀಕರ ದಾಳಿಯಲ್ಲಿ ಮಡಿದವರಿಗೆ ಸಂತಾಪ ಸೂಚಿಸುವ ಭಾಗವಾಗಿ ಬುಧವಾರ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್‌ನ ಮುಂಬೈ-ಹೈದರಾಬಾದ್ ನಡುವಿನ ಪಂದ್ಯದಲ್ಲಿ ಆಟಗಾರರು, ಅಂಪೈರ್‌ಗಳು ಮತ್ತು ಪಂದ್ಯದ ಅಧಿಕಾರಿಗಳು ಕೈಗೆ ಕಪ್ಪು ಪಟ್ಟಿ ಧರಿಸಿದರು. ಪಂದ್ಯ ಆರಂಭವಾಗುವ ಮೊದಲು ಎಲ್ಲರೂ ಒಂದು ನಿಮಿಷ ಮೌನ ಆಚರಿಸಿದ್ದಾರೆ. ಹಾಗಾಗಿ ಬುಧವಾರದ ಪಂದ್ಯದಲ್ಲಿ ಚಿಯರ್‌ಲೀಡರ್‌ಗಳು ಮತ್ತು ಪಟಾಕಿಗಳು ಇರಲಿಲ್ಲ. ಟೀಮ್ ಇಂಡಿಯಾ ಕ್ರಿಕೆಟಿಗರಿಂದ ಖಂಡನೆ

ಕ್ಯಾಚ್ ದಕ್ಷತೆ ಇಳಿಮುಖ

ದೆಹಲಿ: ಕ್ರಿಕೆಟ್ ಪಂದ್ಯವೊಂದರಲ್ಲಿ ಕ್ಯಾಚ್ ಕೈಚೆಲ್ಲುವುದು ಪಂದ್ಯವನ್ನು ಕಳೆದುಕೊಳ್ಳುವುದಕ್ಕೆ ಸಮ. ಕ್ಯಾಚ್ ಡ್ರಾಪ್‌ನಿಂದ ಸಿಕ್ಕ ಜೀವದಾನ ವನ್ನು ಸದುಪಯೋಗಪಡಿಸಿ ಕೊಂಡಿರುವ ಅದೆಷ್ಟೋ ಆಟಗಾರರು ಪಂದ್ಯದ ಫಲಿತಾಂಶ ವನ್ನೇ ಬದಲಿಸಿದ್ದಾರೆ. ಈ ರೀತಿಯ ಕ್ಯಾಚ್ ಡ್ರಾಪ್‌ಗಳು ಈ ಬಾರಿಯ ಐಪಿಎಲ್‌ನಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ, ಬಹುತೇಕ ಎಲ್ಲಾ ತಂಡಗಳು ಹಲವಾರು ಕ್ಯಾಚ್‌ಗಳನ್ನು ಕೈಬಿಟ್ಟಿವೆ. ಈ ಸಲ ನಡೆದಿರುವ 40 ಪಂದ್ಯಗಳಲ್ಲಿ ಎಷ್ಟು ಕ್ಯಾಚ್‌ಗಳನ್ನು ಬಿಡಲಾಗಿದೆ ಮತ್ತು ಕ್ಯಾಚ್‌ಗಳನ್ನು ಬಿಟ್ಟು ಯಾವ ತಂಡ ಹಿನ್ನಡೆ ಅನುಭವಿಸಿದೆ ಎಂಬುದೂ ಗಮನಾರ್ಹ.

ಎಲ್ಲಾ 10 ತಂಡಗಳು ಒಟ್ಟಾಗಿ ಇಲ್ಲಿಯವರೆಗೆ 111 ಕ್ಯಾಚ್‌ಗಳನ್ನು ಕೈಬಿಟ್ಟಿವೆ, ಇದು ಕಳೆದ ಐದು ವರ್ಷಗಳಲ್ಲಿ ಅತ್ಯಂತ ಕೆಟ್ಟ ಅಂಕಿ ಅಂಶವಾಗಿದೆ. ಈ ಆವೃತ್ತಿಯಲ್ಲಿ ಅತಿ ಹೆಚ್ಚು ಕ್ಯಾಚ್‌ಗಳನ್ನು ಕೈಬಿಟ್ಟ ತಂಡಗಳಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ನಂಬರ್ ಒನ್ ಸ್ಥಾನದಲ್ಲಿದೆ. ಕುತೂಹಲಕಾರಿ ವಿಷಯವೆಂದರೆ ದೆಹಲಿ ಮತ್ತು ಗುಜರಾತ್‌ಗಳ ಸ್ಥಿತಿಯೂ ತುಂಬಾ ಕೆಟ್ಟದಾಗಿದೆ.

ಅತಿ ಹೆಚ್ಚು ಕ್ಯಾಚ್‌ಗಳನ್ನು ಕೈಬಿಟ್ಟ ತಂಡ ಚೆನ್ನೈ ಸೂಪರ್ ಕಿಂಗ್ಸ್ ಇದುವರೆಗೆ ಕೇವಲ 64.3% ಕ್ಯಾಚ್‌ಗಳನ್ನು ಮಾತ್ರ ಹಿಡಿದಿದೆ. ರಾಜಸ್ಥಾನ್ ರಾಯಲ್ಸ್ ತಂಡದ ಕ್ಯಾಚಿಂಗ್ ಸಾಮರ್ಥ್ಯ ಕೇವಲ 70.5% ಮಾತ್ರ. ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿ ರುವ ಡೆಲ್ಲಿ ಕ್ಯಾಪಿಟಲ್ಸ್ ಕೇವಲ 71.4% ಕ್ಯಾಚಿಂಗ್ ದಕ್ಷತೆಯನ್ನು ಹೊಂದಿದೆ. ಲಕ್ನೋ ತಂಡದ ಕ್ಯಾಚಿಂಗ್ ಸಾಮರ್ಥ್ಯ ಕೂಡ ಶೇ. 73.9 ರಷ್ಟಿದೆ. ಪಾಯಿಂಟ್ ಪಟ್ಟಿಯಲ್ಲಿ ನಂಬರ್ ಒನ್ ಸ್ಥಾನದಲ್ಲಿರುವ ಗುಜರಾತ್ ಟೈಟಾನ್ಸ್ ಕೇವಲ ಶೇ. 77.4ರಷ್ಟು ಕ್ಯಾಚಿಂಗ್ ದಕ್ಷತೆಯನ್ನು ಹೊಂದಿದೆ.

ಪಾಕ್ ಜತೆ ಕ್ರಿಕೆಟ್ ಬೇಡ: ಮಾಜಿ ಕ್ರಿಕೆಟಿಗನ ಆಗ್ರಹ

ದೆಹಲಿ: ಪಹಲ್ಗಾಮ್‌ನಲ್ಲಿ ಉಗ್ರರ ದುಷ್ಕೃತ್ಯವನ್ನು ಕಟುವಾಗಿ ಟೀಕಿಸಿರುವ ಭಾರತದ ಮಾಜಿ ಕ್ರಿಕೆಟಿಗ ಶ್ರೀವತ್ಸ ಗೋಸ್ವಾಮಿ ಅವರು ಪಾಕಿಸ್ತಾನದ ಜತೆ ಕ್ರಿಕೆಟ್ ಸಂಬಂಧಗಳನ್ನು ಕೊನೆಗೊಳಿಸಬೇಕೆಂದು ಆಗ್ರಹಿಸಿದ್ದಾರೆ. ಪಾಕಿಸ್ತಾನ ಭಯೋತ್ಪಾದಕರಿಗೆ ಕುಮ್ಮಕ್ಕು ನೀಡುತ್ತಿದ್ದು, ಗಡಿಯಲ್ಲಿ ನಿರಂತರವಾಗಿ ಪ್ರಚೋದನೆ ನೀಡುವ ಮೂಲಕ ವಿಧ್ವಂಸಕ ಕೃತ್ಯ ಎಸಗುವುದನ್ನು ಮತ್ತೆ ಮುಂದುವರಿಸಿದೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನದ ಜತೆ ಇನ್ನು ಕ್ರಿಕೆಟ್ ಸೇರಿ ಯಾವುದೇ ರೀತಿಯ ಕ್ರೀಡಾ ಸಂಬಂಧಗಳನ್ನು ಇಟ್ಟುಕೊಳ್ಳಬಾರದು ಎಂದು ಗೋಸ್ವಾಮಿ ಆಗ್ರಹಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪತ್ರವೊಂದನ್ನು ಬರೆದಿರುವ ಶ್ರೀವತ್ಸ ಗೋಸ್ವಾಮಿ, 'ಪಾಕ್ ಜತೆ ಕ್ರಿಕೆಟ್ ಬೇಡವೇ ಬೇಡ. ಬಿಸಿಸಿಐ ಅಥವಾ ಕೇಂದ್ರ ಸರಕಾರ ಪಾಕಿಸ್ತಾನದಲ್ಲಿ ನಡೆದಿದ್ದ ಚಾಂಪಿಯನ್ಸ್ ಟ್ರೋಫಿಗೆ ಭಾರತವನ್ನು ಕಳುಹಿಸಲು ನಿರಾಕರಿಸಿದಾಗ, ಕೆಲವರು ಕ್ರೀಡೆಯ ವಿಚಾರದಲ್ಲಿ ರಾಜಕೀಯ ಮಾಡಬಾರದು ಎಂದು ಹೇಳಿದ್ದರು. ಇನ್ನಾದರೂ ಪಾಕ್ ಜತೆಗಿನ ಸಂಪೂರ್ಣ ಕ್ರೀಡಾ ಸಂಬಂಧಗಳನ್ನು ಕೊನೆಗೊಳಿಸಲು ಸರಕಾರ ಮತ್ತು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ದೃಢ ನಿರ್ಧಾರ ಕೈಗೊಳ್ಳಬೇಕು. ಪದೇಪದೆ ಭಾರತೀಯರ ಹತ್ಯೆಯನ್ನು ಸಹಿಸಲು ಸಾಧ್ಯವಿಲ್ಲ' ಎಂದು ಬರೆದುಕೊಂಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಫೆಡರೇಷನ್ ಕಪ್: ಕೂಟ ದಾಖಲೆ ಸ್ಥಾಪಿಸಿದ ವಿದ್ಯಾ ರಾಮರಾಜ್

ಕೊಚ್ಚಿ: ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ವಿದ್ಯಾ ರಾಮರಾಜ್ ಅವರು ರಾಷ್ಟ್ರೀಯ ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಬುಧವಾರ 400 ಮೀ. ಹರ್ಡಲ್ಸ್ ಓಟದಲ್ಲಿ ನಿರೀಕ್ಷೆಯಂತೆ ಚಿನ್ನ ಗೆದ್ದರು, ಮಾತ್ರವಲ್ಲ ಆ ಹಾದಿಯಲ್ಲಿ ಕೂಟ ದಾಖಲೆಯನ್ನೂ ಸುಧಾರಿಸಿದರು.

ತಮಿಳುನಾಡಿನ 26 ವರ್ಷ ವಯಸ್ಸಿನ ವಿದ್ಯಾ 56.04 ಸೆಕೆಂಡುಗಳಲ್ಲಿ ನಿಗದಿತ ದೂರವನ್ನು ಕ್ರಮಿಸಿದರು. ಹಳೆಯ ದಾಖಲೆ (2019ರಲ್ಲಿ, 57.21 ಸೆ.) ಗುಜರಾತ್‌ನ ಸರಿತಾಬೆನ್ ಗಾಯಕವಾಡ್ ಹೆಸರಿನಲ್ಲಿತ್ತು. ಅವರು ಆ ಮೂಲಕ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿಪಡಿಸಿದ 57.80 ಸೆ.ಗಳ ಅರ್ಹತಾ ಮಟ್ಟವನ್ನೂ ದಾಟಿದರು.

ಅನುಭವಿ ವಿದ್ಯಾ ಅವರಿಗೆ ಎರಡನೇ ಸ್ಥಾನ ಗಳಿಸಿದ ಕೇರಳದ ಅನು ಆರ್. (58.26 ಸೆಕೆಂಡು) ಮತ್ತು ಮೂರನೇ ಸ್ಥಾನ ಪಡೆದ ಆರ್. ಅಶ್ವಿನಿ (1:02.41) ಅವರಿಂದ ಹೆಚ್ಚಿನ ಸವಾಲು ಎದುರಾಗಲಿಲ್ಲ.

ಮಂಗಳವಾರ ನಡೆದ 400 ಮೀ. ಓಟದಲ್ಲಿ ವಿದ್ಯಾ ಬೆಳ್ಳಿ ಪದಕ ಗೆದ್ದಿದ್ದರು. ಅಂತಾರಾಷ್ಟ್ರೀಯ ಸ್ಪರ್ಧಿ ಅವಿನಾಶ ಸಾಬ್ಳೆ ಅನುಪಸ್ಥಿತಿಯಲ್ಲಿ ನಡೆದ ಪುರುಷರ 3000 ಮೀ. ಸ್ಟಿಪಲ್‌ಚೇಸ್ ಓಟದಲ್ಲಿ ಗುಜರಾತ್‌ನ ಸುನೀಲ್ ಜೋಲಿಯಾ ಜಿನಾಭಾಯ್ (8ಸೆ.43.82 ಸೆ.) ಚಿನ್ನ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಮಧ್ಯ ಪ್ರದೇಶದ ಮಂಜು ಅಜಯ್ ಯಾದವ್ 10ನಿ.34.08 ಸೆ.ಗಳಲ್ಲಿ ದೂರ ಕ್ರಮಿಸಿ ಮೊದಲ ಸ್ಥಾನ ಪಡೆದರು. ಮಹಿಳೆಯರ ವಿಭಾಗದ ಶಾಟ್‌ಪಟ್‌ನಲ್ಲಿ ಉತ್ತರ ಪ್ರದೇಶದ ವಿಧಿ (16.10 ಮೀ.) ಮೊದಲಿಗರಾದರೂ, ಏಷ್ಯನ್ ಚಾಂಪಿಯನ್‌ಷಿಪ್ ಅರ್ಹತಾ ಮಟ್ಟ (16.89 ಮೀ.) ತಲುಪಲಾಗಲಿಲ್ಲ.

ಯಶಸ್‌ಗೆ ಚಿನ್ನ: ಕರ್ನಾಟಕದ ಯಶಸ್ ಪಿ. ಅವರು ಪುರುಷರ 400 ಮೀ. ಹರ್ಡಲ್ಸ್ ಓಟವನ್ನು 49.32 ಸೆಕೆಂಡುಗಳಲ್ಲಿ ಕ್ರಮಿಸಿ ಚಿನ್ನದ ಪದಕ ಗೆದ್ದುಕೊಂಡರು. ಅವರು ಏಷ್ಯನ್ ಚಾಂಪಿಯನ್‌ಷಿಪ್‌ಗೆ ನಿಗದಿಪಡಿಸಿದ್ದ ಅರ್ಹತಾ ಮಟ್ಟವನ್ನು (49.19 ಸೆ.) ಸ್ವಲ್ಪದರಲ್ಲೇ ತಪ್ಪಿಸಿಕೊಂಡರು. ಜೆಎಸ್‌ಡಬ್ಲ್ಯು ತಂಡದ ಸುಬಾಷ್ ದಾಸ್ 50.11 ಸೆ.ಗಳೊಡನೆ ರಜತ ಮತ್ತು ಗುಜರಾತ್‌ನ ಸುಚಿತ್ ಮೋರಿ 51,08 ಸೆ.ಗಳೊಡನೆ ಕಂಚಿನ ಪದಕ ಗೆದ್ದುಕೊಂಡರು.

'ನನಗೆ ತೀವ್ರ ಪೈಪೋಟಿ ಎದುರಾಗಲಿಲ್ಲ. ಹೀಗಾಗಿ ನನಗೆ ಏಷ್ಯನ್ ಚಾಂಪಿಯನ್‌ಷಿಪ್‌ಗೆ ನಿಗದಿಪಡಿಸಿದ ಸಮಯದ ಒಳಗೆ ಗುರಿಮುಟ್ಟಲಾಗಲಿಲ್ಲ' ಎಂದು ಯಶಸ್ ಸ್ಪರ್ಧೆಯ ಬಳಿಕ ಪ್ರತಿಕ್ರಿಯಿಸಿದರು.

ಜಿಂಬಾಬ್ವೆ ವಿರುದ್ಧ ತವರಿನಲ್ಲಿ ಸೋತ ಬಾಂಗ್ಲಾ

ಢಾಕಾ: ಬಾಂಗ್ಲಾದೇಶ ಹಾಗೂ ಜಿಂಬಾಬ್ವೆ ನಡುವೆ ನಡೆಯುತ್ತಿರುವ ಎರಡು ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಅವರ ನೆಲದಲ್ಲೇ ಮಣಿಸಿರುವ ಜಿಂಬಾಬ್ವೆ ತಂಡವು ಸರಣಿಯಲ್ಲಿ ಗೆಲುವಿನ ಶುಭಾರಂಭ ಮಾಡಿದೆ.

ಮೂರು ವಿಕೆಟ್‌ಗಳಿಂದ ಜಯ ಗಳಿಸಿದ ಜಿಂಬಾಬ್ವೆ, ನಾಲ್ಕು ವರ್ಷಗಳ ನಂತರ ಬಾಂಗ್ಲಾದೇಶ ನೆಲದಲ್ಲಿ ಟೆಸ್ಟ್ ಗೆಲುವು ಸಾಧಿಸಿದಂತಾಯಿತು. ಗೆಲುವಿಗೆ ಎರಡನೇ ಇನ್ನಿಂಗ್ಸ್‌ನಲ್ಲಿ 174 ರನ್‌ಗಳ ಗುರಿ ಪಡೆದಿದ್ದ ಜಿಂಬಾಬ್ವೆ, ಪಂದ್ಯದ ನಾಲ್ಕನೇ ದಿನದಂದು 7 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

ಜಿಂಬಾಬ್ವೆ ಅದ್ಭುತ ಬೌಲಿಂಗ್: ಏಪ್ರಿಲ್ 20ರಂದು ಪ್ರಾರಂಭವಾದ ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ತಂಡವು ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 191 ರನ್ ಕಲೆ ಗಳಿಸಲಷ್ಟೇ ಶಕ್ತವಾಯಿತು. ಜಿಂಬಾಬ್ವೆ ಪರ ಮಾರಕ ದಾಳಿ ನಡೆಸಿದ ಬ್ಲೆಸಿಂಗ್ ಮುಜರಬಾನಿ ಮತ್ತು ವೆಲ್ಲಿಂಗ್ಟನ್ ಮಸಕಡ್ಜಾ ತಲಾ ತಲಾ 3 ವಿಕೆಟ್ ಪಡೆದರೆ, ವಿಕ್ಟರ್ ನ್ಯಾಚಿ ಮತ್ತು ವೆಸ್ಲಿ ಮಾಧೆವೆರೆ ತಲಾ 2 ವಿಕೆಟ್ ಪಡೆದರು.

ಇದಕ್ಕೆ ಉತ್ತರವಾಗಿ ಜಿಂಬಾಬ್ವೆ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 273 ರನ್ ಬಾರಿಸಿತು. ತಂಡದ ಪರ ಬ್ರಿಯಾನ್ ಬೆನೆಟ್ 64 ಎಸೆತಗಳಲ್ಲಿ 57 ರನ್ ಗಳಿಸಿದರೆ, ಸೀನ್ ವಿಲಿಯಮ್ಸ್ 108 ಎಸೆತಗಳಲ್ಲಿ 59 ರನ್ ಗಳಿಸಿ ಅದ್ಭುತ ಆಟವಾಡಿದರು. ಕೊನೆಯಲ್ಲಿ ಮಾಧೆವೆರೆ (24 ರನ್) ಮತ್ತು ನ್ಯಾಶಾ ಮಾಯಾವೊ (35 ರನ್) ಸಹ ಕೊಡುಗೆ ನೀಡಿದರು. ಆ ಮೂಲಕ ಜಿಂಬಾಬ್ವೆ ಮೊದಲ ಇನ್ನಿಂಗ್ಸ್‌ನಲ್ಲಿ 82 ರನ್‌ಗಳ ಮುನ್ನಡೆ ಸಾಧಿಸಿತು. 2ನೇ ಇನ್ನಿಂಗ್ಸ್‌ನಲ್ಲೂ ಎಡವಿದ ಬಾಂಗ್ಲಾ: ಮೊದಲ ಇನ್ನಿಂಗ್ಸ್‌ನಲ್ಲಿ ಅಲ್ಪ ರನ್‌ಗಳಿಗೆ ಕುಸಿದಿದ್ದ ಬಾಂಗ್ಲಾದೇಶ, ಎರಡನೇ ಇನ್ನಿಂಗ್ಸ್‌ನಲ್ಲೂ ಉತ್ತಮ ಆರಂಭದ ಹೊರತಾಗಿಯೂ, ಕೇವಲ 255 ರನ್‌ಗಳಿಗೆ ಆಲೌಟ್ ಆಯಿತು. ಕೊನೆಯ 61 ರನ್ ಗಳಿಸುವಷ್ಟರಲ್ಲಿ ತಂಡವು 6 ವಿಕೆಟ್‌ಗಳನ್ನು ಕಳೆದುಕೊಂಡಿತು. ತಂಡದ ಪರ ಮೊಮುನುಲ್ ಹಕ್ 47 ರನ್ ಮತ್ತು ನಾಯಕ ನಜ್ಮುಲ್ ಹಸನ್ ಶಾಂಟೋ 60 ರನ್ ಗಳಿಸಿದರೆ, ಜಾಕಿರ್ ಅಲಿ 58 ರನ್‌ಗಳ ಕೊಡುಗೆ ನೀಡಿದರು.

ಎರಡನೇ ಇನ್ನಿಂಗ್ಸ್‌ನಲ್ಲಿ ಕೇವಲ 174 ರನ್‌ಗಳ ಗುರಿ ಪಡೆದಿದ್ದ ಜಿಂಬಾಬ್ವೆ ಗೆಲುವಿಗಾಗಿ ಸಾಕಷ್ಟು ಹರಸಾಹಸ ಪಡಬೇಕಾಯಿತು. ಮೆಹದಿ ಹಸನ್ ಮಿರಾಜ್ ದಾಳಿಗೆ ಜಿಂಬಾಬ್ವೆ ತಂಡ ತತ್ತರಿಸಲಾರಂಭಿಸಿತು. ಜಿಂಬಾಬ್ವೆ ಉತ್ತಮ ಆರಂಭ ಪಡೆಯಿತು. ಬ್ರಿಯಾನ್ ಬೆನೆಟ್ (57 ರನ್) ಮತ್ತು ಬೆನ್ ಕರನ್ (44 ರನ್) ಅವರ ನೆರವಿನಿಂದ 2 ವಿಕೆಟ್‌ಗೆ 127 ರನ್ ಗಳಿಸಿತು, ಆದರೆ ಆ ಬಳಿಕ ವಿಕೆಟ್‌ಗಳ ಪತನ ಶುರುವಾಯಿತು. ಹೀಗಾಗಿ ಮುಂದಿನ 34 ರನ್ ಗಳಿಸುವಷ್ಟರಲ್ಲಿ ತಂಡ 5 ವಿಕೆಟ್ ಕಳೆದುಕೊಂಡಿತು. ಇದರಿಂದಾಗಿ ಸ್ಕೋರ್ 2 ವಿಕೆಟ್‌ಗೆ 127ರಿಂದ 7 ವಿಕೆಟ್‌ಗೆ 161 ರನ್ ಆಯಿತು, ಆದರೆ ಕೆಳ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ತಾಳ್ಮೆಯ ಆಟವನ್ನಾಡಿ ತಂಡಕ್ಕೆ ಗೆಲುವು ತಂದುಕೊಟ್ಟರು.

ಕೊನೇರು ಹಂಪಿಗೆ ಫಿಡೆ ಗ್ರಾನ್‌ಪ್ರಿ ಪ್ರಶಸ್ತಿ

ಪುಣೆ: ಭಾರತದ ಕೊನೇರು ಹಂಪಿ ಅವರು ಫಿಡೆ ಮಹಿಳಾ ಗ್ರಾನ್ ಪ್ರಿ ಚೆಸ್ (ಪುಣೆ ಲೆಗ್) ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಗ್ರಾಂಡ್ ಮಾಸ್ಟರ್‌ಗಳಾದ ಹಂಪಿ ಮತ್ತು ಚೀನಾದ ಝು ಜಿನೆರ್ ಅವರು ತಲಾ ಏಳು ಪಾಯಿಂಟ್ಸ್ ಗಳಿಸಿದರೂ, ಉತ್ತಮ ಟೈಬ್ರೇಕ್ ಸ್ಕೋರ್ ಆಧಾರದಲ್ಲಿ ಕೋನೇರು ಹಂಪಿ ಚಾಂಪಿಯನ್ ಆದರು.

ಐದು ತಿಂಗಳ ಹಿಂದೆ ವಿಶ್ವ ಮಹಿಳಾ ಯಾಪಿಡ್ ಚಾಂಪಿಯನ್ ಪಟ್ಟಕ್ಕೇರಿದ್ದ ಹಂಪಿ, ಬುಧವಾರ ನಡೆದ ಒಂಬತ್ತನೇ ಹಾಗೂ ಅಂತಿಮ ಸುತ್ತಿನಲ್ಲಿ ಬಲ್ಗೇರಿಯಾದ ನುರ್ಗ್ಯುಲ್ ಸಲಿಮೋವಾ (3.5) ಅವರನ್ನು ಮಣಿಸಿ ಒಟ್ಟು ಏಳು ಪಾಯಿಂಟ್ಸ್ ಕಲೆ ಹಾಕಿದರು. ಇನ್ನೊಂದು ಪಂದ್ಯದಲ್ಲಿ ರಷ್ಯಾದ ಪೊಲಿನಾ ಶುವಲೋವಾ (1.5) ಅವರನ್ನು ಸೋಲಿಸಿದ ಜಿನೆರ್ ಸಹ ಅಷ್ಟೇ ಪಾಯಿಂಟ್ಸ್ ಸಂಗ್ರಹಿಸಿದ್ದರು.